ಜಯಪರಮೇಶ್ವರ

ಶ್ರೀಮಚ್ಚಿದಾನಂದ ಚಿಕ್ಕವೀರ ಗುರುವರ್ಯ ಕರಕಮಲ
ಸಂಜಾತ ಶ್ರೀಷಡಕ್ಷರ ಸೂರೀಂದ್ರರವರಿಂದ
ಮುಮುಕ್ಷು ಜನೋಪಯೋಗವಾಗಿ ವಿರಚಿತವಾದ

ಸಟೀಕಾ ಷಡಕ್ಷರಿಯ್ಯ ವಚನ

ವೆಂಬುವ

ಪರಮ ವೀರಶೈವ ಸಿದ್ಧಾಂತ ಶಾಸ್ತ್ರವು.

ಹೊಳಕಲ್ಲು ನರಸಿಹ್ಮಯ್ಯನವರಿಗಾಗಿ
ತಿರುಮಲೆ, ಶ್ರೀನಿವಾಸಾಚಾರ್ಯರವರಿಂದ
ತಾತ್ಪರ್ಯನಿರ್ಣಯವೆಂಬ ಟೀಕೆಯು ಬರೆಯಲ್ಪಟ್ಟು

ಬೆಂಗುಳೂರು

ಹೊಳಕಲ್ಲು, ನರಸಿಹ್ಮಯ್ಯನವರ ಕುಮಾರರಾದ
ನರಸಿಂಗರಾವು ಅಂಡ್ ಸನ್ಸ್ ಇವರಿಗಾಗಿ

೨ ನೇ— ಛಾಪೆ.

ಬಳ್ಳಾರಿ, ಕರ್ನಾಟಕ ಬುಕ್ಕುಡಿಪೋ ಏಜೆಂಟ್
[illegible] ಎಸ್, ಶಿವಲಿಂಗಶೆಟ್ಟ್ರವರಗಳ
ಸ್ವಕೀಯ
ಗ್ರಂಥರತ್ನಾಕರಮುದ್ರಾಕ್ಷರಶಾಲೆಯಲ್ಲಿ
ಮುದ್ರಿಸಿ ಪ್ರಕಟಿಸಲ್ಪಟ್ಟಿತು.

MADRAS.

೧೮೯೨ ನೇ ಸಂ.

ಜಯಪರಮೇಶ್ವರ.

ಸಟೀಕಾ ಷಡಕ್ಷರಿಯ [illegible] ಭೋಗಗಳು.

ಶ್ರೀ ಷಡಕ್ಷರ ಅಯ್ಯನವರು ಲೋಕದೊಳಗಣ ಸಕಲ ಚೇತನಾ ಚೇತನಗಳೆಲ್ಲಾ ನಿಜ ಶಿವಲಿಂಗೈಕ್ಯವೆಂಬುವ ಸಾಯುಜ್ಯ ಮುಕ್ತಿ ಸುಖ ಸಾಮ್ರಾಜ್ಯದಲ್ಲಿ ನೆಲೆಗೊಳ್ಳಲಿಕ್ಕೆ ಸುಲಭೋಪಾಯರೂಪವಾದ ಲಲಿತ ಕನ್ನಡ ಪದ ಪ್ರಯೋಗದಿಂದ ಕನ್ನಡಿಯಂತೊಪ್ಪುವ ಶೈವಶಾಸ್ತ್ರ ಸಿದ್ಧಾಂತವನ್ನು ಸಕಲರಿಗೂ ಉಪದೇಶಿಸಲೋಸುಗ ನಿಜ ಶಿವಶರಣರುಗಳಾದವರ ಉಪದೇಶ ಮಾತ್ರದಿಂದಲೇ ನಡೆಯಲವಶ್ಯವಾದ ಸದ್ಗುರೂಪದೇಶದಲ್ಲಿನ ದೃಢವಾದ ನಂಬಿಕೆಯನ್ನೂ ತನು ಧನ ಪ್ರಾಣಾದಿಗಳೆಲ್ಲಾ ಸದ್ಗುರುವಿನ ಆಧೀನವಾಗಿರ ಬೇಕೆಂಬುವ ನಿಸ್ಪೃಹತ್ವವನ್ನೂ ತಾವೇ ಆಚರಿಸಿ ಈ ಗ್ರಂಥದಿಂದ ಪ್ರಕಟ ಪಡಿಸುತ್ತಿದ್ಧಾರೆ, ಅದೆಂತೆನೆ, *

—*(ಭೋಗ ಷಟ್ಪದಿ.)*—

ಮುದದಿಶರಣರುಗಳನುಡಿಗ। ಇದಿರನುಡಿಯನುಡಿಯದವರು। ಪದುಳದಿಂದನುಡಿದವೊಳ್ಕೆಯಿಂದನುಡಿವೆನಾ॥ ಪಲ್ಲ॥ ಕಡಿದಕೊನರುಚಿಗುತಿತೆನಲು। ಕಡಿದಕೊನರುಚಿಗುತಿತೆಂಬೆ । ಮಡಿದಮನುಜನೆದ್ದನೆನಲುಯೆದ್ದನೆಂಬೆನೂ । ಕಡಿದ್ದಶಿರವುಹತ್ತಿತೆನಲು । ಕಡಿದಶಿರವುಹತ್ತಿತೆಂಬೆ । ಬಿಡದೆಬರಡುಕರೆಯಿತೆನಲು । ಕರೆಯಿತೆಂಬೆನೂ। ೧॥ ಉರಗವೆವೆಳವಪ್ಪುದೆನಲು। ಉರಗವೆವೆಳವಪ್ಪುದೆಂಬೆ। ಗರಳಮಧುರವಪ್ಪುದೆನಲು ಅಪ್ಪುದೆಂಬೆನು॥ ಬರೆದಚಿತ್ರನುಡಿಯಿತೆನಲು। ಬರೆದಚಿತ್ರನುಡಿಯಿತೆಂಬೆ। ಉರಿದವೃಕ್ಷಚಿಗುರಿತೆನಲು। ಚಿಗುರಿತೆಂಬೆನೂ। ೨॥ ಇಟ್ಟಿಹಣ್ಣುಮಧುರವೆನಲು। ಇಟ್ಟಿಹಣ್ಣುಮಧುರವೆಂಬೆ। ಸುಟ್ಟಬೀಜಬೆಳೆಯಿತೆನಲು । ಬೆಳೆಯಿತೆಂಬೆನೂ ॥ ನಟ್ಟಪ್ರತಿಮೆನಡೆಯಿತೆನಲು । ನಟ್ಟಪ್ರತಿಮೆನಡೆಯಿತೆಂಬೆ । ಹುಟ್ಟಿತಿಶುವು ನುಡಿಯಿತೆನಲುನುಡಿಯಿತೆಂಬೆನೂ । ಜಡಜಸಖನತಡೆದರೆನಲು। ಜಡಜ

ಸಖಿನತಡೆದರೆಂಬೆ। ಕಡಿದಹಸ್ತಚಿಗುರಿತೆನಲುಚಿಗುರಿತೆಂಬೆನೂ॥ಮಡಿ
ದವನುಮಡಿದನೆನಲು। ಮಡಿಯದವನುಮಡಿದನೆಂಬೆ। ಕಡೆದಪ್ರತಿಮೆನ
ಡಿಯಿತೆನಲುನುಡಿಯಿತೆಂಬೆನೂ॥ ೪॥ ಒಡನೆಥಿಟವನುಡಿವುತಿರಲಿ। ಬಿಡ
ಸಟೆಯನುಡಿವುತಿರಲಿ। ಕಡೆಯಲವರಅಲ್ಲವಹುದುಯೆನ್ನಲಮ್ಮೆನೂ॥ ವ
ಡಷಡಕ್ಷರಾಂಕಬಂದು । ಕಡಹಿನಾಲಿಗೆಯನ್ನುಹಿಡಿದು । ಬಿಡದೆಕೀ
ನೆಂದುಹೆದರಿನುಡಿಯಲಮ್ಮೆನೂ॥ ... ಶಿ

ಟೀ॥ ಶಿವಶರಣರಾದವರು ಸಂತೋಷದಿಂದ ಹೇಳಿದ ನುಡಿಗೆ ಬ
ಲು ಹೇಳದೆ ಇರುವಂಥಾ ಶರಣರುಗಳು ಹೇಳಿದ್ದನ್ನೇ ನಾನು ಹೇಳು
ನು. ಅವರು ಕತ್ತರಿಸಿದ ರೆಂಬೆಯು ಚಿಗುರಿತು ಅಂದರೆ, ನಾನೂ ಚಿಗ
ರಿತು ಅನ್ನುವೆನು. ಅವರು ಸತ್ತವನು ಎದ್ದನು ಅಂದರೆ, ನಾನು ಎದ್ದನ
ಅನ್ನುವೆನು. ಅವರು ಕತ್ತರಿಸಿದ ತಲೆಯು ಹತ್ತಿತು ಅಂದರೆ, ನಾನು ಹ
ತ್ತಿತು ಅನ್ನುವೆನು.ಅವರುಗೊಡ್ಡಾಕಳು ಹಾಲುಕರೆಯಿತು ಅಂದರೆ,ನಾ
ನು ಹಾಲು ಕರೆಯಿತು ಅನ್ನುವೆನು. ಅವರು ನೀರುಹಾವನ್ನು ಹೆಬ್ಬಾ
ವು ಅಂದರೆ, ನಾನು ಹಾಗೆಯೇ ಹೆಬ್ಬಾವೆಂದೇ ಹೇಳುವೆನು. ಅವರ
ವಿಷವು ಶಿಯ್ಯಾಗಿದೆ ಅಂದರೆ, ನಾನೂ ಶಿಯ್ಯಾಗಿದೆ ಅನ್ನುವೆನು. ಅ
ರು ಬರೆದ ಚಿತ್ರವು ಮಾತಾಡಿತು ಅಂದರೆ, ನಾನೂ ಮಾತಾಡಿತು ಅನ
ವೆನು. ಅವರು ಸುಟ್ಟಮರವು ಚಿಗುರಿತು ಅಂದರೆ, ನಾನೂ ಚಿಗುರಿತು ಅ
ನ್ನುವೆನು. ಅವರು ಇಂಗಳದ ಹಣ್ಣು ಶಿಯ್ಯಾಗಿರುವದು ಅಂದರೆ, ನಾ
ನೂ ಶೀಯಾಗಿರುವದು ಅನ್ನುವೆನು. ಅವರು ಉರಿದ ಬೀಜವು ಬೆಳೆಯಿ
ತು ಅಂದರೆ, ನಾನೂ ಬೆಳೆಯಿತು ಅನ್ನುವೆನು. ಅವರು ನಿಲ್ಲಿಸಿರುವ ಗ
ಗ್ರಹವು ನಡಿಯಿತು ಅಂದರೆ, ನಾನೂ ನಡಿಯಿತು ಅನ್ನುವೆನು. ಅವರ
ಕೂಸು ಹುಟ್ಟಿದಾಗಲೇ ಮಾತಾಡಿತು ಅಂದರೆ,ನಾನೂ ಮಾತಾಡಿತು ಅ
ನ್ನುವೆನು. ಅವರು ಸೂರ್ಯನನ್ನು ನಿಲ್ಲಿಸಿ ಬಿಟ್ಟರು ಅಂದರೆ,ನಾನೂ ನಿಲ್ಲಿ
ಸಿಬಿಟ್ಟರು ಅನ್ನುವೆನು. ಅವರು ಕತ್ತರಿಸಿದ ಕೈ ಚಿಗುರಿತು ಅಂದರೆ,ನಾ
ನೂ ಚಿಗುರಿತು ಅನ್ನುವೆನು. ಅವರು ಸಾಯದವನು ಸತ್ತನು ಅಂದರೆ
ನಾನೂ ಸತ್ತನು ಅನ್ನುವೆನು. ಅವರು ಕಡೆದ ಬೊಂಬೆಯು ಮಾತಾಡಿ
ತು ಅಂದರೆ, ನಾನೂ ಮಾತಾಡಿತು ಅನ್ನುವೆನು. ಅವರು ಬಮ್ಮೆ ನಿಜ
ವನ್ನು ಹೇಳುತ್ತಿರಲಿ, ಅಥವಾ ಎಡೆಬಿಡದೆ ಸುಳ್ಳನ್ನೇ ಆಡುತ್ತಿರಲಿ, ತ

ರುವಾಯ ಅವರನ್ನು ಕುರಿತು ಇದು ಹೌದು, ಇದು ಅಲ್ಲ, ಎಂದು ಹೇಳುವವನಲ್ಲ. ಶ್ರೀ ಷಡಕ್ಷರ ಮಹಾಮಂತ್ರರೂಪಿಯೂದ ಶಿವನು ಬಂದು, ಕೆಡವಿಕೊಂಡು, ನಾಲಿಗೆಯನ್ನು ಬಿಮ್ಮನೆ ಹಿಡುಕೊಂಡು ಕೇಳುವನು ಅಂದು ಹೆದರಿ ಹೇಳಲಾರೆನು. ಅಂದರೆ, ತನುಮನ ಪ್ರಾಣಾದಿಗಳೆಲ್ಲಾ ಶಿವಾಧೀನವಾದದ್ದಾಗಿರುವದೆಂದು ಪೇಳ್ದರೆಂಬುವದೀಪದದ ಅಭಿಃಪ್ರಾಯವೆಂದು ತಾತ್ಪರ್ಯವು. ... ... ※

೨. ರಾಗ- ಸಾಳಂಗ— ಹೆಮ್ಮಗನುನಾನಿಮ್ಮನಂಬಿನಂಬಿರುವೆನು। ಘುಮ್ಮನೆಯೆನ್ನುವನುಕರೆಯುಬನ್ನಿ॥ಪಲ್ಲ॥ಸುವ್ವಿಚನ್ನಂಣನಿಗೆ। ಸುವ್ವಿಮಡಿವಾಳನಿಗೆ। ಸುವ್ವಿನಮ್ಮಪ್ಪಬಸವೈಯನಡಿಗೆ॥ ಸುವ್ವಿಅಜಗಣ್ಣನಿಗೆ। ಸುವ್ವಿಸತ್ಯಂಣನಿಗೆ। ಸುವ್ವಿನಂಮಯ್ಯಪ್ರಭುರಾಯನಡಿಗೇ॥ ೧॥ ಸುವ್ವಿಹರಳಯ್ಯನಿಗೆ। ಸುವ್ವಿದೋಳೈಯ್ಯನಿಗೆ। ಸುವ್ವಿನಮ್ಮಯ್ಯಸ್ವಪಚೈಯ್ಯನಡಿಗೇ ॥ ಸುವ್ವಿಭೀಮಯನಿಗೆ । ಸುವ್ವಿಕಕ್ಕಯ್ಯನಿಗೆ।ಸುವ್ವಿನಮ್ಮಯ್ಯಸ್ವಪಚೈಯ್ಯನಡಿಗೇ॥ ೨॥ನಮ್ಮವರಹಾಡುವೆನು।ನಮ್ಮವರಪೊಗಳುವೆನು।ನಮ್ಮವರನಾಮಾಗಹರಸುತಿಹೆನೂ ॥ ನಮ್ಮವರುಬರುವುದನ । ನುಮ್ಮಳಿಸಿನೋಡುವೆನು। ಹಮ್ಮೈಸುವೆನುಮನದಿಬಾರದಿರಲೂ॥೩॥ಕಟ್ಟುತ್ತಬೀಸುತ್ತ। ನೆಟ್ಟನೆನಮ್ಮವೊಡ। ಹುಟ್ಟಿದಪುರಾತನರಹಾಡುತಿಹೆನೂ ॥ ಕಷ್ಟಘುನವೂರ್ತೇದ । ಬಟ್ಟೆಯನುಪೊಲ್ಲೆಕೃಪೆ । ಹುಟ್ಟದೇನಮ್ಮವರುಕರೆಯರಯ್ಯಾ॥ ೪॥ ನೀರಹೊಳೆಯಲಿನಿಂದು। ದಾರಿಯನುನೋಡುವೆನು । ಬಾರದಿರೆಮನದೊಳಗೆಕರಗಿಕೊರಗೀ॥ ಆರೈದುಮತ್ತೊಮ್ಮೆ । ದೂರದೃಷ್ಟಿಯುನಿತ್ತು। ಸಾರಿನೋಡುವೆನಿಲುಕಿಅಳಲಿಬಳಲೀ॥ ೫॥ ಬಂದವರಬರುವರ। ನಿಂದವರನೆರೆದವರ। ಕುಂದದೇಕೇಳುವೆನುನಮ್ಮವರನೂ॥ ಹಿಂದಾದದುಃಖದಲಿ। ನೊಂದೆನೂನಮ್ಮವರು । ಎಂದಿಗೇಯೆನ್ನುವೆನುಕರೆಯಬರರೋ॥೬॥ಹದುಳವೆನಮ್ಮವರ।ಪದಪದ್ಮವೆನ್ನುವೆನು। ಪದಪಿಂದಕರದೊಯ್ಯರೊಲ್ಲರೇಕೇ॥ಉದಯೂಸ್ತಮೂನದಲಿ । ಕುದಿದುಕೋಟಲೆಗೊಂಬೆ । ಹೃದಯತಾಕರಗದೇನಮ್ಮವರಿಗೇ॥ ೭॥ ಅಳಲುವೆನುಮನದೊಳಗೆ। ಬಳಲುವೆನುಬಾರದಿರೆ। ಕಳಯೇರುವೆನುಪೊಮ್ಮನೆನದುನೆನದೂ ॥ ಮಲಹರಣಶರಣರ। ಬರವನೋಡುವೆನೊಮ್ಮೆ । ಸಲೆಯನ್ನಕನಸಿಂಗೆಬಾರರರೆಸುತಾ॥೮॥ಹಿಂದುಳಿಯಿತವಮಾಸ್ಯೆ। ಮುಂದೆಹುಂಣಿಮೆಬಂತು।ಎಂದಿಗೆ

ಯೆನ್ನನುಕರೆಯಬಹರೋ॥ ನಿಂದುಸುಯ್ಗರೆವೆನೂ। ನೊಂದುಬೆಂಡಾಗ ವೆನು।ಚಂದವೇತನಗೆನ್ನನೋಡದಿಹುದೂ॥ ೯॥ ತರಗೆಲೆಯನಿರುಕನಲು। ಹೊರಗೆನಾನಾಲಿಸುವೆ। ಬರವಿಲ್ಲದಿರೆಮನದಿಸೊಪ್ಪುಗರೆವೆ॥ ಪರರತಿಶ ವೆಂದೆನುತ। ಶರಣರೂಯೆನ್ನನು। ಮರೆದರೋಯೆಂದೆನುತ ಹೆದರುತಿಹೆ ನೂ॥೧೦॥ಶರಣರೊಳುಸುಖದುಃಖ। ದಿರವಹೇಳುವೆನಾನು। ಪರರೆನ್ನಚಿಂ ತೆಯನ್ನರಿಯರಾಗೇ ॥ ಅರಸುಷಡಕ್ಷರಿಯು। ವರನೆನ್ನಕಾಡಿದರೆ। ಶರಣ ರಿಗೆಪೇಳಿನಾಕೇಳ್ವೆನೈಯ್ಯಾ॥ ... ... *

೨. ಟೀ॥ ಹಿರೀಮಗನಾದ ನಾನು ನಿಮ್ಮನ್ನೇ ನಂಬಿಕೊಂಡು ಸುಮ್ಮನೆ ಕರೆಯುತ್ತಿರುವೆನು ಬನ್ನಿ! ಚನ್ನಂಣನಿಗೂ ಮಡಿವಾಳೈಯನಿಗೂ ನಮ್ಮಪ್ಪನಾದ ಬಸವೈಯನಿಗೂ ಸ್ವಸ್ತಿ ಅಥವಾ ಜಯವು ಆಗಲಿ. ಅಜಗಣ್ಣನಿಗೂ ಸತ್ಯಂಣನಿಗೂ ನಮ್ಮಪ್ಪನಾದ ಪ್ರಭುರಾಯನ ಪಾದಕ್ಕೂ ಜಯವಾಗಲಿ. ಹರಳೈಯನಿಗೂ ಡೊಳ್ಳೈಯನಿಗೂ ನಮ್ಮಪ್ಪನಾದ ಸ್ವಪಚೈಯನಿಗೂ ಜಯ ವುಂಟಾಗಲಿ ಭೀಮೈಯನಿಗೂ ಕಕ್ಕೈಯನಿಗೂ ನಮ್ಮಯ್ಯನಾದ ಸ್ವಪಚೈಯ್ಯನ ಪಾದಕ್ಕೂ ಜಯವುಂಟಾಗಲಿ. ನಮ್ಮವರನ್ನು ಕೀರ್ತಿಸುವೆನು, ನಮ್ಮವರನ್ನು ಹೊಗಳುವೆನು, ಯಾವಾಗಲೂ ನಮ್ಮವರನ್ನು ಆಶೀರ್ವದಿಸುತ್ತಿರುವೆನು, ನಮ್ಮವರು ಬರುವದನ್ನು ಸಂತೋಷದಿಂದ ನೋಡುವೆನು, ಅವರು ಬಾರದಿದ್ದರೆ ಮನಸ್ಸಿನಲ್ಲಿ ಕಳವಳಗೊಳ್ಳುವೆನು, ಕುಟ್ಟುವಾಗಲೂ ಬೀಸುವಾಗಲೂ ನಮ್ಮ ಸಹೋದರರಾದ ಪೂರ್ವೀಕರನ್ನು ಕೀರ್ತಿಸುತ್ತಿರುವೆನು, ಕಷ್ಟವಾಗಿಯೂ ದೇಹಪ್ರಯಾಸಕರವಾಗಿಯೂ ಇರುವ ಮಾರ್ಗವನ್ನು ನಾನು ಬಲ್ಲೆನು. ಓ ನಮ್ಮವರೇ! ನಿಮಗೆ ದಯವಿಲ್ಲವೆ? ನನ್ನನ್ನು ಕರೆಯಿರೈಯಾ, ಅನ್ನುವೆನು. ನೀರಿನ ಹೊಳೇ ದಡದಲ್ಲಿ ನಿಂತುಕೊಂಡು ದಾರಿ ಎದುರು ನೋಡುತ್ತಿರುವೆನು. ಅವರು ಬಾರದಿದ್ದರೆ ಮನಸ್ಸಿನಲ್ಲಿ ಕರಗಿ ದುಃಖಿಸುವೆನು. ಒಮ್ಮೊಮ್ಮೆ ಆರೈಸಿ ದೂರಕ್ಕೆ ದೃಷ್ಟಿಯಿಟ್ಟು ಅಳುತ್ತಾ ಆಯಾಸಗೊಳ್ಳುತ್ತಾ ಹೋಗಿ ನೋಡುವೆನು. ಬಂದವರನ್ನೂ ಬರುವವರನ್ನೂ ನಿಂತಿರುವವರನ್ನೂ ಕೂಡಿರುವವರನ್ನೂ ಬಹಳವಾಗಿ ನಮ್ಮವರನ್ನು ಕೇಳುವೆನು. ಹಿಂದಕ್ಕೆ ಆದ ದುಃಖಗಳಿಂದ ನೊಂದಿರುವದಲ್ಲದೆ ನಂಮವರು ಎಂದಿಗೆ ಬಂದಾರೆಂದು ಕರೆಯುವೆನು ಬನ್ನಿರೈಯಾ, ನಮ್ಮವರ ಪಾದ ಕಮಲವು ಹದುಳ

ವೇ ಅನ್ನುವೆನು,ಯಾತಕ್ಕೆ ನನ್ನನ್ನು ಪ್ರೀತಿಯಿಂದ ಕರಕೊಂಡು ಹೋಗರು, ಉದಯಾಸ್ತಮಾನದಲ್ಲಿಯೂ ಕಳವಳಪಟ್ಟು ಕಷ್ಟಪಟ್ಟು ಇದ್ದಾಗ್ಯೂ ನಮ್ಮವರಿಗೆ ಮನವು ಕರಗದಲ್ಲಾ,ಎಂದು ಮನಸ್ಸಿನೊಳಗೆ ದುಃಖಿಸುವೆನು, ನಮ್ಮವರು ಬಾರದಿದ್ದರೆ ಬಳಲುವೆನು, ಅಡಿಗಡಿಗೆ ನಮ್ಮವರಂನುಸ್ಮರಿಸಿ ಸ್ಮರಿಸಿ ಪ್ರಕಾಶಿಸುತ್ತಿರುವೆನು, ಪಾಪ ಪರಿಹಾರಕರಾದ ಶಿವಶರಣರ ಬರುವಿಕೆಯನ್ನು ಬಮ್ಮೆ ಎದುರು ನೋಡುವೆನು, ನನ್ನ ಸ್ವಪ್ನದಲ್ಲಿಯೂ ಬರಲಿಲ್ಲವಲ್ಲಾ ಅನ್ನುತ್ತಾ ಚಿಂತೆಪಡುವೆನು, ಹಿಂದಕ್ಕೆ ಅಮಾವಾಸ್ಯೆ ಉಳಿಯಿತು. ಮುಂದಕ್ಕೆ ಹುಂಣಿಮೆಬಂತು ಇನ್ನೆಂದಿಗೆ ನನ್ನನ್ನು ಕರೆಯ ಬರುವರೋ? ಎಲೈ ನಮ್ಮವರಾದ ಶರಣರುಗಳಿರಾ ! ನೀವು ಬಾರದ್ದರಿಂದ ನಿಂದು ಮೊರೆ ಇಡುವೆನು, ಆಯಾಸಗೊಂಡು ನಲಿಗಿ ಹೋಗುತ್ತಿರುವೆನು- ಹೀಗೆ ನನ್ನನ್ನು ನೋಡದೆ ಇರುವದು ನಿಮಗೆ ಬಳ್ಳೇದೆ ? ಸುರಗು ಅಲ್ಲಾಡಿದರೆ, ನಾನು ಹೊರಗೆ ಕೇಳುವೆನು, ಬಾರದಿದ್ದಲ್ಲಿ ಮನದೊಳಗೆನೊಂದುಕೊಳ್ಳುವೆನು, ಶರಣರಾದವರು ನನ್ನನ್ನು ಅನ್ಯರ ಮೊಗುವು ಅನ್ನುತ್ತಾ ಮರೆತುಬಿಟ್ಟರೇನೋ ಎಂದು ಹೆದರುತ್ತಿರುವೆನು ನಾನು ನನ್ನ ಸುಖ ದುಃಖಗಳ ಸ್ಥಿತಿಯೆಲ್ಲವನ್ನೂ ಶರಣರಲ್ಲಿ ಹೇಳಿಕೊಳ್ಳುವೆನು, ಆ ಶರಣರಲ್ಲದೆ ಅನ್ಯರು ನನ್ನ ಚಿಂತೆಯನ್ನು ಅರಿಯಲಾರರು, ಒಡೆಯನಾದ ಷಡಕ್ಷರ ದೇವನು ನನ್ನನ್ನು ಬಾಧೆಪಡಿಸಿದರೆ ಶರಣರಿಗೆ ಹೇಳಿ, ತರುವಾಯ ಅವರು ಹೇಳಿದಂತೆ ನಾನು ಕೇಳುವೆನು ಎಂದು ಈ ಪದದಿಂದ ಪೂರ್ವಾಚಾರ್ಯರುಗಳ ಪ್ರಶಂಸೆಯನ್ನೂ ಕಷ್ಟ ಸುಖಗಳಿಗೆ ಶರಣರೇ ಬಾಧ್ಯರೆಂಬುವಂಥಾ ಅವರಲ್ಲಿಡುವ ಭರವಸೆಯನ್ನೂ ಹೇಳ್ದರೆಂದು ತಾತ್ಪರ್ಯವು. ... ... *

೩. ರಾಗ - ಲಹರಿ— ಶರಗನೊಡ್ಡಿಬೇಡಿಕೊಂಬೆನೋ । ಶಿವಶಿವಾ। ಮರುಗಿಹೋಗಬ್ಯಾಡವೆನ್ನನೂ ॥ ಪ ॥ ನಿನ್ನ ಕರದುಯೆನಗೆಕೊಟ್ಟರೂ। ಗುರುಸ್ವಾಮಿ। ಯನ್ನಕರೆದುನಿಮಗೆಕೊಟ್ಟರೂ ॥ ಯನ್ನಮಾತಮೀರಬೇಡೆಂದೂ। ಗುರುಸ್ವಾಮಿ। ಯೆನ್ನನಿನ್ನನೊಂದುಗೂಡಿದಾ॥೧॥ ತಪ್ಪನೆನ್ನ ಮೇಲೆಹೊಂದಿಸೇ। ಶಿವಶಿವಾ। ತಪ್ಪಿಸೆನ್ನಬಿಟ್ಟುಪೋದರೇ॥ ಒಪ್ಪರೈಯ್ಯ ಗುರುವಿನಾಜ್ಞೆಗೆ। ಶಿವಶಿವಾ । ತಪ್ಪಿನಡೆವರೆಂದುನಮ್ಮನೂ॥೨॥ ಎನ್ನ ನೊಲ್ಲದಿದ್ದಡೇನೂ। ಶಿವಶಿವಾ । ಯನ್ನಮುನ್ನಕೂಡಿದ್ದೇನೂ ॥ ಯೆನ್ನಬಿಡುವೆ

ನೆಂದೊಡೆನೀನು। ಶಿವಶಿವಾ। ನಿನ್ನಬಿಡೆನುಗುರುವಿನಾಜ್ಞೆಗೆ ॥೩॥ ನೋ
ಬ್ಯಾಡಯನ್ನಗುಣವನು। ಶಿವಶಿವಾ। ಕೂಡಿಅಗಲಬ್ಯಾಡವೆನ್ನನೂ ॥ ಬೆ
ಡಿಕೊಂಬೆನಾನುನಿಮ್ಮನೂ। ಶಿವಶಿವಾ। ನೋಡುನಿಮ್ಮಕರುಣದೃಷ್ಟಿಲಿ
೪ ॥ ಕಂಗಳರಕಕುರುಡನಂದದಿ। ಶಿವಶಿವಾ। ಭಂಗಪಡುತತಿರುಗುತ್ತೈದೆನೇ॥
ಹಿಂಗದೇಷಡಕ್ಷರಿಯ್ಯವೂ।ಶಿವಶಿವಾ। ಲಿಂಗನಿಮಗೆಕೊರತೆಯಿಲ್ಲವೂ ॥೫॥

೩. ಟೀ॥ ಎಲೈ ಶಿವನೇ ! ಶರಗೊಡ್ಡಿ ಬೇಡಿಕೊಳ್ಳುವೆನು, ನನ್ನನ್ನು ದುಃಖಪಡಿಸಿ ಹೋಗಬೇಡ,ಸದ್ಗುರುಗಳು ನಿಮ್ಮನ್ನು ಕರೆದು ನನಗೆಕೊಟ್ಟರು, ಹಾಗೆಯೇ ನನ್ನನ್ನು ಕರೆದು ನಿಮಗೆ ಕೊಟ್ಟರು, ಗುರುಸ್ವಾಮಿಯು ನನ್ನ ಮಾತನ್ನು ಮೀರಬೇಡವೆಂದು ನಿಮ್ಮನ್ನೂ ನನ್ನನ್ನೂ ಒಂದಾಗಿ ಕೂಡಿಸಿವರು ಎಲೈ ಶಿವನೇ ! ನನ್ನಮೇಲೆ ತಪ್ಪನ್ನು ಹೊಂದಿಸುವದನ್ನು ತಪ್ಪಿಸಯ್ಯಾ, ಶಿವನೇ ! ನನ್ನನ್ನು ಬಿಟ್ಟು ಪೋಗುವದಾದರೆ ಗುರುಗಳು ಒಪ್ಪರು, ಯಾಕಂದರೆ ನವಿಮ್ಮಿಬ್ಬರನ್ನೂ ಗುರುವಿನಾಜ್ಞೆಗೆ ತಪ್ಪಿನಡೆದವರೆಂದನ್ನುವರು. ಶಿವಶಿವಾ ನನ್ನನ್ನು ಒಲ್ಲದೆ ಇದ್ದದ್ದೇನು ? ನನ್ನನ್ನು ಮುಂದೆ ಕೂಡಿದ್ದೇನು ? ಶಿವಾ ನೀನು ನನ್ನನ್ನು ಬಿಡುವೆನು ಅಂದಾಗ್ಯು ಗುರುವಿನಾಜ್ಞೆ ಗನುಸಾರವಾಗಿ ನಿನ್ನನ್ನು ನಾನು ಬಿಡೆನು ಶಿವನೇ ! ನನ್ನ ಗುಣವನ್ನು ನೋಡಬೇಡ, ಮತ್ತು ನನ್ನೊಂದಿಗೆ ಕೂಡಿ ಅಗಲಬೇಡ, ನಾನು ನಿಮ್ಮನ್ನು ಬೇಡಿಕೊಳ್ಳುವೆನು, ನಿನ್ನ ಕೃಪಾ ಕಟಾಕ್ಷದಿಂದ ನನ್ನನ್ನು ನೋಡು, ಎಲೈ ಶಿವನೇ ! ಕಂಣುಗಳಿಲ್ಲದ ಕುರುಡನಹಾಗೆ ಭಂಗ ಪಟ್ಟು ತಿರುಗುತ್ತಾ ಹೋಗುವೆನಲ್ಲಾ, ಸಂಪೂರ್ಣವಾದ ಷಡಕ್ಷರೀಯುವಾದ ಲಿಂಗಮೂರ್ತಿಯೇ ನಿಮಗೆ ಕೊರತೆಯೆಂಬುವದಿಲ್ಲವಲ್ಲಾ ಎಂದು ಸದ್ಗುರುವಿನ ಉಪದೇಶವ ಕೈಕೊಂಡ ತರುವಾಯ ಅತನ ಆಜ್ಞಾನುಸಾರವಾಗಿ ನಡೆಯ ಬೇಕೆಂಬುವ ಬೋಧೆಯುಂನು ಪೇಳ್ದರೆಂದು ತಾತ್ಪರ್ಯವು.

... ... *

೪. ರಾಗ - ನಾದರಾಮಕ್ರಿಯೆ— ಹೇವವನಿಕ್ಕಲಾರೇ। ಲಿಂಗವೆನಾನೂ। ಹೇವವನಿಕ್ಕಲಾರೇ ॥ ಭಾವಿಸಿಯನ್ನ ಮನವೆಂಬವಧುವನು। ಜಾವನೀನಾಳಲಾರೇ ॥ಪಲ್ಲ॥ ತಿಕ್ಕಡಿಗಳಕೈಯ್ಯಲ್ಲಿ। ಕೊಲ್ಲಿಸಿಕೊಂಡು । ಮುಖಭಂಗಿತನೀನಾದೆ ॥ ಸಖಿಯರಂಜದೆನಿನ್ನ । ಶಿರವನೇರಿದಮೇಲೆ । ಸುಖನಿನಗೆಲ್ಲಿಯದೂ ॥೧॥ ಹಿರಿಯತನಗಳೆಂಬೊವುನಿಮ್ಮೊಳು। ಬರನಾಗಿಹೋ

ಯ್ತಲ್ಲಾ ॥ ಕೆರವುಗಾವಿಲತಲೆಯನೂಬೇಡನೊರಸಲು। ಪರಿಹಾಸ್ಯವಾಯಿತಲ್ಲ॥ ೨॥ ಎಣಾಂಕಧರಲಿಂಗವೇನೀಹೋಗಿ। ಬಾಣಾಸುರನಬಾಗಿಲಾ॥ ಕೇಣಾಸರವನರಿಯದೆಕಾಯ್ದೆಧರೆಯೆಿಳು। ಊಣೆಯುವೂಬಂದೀತಲ್ಲಾ ॥ ೩ ॥ ಹೆಗಲಸಂಚಿಯನೇಹೊತ್ತು। ಕುಂಠಣಿಯಾಗಿ । ಹಗಲಿರುಳೆಡತಾಕಿದೆ ॥ ಜಗದೊಳ-ಹಿರಿಯತಾನಾಗಿ। ನಿಮುಗುಚಿತವೇ। ನಗೆಗೆಡೆಯಾಯಿತಲ್ಲಾ ॥ ೪॥ ಜಿನುಗುವಮನಕಾರದೇ । ನಿಮಗೆನಾನು। ಕನಲಿಹೇವವನಿಕ್ಕಿದೇ॥ ಮುನಿಸುಬೇಡಯ್ಯಾಷಡಕ್ಷರಿಲಿಂಗವೇ। ಮನವನಿಮ್ಮೊಳಗಿರಿಸೂ ॥

೪. ಟೀ ॥ ಎಲೈ ಜಂಗಮಾಕೃತಿಯಿಂದೊಪ್ಪುವ ಲಿಂಗವೇ ! ನಾನು ಅಸಹ್ಯವಾದದ್ದನ್ನು ಇಡಲಾರೆನು ಎಂಬುವದನ್ನುಭಾವಿಸಿ, ನನ್ನ ಮನವೆಂಬುವ ಕಾಂತೆಯನ್ನು ಒಂದು ಜಾವವಾದರೂ ನೀನು ಆಳಲಾರಿಯಲ್ಲಾ ? ನೀನು ಚಿಕ್ಕಾಡಿಗಳ ಕೈಯಿಂದ ಕೆಡಿಸಿಕೊಂಡು ಮುಖಭಂಗಿತನಾಗಿ ಸಖಿಯರು ಧೈರ್ಯಗೊಂಡು ನಿನ್ನ ತಲೆಯಮೇಲೆ ಹತ್ತಿಕೊಂಡತರುವಾಯ ಸುಖವೆಂಬುವದು ನಿನಗೆ ಎಲ್ಲಿರುವದು ? ನಿನ್ನಲ್ಲಿ ದೊಡ್ಡಸ್ತಿಕೆ ಎಂಬುವದು ಕ್ಷೀಣವಾಗಿ ಹೋಯಿತಲ್ಲಾ? ಮೂಢನಾದ ಕಿರಾತನು ಕೆರವನ್ನು ತಲೆಯಲ್ಲಿ ಒರಸಿದ್ದರಿಂದ ಅಪಹಾಸ್ಯಕರವಾಯಿತಲ್ಲಾ ? ಎಲೈ ಚಂದ್ರಶೇಖರನಾದ ಲಿಂಗವೇ ! ನೀನು ಹೋಗಿ ಬಾಣಾಸುರನ ಬಾಗಲನ್ನು ನಾಚಿಕೆಯಿಲ್ಲದೆ ಕಾದುಕೊಂಡಿದ್ದಿ, ಇಂಥಾ ನಿನಗೆ ಪ್ರಪಂಚದಲ್ಲಿ ಕೊರತೆಯುಂಟಾಯಿತಲ್ಲಾ? ಹೆಗಲಮೇಲೆ ಜೋಳಿಗೆ ಹೊತ್ತುಕೊಂಡು ಬಿಕಾರಿಯಾಗಿ ಅಹೋರಾತ್ರವೂ ತಿರುಗಾಡಿದ್ದಿ. ಲೋಕದೊಳಗೆ ತಾನೇ ದೊಡ್ಡವನಾಗುವದು ನಿಮಗೆ ತಕ್ಕದ್ದೇ ? ಇದು ಅಪಹಾಸ್ಯಕ್ಕೆ ಆಸ್ಪದವಾಯಿತಲ್ಲಾ ? ಎಲೈ ಅಸ್ಥಿರವಾದ ಮನವೇ ! ನಾನು ಕೋಪಗೊಂಡು ನಿನಗೆ ಅಸಹ್ಯತ್ವವನ್ನು ಆರೋಪಿಸಿದ್ದೇನೆ. ಎಲೈ ಷಡಕ್ಷರಸ್ವರೂಪಿಯಾದ ಲಿಂಗವೇ ! ಕೋಪ ಬ್ಯಾಡವಯ್ಯಾ ? ಮನವನ್ನು ನಿಮ್ಮೊಳಗೆ ಇರಿಸು.ಎಂದು ಲಿಂಗದೇಹಕ್ಕೆ ಪ್ರಾಪಂಚಿಕದ ವಿರಕ್ತಿಯನ್ನೂ ಲಿಂಗಮನಗಳ ಐಕ್ಯವನ್ನೂ ಈ ಪದದಲ್ಲಿ ವಿವರಿಸಿ ಪೇಳ್ದರೆಂದು ತಾತ್ಪರ್ಯವು.

೫. ರಾಗ - ಭೈರವಿ— ಲಿಂಗವಂಗದಲ್ಲಿ ಇರಲು। ಲಿಂಗವೆಂದುಕಾಂಬಮನವ । ಲಿಂಗನೀನೇಕೊಟ್ಟು ಸಲಹುಬಯಕೆಯನಗಿದೂ ॥ಪಲ್ಲ॥ ಆಂದಣವನೇರಿಭಕುತ। ಗೊಂದಣದಲಿನುತಿಸಿಕೊಳುತ। ಚಂದದಿಂದಬರಲು

ಆಚೆಯಲ್ಲಿಯೊೞರ್ವರೂ ॥ ಕುಂದಿಕುಸಿದುವೃದ್ಧರಾಗಿ । ಚೆಂಡವಳಿದುಬ
ಳಲುವವರ। ಇಂದುಧರನಸಮುವ್ರಕಾಣ್ಬುದೆಂದಿಗಪ್ಪುದೊ॥ ೧ ॥ ಎತಿ
ಳೆನಿಸಿಕೊಂಡುಕಾವು । ಜಿತರುಯೆನಿಸಿಕೊಂಡುಧರೆಗೆ । ವ್ರತಿಗಳೆನಿಸಿ
ಕೊಂಡುಬರಲುಆಚೆಯೊೞರ್ವರೂ॥ ಸತಿಯಕೂಡಿಕೊಂಡುಪುತ್ರ। ಯು
ತರುಸಹಿತಬರಲುಅವರ। ಶಿತಿಸುಕಂಠನೆಂದುಕಾಂಬುದೆಂದಿಗಪ್ಪುದೊ॥
೨ । ವಸ್ತ್ರಾಭರಣವಲಂಕರಿಸಿ। ಪುಸ್ತುಕವನುಪಿಡಿದುಕೊಂಡು । ಅತಿ
ಯಲ್ಲಿಬರಲುಆಚೆಯಲ್ಲಿಯೊೞರ್ವರೂ ॥ ಹಸ್ತಪಾದವುುಡುಬರಾಗಿ । ಹ
ಸ್ತದಲ್ಲಿಲಿಂಗವಿರಲು । ವಸ್ತುವೆಂದುಕಾಬವುನವ್ರುಯೆಂದಿಗಪ್ಪುದೋ ॥೩॥
ಕಾವಿಯುಂಬರವನುಹೊದ್ದು । ಸಾವಿರಾಕ್ಷವೂಲೆಕೊರಳ । ತೀವಿಧರಿಸಿಬ
ರಲುಆಚೆಯಲ್ಲಿಯೊರ್ವರೂ ॥ ಸೇವಕತ್ವದಿಂದಧನವ । ಕಾವುತಿರಲುಲಿಂ
ಗವಿಡಿದು। ದೇವನೆಂದುಕಾಬವುನವದೆಂದಿಗಪ್ಪುದೋ ॥ ೪ ॥ ಸ್ಪಷ್ಟವಾ
ಗಿನುಡಿದುಶಾಸ್ತ್ರ । ಭ್ರಿಷ್ಟರೆನಿಸಿಕೊಂಡುಭಕುತಿ। ನಿಷ್ಟೆವಂತರಾಗಲಾಚೆ
ಯಲ್ಲಿಯೊೞರ್ವರೂ ॥ ತುಷ್ಟವಾಗಿಹಸ್ತಪಾದ। ನಷ್ಟವಾಗಿಇರಲುಅವರು
ಸೃಷ್ಟಿಗೀಶನೆಂದುಕಾಬುದೆಂದಿಗಪ್ಪುದೋ ॥ ೫ ॥ ಕುರಿಯಕಾಯುತಿರಲಿ
ಯುವರು । ಕರುವಕಾಯುತಿರಲಿಯುವರು । ಕೆರವಹೊಲಿಯುತಿರಲಿಅವ
ರುಲಿಂಗವಂಗದಿ ॥ ಧರಿಸಿಭಸಿತವಕ್ಷವೂಲೆ। ಇರಲುಶಿವನಸವುವದೆಂದು
ಅರಿದುಶರಣುವೂಡುತಿರ್ಪುದೆಂದಿಗಪ್ಪುದೋ ॥ ೬॥ ಅಷ್ಟಸೃಷ್ಟಿತೀರ್ಥಗ
ಳನು। ಮೆಟ್ಟಿಬಂದವುಹಿವೆುಯನ್ನುದುಷ್ಟವಾಗಿವುರೆಯಲಾಚೆಯಲ್ಲಿಯೊೞ
ರ್ವರೂ॥ ಕಟ್ಟಿಹೊತ್ತುಕೊಳಲುವಿುಣಿಯ। ಬಟ್ಟೆಯಲ್ಲಿಬರಲುಅವರ। ಶ್ರೇಷ್ಠ
ರಿವರುಯೆಂದುಕಾಂಬುದೆಂದಿಗಪ್ಪುದೋ ॥ ೭॥ ವುಲಿನಕಾಯರಾಗಿಬಹ
ಳ। ವುಲಿನಕಪಡವನ್ನುಹೊದೆದುಹೊಲೆಯನಿಂದದಲ್ಲಿವುನೆಯಕಟ್ಟಿಕೊಂ
ಡಿರೇ ॥ ಚಲುವಲಿಂಗವಂಗದಲ್ಲಿ। ನೆಲಸಿಯಿರುವಅವರಶಿವನ । ಕುಲವಿದಂ
ದುನವಿುಸುತಿರ್ಪುದೆಂದಿಗಪ್ಪುದೊ॥೮ ॥ ಕಾಕರಾಗಲವರುವಿಷಯ। ನೀ
ಕರಾಗಲವರುಬಹಳ । ಪೋಕರಾಗಲವರಅಂಗದಲ್ಲಿಲಿಂಗವೂ ॥ ಸೋಕಿ
ಸೊಗಸುತಿರಲುಅವರ । ನೇಕನಾಥನೆಂದುಕಾಬ । ಏಕಅಚ್ಚಿಯೆನಗೆಬಿಡ
ದೆಯೆಂದಿಗಪ್ಪುದೋ ॥ ೯ ॥ ಹಗೆಗಳಂಣತವ್ಮುಹಿತವ । ಬಗೆವತೊತ್ತು
ವಿುತ್ರಬಂಟ। ಅಗಲದಿರ್ಪಸತಿಸುಪುತ್ರವೂತೆಪಿತರೊಳೂ॥ ಸೊಗಸಿಬೆಳ

ಗುತಿರಲುಲಿಂಗ । ಅಗಲದವರಅಂಗದಲ್ಲಿ । ನಗಜೆಪತಿಯಸಮವಕಾಣ್ಬು ದೆಂದಿಗಪ್ಪುದೋ॥ ೧೦॥ ವೇಶಿಯರನುಕೂಡಿಕೊಂಡು । ಪೋಸರಿಸದೆ ಅ ವರಹೆಗಲ। ವಾಸದಲ್ಲಿತೋಳನಿಡಿದುಕೊಂಡುಬರುತಿರೇ ॥ ಈಶಲಾಂಛ ನಗಳುಯಿರಲು । ಶ್ರೀಷಡಕ್ಷರಾಂಕನೆಂದು । ವಾಸರಿಸದೆನವಿುಸುತಿರ್ಪು ದೆಂದಿಗಪ್ಪುದೋ॥ ... ... ೧೧॥

ಇ. ಟೀ॥ ಎಲೈ—ಲಿಂಗವೇ ! ಲಿಂಗವೆಂಬುವದು ಅಂಗದಲ್ಲಿಯೇ ಇರಲಾಗಿ ಆ ಲಿಂಗವನ್ನು ಅರಿಯುವ ಮನವನ್ನು ಅನುಗ್ರಹಿಸಿ ಕಾಪಾ ಡು, ಇದೇ ನನ್ನ ಕೋರಿಕೆಯಾಗಿರುವದು. ಒಬ್ಬರು ಪಾಲಕಿಯ ಮೇ ಲೆ ಕುಳಿತುಕೊಂಡು ಭಕ್ತರ ಸಮೂಹದಿಂದ ಹೊಗಳಿಸಿಕೊಳ್ಳುತ್ತಾ ಬ ಹು ಅಂದದಿಂದ ಬಂದರೂ, ಆಚೆಯಲ್ಲಿ ಇನ್ನೊಬ್ಬರು ಅಜ್ಜುಗುಜ್ಜು ಮು ದುಕರಾಗಿ ಅಂದಕೆಟ್ಟು ಬಂದರೂ ಅವರನ್ನು ಶಿವನಿಗೆ ಸಮನಾಗಿ ಕಾ ಣುವದು ಯಾವಾಗ್ಯೆ ಉಂಟಾಗುವದೋ ? ಯತಿಗಳೆನ್ನಿಸಿಕೊಂಡು ಜಿತೇಂದ್ರಿಯ ರೆನ್ನಿಸಿಕೊಂಡು ವ್ರತನೇಮಗಳುಳ್ಳವರೆನ್ನಿಸಿಕೊಂಡು ಕೆ ಲವರು ಬಂದರೂ, ಕೆಲವರೂಹೆಂಡರೊಂದಿಗೆ ಕೂಡಿಕೊಂಡು ಮಕ್ಕ ಳು ಮರಿಗಳೊಡನೆ ಕೂಡಿಕೊಂಡು ಆಚೆಯಲ್ಲಿ ಬಂದರೂ, ಅಂಥವರಂ ನು ಶಿವನಿಗೆ ಸಮಾನವಾಗಿ ಕಾಣುವದು ಯಾವಾಗ್ಯೆ ಆಗುವದೋ ? ಕೆ ಲವರು ಉಡಿಗೆ ತೊಡಿಗೆಗಳಿಂದ ಸೊಬಗುವಡೆದು, ಪುಸ್ತಕವಂನು ಕೈ ಲಿ ಪಿಡಿದು ಅರ್ತಿಯಿಂದ ಬಂದರೂ, ಆಚೆಯಲ್ಲಿ ಕೆಲವರು ಕೈಕಾಲುಗಳಿ ಲ್ಲದ ಕುಂಟರಾಗಿ ಕೈಯಲ್ಲಿ ಲಿಂಗವಿರಲಾಗಿ ಅಂಥವರನ್ನು ಕೈವಶವಾದ ಲಿಂಗವುಳ್ಳವರೆಂದು ಕಾಣುವ ಮನವು ಯಾವಾಗ್ಯೆ ಉಂಟಾಗುವದೋ? ಕೆಲವರು ಕಾಷಾಯವಸ್ತ್ರವನ್ನು ಹೊದ್ದು, ಕೊರಳಿನಲ್ಲಿ ರುದ್ರಾಕ್ಷೀಸರ ವನ್ನು ಚನ್ನಾಗಿ ಧರಿಸಿಕೊಂಡು ವೈಖರಿಯಿಂದ ಬಂದರೂ, ಆಚೆಯಲ್ಲಿ ಮತ್ತೊಬ್ಬರು ಕೇವಲ ಬಡಸೇವಕರಾಗಿ ಹಣವನ್ನು ಕಾಯುತ್ತಿದ್ದರೂ. ಅಂಥವರ ಲಿಂಗವನ್ನು ಹೊಂದಿ ಮಹಾದೇವನೆಂದು ಕಾಣುವ ಮನವು ಯಾವಾಗ್ಯೆ ಉಂಟಾಗುವದೋ ? ಕೆಲವರು ಶಾಸ್ತ್ರವನ್ನು ಪರಿಷ್ಕಾರ ವಾಗಿ ಹೇಳಿ ಭ್ರಷ್ಟರೆನ್ನಿಸಿಕೊಂಡು ನಿಷ್ಠೆವಂತರಾಗಿದ್ದರೂ, ಆಚೆಯಲ್ಲಿ ಒ ಬ್ಬರು ಕೈಕಾಲುಗಳು ಇಲ್ಲದವರಾಗಿದ್ದರೂ ಸಂತೋಷದಿಂದ ಇರಲು, ಅಂಥವರನ್ನು ಲೋಕೇಶನೆಂದು ಕಾಣುವ ಮನವು ಯಾವಾಗ್ಯೆ ಉಂ

ಟಾಗುವದೋ ? ಅವರು ಕುರೀಕಾಯು ತ್ತಿದ್ದರೂ, ಅವರು ಕರುಗಳ ಕಾ ಯು ತ್ತಿದ್ದರೂ, ಅವರು ಕೆರಾ ಹೊಲಿಯು ತ್ತಿದ್ದರೂ, ಅವರು ಅಂಗದಲ್ಲಿ ಲಿಂಗವನ್ನು ಧರಿಸಿ ಭಸ್ಮಧಾರಣೆ ಮೂಡಿಕೊಂಡು, ರುದ್ರಾಕ್ಷಿ ಮಾಲೆ ಯನ್ನು ಧರಿಸಿ ಇರಲು, ಅವರನ್ನು ಶಿವನ ಸಮರೆಂದರಿದು, ಶರಣು ಮೂಡುವದು ಯಾವಾಗ್ಯೆ ಉಂಟಾಗುವದೋ ? ಭೂಮಿಯೊಳಗೆ ಎಂ ಟುವಿಧವಾದ ತೀರ್ಥಗಳನ್ನು ಮೆಟ್ಟಿ ಬಂದು ಆ ಮಹತ್ತನ್ನು ಒಬ್ಬನು ದುಷ್ಟನಾಗಿ ಮರೆತರೂ, ಆಚೆಯಲ್ಲಿ ಮತ್ತೊಬ್ಬನು ಮಿಣಿಯನ್ನು ಬಟ್ಟೆ ಯೊಳಗೆ ಕಟ್ಟಿ ಹೊತ್ತುಕೊಂಡು ಬರಲು, ಅಂಥವರನ್ನು ಇವರು ಶ್ರೇ ಷ್ಠರು ಎಂದು ಕಾಣುವದು ಆವಾಗ್ಯೆ ಆಗುವದೋ ? ಕೊಳಕಾದ ದೇಹ ವುಳ್ಳವರಾಗಿ, ಮೈಲಿಗೆ ಬಟ್ಟೆಯನ್ನು ಹೊದ್ದು, ಹೊಲೆಯರು ಇರುವ ಬ ಳಿಯಲ್ಲಿ ಮನೇಕಟ್ಟಿಕೊಂಡು ಇದ್ದರೂ, ಚಲುವಾದ ಲಿಂಗವು ಅವರ ಅಂ ಗದಲ್ಲಿ ನೆಲಸಿರಲು, ಅಂಥವರನ್ನು ಶಿವನ ಕುಲವೆಂದು ಹೇಳಿ ಸ್ತುತಿಗೈ ಯ್ಯುತ್ತಿರುವದು ಯಾವಾಗ್ಯೆ ವುಂಟಾಗುವದೋ, ಅವರು ಕಾಕರಾಗ ಲಿ, ಅವರು ವಿಷಯಾಸಕ್ತರಾಗಲಿ, ಅವರು ಬಹಳ ಘೋಕರಿಗಳಾಗಲಿ, ಅವರ ಅಂಗದಲ್ಲಿ ಲಿಂಗವು ಸೊಗಸುತ್ತಾ ಇರುತ್ತಿರಲು, ಅಂಥವರನ್ನು ಏಣನಾಥನಾದ ಶಿವನೆಂದು ಕಾಣುವ ಏಕಚಿತ್ತವು ಯಾವಾಗ್ಯೆ ವುಂಟಾ ಗುವದೋ ? ವೈರಿಗಳು ಅಣ್ಣತಮ್ಮಂದಿರು, ಹಿತವನ್ನು ಬಯಸುವವರು, ತೊತ್ತು,ಸ್ನೇಹಿತ,ಭೃತ್ಯ,ಎಡೆಬಿಡದೆಇರುವಹೆಂಡತಿ,ಮಕ್ಕಳು,ತಾಯಿ,ತಂ ದೆ, ಇವರು ಮೊದಲಾದ ಯಾರಾದರೂ ಸರಿಯೇ ಅವರ ಅಂಗದಲ್ಲಿ ಅಂ ದವಾಗಿ ಲಿಂಗವು ಪ್ರಕಾಶಿಸುತ್ತಿರಲು, ಅವರನ್ನು ಲೋಕಾಧಿಪತಿಯಾದ ಶಿವನಿಗೆ ಸಮವಾಗಿ ಕಾಣುವದು ಯಾವಾಗ್ಯೆ ವುಂಟಾಗುವದೋ ? ಜಾ ರಸ್ತ್ರೀಯರನ್ನು ಕೂಡಿಕೊಂಡು,ಎಡೆಬಿಡದೆ ಅವರ ಹೆಗಲಮೇಲೆ ತೋ ಳನ್ನು ಇಟ್ಟುಕೊಂಡು ಬರುತ್ತಿದ್ದರೂ, ಅಂಥವರ ಅಂಗದಲ್ಲಿ ಈಶನ ಲಾಂಛನವಾದ ಲಿಂಗವು ಇರುತ್ತಿರಲು, ಅವರನ್ನು ಶ್ರೀಷಡಕ್ಷರ ಮಹಾ ಮಂತ್ರ ಮೂರ್ತಿಯಾದ ಶಿವನೆಂದು ನೆಟ್ಟಗೆ ನಮಸ್ಕರಿಸುತ್ತಿರುವದು ಯಾವಾಗ್ಯೆ ಉಂಟಾಗುವದೆಂದು ಈ ಪದದಲ್ಲಿ ಲಿಂಗಧಾರಣೆಯಾಗಿರು ವವರೇ ಶಿವನಾಗಿರುವರೆಂದು ಮನೋಭಾವದಿಂದ ಪೇಳ್ದರೆಂದು ತಾ.

೬. ಭಾಮಿನಿಷಟ್ಪದಿ - ರಾಗ - ಲಹರಿ— ಎಲ್ಲವರಗಳಕೊಡುವ

ದೇವನು । ಇಲ್ಲಿಕರಪೀಠದೊಳುಬಂದಿರೆ । ಕುಲ್ಲುಮನವೇನೀನುಪದವಿ ಯಪಡೆದುಸುಖಿಯೂಗೂ ॥ ಪಲ್ಲ ॥ ಸೂಳೆನಂಬಿಗೆಹೊನ್ನ ಮಳೆಯಂ । ಚೋಳರಾಗಿಯಕನಕವೃಷ್ಟಿಯು। ಹೇಳಲಾಕ್ಷವೆಕರೆಸಿದಾತನಹಸ್ತದೊಳ ಗಿರಲೂ ॥ ಖೂಳಮನವೇನಿತ್ಯಪೂಜಿಸಿ। ಕಾಲಕಾಮರಗೆಲಿದುಶಿವಗೆಣೆ। ಮೇಳದೊಳಗಿರುತಿರ್ಪಪದವಿಯಪಡೆದು ಸುಖಿಯೂಗೂ ॥ ೧ ॥ ನಂದಿ ಯುಂಡೆಗೆಹೊನ್ನಪಡಿಯಂ । ವೊಂದನುಳಿಯದೆನಂಬಿದಣ್ಣಗೆ । ತಂದು ಕೊಡುವಾದೇವನಿನ್ನಯಹಸ್ತದೊಳಗಿರಲೂ ॥ ಬೆಂದಮನವೇಬೇಡಿಕೊಂ ಬೆನು । ಕುಂದದಿಳೆಯೊಳುಭಜಿಸಿಸುಖರಸ । ಸಿಂಧುಶೆರೆಯೊಳಗಾಳು ತಿರುನೀನಿತ್ಯಸುಖಿಯೂಗು ॥ ಬಾಣಯೂಣದವರಿಗೆಇಷ್ಟನ। ನೂಣೆಯೂ ಗದವಂಗೆಕೊಟ್ಟರೆ। ಜಾಣಬಂದುರೆ ವೊಲಿದುನಿನ್ನಹಸ್ತದೊಳಗಿರಲಾ॥ ಹೀನಮನವೇನಿತ್ಯಪೂಜಿಸು । ಯೇನುವನುಪಡಿಯದರಿಭಕ್ತಿ। ಜ್ಞಾನವೈ ರಾಗ್ಯವನುಪಡೆದಲೆನಿತ್ಯಸುಖಿಯಾಗು॥ ೩॥ ಕಾಳಿದಾಸಂಗೊಲಿದವುಗು ಳಾ। ಲೋಲಲೋಚನೆಗಳನುಕೊಟ್ಟಾ । ಬಾಳನೇತ್ರನುಬಂದುನಿನ್ನಯ ಹಸ್ತದೊಳಗಿರಲಾ ॥ ಮೇಲುಗತಿಯೆತಿಯನುಬಯಸುವರೆ। ಲೀಲೆಯಿಂ ದಲಿನಿತ್ಯಪೂಜಿಸು । ನಾಳೆಗಿಂದಿಗೆಯೆನ್ನದೇನೀನಿತ್ಯಸುಖಿಯೂಗೂ॥೪॥ ದಾಸಮೈಯ್ಯನಿಗೊಲಿದುತವನಿಧಿ। ಯೇಸುಕಾಲಕೆಸವೆಯದಂದದಿ । ದೇ ಶವರಿಯಲುಕೊಟ್ಟದೇವನು ಹಸ್ತದೊಳಗಿರಲೂ॥ಘೂಸಿಯಾಗದೆಯಮನ ದೂತರ। ವಾಸವಾಗದೆನಿತ್ಯಪೂಜಿಸು । ಈಶಪದವಿಯಪದವಪಡೆಯುತ ಸೀನುಸುಖಿಯೂಗೂ ॥ ೫ ॥ ಸಿಂಧುಬಲ್ಲಾಳನಿಗೆಕರುಣಿಸಿ । ಕುಂದಿದಿಳೆ ಯೊಳುಲಿಂಗಪದವಿಯ । ಚಂದದಿಂದಲಿಕೊಟ್ಟದೇವನುಹಸ್ತದೊಳಗಿರ ಲೂ ॥ ಮಂದಮತಿಯೆಲಿಕೆಡುವಮನವೇ। ಹೊಂದದೀಗಳುನುತಿಯಪೂ ಜಿಸು। ಮುಂದೆಸದ್ಗತಿಪಡೆದುಶಿವನೊಳು ನಿತ್ಯಸುಖಿಯೂಗೂ ॥ ೬॥ ಮ ಲ್ಲಿಕಾರ್ಜುನಪಂಡಿತರಿಗಾ । ಖುಲ್ಲಜಾನನುಕಂಣಕೀಳಿಸೆ। ದೊಳ್ಳೆತಾಗಿ ಯೆ ಕಂಣಕೊಟ್ಟವಹಸ್ತದೊಳಗಿರಲೂ ॥ ಖುಲ್ಲುಮನವೇನಿತ್ಯಪೂಜಿಸಿ । ವೊಳ್ಳಿತೆನಿಸುವಮೂರ್ಗದಿಂದಲಿ । ಯಲ್ಲರಹುದೆನೆನಡೆದುಶಿವನೊಳು ನಿ ತ್ಯಸುಖಿಯೂಗೂ ॥ ೭ ॥ ಲೋಲಶಂಕರದಾಸಿಮೈಯ್ಯಗೆ । ಕಾಳದೈವ ವ ಸುಡಲಿಕೋಸುಗ। ಬಾಳನೇತ್ರವಕೊಟ್ಟದೇವನು ಹಸ್ತದೊಳಗಿರಲೂ ॥ ಕೋಳುವೋಗದೆನಿತ್ಯಪೂಜಿಸಿ। ಲೀಲೆಯಿಂದಲಿಪಾಡಿಹೊಗಳನು । ಕೂಲ

ವಾಗಿರುಶರಣರಿಗೆಶಿವನೊಳಗೆಸುಖಿಯಾಗೂ॥ ಭೂಮಿಯೊಳಗಾವ ಹಣ್ಣೈಯ್ಯಗೆ। ಕಾಮಿತಾರ್ಥವನಿತ್ತದೇವನು। ಪ್ರೇಮದಿಂದಲಿಬಂದುನಿನ್ನ ಯಹಸ್ತದೊಳಗಿರಲೂ॥ಸೋಮಧರನೊಳುಬೆರಸಬಲ್ಲಡೆ। ಕಾಮಕ್ರೋಧ ಗಳಳಿದುಪೂಜಿಸು। ಆಮಹಾಶಿವಶರಣರೊಳುನೀನಿತ್ಯಸುಖಿಯಾಗೂ ಧರೆಯೊಳೆಲ್ಲಾವರಿಯೆಬಾಣಾ। ಸುರಗೆಸಾಸಿರತೋಳಕೊಟ್ಟವ। ಕರುಣ ದಿಂದಲಿಬಂದುನಿನ್ನಯಹಸ್ತದೊಳಗಿರಲೂ॥ ಮರೆದುದುಷ್ಟನವಿಧದಪೂ ಜೆಯ। ಹರುಷದಿಂದಲಿಮಾಡಿಸುಖರಸ। ಶರಧಿತೆರೆಯೊಳಗಾಳುತಿರು ನೀನಿತ್ಯಸುಖಿಯಾಗು॥ ೧೦॥ ಎಲ್ಲಮುನಿಗಳುಯೆಲ್ಲಮನುಗಳು। ಎಲ್ಲಸಿದ್ಧ ರುಯೆಲ್ಲಸಾಧ್ಯರು। ಇಲ್ಲಿಪಡೆದರುನಿಮ್ಮಹಸ್ತದಲಿಂಗವನುಭಜಿಸೀ॥ ಅಲ್ಲ ಗಲ್ಲಿಗೆಹರಿವಬುದ್ಧಿಯ। ಸಲ್ಲವಿಡುನೀನಿತ್ಯಪೂಜಿಸು। ಇಲ್ಲಿರುವಷಾಡಕ್ಷರೀ ವರನಲ್ಲಿಸುಖಿಯಾಗು ॥ ... ... ೧೧॥

೬. ಟೀ॥ ಎಲೇ—ನನ್ನ ತುಚ್ಛವಾದ ಮನವೇ! ಸಮಸ್ತವಾದ ಇಷ್ಟಾರ್ಥಗಳನ್ನೂ ಅನುಗ್ರಹಿಸುವ ದೇವನು ಇಲ್ಲಿ ಕರವೆಂಬುವ ಪೀಠದಲ್ಲಿ ಬಂದು ಇರಲಿಕ್ಕಾಗಿ. ನೀನು ಉತ್ತಮವಾದ ಪದವಿಯನ್ನು ಹೊಂದಿ ಸುಖಿಯಾಗು. ಸೂಳೆ ನಂಬಿಗೆಹೊನ್ನು ಮಳೆಯನ್ನೂ ಚೋಳರಾಯನಿಗೆ ಸುವರ್ಣವರ್ಷವನ್ನೂ ಹೇಳಿದಾಕ್ಷಣದಲ್ಲಿ ಸುರಿಸಿದಂಥವನು ಕೈವಶವಾಗಿರಲಿಕ್ಕಾಗಿ, ಎಲೈ—ನನ್ನ ದುಷ್ಟಮನವೇ! ಆ ದೇವನನ್ನು ಸದಾ ಪೂಜಿಸಿ, ಕಾಲನನ್ನೂ ಕಾಮನನ್ನೂಗೆಲಿದಂಥಾ ಪರಶಿವನಿಗೆ ಜೊತೆಯಾಗಿರುವ ಕೂಟದೊಳಗೆಇರುತ್ತಿರುವ ಕೈವಲ್ಯಪದವಿಯನ್ನು ಪಡೆದುಸುಖಿಯಾಗು; ನಂದಿಯುಂಡೆಗೆ ಹೊನ್ನಪಡಿಯನ್ನು ಒಂದುದಿನವೂವುಳಿಯದಹಾಗೆ ನಂಬಿಯಣ್ಣನಿಗೆ ತಂದುಕೊಡುವಂಥಾ ಸರ್ವೇಶ್ವರನು ನಿನ್ನ ಕೈಯೊಳಗಿರಲಾಗಿ, ಎಲೈ—ಸುಟ್ಟಮನವೇ! ನಾನು ನಿನ್ನನ್ನು ಬೇಡಿಕೊಳ್ಳುವೆನು. ನೀನು ಕೊರತೆಯಿಲ್ಲದಂತೆ ಭೂಮಿಯೊಳಗೆ ಭಜಿಸಿ, ಸುಖವೆಂಬುವ ಅಮೃತಸಾಗರದ ತೆರೆಗಳೊಳಗೆ ಮುಣುಗಾಡುತ್ತಾ ಇರುವಂಥವನಾಗಿ ನಿತ್ಯ ಸುಖಿಯಾಗು. ಬಾಣನಿಗೂ ಮಯೂರನಿಗೂ ಪರಿಪೂರ್ಣವಾದ ಅಭೀಷ್ಟವನ್ನು ಇತ್ತ ಸರ್ವಜ್ಞಮೂರ್ತಿಯು ಬಂದು ನಿನಗೆ ಚಂನಾಗಿ ಪ್ರಸನ್ನನಾಗಿ ನಿನ್ನ ಕೈಯೊಳಗೆ ಇರಲಾಗಿ, ಎಲೇ—ಹೀನವಾದ ಮನವೇ! ನೀನು ನಿತ್ಯದಲ್ಲಿಪೂಜಿಸಿ, ಇತರವಾದ ಯಾವದನ್ನೂ ಪಡೆಯದೇನೇ ಭಕ್ತಿ ಜ್ಞಾ

ನ ವೈರಾಗ್ಯವನ್ನು ಪಡೆಯುವಂಥವನಾಗಿ ನಿತ್ಯಸುಖಿಯೂಗು, ಕಾಳಿದಾಸನಿಗೆ ಪ್ರಸನ್ನನಾಗಿ ಮತ್ತೇ ಲೋಲಾಕ್ಷಿಗಳಂನು ಕೊಟ್ಟಂಥಾ ಫಾಲಾಕ್ಷನು ಬಂದು ನಿನ್ನ ಕೈಯೊಳಗೆ ಇರಲಿಕ್ಕಾಗಿ, ನೀನು ಮೇಲಾದ ಗತಿಯನ್ನು ಅಪೇಕ್ಷಿಸುವದಾದರೆ, ಲೀಲೆಯಿಂದ ನಿತ್ಯವೂ ಪೂಜಿಸಿ, ನಾಳೆಗೆ ಈ ಹೊತ್ತಿಗೆ ಅನ್ನದೆ ಶಾಶ್ವತವಾಗಿ ನೀನು ನಿತ್ಯಸುಖಿಯಾಗು.ದಾಸಮಯ್ಯನಿಗೆ ಪ್ರಸನ್ನನಾಗಿ ತಪೋವಿಧಿಯು ಎಷ್ಟು ಕಾಲಕ್ಕೂ ಕೊರತೆಯಾಗದಂತೆ ಜಗತ್ಪ್ರಸಿದ್ಧವಾಗಿ ಕೊಟ್ಟ ದೇವನು ಹಸ್ತದೊಳಗೆ ಇರಲಾಗಿ, ನೀನು ಘಾಸಿಯಾಗದೆಯೂ, ಯಮನವರಿಗೆ ವಶವಾಗದೆಯೂ, ಮೋಸಹೋಗದೆಯೂ, ನಿತ್ಯದಲ್ಲಿಯೂ ಪೂಜಿಸಿ, ಈಶನ ಪದವನ್ನು ಪಡೆದು ಸುಖಿಯಾಗು. ಭೂಮಿಯೊಳಗೆ ಸಿಂಧುಬಲ್ಲಾಳನಿಗೆ ದಯಮಾಡಿ ಲಿಂಗದಪದವಿಯನ್ನು ಚಂದದಿಂದ ಕೊಟ್ಟಂಥಾ ದೇವನು ಹಸ್ತದೊಳಗೆ ಇರಲಾಗಿ, ಮಂದ ಮತಿಯಲ್ಲಿ ಕೆಡುವ ಮನವೇ ! ಈಗ ಹೊಂದದೆ ಇರುವಂಥಬುದ್ಧಿಯನ್ನು ಮೂಜಿಸು. ಮುಂದೆ ಸದ್ಗತಿಯನ್ನು ಪಡೆದು ಶಿವನಲ್ಲಿ ಐಕ್ಯವಾಗು, ದುರುಳನಾದ ಜೌನನು, ಮಲ್ಲಿಕಾರ್ಜುನ ಪಂಡಿತರ ಕಂಣನ್ನು ಕೀಳಿಸಲು, ಆತನಿಗೆ ಅದಕ್ಕಿಂತಲೂ ಉತ್ತಮವಾದ ಕಣ್ಣನ್ನು ದಯಪಾಲಿಸಿದಂಥ ದೇವನು ಕೈಯೊಳಗೆ ಇರಲಿಕ್ಕಾಗಿ, ಎಲೈ—ಖುಲ್ಲಮನವೇ ! ನಿತ್ಯದಲ್ಲಿಯೂ ಪೂಜಿಸಿ, ಎಲ್ಲರೂ ಅಹುದು ಅಂನುವ ಸನ್ಮಾರ್ಗದಲ್ಲಿ ನಡೆದು ಶಿವನಲ್ಲಿ ಸಾಯುಜ್ಯವೆಂಬುವ ನಿತ್ಯಸುಖ ವುಳ್ಳವನಾಗು. ಲೋಲನಾದ ಶಂಕರದಾಸಿಮ್ಯೆಯನಿಗೆ ಕಾಳಾದ ದೈವವಂನು ಸುಡುವದಕ್ಕೋಸ್ಕರ ಫಾಲನೇತ್ರವನ್ನು ದಯಪಾಲಿಸಿದಂಥ ದೇವನು ಕೈಯೊಳಗೆ ಇರಲಾಗಿ, ಎಲೇ— ಮನವೇ ! ನೀನು ಕೊಟ್ಟುಹೋಗದೆ, ನೀನು ನಿತ್ಯದಲ್ಲಿಯೂ ಪೂಜಿಸಿ, ಲೀಲೆಯಿಂದ ಹಾಡಿ ಹೊಗಳಿ,ಶರಣರಿಗೆಲ್ಲಾ ಅನುಕೂಲೆಯಾಗಿರು. ಶಿವನೊಳಗೆ ಸುಖಿಯಾಗು. ಭೂಮಿಯೊಳಗೆ ಆಮುಲ ಹುಣಯ್ಯನವರಿಗೆ ಇಷ್ಟಾರ್ಥವನ್ನು ಅನುಗ್ರಹಿಸುವ ದೇವನು ಪ್ರೀತಿಯಿಂದ ಬಂದು, ಕೈಯೊಳಗೆ ಇರಲಾಗಿ, ಚಂದ್ರಧರನಾದ ಶಿವನೊಳು ಐಕ್ಯವಾಗುವದನ್ನು ಅರಿತರೆ - ಕಾಮಕ್ರೋಧಾದಿಗಳು ಅಳಿದು ಪೂಜಿಸುವಂಥಾ ಮಹಾಶಿವ ಶರಣರೊಳಗೆ ನೀನು ಸದಾ ಸುಖಿಯಾಗು, ಭೂಮಿಯೊಳಗೆ ಸಮಸ್ತರೂ ಅರಿಯುವಹಾಗೆ

ಬಾಣಾಸುರಗೆ ಸಾವಿರ ತೋಳುಗಳನ್ನು ಕೃಪೆಯಿಂದ ಕೊಟ್ಟಂಥಾ
ವನು ಕರುಣದಿಂದ ಬಂದು ನಿನ್ನ ಕೈಯೊಳಗೆ ಇರುತ್ತಿರಲಾಗಿ, ಎಲ
ಮರುಳು ಮನವೇ ! ನೀನು ಸಂತೋಷದಿಂದ ಪೂಜಿಸಿ, ಸುಖವೆಂಬು
ಸಮುದ್ರದೊಳಗೆ ಮುಳಿಗಿ, ನಿತ್ಯಸುಖಿಯಾಗು. ಸಮಸ್ತಮುನಿಗಳೂ
ಕಲ ಮಗುಗಳೂ ಅಖಿಲಸಿದ್ಧರೂ ನಿಖಿಲಸಾಧ್ಯರೂ ಮೊದಲಾದವರೆ
ನಿನ್ನ ಹಸ್ತದಲಿಂಗವನ್ನು ಭಜಿಸಿ, ಎಲ್ಲಿ ಲಿಂಗಸಾಯುಜ್ಯವನ್ನು ಪಡೆ
ರೊ ? ಅಲ್ಲಿಗೆ ಹರಿಯುವ ಬುದ್ಧಿಯನ್ನು ಸಡ್ಲವಾಡಿ, ನೀನು ನಿತ್ಯದಲ್ಲ
ಯೂ ಪೂಜಿಸಿ,ಇಲ್ಲಿರುವ ಷಡಕ್ಷರೀ ಮಹಾಮಂತ್ರರೂಪಿಯಾದ ಶಿವನಲ್ಲ
ಸುಖಿಯಾಗು ಎಂದು ಲಿಂಗಮನಗಳ ಐಕ್ಯವನ್ನು ಪೇಳ್ದರೆಂದುತಾತ್ಪರ್ಯ

೭. ರಾಗ - ಪರಿವರ್ಧಿನಿ ॥ ಷಟ್ಪದಿ— ಎಂದಿಗೆದೊರಕುವದನ
ವರತಭವನ । ನಂದದಿಪೂಜಿಸುವಪರವಕೊಡಲಂ । ಸಂದುಸುಖಾರ್ಣವ
ತೆರೆಯೊಳಗಿಪ್ಪುದುಯೆಂದಿಗೆದೊರಕುವದೊ ॥ ಪ ॥ ಕಾಡುವವೊಯ
ಯಜಾಡಿಸಿಭವವವಿ । ಭಾಡಿಸಿಕಾಲನನೇಡಿಸಿಕಾಮನ । ನೋಡಿಸಿಮರ
ವೆಯ ಕಾಡಿಗೆವನ್ಹಿಯಪರಿವೇಷ್ಟಿಸಿಬಳಿಕಾ ॥ ನೋಡುತಲಿಂಗವಮೂಡುತ
ಗದ್ಗದ । ಪಾಡುತಾಶ್ರುಜಲವಾಡುತನೇತ್ರದಿ । ಬೇಡುತಭಕ್ತಿಯಕೊಡುವ
ಶಿವಸುಖ । ವೆಂದಿಗೆದೊರಕುವದೊ ॥ ಕೆರೆತೊರೆಮಡುಜೊಣೆಪರಿವಾನಿ
ರ್ಝರ । ಗಿರಿಗುಹೆವನಲತೆಪರ್ಬಿದಕಾನನ । ಸರರುಹಕೊಳದೊಳುದು
ಮುಕುವನದಿತಟದೊಳುಶಶಿ ಶಿಲೆಯೊಳಗೆ ॥ ಅರೆಯೊಳುಪುಳಿನಸ್ಥಳ
ದೊಳುನಿರ್ಮಳ । ಪರಮಸುಖಸ್ಥಳದೊಳುಘನಲಿಂಗಕೆ । ಹರುಷದಿಪೂಜೆ
ಯಮಾಡುವಶಿವಸುಖ । ವೆಂದಿಗೆದೊರಕುವದೊ ॥೨॥ ಶಶಿಕಾಂತದಶಿಲೆ
ಯಿಂದವಿರಚಿಸಿದ । ಮಿಸುಪಾಕೊಳದೊಳುಚಂದ್ರನಕಿರಣದ । ಪಸರದ
ಜಲಧೊಳುಕುಂಕುಮಚಂದನಕರ್ಪೂರಮಂಕದಡಿ ॥ ಬಿಸರುಹದಳದಿಂದ
ರ್ಘ್ಯಮನೀಡುತ । ಬಿಸರುಹದೊಳುಮೂರ್ತವಮಾಡಿಸಿ । ಶಶಿಕಳಧರ
ನಂಪೂಜಿಪಶಿವಸುಖ। ವೆಂದಿಗೆದೊರಕುವದೊ ॥ ೩ ॥ ಬಪ್ಪವಲಿಂಗದ
ವೊಗದೊಳುವೊಗವಿ । ಟ್ಟೊಪ್ಪುತಗಲ್ಲದಬೆಮರುವಜಲದಿಂ । ಧೊಪ್ಪ
ನೆನೆನೆವೃತ್ತನಷ್ಟಾಲಿಗಳಂ । ಚಲಿಸದದೃಢದಿಂದಾ ॥ ಒಪ್ಪವನಿಟ್ಟರೊಲಿಂಗ
ವನಾವಗ । ತಪ್ಪದಚಿತ್ರಿಸಿಬರೆದರೊಯೆಂಬು । ತ್ತಿಪ್ಪಾಪರವಶನಂದದ
ನಿಜಸುಖ । ವೆಂದಿಗೆದೊರಕುವದೋ ॥ ೪ ॥ ಕಮಲಪರಾಗದಪೀಠವನಿ

ಕ್ಕಿಸಿ। ಕಮಲದಸ್ತ್ರಿಗೆಗಳಬಳಸಿತ್ತುತ। ತ್ಕಮಲದಪತ್ರದಬೀಸಣಿಗೆಗಳ ನುಬೀಸುತಹರುಷದಲೀ॥ ಕಮಲದಕರ್ಣಿಕದರ್ಪಣದಿಂದಲಿ। ಕಾಮು ದದಘಂಟೆಯನುಡಿಸುತಪೂಜಿಪ। ವಿಮಲಷಡಕ್ಷರಲಿಂಗದನಿಜಸುಖ। ವೆಂದಿಗೆದೊರಕುವದೋ॥ ... ... ೫॥

೭. ಟೀ॥ ಅಭವನನ್ನು ಸದಾಕಾಲವೂ ಪೂಜಿಸುವ ಆನಂದದಲ್ಲಿ ಕೈವಲ್ಯ ಸುಖವು ಎಂದಿಗೆ ದೊರಕುವದೋ. ಅಂಥಾ ಪರತರವಾದ ಶಿವೈಕ್ಯವೆಂಬುವ ಸುಖಾರ್ಣವದೊಳಗೆ ಇರುವದು ಎಂದಿಗೆ ಲಭಿಸುವದೋ ? ಬಾಧೆ ಪಡಿಸುವ ಮಾಯೆಯನ್ನು ಪರಿಹರಿಸಿ, ಸಂಸಾರವನ್ನು ಪರಿತ್ಯಜಿಸಿ, ಯಮನನ್ನು ಮುಖ ಭಂಗಮಾಡಿ, ಕಾಮನನ್ನು ಓಡಿಸಿ, ಅಜ್ಞಾನವೆಂಬುವ ವನಕ್ಕೆ ಬೆಂಕೀ ಹತ್ತಿಸಿದ ತರುವಾಯ ಲಿಂಗವನ್ನು ಕಾಣುತ್ತಾ ಗದ್ಗದವು ಮಾಡುತ್ತಾ ಹಾಡುತ್ತಾ, ನೇತ್ರದಲ್ಲಿ ಆನಂದ ಬಾಷ್ಪಗಳು ಸುರಿಸುತ್ತಾ ಬೇಡಿಕೊಳ್ಳುತ್ತಾ ಭಕ್ತಿಯನ್ನು ಮಾಡುವ ಶಿವಸುಖವು ಯಾವಾಗ್ಯೆ ಲಭಿಸುವದೋ ? ಕೆರೆ, ಹೊಳೆ, ಮಡುವು, ದೋಣಿ,ಹರಿಯುವ ಬೆಟ್ಟದ ಶಿಲೆ, ಬೆಟ್ಟ, ಗವಿ, ಕಾಡು, ಬಳ್ಳಿ, ಹಬ್ಬಿಕೊಂಡಿರುವ ಅರಣ್ಯ, ಸರೋವರ, ಕೊಳ, ದುಮುಕುವ ನದೀಧಡ, ಚಂದ್ರಕಾಂತಶಿಲೆ, ಅರೆಬಂಡೆ, ಮಣಲುತಿಟ್ಟೆ, ಇವೇ ಮೊದಲಾದ ಪರಮ ಸುಖಸ್ಥಳಗಳೊಳಗೆ ಘನವಾದ ಲಿಂಗಕ್ಕೆ ಸಂತೋಷದಿಂದ ಪೂಜೆ ಮಾಡುವ ಶಿವಸುಖವು ಎಂದಿಗೆ ಲಭಿಸುವದೊ ? ಚಂದ್ರಕಾಂತ ಶಿಲೆಗಳಿಂದ ನಿರ್ಮಿತವಾದ ಪ್ರಕಾಶಮಾನವಾದ ಕೊಳದೊಳಗೆ ಚಂದ್ರಕಿರಣಗಳು ಹಬ್ಬಿರುವ ಜಲದೊಳಗೆ ಕುಂಕುಮಕೇಸರಿ, ಚಂದನ, ಪಚ್ಚೆಕರ್ಪೂರ ಈ ಮೊದಲಾದವುಗಳನ್ನು ಕದಡಿ ಕಮಲದಳದಿಂದ ಅರ್ಘ್ಯವನ್ನು ಕೊಡುತ್ತಾ ಚಂದ್ರಶೇಖರನನ್ನು ಕಮಲದೊಳಗೆ ಕೂಡ್ರಿಸಿ, ಪೂಜಿಸುವಂಥಾ ಶಿವಸುಖವು ಎಂದಿಗೆ ದೊರಕುವದೋ, ಪ್ರಕಾಶಿಸುತ್ತಿರುವ ಲಿಂಗದ ಮುಖದೊಳಗೆ ಮುಖವಿಟ್ಟುತೋರುತ್ತಾ ಬೆಮರುವದರಿಂದುಂಟಾದ ಜಲದಿಂದ ಸುಮ್ಮನೆ ನೆನದು ಸ್ಥಿರವಾದ ಆಲಿಗಳು ಚಲಿಸದ ಹಾಗೆ ದೃಢದಿಂದ ಒಪ್ಪವನ್ನು ಇಟ್ಟಿರುವ ಲಿಂಗವನ್ನು ಸದಾಕಾಲವೂಎಡೆಬಿಡದೆ ಚಿತ್ರಿಸಿ ಬರೆದರೋ ಅನ್ನುತ್ತಿರುವಂಥಾ ಪರವಶಾನಂದದ ನಿಜಸುಖವು ಎಂದಿಗೆ ಲಭಿಸುವದೋ ? ಕಮಲದ ಧೂಳಿನಿಂದ ಪೀಠವನ್ನು ಸಿದ್ಧಮಾಡಿ, ಕಮಲದಛತ್ರಗಳನ್ನು ಹಿಡಿದು

ಆ ಕಮಲಪತ್ರದ ಬೀಸಣಿಗೆಗಳನ್ನು ಎಡೆಬಿಡದೆ ಬೀಸುತ್ತಾ, ಕಮಲ ಮೊಗ್ಗೆಯ ಕನ್ನಡಿಯಿಂದಲೂ, ನೈದಿಲೆಯ ಘಂಟೆಯನ್ನು ನುಡಿಸುತ್ತ ಪೂಜಿಸುವಂಥಾ ನಿರ್ಮಲವಾದ ಷಡಕ್ಷರ ಪ್ರತಿಪಾದಿತವಾದ ನಿಜಲಿಂಗ ಕ್ಯವೆಂಬುವ ಸುಖವು ಯಾವಾಗ್ಯೆ ಲಭಿಸುವದೋ ಎಂದು ಲಿಂಗಪೂಜ ಪ್ರಶಸ್ತವಾದವುಗಳನ್ನು ಪೇಳ್ದರೆಂದು ತಾತ್ಪರ್ಯವು.

೮. ಭಾಮಿನಿಷಟ್ಪದಿ॥ ರಾಗ - ಹಾಹೇರಿ. ಅಂಗಜಾರಿಗೆಶಿಕ್ಕಿ ರುಳಾ। ಗಂಗಭಾವವತೊರೆದುಕೃತ್ಯವ। ನಿಂಗಿಹೊರಗನುಮರೆವಸು ವದು ಯೆಂದಿಗಾದಪುದೋ॥ ಪಲ್ಲ॥ ಯೆಳೆಯಚಂದ್ರನಧರಿಸಿದಾತಗೆ ಪೊಲಿದಫಣಿಕುಂಡಲದಗರುವಗೆ। ಪುಲಿಯಚರ್ಮವನುಟ್ಟುಗಜಚರ್ಮವನ ಹೊದ್ದವಗೇ॥ ಹೊಳೆವಕಂಜಡೆನುುಗುಳ್ನಗೆಗಳ। ಚೆಲುವಶಿವನಿಗೆವೆ ಚ್ಚಿಮರುಳಾ। ಗಳಿದುತನುಗುಣಪಡೆಯದಿರ್ಪುದು ಯೆಂದಿಗಾದಪುದೊ ೧॥ ಭಸಿತಕಾಂತಿಯಕಾಯದಾತಗೆ। ಮಿಸುಪಫಣಿಕಂಕಣದನೀರಗೆ। ಶಿಯಶಿರಮಾಲೆಗಳಕೊರಳೊಳು ಧರಿಸಿದಾತನಿಗೆ॥ ನಿಶಿತಶೂಲದಿ ಹ ನಪಿಡಿದಿಹ। ಅಸಮನೇತ್ರಗೆಮೆಚ್ಚಿಮರುಳಾ। ಗಶನವುದಕವತೊರೆವುದದು ತಾನೆಂದಿಗಾದಪುದೋ॥೨॥ ಕೊರಳಗರಳದರೇಖೆಯಾತಗೆ। ಮರುಳುಗ ಳಕೂಡಾಡುವಾತಗೆ। ಹರಿಸುರೇಂದ್ರರಹೆಂಣತೊತ್ತಿರಮಾಡಿಕೊಂಡವ ಗೇ॥ ಸರಸಿಜಾಸನಶಿರವಕೊರಳೊಳು। ಧರಿಸಿದಾತಗೆಮೆಚ್ಚಿಮರುಳಾ। ಗಿರುಳುಹಗಲೆಂದರಿಯದಿಹಸುಖವೆಂದಿಗಾದಪುದೋ॥ ೩॥ತನ್ನಮೋಹ ದಿನೆನೆವಭಕುತರ। ಮುನ್ನತಾನೇಮೋಹಿಪವನಿಗೆ। ತನ್ನನೊಲಿಸುವಶರ ಣರಿಗೆತಾಮುನ್ನಲೊಲಿವವಗೇ॥ ಹೊನ್ನುಹಾವುಗೆಮೆಟ್ಟಿಸುಳಿವಗೆ। ಯೆ ನ್ನಮನತಾಮೆಚ್ಚಿಮರುಳಾ। ಗಿನ್ನುಹೊರಬಳಿಕಗಳಮರೆವುದು ಯೆಂದಿ ಗಾದಪುದೋ॥೪॥ ಬೆರಳನಾದರುಕೊಟ್ಟಆತಗೆ। ಕುರುಳನಾದರುಕೊ ಟ್ಟುಅವನಿಗೆ। ಇರದೆತನುಮನಧನವನೆಲ್ಲವಸೂರೆಗೊಟ್ಟವಗೇ॥ ಗರುವ ನಾತನಇಚ್ಛೆಯೊಳುನಾ। ನಿರುತವರಿಸಿಯೆಮೆಚ್ಚಿಮರುಳಾ। ಗಿರುವಜಡ ನಿದ್ರೆಗಳಮರೆವುದು ಯೆಂದಿಗಾದಪುದೊ॥೫॥ ಚಂದ್ರಕೋಟಿಯಪ್ರಭೆಗ ಳೊಬ್ಬುಳಿ। ಸಾಂದ್ರವಾಗಿಯೆಪುರುಷಕೃತಿಯಂ। ಚಂದವಡೆದಿಹಚೆಲು ವದೇವಗೆ ಮೆಚ್ಚಿಮರುಳಾಗೀ॥ ಬಂದಡರಿಯದೆಬೈದಡರಿಯದೆ। ನಿಂದ ಡರಿಯದೆನೆರೆದಡರಿಯದೆ। ಕೊಂದಡರಿಯದೆಹೊರಗೆಮರೆವುದು ಯೆಂದಿ

ಗಾದಪುದೋ॥೬॥ಕಂತುಕೋಟಿಯರೂಪಪಾದದೊ । ಳಾಂತೆಚಲುವಿನೆ ಶಿವಷಡಕ್ಷರ। ಕಾಂತನಿಗೆನಾಶಿಕ್ಕಿಹೊರಗನುಮರೆದುಮರುಳಾಗಿ ॥ ನಿಂತಡರಿಯದಕೂತಡರಿಯದ। ಭ್ರಾಂತನಂದದಿಕಲ್ಲುಮರನಾ। ಗಿಂತುಪರವಶದಂಗಭಾವವು ಯೆಂದಿಗಾದಪುದೋ॥ ... ೭॥

ಟ. ಟೀ॥ ಕಾಮವೈರಿಯಾದ ಶಿವನಿಗೆ ಶಿಕ್ಕಿ ಮರುಳಾಗಿ ಅಂಗಭಾವವನ್ನು ತೊರೆದು, ಹೊರಗಿನ ಕೃತ್ಯಗಳನ್ನು ನೀಗಿ ಪ್ರಕಾಶಿಸುವಂಥಾದ್ದಾದ ಸುಖವು ಎಂದಿಗೆ ಉಂಟಾಗುವದೋ ? ಬಾಲಚಂದ್ರನನ್ನು ಧರಿಸಿದಂಥಾ, ಪ್ರಿಯವಾದ ಸರ್ಪಗಳ ಕುಂಡಲಗಳುಳ್ಳ ಮಹಾತ್ಮನಾದಂಥಾ, ಹುಲಿದೊಗಲನ್ನುಟ್ಟು ಗಜಚರ್ಮವನ್ನು ಹೊದ್ದಿರುವ ದೇವನಾದಂಥಾ, ಪ್ರಕಾಶಮಾನವಾದ ಕೆಂಪುಜಡೆಗಳಿಂದಲೂ, ಮುಗುಳುನಗೆಯಿಂದಲೂ, ಚಲುವನಾದಂಥಾ ಶಿವನಿಗೆ ಒಲಿದು ಮರುಳಾಗಿ ತನುವಳಿದು ತ್ರಿಗುಣಾತೀತವಾಗಿರುವ ಶಿವಸುಖವು ಎಂದಿಗೆ ಉಂಟಾಗುವದೋ? ಭಸ್ಮೋದ್ಧೂಳಿತ ವಿಗ್ರಹನಾಗಿಯೂ, ನಾಗಾಭರಣ ಭೂಷಿತನಾಗಿಯೂ, ಹತಿಯಾದ ರುಂಡಮಾಲೆಗಳನ್ನು ಕಂಠದೊಳಗೆಧರಿಸಿದಾತನಾಗಿಯೂ,ತೀಕ್ಷ್ಣವಾದ ತ್ರಿಶೂಲದ ಮೊನೆಯಲ್ಲಿ ಹೆಣಗಳನ್ನು ಹಿಡಿದಿರುವಾತನಾಗಿಯೂ ಇರುವ ವಿರೂಪಾಕ್ಷನಿಗೆ ಒಲಿದು ಮರುಳಾಗಿ, ಅನ್ನೋದಕಗಳನ್ನು ತೊರೆದು ಇರುವಂಥಾ ಪಾರವಶ್ಯವು ಯಾವಾಗ್ಯೆ ಉಂಟಾಗುವದೋ ? ವಿಷಕಂಠನಾಗಿಯೂ, ಪ್ರೇತಭೂತಾದಿಗಣಗಳೊಡನೆ ವಿಹರಿಸುತ್ತಿರುವಾತನಾಗಿಯೂ, ಹರಿ ಸುರೇಂದ್ರಾದಿಗಳನ್ನೆಲ್ಲಾ ಹೆಂಣುತೊತ್ತಿರುಗಳಾಗಿ ಮಾಡಿಕೊಂಡವನಾಗಿಯೂ, ಬ್ರಂಹಕಪಾಲವನ್ನು ಕಂಠದಲ್ಲಿ ಧರಿಸಿರುವಾತನಾಗಿಯೂ ಇರುವ ಶಿವನಿಗೆ ಒಲಿದು ಮರುಗಳಾಗಿ, ರಾತ್ರಿ ಹಗಲುಗಳೆಂಬುವದೇನೂ ಅರಿಯದೆ ಇರುವಂಥಾ ಸುಖವು ಯಾವಾಗ್ಯೆ ಉಂಟಾಗುವದೋ ? ತನ್ನನ್ನು ಮೋಹದಿಂದ ನೆನೆಯುವ ಭಕ್ತರನ್ನು ತಾನೇ ಮೊದಲು ಮೋಹಿಸುವಂಥವನಾಗಿಯೂ, ತನ್ನನ್ನು ಪ್ರೀತಿಪಡಿಸುವ ಶರಣರಿಗೆ ಮೊದಲು ತಾನೇ ಪ್ರೀತಿಪಡುವಾತನಾಗಿಯೂ, ಭಂಗಾರದ ಹಾವುಗೆಯನ್ನು ಮೆಟ್ಟಿ ತಿರುಗುವಂಥವನಾಗಿಯೂ ಇರುವ ಶಿವನಿಗೆ ನನ್ನ ಮನವಾದದ್ದು ಒಲಿದು ಮರುಳಾಗಿ. ಪುನಶ್ಚ ಹೊರಗಿನ ಬಳಕೆಗಳನ್ನು ಸ್ಮರಿಸದೆ ಇರುವಂಥಾದ್ದು ಎಂದಿಗ್ಗೆ ಉಂಟಾಗುವದೋ ? ಬೆರಳನ್ನಾಟ

ರೂ ಕೊಟ್ಟಂಥವನಿಗೆ ತನ್ನ ಕರುಳನ್ನಾದರೂ ಕೊಡುವದು ಮಾತ್ರವ
ದೆ ತನು, ಧನಗಳನ್ನೆಲ್ಲಾ ಸೂರೆಕೊಟ್ಟವನಾಗಿ, ಇರುವ ಮಹಾತ್ಮನ
ಚ್ಛಾನುಸಾರವಾಗಿ ನಾನಿರುತ್ತಾ ಆತನನುವರಿಸಿ ಒಲಿದು ಮರುಳಾಗಿ
ವಂಥಾ ಜಡನಿದ್ರೆಗಳನ್ನು ಮರೆಯುವದಾದ ಪರವಶತ್ವವು ಯಾವಾಗ
ಉಂಟಾಗುವದೋ ? ಕೋಟಿ ಚಂದ್ರರ ಪ್ರಕಾಶಗಳೆಲ್ಲಾ ಒಟ್ಟುಕೂಡಿ
ರಿಪೂರ್ಣವಾಗಿಯೇ ಪುರುಷಾಕಾರದ ರೀತಿಯನ್ನು ಹೊಂದಿರುವ ಸು
ದರನಾದ ದೇವನಿಗೆ ಒಲಿದು ಮರುಳಾಗಿ ಬಂದರೂ, ಬೈದರೂ, ನಿಂ
ರೂ, ನೆರದರು ಕೊಂದರೂ ಏನು ಮಾಡಿದಾಗ್ಯೂ ಬಾಹ್ಯ ವ್ಯಾಪಾ
ಗಳನ್ನೆಲ್ಲಾ ಮರೆತಿರುವಂಥಾದ್ದು ಎಂದಿಗೆ ಉಂಟಾಗುವದೋ ? ಕೋಟಿ
ಮನ್ಮಥರಿಗೆ ಸಮಾನವಾದ ಚಲುವನ್ನು ಕಾಲೊಳಗೆ ಧರಿಸಿರುವ ಸುಂದ
ರನಾದ ಷಡಕ್ಷರನೆಂಬ ನಾಯಕನಿಗೆ ನಾನು ಶಿಕ್ಕಿ ಹೊರಗಿನವುಗಳನ್ನೆ
ಲ್ಲಾ ಮರೆತು ಮರುಳಾಗಿ ನಿಂತರೂ, ಅರಿಯದೆ, ಕೂತರೂ ಅರಿಯದೆ,
ಇರುವ ಭ್ರಾಂತನಹಾಗೆ, ಕಲ್ಲುಮರನಾಗಿ ಈ ರೀತಿಯಲ್ಲಿ ಪರವಶವಾ
ಗುವ ಅಂಗಭಾವವು ಎಂದಿಗೆ ವುಂಟಾಗುವದೋ ಯೆಂದು ಲಿಂಗಾಂಗಗ
ಳ ಸಂಗಮವೆಂಬುವ ಸಾಯುಜ್ಯಸುಖಾನುಭವವನ್ನು ಪ್ರಕಟಪಡಿಸಿ ಪೇ
ಳಿದರೆಂಬ ತಾತ್ಪರ್ಯವು. ... ... *

೯. ಭಾಮಿನಿಷಟ್ಪದಿ— ಹಾಡಿದವರಿಗೆಬೈದಡವರಿಗೆ । ಕಾಡಿದ
ವರಿಗೆ ಕೊಂದಡವರಿಗೆ । ಬೇಡಿದಿಷ್ಟವಕೊಡುವದಯನಿಧಿಯೆಂದಿಗೊಲಿದ
ಪನೋ॥ ಪಲ್ಲ॥ ಕಲ್ಲಲಿಟ್ಟಂಥವರಿಗೊಲಿದನು । ಬಿಲ್ಲಿನಲಿಹೊಯ್ದವರಿಗೊಲಿ
ದನು । ಫುಲ್ಲಶರನವಿಕಾರಿಯೆನಿಸಿದಶ್ವೇತನಿಗೆವೊಲಿದಾ॥ ಸಲ್ಲದುದನೇನು
ಡಿದುನಗಿಸಿದ । ದಲ್ಲಿಯಾಕ್ಷಣವಳಿದದೇವನು । ವೊಲ್ಲಿದನುಯಿಂತಪ್ಪದ
ಯನಿಧಿಯೆಂದಿಗೊಲಿದಪನೊ॥೧॥ ಮರೆದುಈಶನನೆನೆದರಾದಡೆ । ಸುರ
ರಪದವಿಗಳಾಗುತಿರ್ಪವು। ಅರಿದುಈಶನನೆನೆದರಾದಡೆತನ್ನಪದವೀವಾ ॥
ದುರುಳನಾದೆನುವೊದಲೆಭಜಿಸದೆ । ಮರುಳನಾದೆನುಘನವನರಿಯದೆ।
ಹರಹರಾಯಿಂತಪ್ಪದಯನಿಧಿಯೆಂದಿಗೊಲಿದಪನೊ॥ ೨॥ ಬಿದಿರಿದುದಕಕೆ
ಹರಿದಯುಸಳಿಗೆ। ಪದಪಿನಿಂದಲಿ ಇಂದ್ರಪದವಿಯ। ನೊದಗಿಸಿಯೆತಾನದ
ರಿಗಿತ್ತನುಮುಗ್ಧೆಯನ್ನಾಳ್ದಾ॥ ಪದುಳದಿಂಪೂಜಿಸದೆಕೆಟ್ಟೆನು। ಮುದದಿಮು
ನ್ನವೆಹೊಗಳದಾದೆನು । ಸದಮಲಾತ್ಮಕನಾದದಯನಿಧಿಯೆಂದಿಗೊಲಿದ

ಪನೊ॥ ೩॥ ಸಟೆಗಳಿಂದಲಿಪೂಜಿಸಲುತಾ। ಧಿಟಗಳಿಂದಲಿಪೂಜಿಸಲುತಾ। ನಟವುಟವ್ಯಾಪಾರದಿಂದಲಿಪೂಜಿಸಲುಬಳಿಕಾ ॥ ಕುಟಿಲದಿಂದಲಿಪೂಜಿಸಿದೊಡೆ। ನ್ನಿಟಿಲನೇತ್ರನುತನ್ನಪದವಿಯ। ಘುಟಿಸಿಕೊಡುವಿಂತಪ್ಪದಯನಿಧಿಯೆಂದಿಗೊಲಿದಪನೊ॥ ೪॥ ದುರುಳನಾದೆನುವೊದಲೆಭಜಿಸದೆ। ಮರುಳನಾದೆನುಘುನವನರಿಯದೆ। ಹರಹರಾಯಿಂತಪ್ಪಹರನೇನಿಮ್ಮಶರಣರುಗಳಾ ॥ ಚರಣರಕ್ಷೆಗೆಸರಿಯದಾಹೆನೆ। ಬಿರುದುನಿಮದೆನಗಿಲ್ಲಕೊರತೆಯು। ಬಿರುದಿನಷಡಕ್ಷರಿಯಲಿಂಗವೆವ್ರೊಲಿದುಕೃಪೆಯಗು॥ ೫॥

೯. ಟೀ॥ ಕೀರ್ತಿಸಿದಂಥವರಿಗೂ, ದೂಷಿಸಿದಂಥವರಿಗೂ, ಜಗಳವಾಡಿದಂಥವರಿಗೂ, ಕೊಲೆಗೆಡಿಕರಿಗೂ, ಬಯಸಿದ ಕೋರಿಕೆಗಳನ್ನೆಲ್ಲಾ ಅನುಗ್ರಹಿಸುವಂಥಾ ಕೃಪಾಸಾಗರನಾದ ಪರಶಿವನು ಯಾವಾಗ್ಯೆ ಪ್ರಸನ್ನನಾಗುವನೊ, ಕಲ್ಲಿನಿಂದ ಹೊಡೆದ ಅತ್ರಿ ವೊದಲಾದವರಿಗೆ ಪ್ರಸನ್ನನಾದನು. ಧನುಸ್ಸಿನಿಂದ ಹೊಡದ ಅರ್ಜುನಾದಿಗಳಿಗೆ ಪ್ರಸನ್ನನಾದನು. ಕಾವೊಂಧನೆನ್ನಿಸಿಕೊಂಡಿದ್ದ ಶ್ವೇತನೆಂಬವನಿಗೆ ಪ್ರಸನ್ನನಾದನು, ಅನುಚಿತವಾದದ್ದನ್ನು ಪೇಳಿದಾಕ್ಷಣವೇ ಭಂಗಪಟ್ಟು ಬಳ್ಳೇಯವನಾಗಿ ಈಪ್ರಕಾರದಲ್ಲಿ ದಯಾಸಾಗರನಾಗಿರುವ ಪರಶಿವನು ಯಾವಾಗ್ಯೆ ಪ್ರಸನ್ನ ನಾಗುವನೋ ? ವುರೆತಾದರೂ ಸದಾಶಿವನನ್ನು ಧ್ಯಾನಿಸಿದ್ದಾದರೆ ಅಂಥವರಿಗೆ ಇಂದ್ರಾದಿ ಪದವಿಗಳು ಪ್ರಾಪ್ತವಾಗುತ್ತಿರುವವು. ತಿಳಿದು ಸರ್ವೇಶ್ವರನನ್ನು ಸ್ಮರಿಸಿದ್ದಾದರೆ ಅಂಥವರಿಗೆ ತನ್ನ ನಿಜಕೈವಲ್ಯರೂಪವಾದ ಸಾಯುಜ್ಯಪದವನ್ನು ಅನುಗ್ರಹಿಸುವನು. ಶಿವಶಿವಾ ! ನಾನು ವೊದಲೆ ಭಜಿಸದೆ ದುರುಳನಾದೆನು. ಶಿವನ ಘುನತೆಯನ್ನು ತಿಳಿಯದೆ ಹುಚ್ಚನಾದೆನು. ವುಹಾದೇವಾ ! ಈ ರೀತಿಯಾದ ಕರುಣಾಸಾಗರನು ಯಾವಾಗ್ಯೆ ಪ್ರಸನ್ನನಾಗುವನೋ? ಚೆಲ್ಲಿದ ಉದಕವುಳ್ಳದ್ದಾದ ಗಂಗೆಗೂ ಹರಿದ ಯೆಸಳುಳ್ಳದ್ದಾದ ಕೇತಕಿಗೂ ದಿವ್ಯವಾದ ಇಂದ್ರ ಪದವಿಯನ್ನು ಕೊಟ್ಟದ್ದಲ್ಲದೆ, ತಾನು ವುುಗ್ಧೆಯಾದ ಗಂಗೆಯನ್ನು ಆಳಿದನು. ಇಂತಪ್ಪ ಪರಶಿವನಂನು ನಾನು ಜತ್ನದಿಂದ ಆರಾಧಿಸದೆ ಭ್ರಷ್ಟನಾದೆನು. ಸಂತೋಷದಿಂದ ವೊದಲೇ ಕೀರ್ತಿಸದೆ ಹೋದೆನಲ್ಲಾ ? ಸದವುಲಾತ್ಮಕನಾದ ಕೃಪಾಸಾಗರನಾದ ಪರಶಿವನು ಯಾವಾಗ್ಯೆ ಪ್ರಸನ್ನನಾಗುವನೋ ? ಅಬದ್ಧದಿಂದ ಆರಾಧಿಸಿದಾಗ್ಯೂ, ನಿಶ್ಚಯದಿಂದ ಆರಾಧಿಸಿದಾಗ್ಯೂ, ವುತ್ತು ವೋಸ

ವ್ಯಾಪಾರದಿಂದ ಪೂಜಿಸಿದಾಗ್ಯೂ, ಕುಟಿಲದಿಂದ ಪೂಜಿಸಿದಾಗ್ಯೂ ಫಾಲಾಕ್ಷನಾದ ಪರಶಿವನು ತನ್ನ ಪದವಿಯನ್ನೇ ಲಭ್ಯಮಾಡಿಕೊಡುತ್ತಿರುವ ಇಂತಪ್ಪ ಕೃಪಾಸಾಗರನು ಯಾವಾಗ್ಯೆ ಪ್ರಸನ್ನನಾಗುವನೋ ಶಿವಾ! ಮೊದಲೇ ಭಜಿಸದೆ ದುರ್ಜನನಾದೆನು ನಿನ್ನ ಮಹತ್ತನ್ನು ತಿಳಿಯದೆ ಹುಚ್ಚನಾದೆನು. ಹರಮಹಾದೇವಾ ಈ ಪ್ರಕಾರದಲ್ಲಿ ಒಪ್ಪುತ್ತಿರುವ ಹರನೇ ನಿನ್ನ ಶರಣರುಗಳಾದವರ ಪಾದರಕ್ಷೆಗೇನಾದರೂ ಸರಿಯಾಧೇನೇ? ಸಮಸ್ತ ಬಿರುದೂ ನಿಮ್ಮದಾಗಿಯೇ ಇರುವಲ್ಲಿ, ನನಿಗೆ ಕೊರತೆಯೆಂಬುವದೇನೂ ಇಲ್ಲ; ಎಲೈ—ಬಿರುದಿನ ಷಡಕ್ಷರ ಪ್ರತಿಪಾದಿತ ಶಿವಲಿಂಗವೇ ಪ್ರಸನ್ನತೆವೆತ್ತು ದಯೊಳುವಾಗೆಂದು ಈ ಪದದಿಂದ ಶ್ರೀಷಡಕ್ಷರಲಿಂಗಸ್ವರೂಪಿಯಾದ ಪರಶಿವನನ್ನು ಬೇಡಿದರೆಂದು ತಾತ್ಪರ್ಯವು.

(೧೦.) ರಾಗ ಧನ್ಯಾಸಿ ತೋಡಿ— ನಿಂಮದೇಶಕೆ ಹೋಹದಿನಬಂತು। ಮುಂದೆ। ಘುಮ್ಮನೆಲ್ಲರನೊಬ್ಬುಳಿಮಾಡು॥ ಪ ॥ ಅಂಗಭೋಗಂಗಳಮರೆನೀನೂ। ಮುಂದೆ। ಹೆಂಗಳಸುಖವನುತೊರೆನೀನೂ ॥ ಅಂಗಜಗುಣಗಳಹರಿನೀನೂ। ಮುಂದೆ। ಲಿಂಗವಮನದೊಳಗರಿನೀನು॥ ೧ ॥ ಮಲಯದಾಸೆಯಬಿಡುನೀನೂ। ಮುಂದೆ। ಹಲವುಬುದ್ಧಿಗಳನ್ನತೊರೆನೀನೂ। ಫಲವಾದವೃಕ್ಷವಕಡಿನೀನೂ। ಮುಂದೆ। ಸಲೆಲಿಂಗದೊಳುಮನವಿಡುನೀನು ॥ ೨ ॥ ಬಿಡುತನುವಿನಮೇಲಣಾಸೆಯನೂ। ಮುಂದೆ। ಹಿಡಿಶಿವಶರಣರಭಾಷೆಯನೂ॥ ಮೃಡಷಡಕ್ಷರಾಧೀಶನನೂ। ಮುಂದೆ। ಮೊಡಗೂಡುಭವಪಾಶನಾಶನನೂ ॥ ... ೩॥

(೧೦.) ಟೀ॥ ಎಲೈ—ಮನವೇ! ನಿಮ್ಮ ದೇಶಕ್ಕೆ ಹೋಗವ ದಿನವು ಸಮೀಪವಾಯಿತು. ಮುಂದೆ ಬೇಗನೇ ಎಲ್ಲರನ್ನೂ ಒಂದಾಗಿ ಮಾಡು ಅಂದರೆ ಶರೀರವು ಅನಿತ್ಯವಾದ್ದರಿಂದ ನಿತ್ಯತ್ವವುಳ್ಳ ಶಿವಪದದಲ್ಲಿ ಐಕ್ಯವಾಗುವ ಸಮಯವು ಸಮೀಪವಾಗುವ ದಾದಕಾರಣ ಎಲ್ಲವನ್ನೂ ಅಖಂಡಾದ್ವೈತವಾಗಿ ತಿಳಿದು, ಅದ್ವಯೋಪದಿಷ್ಟವಾದ ಬ್ರಹ್ಮವಾಗೆಂದರ್ಥವು. ಎಲೈ—ಮನವೆ! ಶರೀರಸಂಬಂಧವಾದ ಸ್ರಕ್‌ಚಂದನ ತಾಂಬೂಲ ವನಿತಾದಿ ಭೋಗಗಳನ್ನು ಮೊದಲು ಮರೆತುಬಿಡು, ಸ್ತ್ರೀಯರದೆಸೆಯಿಂದಾಗುವ ಸುಖವನ್ನು ಪರಿತ್ಯಜಿಸು. ಅಂಗದಿಂದ ಹುಟ್ಟಿದ ಗುಣಗಳನ್ನೆಲ್ಲಾ ಭೇಧಿಸು, ತರುವಾಯ ಲಿಂಗವನ್ನು ಮನದೊಳಗೆ ಅರಿತುಕೊಳ್ಳು?

ಗಂಧದ ಆಶೆಯನ್ನು ನೀನು ಪರಿತ್ಯಜಿಸು. ಮುಂದೆ ಭೇದವಾದ ಬುದ್ಧಿಗ
ಳನ್ನು ಕತ್ತರಿಸು. ಫಲವೃಕ್ಷವೆನ್ನಿಸುವ ಜನ್ಮದ ಬೀಜವನ್ನು ಕತ್ತರಿಸು.
ಮುಂದೆ ಚನ್ನಾಗಿ ಲಿಂಗದೊಳಗೆ ಮನವನ್ನು ದೃಢಪಡಿಸು. ದೇಹಾಭಿ
ಮಾನವನ್ನು ಬಿಡು. ಶಿವಶರಣರಾದವರ ಹಿತವಾದ ಉಪದೇಶವನ್ನು ಪ
ರಿಗ್ರಹಿಸು. ಮುಂದೆ ಶಿವಮೂರ್ತಿಯಾದ ಷಡಕ್ಷರ ನಾಥನಾಗಿರುವ ಭ
ವಬಂಧ ವಿಮೋಚಕನನ್ನು ಸೇರು ಎಂದು ಈ ಪದದಿಂದ ನಶ್ವರ ದೇಹಾ
ಭಿಮಾನವನ್ನು ಬಿಟ್ಟು, ಲಿಂಗೈಕ್ಯವೆಂಬುವ ಸಾಯುಜ್ಯವನ್ನು ಕುರಿತು
ಪೇಳಿದರೆಂಬ ತಾತ್ಪರ್ಯವು. ... ... ೧೦॥

(೧೧) ರಾಗ - ಮಲಹರಿ— ತಂದುತೋರೇಯನ್ನಮನಘನಪ್ರಿಯ
ನಾ । ಇಂದುಧರಕಡುಚಲ್ವಮನದ ತ್ರಸುಳಿಯಾ ॥ ಪಲ್ಲ ॥ ಪುಲಿಯಚರ್ಮ
ದುಡಿಗೆಯನಸುಲಿಪಲ್ಲಚಲುವನ । ಪೊಳವಫಣಿಕುಂಡಲದನೀರನಾ। ಪೊ
ಲಿಸುವವರಿಗೆಮುನ್ನ । ವೊಲಿಸುವತವಕಿಯು। ವೊಲಿದೆನ್ನಮನದ ತ್ರಸುಳಿ
ಯೆಕಳದೀ ॥೧॥ ಹೃದಯಕೋಣೆಗಳಲ್ಲಿಮನದಮಂಚವಹಾಸಿ। ಪದುಳದಿ
ಭಾವವಗುಡಿಗಟ್ಟಿದೇ ॥ ಸದಮಲಜ್ಞಾನಜ್ಯೋತಿಯಬೆಳಗಿದ । ಲ್ಲದೆಮ್ಮ
ಧುಭಕ್ತಿಯಯೌವನದಾಸೆಕೆಳದೀ ॥ ೨ ॥ ಯೆನ್ನಾತ್ಮಜ್ಯೋತಿತಾನೆನ್ನಹೃದ
ಯದಲೀ । ಹೊನ್ನಹಾವುಗೆಮೆಟ್ಟಿಸುಳಿಯೆನಾನೂ॥ ಉನ್ನತದಿಹೆಚ್ಚಿಹಿಗ್ಗು
ವೆನುಷಡಕ್ಷರ । ಚನ್ನಲಿಂಗವಸುಳುವಡಗಿದೆಕೆಳದೀ ॥ ... ೩ ॥

(೧೧) ಟೀ. ಎಲೈ— ಆತ್ಮಜ್ಯೋತಿರೂಪಿಣಿಯಾದ ಭಕ್ತಿಕಾಂತೆ
ಯೇ ! ಚಂದ್ರಶೇಖರನಾದ ಸದಾಶಿವನು ನನ್ನ ಮನದ ಬಳಿಯ ಗೋಚ
ರವಾಗನಲ್ಲಾ. ನನ್ನ ಘನವಾದ ಪ್ರಿಯನನ್ನು ತಂದು ತೋರಿಸು. ವ್ಯಾ
ಘ್ರಾಜಿನಾಂಬರಧಾರಿಯಾಗಿಯೂ,ಚಲುವಾದ ದಂತ ಪಙ್ಕ್ತಿಯಿಂದ ಸುಂ
ದರನಾಗಿಯೂ ಪ್ರಕಾಶಿಸುವ ಸರ್ಪಗಳ ಕುಂಡಲಗಳಿಂದ ಶೋಭಿಸುವ
ಪುರುಷನಾಗಿಯೂ. ತನ್ನನ್ನು ಪ್ರೀತಿಮಾಡುವದಕ್ಕಿಂತಮೊದಲು ತಾನೇ
ಅವರನ್ನು ಪ್ರೀತಿಮಾಡುವ ಅನುರಾಗವುಳ್ಳವನ್ನಾಗಿಯೂ, ಇರುವ ನಾ
ಯಕನು ಪ್ರಸನ್ನತೆ ವೆತ್ತು ನನ್ನ ಮನದಬಳಿಯಲ್ಲಿ ಗೋಚರಿಸನಲ್ಲಾ, ಹೃ
ದಯಕಮಲವೆಂಬುವ ಗೃಹದಲ್ಲಿ ಮನವೆಂಬುವಮಲಗಮಂಚವನ್ನು ಹಾ
ಸಿ, ಜತನದಿಂದ ಭಾವವನ್ನು ಗುಡಿಕಟ್ಟಿದೆನು. ಸದಮಲಾನಂದಾತ್ಮ
ಜ್ಯೋತಿಯನ್ನು ಬೆಳಗಿದರೆಹೊರ್ತು ಭಕ್ತಿಯೆಂಬುವಯೌವನ ಆಶೆಯು

ಪೂರ್ಣವಾಗಲರಿಯದಲ್ಲಾ ? ಎನ್ನ ಆತ್ಮಜ್ಯೋತಿಯು ತಾನೇ ತಾನಾ
ಗಿ ಯೆನ್ನಹೃದಯದಲ್ಲಿ ಭಂಗಾರದ ಪಾದುಕೆಯನ್ನು, ಮೆಟ್ಟಿ ಸಂಚರಿ
ಲಾಗಿ, ಎಲೈ– ಜೊತೆಯುವಳಾದ ಗೆಳತಿಯೇ ! ನಾನು ಉನ್ನತತ್ವದಿ
ದ ಷಡಕ್ಷರರೂಪಿಯಾದ ಚಿದಾತ್ಮಕ ಲಿಂಗವು ಗೋಚರವಾಗಲದರ
ಐಕ್ಯತ್ವವನ್ನು ಹೊಂದಿ ಸಂಭ್ರಮದಿಂದ ಹಿಗ್ಗುತ್ತಿರುವೆನೆಂದೂ ಈ ಪ
ದಿಂದಭಕ್ತಿಯೇ ಕಾಂತೆಯೆಂದು ಲಿಂಗವೇನಾಯಕನೆಂದು ದೃಷ್ಟಾಂತಭಾ
ವದಿಂದ ಪರತ್ವದ ಲಿಂಗೈಕ್ಯಸಾಯುಜ್ಯವನ್ನು ಪೇಳಿದರೆಂಬ ತಾತ್ಪರ್ಯ

(೧೨) ರಾಗ- ಭಾಮಿನಿಷಟ್ಪದಿ– ಆವಪರಿಯಲಿತಿಳಿಯಬಾರದ
ದೇವನಿಮ್ಮಯಶರಣರಿರವಾ । ಭಾವದೊಳುನಾತಿಳಿವೆಲಿಂಗವು ಇರಲುತಿ
ವನೆಂದೂ ॥ ಪ॥ ಧಾರುಣಿಯೊಳಾವುಬ್ಬಟೈಯನು । ಚಾರುಮೂತನು
ಚೋಳರಾಯನು । ಮೂರವೈರಿಯಬೆರಸಿದಿಲ್ಲವೆಆವರಪರಿಯಂತೆ ॥ ಧಾ
ರುಣಿಯುಪಾಲಿಸುತಸುಫಲೋ । ದಾರಭಕ್ತಿಯಮಾಡುತಿಹರೋ । ದಾ
ರುಬಲ್ಲರುನಿಂಮುಶರಣರತಿಳಿಯಲೆಂತಹುದು ॥ ಬಸವರಾಜನುಚೊಕ್ಕ
ನೈನಾ । ರಸಿಂಮುಕೇಶಿಸುರತ್ತಿಯು । ವರುಗರಳೊಸೆದುಶಿವನೊಳುಬೆರ
ತರಲ್ಲವೆಆವರಪರಿಯಂತೆ ॥ ವಸುಧೆಯೊಳುಮಂತ್ರಪ್ರಭಾವದಿ। ಯೆಸೆವ
ಶಿವನೊಳುಗುಪ್ತಭಕ್ತಿಯ । ಬೆಸುಗೆಯೊಳಗಿರುತಿಹರೊಶರಣರತಿಳಿಯ
ಲೆಂತಹುದು ॥ ೨ ॥ ಧಾರುಣಿಯೊಳಾಮಲಹಣ್ಣೈಯ್ಯನು। ದಾರಸುಂ
ದರಮಿಂಡಜಂಗಮು । ಪಾರವಧುಗಳಬೆರಶಿದಿಲ್ಲವೆಆವರಪರಿಯಂತೆ ॥ ಆ
ರುಬಲ್ಲರುವಿಟರತೆರದಿಂ । ಮೂರವೈರಿಯಗುಪ್ತಭಕ್ತಿಯ । ಪಾರಪರಿಯ
ಲಿಮಾಡುತಿಹರೊಳುತಿಳಿಯಲೆಂತಹುದು ॥ ೩ ॥ ಮೇದಿನಿಯೊಳಾಮ
ಲ್ಲಜಟ್ಟಿಯು । ಆದಿಮೈಯ್ಯನುಶಂಕರೇಶನು । ಸಾಧಿಸುತ್ತಲೆಜೇಯಹಿಂ
ಗಳಲಿರ್ದರವರಂತೆ ॥ ಆದಿವಿಡಿದೊಂದೊಂದುದ್ಯಾನಗ । ಳಾದಿಲಿಂಗದ
ಗುಪ್ತಭಕ್ತಿಯ । ವೇದಿಸಿಹರೋನಿಮ್ಮಶರಣರತಿಳಿಯಲೆಂತಹುದೊ॥ ೪॥
ಪೊಡವಿಯೊಳಗೆಲ್ಲರಿವತೆರದಿಂ । ಮಡಿವಳನುಯಂಕಾಳಿಗಳುಪ್ರಳಿಯು
ಡುಪರೆಂಬರುದೂಟದೊಳವೃತಲಿರ್ದರವರಂತೆ ॥ ಮಡಿಯುನಾಡುವಭ
ಕ್ತರೊಸ್ತ್ರಿವ । ಅಡಗಿಶಿವನೊಳುಗುಪ್ತಭಕ್ತಿಯ। ನಡಿಸಿರುತ್ತಿಹನಿಂಮುಶ
ರಣರತಿಳಿಯಲೆಂತಹುದೋ ॥ ೫ ॥ ಧಾರುಣಿಯೊಳಾಮೂಗಿದೇವನು
ದಾರಜರಡರದಾಸನಶಿಸಂ । ಸಾರದೊಳಗಿರುತಿರ್ದದಿಲ್ಲವೆ ಆವರಪರಿ

ಯಂತೇ ॥ ಆರುಬಲ್ಲರುಶರಣರನುಸಂ। ಸಾರವನುಮರೆಗೊಂಡುಗುಪ್ತದಿ
ಮಾರವೈರಿಯಬೆರಸುತಿಹರೋ ತಿಳಿಯಲೆಂತಹುದೋ ॥ ೬ ॥ ಇಲ್ಲಿಚನ್ನ
ಯ್ಯಗಳುಲದ್ದೆಯ। ಹುಲ್ಲುಸೋವೈಯ್ಯಗಳುಬಡತನ। ದಲ್ಲಿಶಿವನೊಳು
ಬೆರತಿದಿಲ್ಲವೆಆವರಪರಿಯಂತೆ ॥ ಹುಲ್ಲುಮಾರುತಬಡವರಂದದಿ। ಖುಲ್ಲು
ಮೊನವರರಿಯದಾಶಿವ। ನಲ್ಲಿಗುಪ್ತದಿಬಿರಸುತಿಹರೋ ತಿಳಿಯಲೆಂತಹು
ದೋ ॥೭॥ ಕುರಿಯಕಾಯುತಗೊಲ್ಲಳೈಯನು। ತುರುವಕಾಯುವಚಂ
ಡಿದೇವನು। ಪರಮತಿರುಮೂಲೈಗಳೊಯಿರುತಿರ್ದರವರಂತೆ ॥ ಕುರಿ
ಯತುರುವಂಕೊಟ್ಟಗುಪ್ತದಿ। ಹರನಭಕ್ತಿಯಮೂಡುತಿಹರೊ। ಶರಣರಿರ
ವಂನರರಭಾವಕತಿಳಿಯಲೆಂತಹುದೋ ॥೮॥ ಉದಿಸಿದವರಿಗೆಹಲವುಪರಿ
ಯಲಿ। ಉದಿಸಿಲಿಂಗದಿಗುಪ್ತಭಕ್ತಿಯ। ಪದುಳದಿಂದಲಿಮೂಡುತಿಹರೋ
ತಿಳಿಯಲೆಂತಹುದೂ ॥ ಅದರದೆಸೆಯಿಂದರಿಯಬಾರದು। ಸದಮಲಾತ್ಮ
ಕಲಿಂಗವಿದರಾ। ಮುದದಿಶಿವಷಡಕ್ಷರಿಯವರನಂದೆಂಬುದದರಿಂದಾ ॥೯॥

(೧೨) ಟೀ॥ ಎಲೈ— ದೇವನೇ ! ಮತ್ಯಾವ ವಿಧದಿಂದಲೂ ಅ
ರಿಯಲಾರೆ, ಆದರೆ, ಲಿಂಗವೆಂಬುದು ಇರುವದಾದರೆ ಆ ಭಾವದಲ್ಲಿ ನಿಂ
ನ ಶರಣರಸ್ಥಿತಿಯನ್ನು ಶಿವನೆಂದು ತಿಳಿಯುವೆನು. ಭೂಮಿಯೊಳಗೆ ಆ
ವುಬ್ಬಟೈಯ್ಯನೂ ಮನೋಹರವಾತುಳ್ಳ ಚೋಳರಾಯನೂ ಮನ್ಮಥ
ನಿಗೆ ವೈರಿಯಾದ ಶಿವನನ್ನೂ, ಬೆರಸಿದ್ದಲ್ಲವೇ ? ಅವರಹಾಗೆಯೇ ಭೂ
ಮಿಯನ್ನಾಳುತ್ತಿರುವಂಥವರಾಗಿ ಸಾಫಲ್ಯವಾಪ ಭಕ್ತಿಪರಾಯಣ ರಾ
ಗಿರುವರು ಎಷ್ಟುಮಂದಿ ಇದ್ಧಾರೋ ಯಾರುಬಲ್ಲರು. ಎಲೈ— ಮಂಗ
ಳಾತ್ಮಕನೇ ! ನಿನ್ನಶರಣರನ್ನು ತಿಳಿಯುವದು ಹ್ಯಾಗೆ ಉಂಟಾಗುವ
ದು ? ಬಸವರಾಯನೂ,ಚೊಕ್ಕೈಯ್ಯನೂ,ನಾರಸಿಂವೈಯ್ಯನೂ, ಕೇತಿ
ಅಯ್ಯನೂ, ಸುರತ್ತೈಯ್ಯನೂ ಇವರುಗಳೆಲ್ಲಾ ಮೆಚ್ಚಿಸಿ ಶಿವನೊಳಗೆ
ಲಿಂಗೈಕ್ಯವನ್ನು ಪಡೆದರಲ್ಲವೆ ಅವರಂತೆಯೆ ಭೂಮಿಯೊಳಗೆ ಮಂತ್ರ
ಪ್ರಭಾವದಿಂದ ಪ್ರಕಾಶಿಸುವ ಪರಶಿವನೊಳು ಗುಪ್ತವಾದ ಭಕ್ತಿಯಭಾವ
ನೆಯಲ್ಲಿ ಇರುವಂಥಾ ಶಿವಶರಣರುಗಳನ್ನು ತಿಳಿಯುವದುಹ್ಯಾಗೆ ಆಗು
ವದು ? ಭೂಮಿಯೊಳಗೆ ಅಮಲಹುಣ್ಣೈಯನೂ ಬಹು ಸೌಂದರ್ಯವು
ಳ್ಳಾತನಾಗಿ ಜಾಗಮರೆನ್ನಿಸಿಕೊಳ್ಳುವ ಶರಣರೊಳಗಣ ಪರಸ್ತ್ರೀಯು
ರೊಂದಿಗೆ ಬೆರತದ್ದು ಇಲ್ಲವೆ ? ಅವರಹಾಗೆಯೆ ವಿಟರಹಾಗೆಯೆ ಕಾಣಿ

ಸಿಕೊಂಡು ಕಾಮವೈರಿಯಲ್ಲಿ ಅಪಾರವಾದ ಭಕ್ತಿಭಾವನೆಯಲ್ಲಿ ಎಷ್ಟುಮಂದಿ ಇರುವರೋ ಯಾರು ಬಲ್ಲರು ? ಅಂಥಾ ಮಹಾನುಭಾವರಾದ ಶಿವಶರಣರನ್ನು ತಿಳಿಯುವದು ಹ್ಯಾಗೆ ಉಂಟಾಗುವದು ? ಪೊಡವಿಯೊಳಗೆ ಆ ಮಲ್ಲಾಜಟ್ಟಿ ಅಯ್ಯನೂ,ಅರಿಯೈಯನೂ, ಶಂಕರೇಶನೂ, ಭಕ್ತಿಮಾರ್ಗವನ್ನು ಸಾಧಿಸುತ್ತಲೇಗುರುಪತ್ನಿಗಳಲ್ಲಿ ಇದ್ದಂಥವರಾದರು. ಅವರಹಾಗೆಯೇ ಮೊದಲು ಹಿಡಿದು ಬಂದೊಂದು ಧ್ಯಾನಗಳ ಮೂಲಕವಾಗಿ ಲಿಂಗೈಕ್ಯರೂಪವಾದ ಭಕ್ತಿಭಾವವನ್ನು ಎಷ್ಟುಮಂದಿ ಬಲ್ಲವರಾಗಿರುವರೊ ಅಂಥಾ ಮಹಾತ್ಮರುಗಳಾದ ಶಿವಶರಣರನ್ನು ತಿಳಿಯುವದು ಹ್ಯಾಗೆಆಗುವದು. ಭೂಮಿಯೊಳಗೆಲ್ಲಾ ಇವರಹಾಗೆಯೇ ಮಡಿವಾಳಯ್ಯನು ಕಾಳಿಗಳೂ ಪಡಿಯುಡುಪರೂ ಎಂಬವರೆಲ್ಲ ನಿಂದಾಕಾರ್ಯವನ್ನ ಹುಡುಕುತ್ತಾ ಇದ್ದರಲ್ಲ ಅವರಹಾಗೆಯೆ ಭಕ್ತರ ವಸ್ತ್ರವನ್ನು ಮಡಿಮಾಡುವಂಥವರಾಗಿ ಶಿವನೊಳಗೆ ಅಡಗಿ ಭಕ್ತಿಭರಿತರಾಗಿರುತ್ತಿರುವ ನಿಂಮಶರಣರನ್ನು ತಿಳಿಯುವದುಹ್ಯಾಗೆ ಆಗುವದು. ಪೊಡವಿಯೊಳಗೆ ಮೂಕದೇವಯ್ಯನು ಅತ್ಯಂತಭಂಡರ ಅಧಮನಾಗಿ ಅಧಿಕವಾದ ಸಂಸಾರದೊಳಗೆ ಇರುತ್ತಿರಲಿಲ್ಲವೆ ? ಅವರಹಾಗೆ ಇರುವ ಶರಣರನ್ನು ಯಾರು ಬಲ್ಲರೂ ಸಂಸಾರವನ್ನು ಮರೆಗೊಂಡೇ ಗುಪ್ತದಲ್ಲಿ ಶಿವನೊಳೈಕ್ಯವನ್ನು ಪಡೆಯುತ್ತಿರುವರನ್ನು ತಿಳಿಯುವದು ಹ್ಯಾಗೆ ಆಗುವದು ಇಲ್ಲಿ ಚನ್ನಯ್ಯಗಳೂ ಲದ್ದೆಯ್ಯನೂ ಹುಲ್ಲು ಸೋಮಯ್ಯಗಳು ಬಡತನದಲ್ಲಿ ಶಿವನೊಳಗೆ ಬೆರಸಿದ್ದು ಇಲ್ಲವೆ ? ಅಂಥವರ ರೀತಿಯಾಗಿ ಹುಲ್ಲುಮಾರುತ್ತ ಬಡವರಹಾಗೆ ದುಷ್ಟಮನುಜರಿಗೆ ತಿಳಿಯದಂತೆ ಇರುವಂಥವರಾಗಿ ಶಿವನಲ್ಲಿ ಗುಪ್ತವಾಗಿ ಎಷ್ಟುಮಂದಿ ಬೆರಸುತ್ತಿರುವರೊ ಅಂಥಾ ಶರಣರನ್ನು ತಿಳಿಯುವದು ಹ್ಯಾಗೆ ಆಗುವದೋ ? ಗೊಲ್ಲಳೈಯನು ಕುರಿಯನ್ನು ಕಾಯುತ್ತಲೂ ಚಂಡಿದೇವನು ದನಕಾಯುವಾತನಾಗಿಯೂ ಪರಮತೀರುಮೂಳೈಯಗಳೂ ಇರುತಿರ್ದರಲ್ಲಾ. ಅವರಂತೆಯೇ ಕುರಿದನಗಳನ್ನೆಲ್ಲಾ ಕೊಟ್ಟು ಗುಪ್ತದಿಂದ ಶಿವಭಕ್ತಿಯನ್ನು ಮಾಡುತ್ತಿರುವರೇನೋ ಅಂಥ ಶರಣರ ಇರುವಿಕೆಯು ನರರಭಾವಕ್ಕೆ ಹ್ಯಾಗೆ ತಿಳಿಯಲಿಕ್ಕಾಗುವದು. ಜನ್ಮಿಸಿದವರಿಗೆ ಹಲವುವಿಧದಲ್ಲಿ ಜನ್ಮಿಸಿ. ಲಿಂಗವಲ್ಲಿ ಗುಪ್ತವಾದ ಭಕ್ತಿಯನ್ನು ಕ್ರಮವಾಗಿ ಮಾಡು! ತ್ತಿರುವರಲ್ಲ. ಅಂಥ

ವರನ್ನು ಹ್ಯಾಗೆ ತಿಳಿಯಲಿಕ್ಕಾಗುವದು. ಸದಮಲಾತ್ಮಕವಾದ ಲಿಂಗವು ಷಡಕ್ಷರೀಯ ಪ್ರಭುವೆಂದು ಅರಿಯುವದರಿಂದಲ್ಲದೆ ಮತ್ಯಾತರಿಂದಲಾದರೂ ಶಿವಶರಣರ ಇರವನ್ನು ಅರಿಯಕೂಡದೆಂದು ಪೂರ್ವಾಚಾರ್ಯರುಗಳ ಚರಿತ್ರೆಯನ್ನಾ ಅವರು ನಡಿಸಿದ ಭಕ್ತಿಭಾವವನ್ನು ಈ ಪದದಿಂದ ತೋರ್ಪಡಿಸಿ ಪೇಳಿದರೆಂದು ತಾತ್ಪರ್ಯವು. *

(೧೩) ರಾಗ - ಭಾಮಿನೀಷಟ್ಪದಿ—ಕರುಣವಾರಿಧಿಶಿವನುಯೆನುತತಿ। ಅರಿದಮರುಳರುಕವಿಗಳೆಂಬರು। ಬರಿಯುತರಕಟಕಾಡುವಾತನು ಕರುಣಿಯೆಂತಹನೂ॥ ಪಲ್ಲ॥ ಆದಿಯ್ಯಯನುಜಯ್ಯನರುಗಳ। ವಾದಕೋಸುಗಕರೆಯಬರುತಿರೆ। ಹಾದಿಯೊಳಗಂಕಾಡಿದಾತನು ಅಂತುವೆಲ್ಲದಲೇ॥ ಮಾದಿರಾಜನಅರಸಿಬರುತಿರೆ। ಭೇದಿಸದೆಉರೆಕಾಡಿದಾತನು। ಮೂಧವೋದ್ಭವವೈರಿಯಿಾತನುಕರುಣಿಯುಂತಹನೂ॥ ೧॥ ಭೂಮಿಯೊಳಗತಿಚೋದ್ಯವ್ಯಾದುನ। ರಾಮತಂದೆಯಕರೆಯಬರುತಿರೆ। ಆ ಮಹಾತ್ಮನಕಾಡಿದಾತನುಅಂತುಮಲ್ಲದಲೆ॥ ಪ್ರೇಮತನ್ನೊಳಗಿರ್ದನೃಪತಿ। ಕಾಮದೇವನಬಳಿಯನಂಬಿಯ। ನಾಮವನುನೆನವುತಲಿಕಾಡಿದಕರುಣಿಯುಂತಹನೂ॥ ೨॥ ಕ್ಷಿತಿಗೆಮೆರೆವಾಕಾಂಚಿಪುರದಲಿ। ಪತಿವ್ರತಾಮುಚ್ಚಾಗಳವ್ವನ। ಸುತನಕೊಲಿಸಿದಮರುಕವಿಲ್ಲದೆ ಅಂತುಮೆಲ್ಲದಲೇ॥ ಸುತನನೋರ್ವನಪಿಡಿದುಬಡತನ। ಯುತದಿಬಾಳುವನಂಬಿಯಕ್ಕನ। ಕೃತಕದಿಂದಲಿಮಗನಕೊಲಿಸಿದಕರುಣಿಯೆಂತಹನೂ॥ ೩॥ ಕೋಲರೊಳಗೆಲ್ಲವರತೆರದಿಂ। ಹಾಲಸವಿಸಲುತಂದಮುಗ್ಧಾ। ಬಾಲೆಯನುಕರತಟನಕಾಡಿದನಂತುಮಲ್ಲದಲೆ॥ ನೀಲಕಂಠಯ್ಯಗಳುಆಣೆಗೆ। ಬಾಲೆಯೊಳುಮಾತಾಡದಿರುತಿರ। ಬಾಳವಾಗಿಯೆಕಾಡಿದಾತನುಕರುಣಿಯೆಂತಹನೂ॥ ೪॥ ಮಡದಿಪುರುಷರು ನುಡಿಯದಿರ್ದೊಡೆ। ಜಡಿದುಜರಿದರೆಕೋಪಮುಪ್ಪದೆ। ಕಡೆಗೆಪುರುಷರಿ ಗದರಹೋಲುವೆಯುಂತೆನಾನಿನ್ನಾ॥ ಬಿಡದೆಬಣ್ಣಿಸಿಪಾಡುತಿರೆಯೆ। ನ್ನೊಡನೆನುಡಿಯದೆಇರಲುಜರಿದೆನು। ಮೃಡಷಡಕ್ಷರವರನೆಕೋಪವು ಬೇಡಯೆನ್ನೊಡನೆ॥ ೫॥

(೧೩) ಟೀ॥ ಶಿವನು ಕರುಣಾನಿಧಿಯೆಂದು ಕವಿಗಳು ಎಂಬವರು ಪ್ರಯೋಜನ ವಿಲ್ಲದೆ ಅರಿದು ಮರುಳರಾದರು, ಕಾಡುವಾತನು ಹ್ಯಾಗೆ ಕರುಣಿಯೂದಾನು, ಆದಿಯಯ್ಯನು ಜೈಯನರುಗಳನ್ನು ವಾದ

ಕ್ಕೋಸ್ಕರಕರೆಯಬರುತ್ತಿರಲು. ಮಾರ್ಗದೊಳಗೇನೇ ಕಾಡಿದಾತನ
ಮಾತ್ರವಲ್ಲದೆ, ಮಾದಿರಾಯನ ಅರಸಿಯು ಬರುತ್ತಿರಲಾಗಿ ಭೇದಿಸ
ಬಹಳವಾಗಿ ಕಾಡಿದಾತನೂ ಕಾಮವೈರಿಯೂ ಆದ ಈತನು ಹ್ಯಾ
ಕರುಣಿಯಾದಾನು ? ಭೂಮಿಯೊಳಗೆ ಅತ್ಯಾಶ್ಚರ್ಯವಾಗಿ ಮೃಡು
ರಾಮನು ಕರೆಯಬರುತ್ತಿರಲಾಗಿ ಅಂಥಾ ಮಹಾತ್ಮನನ್ನು ಕಾಡಿದ
ನು ಮಾತ್ರವಲ್ಲದೆ ತನ್ನೊಳಗೆ ಪ್ರೀತಿಇದ್ದ ಕಾಮದೇವನ ಅರಸಿಯು ನಂಬಿ
ಯಬಳಿಯಲ್ಲಿ ನಾಮವನ್ನು ನೆನೆಯುತ್ತಾ ಕಾಡಿದಾತನು ಹ್ಯಾಗೆ ಕರುಣಿ
ಯಾದಾನು ? ಭೂಮಿಯಲ್ಲಿ ಪ್ರಕಾಶಿಸುವ ಆ ಕಾಂಚೀಪುರದೊಳಗೆ ಪ
ತಿವ್ರತೆಯಾದ ಮತ್ಸ್ಯಂಗಳವ್ವನಮಗನನ್ನು ನಿಷ್ಕರುಣನಾಗಿ ಕೊಲ್ಲಿಸಿ
ದಮಾತ್ರವಲ್ಲದೆಬಡತನದಿಂದಬಾಳುವ ನಂದಿಅಕ್ಕನಮಗನನ್ನು ಹಿಡಿದು,
ಕೃತ್ರಿಮದಿಂದ ಕೊಲ್ಲಿಸಿದಾತನು ಹ್ಯಾಗೆ ಕರುಣಿಯಾಗುವನು ? ಕೊ
ಲೂರೊಳಗೆಲ್ಲಾ ಅವರಂತೆಯೇ ಹಾಲುಕುಡಿಸುವದಕ್ಕೆ ತಂದಂಥಾ ಬ
ಬ್ಬಾಳೊಬ್ಬ ಕನ್ನಿಕೆಯನ್ನು ಕೈಕಚ್ಚಿದ್ದು ಮಾತ್ರವಲ್ಲದೇ, ನೀಲಕಂಠಯ್ಯ
ರುಗಳು ಆಣೆಗೋಸ್ಕರ ಬಾಲೆಯೊಡನೆ ಮಾತಾಡದೆ ಇರುತ್ತಿರಲು, ಬ
ಹಳವಾಗಿಯೇ ಕಾಡಿದಾತನು ಹ್ಯಾಗೆಕರುಣಿ ಯಾದಾನು ? ಗಂಡಹೆಂ
ಡರುಗಳು ಮಾತಾಡದಿದ್ದರೆ ತಿರಸ್ಕಾರಮಾಡಿ ನಿಂದಿಸಿದರೆ ಕೋಪವುಂ
ಟಾಗುವದೆ, ಕಡೆಗೆ ಪುರುಷರಿಗೆ ಅದರಪ್ರಕಾರವಾಗಿಯೇ ನಾನು ನಿಂ
ನನ್ನು ಎಡೆಬಿಡದೆವರ್ಣಿಸಿ ಕೀರ್ತಿಸುತ್ತಿರಲು, ನೀನು ನನ್ನೊಡನೆ ನುಡಿ
ಯದೆ ಇದ್ದದ್ದರಿಂದ ನಾನು ಈರೀತಿಯಲ್ಲಿ ದೂಷಿಸಿದೆನು. ಎಲೈ— ಮೃ
ಡನೇ ! ಷಡಕ್ಷರರೂಪಿಯಾದ ವರನೇ ನನ್ನೊಡನೆ ಕೋಪವು ಬೇಡ
ಯೆಂದು ಈ ಪದದಿಂದ ಶಿವಲೀಲೆಗಳನ್ನು ನಿಂದಾಸ್ತುತಿರೂಪವಾಗಿ ವಿ
ಸ್ತರಿಸಿದರೆಂದು ತಾತ್ಪರ್ಯವು॥ ... ... *

(೧೪) ಶಿವಯೋಗಾಷ್ಟಕ- ಕಂದಪದ್ಯ॥ ಸಂಪಿಗೆಹೂವಿನಕಂಬ
ವು। ಸೊಂಪಿನಪಂಕಜದಿನೆಸೆವತೊಲೆಗಳುಮೆರೆವಾ ॥ ಸೊಂಪಿನಮನೆ
ಯೊಳುಫಣಿಪತಿ। ಜೊಂಪಿಸಕುಂಡಲನನೆನೆವುತಾನೆಂದಿಹೆನೋ ॥ ೧॥
ಜಾತಿಸುಪಾಟಲಿಕಂಬದು। ಕೇತಕಿಸೆಳೆದೊಲೆಯುಜಂತೆಚೂತದತಳಿರಂ॥
ನೂತನಕಂಪಿನಮನೆಯೋ । ಳ್ಭೂತೇಶನನೆನೆದುಸುಖಿಸುತಾನೆಂದಿಹೆ
ನೋ॥ ೨॥ ವರಕಸ್ತೂರಿನೆಲಗಟ್ಟುಂ। ನರುಗಂಪಿನಸೊಬಗುಭಿತ್ತಿಕರ್ಪೂರ

ದೊಲೆಯಂ॥ ಕರರಚಿಸಿದಕರುವೂಡದಿ । ಗಿರಿಜಾತೆಯಪತಿಯನೆನೆವು
ತಾನೆಂದಿಹೆನೋ॥ ೩ ॥ ಬೆಳ್ದಿಂಗಳಭಿತ್ತಿಗಳಿಂ। ಕಳ್ದೇಕನಕಂಭವರ್ದಚಂ
ದ್ರನತೊಲೆಯಿಂ॥ ಬಳ್ಳಿಸೆದವುಂಟಪದೋ । ಳಾಳ್ದದ್ವಿಜಕಾಂತನನೆನೆವು
ತಾನೆಂದಿಹೆನೋ॥ ೪ ॥ ಬಳೆಸಿದರತ್ನದಸಿರಿಯೊಳ್ । ಥಳಥಳಿಸುವ ಅ
ಬುಜಶೃಂಗಶೈಲದತುದಿಯೊಳ್ ॥ ಎಳೆಮುತ್ತಿನವುಂಟಪದೋ । ಳಳಿ
ವಿಲ್ಲದೆಶಿವನನೆನೆವುತಾನೆಂದಿಹೆನೋ॥ ೫ ॥ ಸಪ್ತಸುಕಾಂಚನಪ್ರಭೆಯಿಂ।
ಪೊಪ್ಪುವಸದ್ಭೂಮಿಯಲ್ಲಿಮಿಂಚಿನಮನೆಯೊಳ್ ॥ ತಪ್ಪದೆಬೆಳಗಿನ
ಮಂಚದಿ । ದರ್ಪಕಮರ್ದನನ ನೆನೆವುತಾನೆಂದಿಹೆನೋ॥ ೬॥ ಶಶಿಕಾಂತ
ದನೆಲೆಗಟ್ಟಿಂ । ಪೊಸಪವಳದಕಂಬಪೊಳೆವನೀಲದತೊಲೆಯಿಂ ॥ ಹಸನಾ
ದಹದ್ರ್ಯದೊಳಗಾ । ಶಶಿಧರನಂ ನೆನೆದುಸುಖಿಸುತಾನೆಂದಿಹನೊ॥ ೭॥
ತಿಂಗಳುಗಂಗೆಯಸೂಡಿದ । ಮಂಗಳಮುಯಭಸಿತಲಸಿತಪೊಪ್ಪುತಮೆರ
ವಾ॥ ಅಂಗದಚಲುವಷಡಕ್ಷರ । ಲಿಂಗವನೆರನೆರವಿಯುಗಲದಾನೆಂದಿಹೆ
ನೊ ॥ ೮ ॥ ಈ ಶಿವಯೋಗಾಷ್ಟಕಮಂ । ಪೊಸರಿಸದೆಬರೆದುಪೋದಿ
ಪೇಳಿದವರ್ಗಂ ॥ ಈಶನುತನ್ನಯಪುರದೋ । ಳ್ಭಾಸುರಗಣಪದವನಿ
ತ್ತುರಕ್ಷಿಪನೊಲವಿಂ॥ ... ... ೯॥

(೧೪) ಟಿ॥ ಸಂಪಿಗೆಹುವ್ವಿನ ಕಂಭದ ಅಂದವುಳ್ಳದ್ದಾಗಿಯೂ, ಕಮಲರೇಕುಗಳ ತೊಲೆಗಳಿಂದ ರಮಣೀಯ್ಯವಾಗಿಯೂ ಇರುವಮಂದಿರದೊಳಗೆ ಸರ್ಪಗಳಿಂದ ಸೊಗಸಾದ ಕುಂಡಲಗಳುಳ್ಳಾತನಾದ ಪರಶಿವನನ್ನು ಧ್ಯಾನಿಸುತ್ತಾ ತಾನು ಯಾವಾಗ್ಯೆ ಇರುವನೋ ? ಸಜಾತೀಯವಾದ ಪಾಟಲೀಹುವ್ವಿನ ಕಂಭವುಳ್ಳದ್ದಾಗಿಯೂ, ಕೇತಕೀ ಹುವ್ವಿನ ಲೋವೆವುಳ್ಳದ್ದಾಗಿಯೂ, ಮಾವಿನ ಚಿಗುರಿನಿಂದ ನೂತನವಾದ ಆಲಯದೊಳಗೆ ಭೂತನಾಥನಾದ ಪರಶಿವನನ್ನು ಧ್ಯಾನಿಸಿ ಸುಖಿಸುತ್ತಾ ತಾನು ಎಂದಿಗೆ ಇರುವೆನೋ ಶ್ರೇಷ್ಠವಾದ ಕಸ್ತೂರಿಯ ನೆಲಗಟ್ಟುಳ್ಳದ್ದಾಗಿಯೂ. ಸುವಾಸನೆಯುಳ್ಳ ಪುನುಗಿನ ಗೋಡೆಯುಳ್ಳದ್ದಾಗಿಯೂ, ಪಚ್ಚ ಕರ್ಪೂರದ ಲೇಪನವುಳ್ಳದ್ದಾಗಿಯೂ, ಚಂನಾಗಿ ನಿರ್ಮಿಸಿರುವಂಥಾದ್ದಾಗಿಯೂ ಇರುವ ಉಪ್ಪರಿಗೆಯಲ್ಲಿ ಪಾರ್ವತೀವಲ್ಲಭನಾದ ಸಾಂಬಮೂರ್ತಿಯನ್ನು ಧ್ಯಾನಿಸುತ್ತಾ ತಾನು ಯಾವಾಗ್ಯೆ ಇರುವೆನೋ ? ಚಂದ್ರಕಾಂತದ ಗೋಡೆಗಳಿಂದಲೂ, ಚನ್ನಾಗಿ ರಚಿಸಿದ ಚಿನ್ನದ ಕದಗ

ಳಿಂದಲೂ, ಒಪ್ಪುತ್ತಿರುವ ಚಂದ್ರಪುಷ್ಕರಿಣಿಗಳಿಂದಲೂ, ಯುಕ್ತವಾಗಿರುವ ಮಂಟಪದೊಳಗೆ ಪಾರ್ವತೀಪತಿಯಾದ ಸಾಂಬಮೂರ್ತಿಯನ್ನು ಧ್ಯಾನಿಸುತ್ತಾ ತಾನು ಎಂದಿಗೆ ಇರುವನೋ ? ಸುತ್ತಲೂ ಪ್ರಕಾಸುವ ರತ್ನದವೈಭವದಲ್ಲಿ ಥಳಥಳಿಸುತ್ತಿರುವ ವಜ್ರಮಯವಾದ ಶಿಖರಳುಳ್ಳ ಪರ್ವತಗಳ ಅಗ್ರದಲ್ಲಿ ಕಂಗೊಳಿಸುವ ಮಂಟಪದೊಳಗೆ ನಿರ್ವ್ಯಾಸನವಾಗಿ ಪರಶಿವನನ್ನು ಧ್ಯಾನಿಸುತ್ತಾ ತಾನು ಎಂದಿಗೆ ಇರುವೆನೋ ? ಪುಟಪಾಕಶೋಭಿತವಾದ ಅಪರಂಜಿಯ ಪ್ರಕಾಶದಿಂದ ರಮಣೀಯವಾದ ಸುಕ್ಷೇತ್ರದಲ್ಲಿ ಮಿಂಚಿನ ಮನೆಯೊಳಗೆ ಎಡೆಬಿಡದೆ ಪ್ರಕಾಶವೆಂಬುವ ಮಂಚದಲ್ಲಿ ಕಾಮಹರನಾದ ಶಿವನನ್ನು ಧ್ಯಾನಿಸುತ್ತಾ ತಾನು ಎಂದಿಗೆ ಇರುವೆನೋ ? ಚಂದ್ರಕಾಂತ ಶಿಲೆಗಳ ನೆಲೆಕಟ್ಟಿನಿಂದಲೂ, ನೂತನವಾದ ಪ್ರವಾಳಮಳಮಣಿ ಕಂಭಗಳು ಹೊಳೆಯುತ್ತಿರುವ ಇಂದ್ರನೀಲ ರತ್ನಗಳ ತೊಲೆಯಿಂದಲೂ, ಪರಿಷ್ಕೃತವಾದ ಉಪ್ಪರಿಗೆಯೊಳಗೆ ಚಂದ್ರಧರನಾದ ಚಂದ್ರಶೇಖರನನ್ನು ಧ್ಯಾನಿಸಿ ಸುಖಿಸುತ್ತಾ ತಾನು ಎಂದಿಗೆ ಇರುವನೋ ? ಚಂದ್ರನನ್ನೂ ಗಂಗೆಯನ್ನೂ ಧರಿಸಿದಾತನಾಗಿಯೂ, ಮಂಗಳಾತ್ಮಕವಾದ ವಿಭೂತಿಯ ಪ್ರಕಾಶದಿಂದ ರಮ್ಯವಾಗಿ ಕಂಗೊಳಿಸುವ ಅಂಗವುಳ್ಳಾತನಾಗಿಯೂ, ಸುಂದರನಾಗಿಯೂ, ಇರುವ ಷಡಕ್ಷರ ಪ್ರತಿಪಾದಿತ ಶಿವಮೂರ್ತಿಯನ್ನು ಚನ್ನಾಗಿ ಧ್ಯಾನಿಸಿ ನಿಸ್ಪೃಹನಾಗಿ ತಾನು ಎಂದಿಗೆ ಇರುವೆನೋ ? ಈ ಶಿವಯೋಗಾಷ್ಟಕವೆಂಬುದನ್ನು ಎಡೆಬಿಡದೆ ಬರದೋದಿದಂಥವರಿಗೆಲ್ಲಾ ಜಗನ್ನಿಯಾಮಕನಾದ ಶಿವನು ತನ್ನ ಪುರವೆನ್ನಿಸುವ ಕೈಲಾಸದೊಳಗೆ ಪ್ರಕಾಶಮಾನವಾದ ಗಣಪದವೆಂಬುವ ಸಾಲೋಕ್ಯ ಸಾರೂಪ್ಯ ಮುಕ್ತಿಗಳನ್ನನುಗ್ರಹಿಸಿ ಪ್ರೀತಿಯಿಂದ ಕಾಪಾಡುವನೆಂದು ಆತ್ಮಾರಾಧನೆಯ ವಿಧಾನವನ್ನೂ, ಧ್ಯಾನದ ಅಭಿನಿವೇಶವನ್ನೂ ಈ ಅಷ್ಟಕದ ಮಹತ್ತನ್ನೂ ಈ ಪದದಿಂದ ಬೋಧಿಸಿ ಪೇಳ್ದರೆಂದು ತಾತ್ಪರ್ಯವು. ...

(೧೫) ರಾಗ ಭೋಗಷಟ್ಪದಿ— ಇಂದ್ರಿಯಂಗಳಿಚ್ಛೆಗಳಿಗೆ ಮಂಡುವರಿವಮನವುಕೆಟ್ಟು । ಇಂದುಧರನಕಡೆಗೆಮುಖವದಾಗಲೊಯ್ಯನೆ ॥ ಪಲ್ಲ ॥ ಪಿಕನಿಚಲುವಗಾನಧ್ವನಿಯ । ಶುಕನತಿಶುವಿನಂತನುಡಿಯ । ಸಖಿಯರುಗಳನುಡಿಗೆಕಿವಿಯುಕಿವುಡುಬಳಸುತಾ ॥ ಸಕಲಶಿವನಶಾಸ್ತ್ರಗಳ

ನು । ಪ್ರಕಟವಾಗಿಕೇಳಿಕೇಳಿ । ಸುಖಿಸುವುದಕೆಯನ್ನ ಶ್ರೋತ್ರ ವಿಕಸವಾಗಲೀ ॥ ೧ ॥ ಹೊನ್ನು ಹಲಿಗೆಯಂತೆಹೊಳೆವ। ಕನ್ನೆಯರುಗಳಂಗಸೋಂಕೆ । ಯನ್ನತನುವುಕಲ್ಲುಮರನಭಾವವಾಗಲೀ । ಚನ್ನಶಿವನಚರಣಧೂಳಿ । ಯಂನುಪೂಸಿಹೊರಳುವುದಕೆ । ಯೆನ್ನತನುವು ಉಬ್ಬಿಕೊಬ್ಬಿವಿಕಸವಾಗಲೀ ॥ ತೊಳಪಗಂಣಕಲಶಕುಚದ । ಎಳೆಯಪೆಣ್ಣನೋಡುವುದಕೆ । ಪೊಳೆವನಯನವೆರಡುಯೆನಗೆ ಕುರುಡುಬೀಳಲೀ ॥ ಯೆಳೆಯಚಂದ್ರಧರನಚಲುವ । ನೆಲಸದಂತೆನೋಡುವುದಕೆ । ಕಳೆಗಳಾಗಿಯೆಂನನಯನವಿಕಸವಾಗಲೀ ॥ ೩ ॥ ಅಂಬುಜಾಕ್ಷಿಯರುಗಳಧರ । ಚುಂಬನಕ್ಕೆಯನ್ನಜಿಂಹೆ । ಹಂಬಲಿಸದೆಹಾಗೆಸೀಳಿಪುಗಳುಯೇಳಲೀ ॥ ನಂಬಿಶಿವನಶರಣರುಗಳ । ತಂಬುಲವನುಸವಿವುದಕ್ಕೆ । ಅಂಬುರುಹದಹಾಗೆಜಿಂಹೆವಿಕಸವಾಗಲೀ ॥ ೪ ॥ ಅಂಗನೆಯರುತೊಡೆದುಸೂಡಿ । ದಂಗಪೂವವಾಸಿಸುವಡೆ । ಹಿಂಗದೆಂನನಾಸಪುಟಿಕೆನೆಗಡಿಯಾಗಲೀ । ಮಂಗಳಾತ್ಮಷಡಕ್ಷರೀಯ । ಲಿಂಗನಂಘ್ರಿಗಿತ್ತಕುಸುಮ। ಹಾಂಗೆವಾಸಿಸುವರೆಘ್ರಾಣವಿಕಸವಾಗಲೀ ॥ ... ... ೧೫॥

(೧೫) ಟೀ ॥ ದುರ್ವಿಷಯುಗಳುಳ್ಳ ವಾಗಾದಿ ಪಂಚೇಂದ್ರಿಯಗಳ ಶಬ್ದಾದಿ ವಿಷಯವಾದ ದುರಿಚ್ಛೆಗಳಿಗೆ ಮುಂಕೊಳ್ಳುವ ಮನವು ಕೆಟ್ಟು ಚಂದ್ರಶೇಖರನ ಕಡೆಗೆ ಅಭಿಮುಖವಾಗಿ ಆಗಲಿ, ಕೋಗಿಲೆಯ ಇಂಪಾದ ಗಾನಧ್ವನಿಗೂ ಗಿಳಿಮರಿಯ ಸವಿನುಡಿಗೂ ಸ್ತ್ರೀಯರಬೆರಗಿನ ನುಡಿಗೂ ಕರ್ಣೇಂದ್ರಿಯವು ಕಿವುಡಾಗುತ್ತಾ, ಸಕಲವಾದ ಶೈವಶಾಸ್ತ್ರಗಳನ್ನೂ ಪ್ರಕಟವಾಗಿ ಕೇಳಿಕೇಳಿ, ಸುಖಿಸುವದಕ್ಕೆ ನನ್ನ ಶ್ರೋತ್ರವೆಂಬುವ ಇಂದ್ರಿಯವು ವಿಕಸವಾಗಲಿ, ಭಂಗಾರದ ತಗಡಿನಹಾಗೆ ಪ್ರಕಾಶಿಸುವ ಕನ್ನಿಕೆಗಳನ್ನು ನೋಡಿ ನನ್ನ ಶರೀರವಾದದ್ದು ಕಲ್ಲು ಮರದ ರೀತಿಯಾಗಲಿ, ಮಂಗಳಾತ್ಮಕನಾದ ಈಶ್ವರನ ಪಾದದ ಧೂಳಂನು ಬೊಳೆದುಕೊಂಡು ಪ್ರಕಾಶಿಸುವದಕ್ಕೆ ನನ್ನ ತನುವೆಂಬ ಚರ್ಮೇಂದ್ರಿಯವು ಸಂತೋಷಾತಿಶಯದಲ್ಲಿ ಹೆಚ್ಚಿ ವಿಕಸವಾಗಲಿ, ಪ್ರಕಾಶಮಾನವಾದ ಕಂಣುಗಳೂ ಕಲಶದಂತೊಪ್ಪುವ ದಟ್ಟವಾದ ಸ್ತನಗಳೂ ವುಳ್ಳ ಕನ್ನೆಯರಂನು ನೋಡುವದಕ್ಕೆ ಹೊಳೆಯುವ ಕಂಣುಗಳೆರಡೂ ನನಗೆ ಕುರುಡಾಗಲಿ, ಬಾಲಚಂದ್ರನನ್ನು ಧರಿಸಿರುವಂಥಾ ಮಂಗಳಾತ್ಮಕನಾದ ಶಿವನನ್ನು ನೋ

ಹುವದಕ್ಕೆ ಕಾಂತಿಯುಳ್ಳವುಗಳಾಗಿ ನನ್ನ ನೇತ್ರಗಳೆಂಬ ಇಂದ್ರಿಯಗಳ
ವಿಕಸವಾಗಲಿ, ನೈದಿಲೆಯಂದದ ಕಂಣುಗಳುಳ್ಳ ಬಾಲಕಿಯರ ಚೆಂದ
ಟಿಯನ್ನು ಸವಿಯುವದಕ್ಕೆ ನನ್ನ ನಾಲಿಗೆಯು ಬಯಕೆ ಗೊಳ್ಳದಹಾ
ತೀಳಿ ಹುಂಣೆದ್ದು ಇರುವದಾಗಲಿ. ನಿಜಶಿವಭಕ್ತರಾದವರಂನು ನಂಬಿ
ಅವರ ಉಚ್ಛಿಷ್ಟವಾದ ತಾಂಬೂಲವನ್ನು ಸವಿಯುವದಕ್ಕೆ ಕವುಲದಹಾ
ಗೆ ನಂನ ನಾಲಿಗೆಯೆಂಬ ಇಂದ್ರಿಯವು ವಿಕಸವಾಗಲಿ, ಸ್ತ್ರೀಯರು ಪ
ಮಳಗಳಿಂದ ಲೇಪಿತವಾಗಿ ಮುಡಿದಿರುವ ಅಂಗದಲ್ಲಿನ ಹೂವಿನ ಪರಿ
ಮಳವನ್ನು ಮೂಸಿ ನೋಡುವದಕ್ಕೆ ನನ್ನ ಮೂಗಿಗೆ ಎಂದಿಗೂ ಕಡೆವೆ
ಯಾಗದಂಥಾ ನೆಗಡಿಯು ಉಂಟಾಗಲಿ. ಮಂಗಳಾತ್ಮಕನಾದ ಷಡಕ್ಷ
ರ ಪ್ರತಿಪಾದಿತ ಲಿಂಗಮೂರ್ತಿಯ ಪಾದದಲ್ಲಿ ಅರ್ಪಿಸಿದ ಪುಷ್ಪವಂನು
ಆಘ್ರಾಣಿಸುವದಕ್ಕೆ ಘ್ರಾಣವೆಂಬುವ ಇಂದ್ರಿಯವು ವಿಕಸವಾಗಲಿಯೆಂ
ದು ಪಂಚೇಂದ್ರಿಯಗಳು ತಂಮತಮ್ಮ ದುರ್ವಿಷಯಗಳಂನು ಬಿಟ್ಟು ಸ
ದ್ವಿಷಯವಾದ ಶಿವನೊಳಗೆ ಐಕ್ಯವಂನು ಪಡೆಯಬೇಕೆಂದು ಈ ಪದದಿಂ
ದ ಪೇಳ್ದರೆಂದುತಾತ್ಪರ್ಯವು. ... ... *

(೧೬) ರಾಗ- ಭೋಗ— ಭಜತಿಯಾರವೆಷ್ಟುವಾಲೊ। ಸಾಖ್ಯ
ವೀವಚಂದ್ರಸೂರ್ಯ। ವಜರೆಭಾವುತಾಳಭಜತಿನಾಟ್ಯಲೀಲನಂ॥ ಪಲ್ಲ॥
ಧಿಮಿಕುಧಿಂಧಿಧಿಮಿಕುಧಿಮಿಕುನಂದಕಾಯುರುಗಳವಿಮಲ। ಯಮಕಚ
ಮಕಮೃದಂಗಭಜಂತ್ರಿನಾಟ್ಯಲೀಲನಂ॥ ಅಮಲವೀಣೆಸುಸ್ವರದಲಿ। ಗ
ಮಪದನಿಸರಿಸರಿಸರಿಸ। ಗಮಪಭಜಾತ್ರಿತುಂಬುರಾದಿನಾಟ್ಯಲೀಲನಂ॥
೧॥ ಚರಣಜತಿಗೆಧರಣಿಜಲವು। ಸರಿಸವೂನಮಟ್ಟವಾಗೆ। ಪರಿಜನವುಸ
ಹಸ್ರಶಿವರದಾಗಿಬಿದ್ದಿರೆ। ಕರವಬಿದಿರೆಶೈಲಮಟ್ಟೆ। ಉರುಳುತಿರಲುದೆಸೆ
ಗೆಕುಸುಮು। ವರುಷದಂತೆಉರುಳಿಭಗಣನಷ್ಟವಾದವೂ॥ ೨॥ ಸುರರು
ಭಾಪುಧಿರುರೆಯೆನಲು। ಹರಿಸುರೇಂದ್ರಜೀಯವೆನಲು। ಹರಸಿಮುನಿ
ಗಳಕ್ಷತೆಗಳಸೂಸುತಿರುತಿರೆ॥ ಇರದೆಯನ್ನಹೃದಯಕಮಲ। ಹರಿಯಪೀ
ಠದಲ್ಲಿಷಡಾ। ಕ್ಷರಿಯವರನಮೊಪ್ಪಿಸೊಗಸಿರಾಜಿಸಿರ್ದನು॥ ೩॥

(೧೬) ಟೀ। ಎಲೈ— ಮನವೇ। ಚಂದ್ರಸೂರ್ಯರನ್ನೇ ತಾಳ
ವಾಗಿ ಮಾಡಿಕೊಂಡು ಮದ್ದುಭಾಪು ಎನ್ನುವಹಾಗೆ ತಾಂಡವಲೀಲೆಯ
ನ್ನು ತೋರುವ ತಾಂಡವೇಶ್ವರನನ್ನು ನಿನ್ನೊಳಗೆ ಇರಿಸು, ನಂದಕಾ

ದಿ ಗಣಗಳೆಲ್ಲಾ ನಮಃಚಮಕಗಳೂ ಶತರುದ್ರೀಯ್ಯ ಮೊದಲಾದವುಗ ಳಿಂದ ಭಜಿಸುತ್ತಿರಲು, ಧಿಮಿಃಧಿಂಧಿಮಿ ಎಂಬುವ ವಾದ್ಯದ ಲೀಲೆ ಯುಳ್ಳಾತನಾಗಿಯೂ, ನಿರ್ಮಲವಾದ ವೀಣೆಯ ಸುಸ್ವರದಿಂದ ಸರಿಗಮ ಮೊದಲಾದ ಸ್ವರಗಳನ್ನು ನುಡಿಸುವ ತುಂಬುರ ನಾರದಾದಿಗಳೊಡನೆ ಕೂಡಿ ನಾಟ್ಯವಾಡುವ ಲೀಲೆಯುಳ್ಳಾತನನ್ನು ನಿಮ್ಮೊಳಗೆ ಕರುಣಿಸು ಪಾದದ ಘಟ್ಟಣೆಗೆ ಭೂಮಿಯೂ, ಜಲವೂ ಸರಿಸಮಾನವಾಗಿ ಮಟ್ಟವಾ ಗಲು, ಪರಿವಾರವಾದ ಪ್ರಮಥರೆಲ್ಲಾ ಸಾರೂಪ್ಯ ಮುಕ್ತಿ ಸುಖಾನುಭ ವದಿಂದ ಅನೇಕ ಶಿವರೂಪಿಗಳಾಗಿ ಇರುತ್ತಿರಲು, ಕೈಚಪ್ಪಾಳೆಗಳಿಂದ ಬೆಟ್ಟಗಳು ಉರುಳಿ ಬೀಳುತ್ತಿರಲು, ಹೂಮಳೆಯಹಾಗೆ ಆಕಾಶದಿಂದನ ಕ್ಷತ್ರಗಳು ಉದುರಿಬಿದ್ದು ನಷ್ಟವಾಗುತ್ತಿರಲು, ತಾಂಡವ ಲೀಲೆಯಂನು ತೋರಿದಾತನನ್ನು ನಿನ್ನೊಳಗೆ ಕಃಣಿಸು, ದೇವತೆಗಳೆಲ್ಲಾ ಜಯಜಯೂ ಅನ್ನಲು. ವಿಷ್ಣುದೇವ ಇಂದ್ರಾದಿಗಳೆಲ್ಲಾ ಸ್ವಸ್ತಿಯಂದೆನ್ನಲು, ಮುನಿಗೆ ಳೆಲ್ಲಾ ಆಶೀರ್ವದಿಸಿ ಮಂತಾಕ್ಷತೆಗಳನ್ನು ಚೆಲ್ಲುತ್ತಿರಲು, ಎಡೆಬಿಡ ದೆ ನನ್ನ ಹೃದಯಕಮಲವೆಂಬುವ ಸಿಂಹಾಸನದಲ್ಲಿ ಷಡಕ್ಷರಿರೂಪಿಯೂ ದ ಶಿವನು ಒಪ್ಪಿ ಪ್ರಕಾಶಿಸಿ ಕಂಗೊಳಿಸುವಾತನಾಗಲಿ ಯೆಂದು ತಾಂಡ ವಲೀಲಾ ವಿನೋದಿಯಾದ ಪರಶಿವ ಧ್ಯಾನವನ್ನೂ ಆತನ ಸಚ್ಚರಿತ್ರವಂ ನೂ ಪೇಳ್ದರೆಂಬುದೀ ಪದದ ತಾತ್ಪರ್ಯ. ... ❋

(೧೭) ರಾಗ - ಭೋಗಷಟ್ಪದಿ— ಎಡರುಕಂಟಕಗಳುಬಂದು। ತೊಡರಿಕಾಡುವಲ್ಲಿಶಿವನ। ಬಿಡದೆನೆನೆಯುವಾಮನಪದದೆಂದಿಗಪ್ಪುದೊ॥ ಪ ॥ ಹಸಿವುತೃಷೆಗಳೆಡಸಿತನುವ । ಹೊಸೆದುಹುಸಿಯಮಾಡುತಿರಲು।ಬಿಸಿ ಲುಕಾಲಪತ್ತಿಬೆಂಕಿನೆತ್ತಿವಡರಲೂ । ಕುಸಿದುಕಣ್ಗಿಧರೆಗೆಬಿದ್ದು । ಅಸುವ ನಳಿವಸಮಯದಲ್ಲಿ । ಸಸಿನೆಬಿಡದೆಶಿವನನೆನೆವುದೆಂದಿಗಪ್ಪುದೊ ॥ ಶಿರವ ಹರಿದುತುಂಡುಮಾಗಿ। ಧರೆಗೆವುರುಳಿಬಿದ್ದಬಳಿಯ। ಗುರುವೆಹರನಮಃಶಿ ವಾಯನೆರಹಿನಾಲಿಗೆ ॥ ಇರದೆಮರಳಿಮುಂಡಕಡಹಿ। ಹೊರಳಿಮಗಚಿಶಿ ವನಕಡೆಗೆ । ಕರವಮುಗಿವಬಲುಮೆಯೆನಗೆಯೆಂದಿಗಪ್ಪುದೊ ॥ ೨॥ ಆಡ ವಿಯೊಳಗೆಸೊಕ್ಕಿದಾನೆ । ತೊಡರಿಬಂದುಅಡ್ಡಗಟ್ಟಿ । ಕಡಹಿಕಾಲಿನಿಂದ ಮೆಟ್ಟಿಸುಂಡಿಲಿಂದಲೀ ॥ ಹಿಡಿದುಸೀಳಿಹೋಳನೆರಡ । ತೊಡಹಿತಿಂಬು ತಿರಲುಶಿವನ । ಬಿಡದೆನೆನೆವಮನದಬಲುಮೆಯೆಂದಿಗಪ್ಪುದೋ॥ ೩ ॥ ೬

ತುನಿದ್ರೆಗೈವುತಿರಲು । ಛೀಶಿಬಡಿಸಿಸ್ವಪ್ನದಲ್ಲಿ । ಭೂತಭೇತಾಳಂಗಳ್ಘೋ
ರರೂಪಿನಿಂ ॥ ಘೂತಿಸುತ್ತಲಿರಲುವುನವು ! ಯೂತಕಂಜದಂತೆಭ
ತೆ । ನಾಥನಡಿಯುನೆನೆವಬಲುವೆುಯೆಂದಿಗಪ್ಪುದೋ ॥ ೪ ॥ ಅಡವಿಯಲ್ಲಿ
ರುವಪಥದಿ । ಪಡುತಬಂದುಕಂಡುಬೇಗೆ । ಅಡರಿತನುವನೆಲ್ಲವುುಸು
ಹೋಹ-ವಾಗಲೂ ॥ ಕೆಡದುಉರುಳಿತನುವಪ್ರಾಣ । ಬಿಡುವಸವು
ದಲ್ಲಿಶಿವನ । ಬಿಡದೆನೆನೆವವುನದಬಲುವೆುಯೆಂದಿಗಪ್ಪುದೋ ॥ ೫ ॥ ಜ್ವರ
ಳಡಸಿತನುವಸುಟ್ಟು । ಕರಿಯವುುರಿಯವೂಡುತಿರಲು । ಸರಿವುತೆನು
ಬಾವುಬಾಗಿದಳೆಗಳಿಂದಲೀ ॥ ಚರಿಸದಂತೆಯೇಳದಂತೆ । ವುರುಳದಂ
ವೂಡುವಾಗ । ಹರನನೆನವವುನದಬಲುವೆುಯೆಂದಿಗಪ್ಪುದೋ ॥ ೬ ॥ ನರ
ವನುಡಿವತೊಡುವತುಂಬುವ । ಉಡುವತೊಡುವನಿದ್ರಪ್ರಾಣ । ಬಿಡು
ಸವುಯದಲ್ಲಿಶಿವನನೆನೆವವುನವನೂ ॥ ವೃಡಷಡಕ್ಷರಾಂಕನಿವ್ಮ । ಬಿಡ
ದಬೇಡುತಿಹೆನುನಾನು । ಪಡೆದೆಸಕಲವಾದಪದಗಳೆನ್ನನೊಲ್ಲೆನೂ ॥ ೭ ॥

(೧೭) ಟೀ॥ ವಿಪತ್ತುಗಳೂ ಸಂಕಟಗಳೂ ಪ್ರಾಪ್ತವಾಗಿ ಆವರಿಸಿಕೊಂಡು ಕಾಡುತ್ತಿರುವಲ್ಲಿ ಸದಾಶಿವನನ್ನು ಧ್ಯಾನಿಸುವ ಮನವುಯೂವಾಗ್ಯೆ ಉಂಟಾಗುವದೋ ? ಹಶಿವೆಯೂ ಬಾಯಾರಿಕೆಯೂ ಹೆಚ್ಚಾಗಿ ಶರೀರವನ್ನು ಬಾಧಿಸಿ ನಾಶಮಾಡುತ್ತಿರಲು, ಬಿಸಿಲು ಕಾಲವು ಹತ್ತಿ ನೆತ್ತಿಗೆ ಬೆಂಕಿ ವ್ಯಾಪಿಸಲು, ಕೃಶವಾಗಿ ಕೊರಗಿ ಭೂಮಿಗೆ ಬಿದ್ದು ಜೀವ ಹೋಗುವ ಹೊತ್ತಿನಲ್ಲಿ ದೃಢವಾಗಿ ಶಿವನನ್ನು ಎಡೆಬಿಡದೆ ಧ್ಯಾನಿಸುವದು ಎಂದಿಗೆ ಉಂಟಾಗುವದೋ ? ತಲೆಕತ್ತರಿಸಲ್ಪಟ್ಟು ತುಂಡಾಗಿ ಭೂಮಿಗೆ ಉರುಳಿಕೊಂಡಲ್ಲಿ ಗುರುವೆ, ಹರಾ ! ನಮಃಶಿವಾಯ ಎಂಬುವದನ್ನು ನಾಲಿಗೆ ವಿಸ್ತರಿಸಿದ ತರುವಾಯ ಮುಂಡವು ಭೂಮಿಗೆ ಬಿದ್ದು ಹೊರಳಿ ಮಗುಚಿಕೊಂಡು ಶಿವನ ಕಡೆಗೆ ಕೈಗಳನ್ನು ಮುಗಿಯುವ ಮನೋಬಲವು ಎನಗೆ ಎಂದಿಗೆ ಉಂಟಾಗುವದೋ ? ಅರಣ್ಯದಲ್ಲಿ ಮದ್ದಾನೆಯು ಸುತ್ತಿಕೊಂಡು ಬಂದು ಅಡ್ಡಗಟ್ಟಿ ಕಾಲಿಂದ ತುಳಿದು ಕೆಡವಿ ಸೊಂಡ್ಲದಿಂದ ಹಿಡಿದು ಸೀಳಿ ಎರಡು ಹೋಳುಗಳನ್ನು ತಿನ್ನುತ್ತಿರಲು, ಶಿವನಂನು ಎಡೆಬಿಡದೇಧ್ಯಾನಿಸುವ ಮನದ ಬಲುಮೆಯು ಯೂವಾಗ್ಯೆ ಉಂಟಾಗುವದೋ ? ಮೈಮರೆತು ನಿದ್ದೆ ಮಾಡುತ್ತಿರಲಾಗಿ ಭೂತ ಭೇತಾಳಗಳು ಘೋರವಾದ ರೂಪಿನಿಂದ ಕನಸಿನಲ್ಲಿ ಬಂದು ಭಯಪಡಿಸಿ ಸೊಡೆ

ಯುತ್ತಾ ಇರಲು, ಮನವಾದದ್ದು ಯೊತಕ್ಕೂ ಹೆದರದಂತೆ ಭೋತೇಶನಾದ ಶಿವನನ್ನು ಧ್ಯಾನಿಸುವ ಬಲುಮೆಯು ಎಂದಿಗೆ ಉಂಟಾಗುವದೋ ? ಅಡವಿಯಲ್ಲಿರುವ ಮಾರ್ಗದಲ್ಲಿ ಹೋಗುವಾಗ ಕಾಡುಬೇಗೆ ಬಂದು ಆವರಿಸಿಕೊಂಡು ಶರೀರವೆಲ್ಲಾ ದಹಿಸಿ ಹೋಗುವಕಾಲದಲ್ಲಿ ದೇಹಬಿಟ್ಟು ಜೀವವು ಹೋಗುವ ಸಮಯದಲ್ಲಿ ಶಿವನನ್ನು ಎಡೆಬಿಡದೆ ಧ್ಯಾನಿಸುವ ಮನದ ಬಲುಮೆಯು ಎಂದಿಗೆ ಉಂಟಾಗುವದೋ ? ರಾಜಕ್ಷಯಾದಿ ಜ್ವರಗಳು ಬಂದೊದಗಿ ಶರೀರವನ್ನು ದಹಿಸಿ ಇದ್ದಲಿಯಾಗಿ ಮಾಡುತ್ತಿರಲು ಶರೀರವು ಕುಗ್ಗಿ ಬೊಗ್ಗಿ ಕೊಂಡಾದರು ನಡಿಯುವದಕ್ಕೆ ಆಗದಹಾಗೆಯೂ, ಏಳದಹಾಗೆಯೂ, ಕೂಡದಹಾಗೆಯೂ, ಉರಳದಹಾಗೆಯೂ, ಮಾಡುವಸಮಯದಲ್ಲಿ ಪಾಪ ಪರಿಹಾರಕನು ಅಥವಾ ಕಾಲರುದ್ರರೂಪಿಯಾದ ಹರನನ್ನು ಧ್ಯಾನಿಸುವ ಮನದ ಬಲುಮೆಯು ಎಂದಿಗೆ ಯುಂಟಾಗುವದೋ ? ನಡೆಯುವಾಗಲೂ, ನುಡಿಯುವಾಗಲೂ, ಹಾಡುವಾಗಲೂ, ತುಂಬುವಾಗಲೂ, ಉಡುವಾಗಲೂ, ಕೊಡುವಾಗಲೂ, ನಿದ್ದೆಮಾಡುವಾಗಲೂ, ಸಾಯುವಾಗಲೂ, ಶಿವನನ್ನು ಧ್ಯಾನಿಸುವ ಮನವನ್ನು, ಎಲೈ— ಷಡಕ್ಷರಾಂಕನಾದ ಪರಶಿವನೇ ! ನಿನ್ನನ್ನು ಬೇಡುತ್ತಿರುವೆನು, ಮತ್ತು ನಾನು ನಿನ್ನೊಳಗೆ ಲೀನವಾಗುವ ಮನವನ್ನಲ್ಲದೆ ತರತರವಾದ ಮತ್ತ್ಯಾವದನ್ನೂ ಕೇಳಲೊಲ್ಲೆನೆಂದು ಈ ಪದದಿಂದ ಪ್ರಾಣಾವಸಾನ ಕಾಲದಲ್ಲಿ ಯಾದರೂ ಶಿವಧ್ಯಾನವನ್ನು ಬಿಡದೆ ಆಚರಿಸಬೇಕೆಂಬುವದನ್ನು ಪೇಳಿದರೆಂದು ತಾತ್ಪರ್ಯವು॥ *

(೧೮) ರಾಗ- ಭೋಗಷಟ್ಪದಿ॥ ತಪವವಿದ್ಯಸಹಸಯೋಗಜಪವ್ರತವ ನಡಿಸಬಹುದು । ಗುಪಿತಲಿಂಗದಲ್ಲಿಮನವನಿಡಲಿಕಾಗದೂ॥ ಪಲ್ಲ॥ ಶೈಲತಟಗಳಲ್ಲಿಪರ್ಣ । ಶಾಲೆಯನ್ನುಗಟ್ಟಿಕಂದ । ಮೂಲಫಲವಸವಿದುತಪವಮಾಡಿವಿದ್ಯದಾ ॥ ಜಾಲವನ್ನುಕಲಿತುಇಂದ್ರ । ಜಾಲಗಳನುತೋರಬಹುದು । ಮೇಲೆಲಿಂಗದಲ್ಲಿಮನವನಿಡಲಿಕಾಗದೂ॥ ೧॥ದೂರದೃಷ್ಟಿದೂರಶ್ರವಣ । ಮಾರಣಾದಿಮಂತ್ರತಂತ್ರ । ಯೋರಿಗಗನದಲ್ಲಿಚರಿಸಿ ನೆನದಡಾಲಿಗೆ॥ ಸೇರುವವನುಪಡೆಯಬಹುದು । ಮಾರಿಯಕ್ಷಿಣಿಯರರಚಿಸಿ । ಸೇರಿಲಿಂಗದಲ್ಲಿ ಮನವನಿಡಲಿ ಕಾಗದೂ॥ ೨ ॥ ಹುಲಿಯಕಾಡೆಸೆಣಸಬಹುದು । ಮಲತಗಜದಯಿದಿರಿನಲ್ಲಿ । ಚಲಿಸದಂತೆನಿಂ

ದುಕಾದಬಹುದುಸಿಂಹದಾ ॥ ಅಗಲಬಹುದುಮೀಸೆಯಂನು। ಉಳಿದ
ಸಹಸವಂತರಿರಲಿ । ವೊಲಿದುಲಿಂಗದಲ್ಲಿ ಮನವನಿಡಲಿಕಾಗದೂ ॥ ೩
ಕುಂಭಕಾದಿಯೋಗದಿಂದ । ಕುಂಭಿಣಿಯನುಬಿಟ್ಟುಗಗನಾ । ಡಂಬ
ವನುಯೇರಬಹುದುಆದಿಯಿಲ್ಲದೇ ॥ ಸಂಭ್ರಮದಲಿನಿತ್ಯಕೋಟಿ। ತು
ಬಜಪವನಡಿಸಬಹುದು । ನಂಬಿಲಿಂಗದಲ್ಲಿಮನವನಿಡಲಿಕಾಗದೂ॥ ೪
ಅನ್ಯವಾಕ್ಯವನ್ಯಜಪವ । ನನ್ಯದೈವಗಳನುಬಿಟ್ಟು । ಉನ್ನತದಲಿನಡೆಸಬ
ಹುದುಸಕಲವ್ರತವನೂ ॥ ಚನ್ನಷಡಕ್ಷರೀಯಲಿಂಗ। ತನ್ನತಾನೇವೊಲಿ
ಯದನಕ । ವಿನ್ನುಲಿಂಗದಲ್ಲಿಮನವನಿಡಲಿಕಾಗದೂ ॥ ೫

(೧೮) ಟೀ॥ ತಪವೂ, ವಿದ್ಯವೂ, ಸಾಹಸವೂ, ಯೋಗವೂ, ಜ
ಪವೂ, ವ್ರತವೂ, ಈ ವೊದಲಾದವುಗಳನೆಲ್ಲಾ ನಡಿಸ ಬಹುದಾದಾಗ್ಯೂ
ಗುಪ್ತವಾದಲಿಂಗದಲ್ಲಿ ಮನವನ್ನು ಇಡಲಿಕ್ಕಾಗದು. ಬೆಟ್ಟಗಳಮೇಲೆ ತ
ರಗೆಲೆ ಮನೆಗಳನ್ನು ಕಟ್ಟಿಕೊಂಡು, ಗೆಡ್ಡೆಗೆಣಸುಗಳನ್ನು ತಿಂದು, ತಪ
ಸ್ಸುಮಾಡಿ ಅನೇಕವಾದ ವಿದ್ಯಗಳನ್ನು ಅಭ್ಯಾಸಮಾಡಿ, ಇಂದ್ರಜಾಲ
ವಿದ್ಯೆಗಳನ್ನು ತೋರಬಹುದಾದಾಗ್ಯೂ, ತರುವಾಯ ಲಿಂಗದಲ್ಲಿ ಮನ
ವನ್ನು ಇಡಲಿಕ್ಕಾಗದು. ದೂರದೃಷ್ಟಿಯೂ, ದೂರಶ್ರವಣವೂ, ಮೂರ
ಣಾದಿ ಷಟ್ಪ್ರಯೋಗಗಳುಳ್ಳ ಮಂತ್ರಗಳೂ, ಖೇಚರಗತಿಯೂ, ನೆನೆ
ದಮಾತ್ರದಿಂದ ಕಂಣಿಗೆ ಬೀಳುವ ಪದಾರ್ಥವನ್ನು ಹೊಂದುವದೂ,
ಈ ವೊದಲಾದವುಗಳನ್ನೆಲ್ಲಾ ಪಡೆಯಬಹುದಾದರೂ, ಮೂರಿ ಯಕ್ಷಿಣಿ
ಗಳನ್ನು ಮಾಡಿ ಬೇಕಾದದ್ದನ್ನು ಹೊಂದಬಹುದಾದರೂ ಲಿಂಗದಲ್ಲಿಸೇರಿ
ಮನವನ್ನು ಇಡಲಿಕ್ಕಾಗದು, ಹುಲಿಯೊಂದಿಗೆ ಜಗಳವಾಡಬಹುದು;
ಎದುರುಬಿದ್ದ ಆನೆಯ ಎದುರಿನಲ್ಲಿ ಸ್ಥಿರವಾಗಿನಿಂತು ಜಗಳವಾಡಬಹು
ದು. ಸಿಂಹದ ಮೀಸೆಯನ್ನು ಹಿಡಿದು ಅಲ್ಲಾಡಿಸ ಬಹುದು. ಹೀಗೆಮಾ
ಡುವ ಸಾಹಸವಂತರಿದ್ದಾಗ್ಯೂ ಪ್ರೀತಿ ಪುರಸ್ಸರವಾಗಿ ಲಿಂಗದಲ್ಲಿ ಮನ
ವನ್ನು ಇಡಲಿಕ್ಕಾಗದು, ಕುಂಭಕಾದಿ ಯೋಗವಿದ್ಯಾಭ್ಯಾಸದಿಂದ ಭೂ
ಮಿಯುನ್ನು ಬಿಟ್ಟು ಆಕಾಶಮಂಡಲಕ್ಕೆ ಏರಬಹುದು, ಕೊನೆಮೊದಲಿಲ್ಲ
ದೆ ಸಂಭ್ರಮದಿಂದ ದಿನವಹಿ ಕೋಟಿಪರಿಮಿತವಾದ ಜಪವನ್ನು ನಡಿಸಬ
ಹುದು. ವಿಶ್ವಾಸಿಸಿ ಲಿಂಗದಲ್ಲಿ ಮನವನ್ನು ಇಡಲಿಕ್ಕಾಗದು. ಬೇರೆ ವಾ
ಕ್ಯಗಳನ್ನೂ ಬೇರೆ ಜಪವನ್ನೂ ಬೇರೆ ದೈವವನ್ನೂ ಬಿಟ್ಟು, ಸಕಲವ್ರತಗ

ಳನ್ನೂ ನಡೆಸಬಹುದು. ಆದರೆ ಶಿವಮೂರ್ತಿಯೂದ ಷಡಕ್ಷರ ಲಿಂಗವು ತನ್ನನ್ನು ತಾನೇ ಒಲಿಯುವ ಪರ್ಯಂತರವೂ ಲಿಂಗದಲ್ಲಿ ಮನವನ್ನು ಇಡ ಲಿಕ್ಕಾಗದೆಂದು ಈ ಪದದಿಂದ ಷಡಕ್ಷರ ಲಿಂಗಾನುಗ್ರಹವಿಲ್ಲದೆ ಎಂಥಾ ದುರ್ಘಟವಾದ ಕಾರ್ಯವನ್ನು ನಡೆಸಿದಾಗ್ಯೂ ಆತ್ಮವೇತ್ತಾಗದೆ ಮನವು ಲಿಂಗೈಕ್ಯವನ್ನು ಪಡೆಯಲಾರದೆಂದು ಪೇಳಿದರೆಂಬ ತಾತ್ಪರ್ಯವು॥ *

(೧೯) ರಾಗ - ಭೋಗಷಟ್ಪದಿ — ಅಂದಿನವರಿಗಿಂದಿನವರು । ಹೊಂದಿ, ಹೋಲಲರಿಯದೆಂಬ । ಕುಂದುನುಡಿಯಕಿವಿಯನೋಡಿಕೇಳ ಲಾಗದೂ॥ ಪಲ್ಲ ॥ ಕಡಿದಶಿರವಪಡೆದರವರು । ಮಡಿದನರನಪಡೆದರವ ರು। ಜಡಜಸಖನತಡೆದರಂದು ಯಿಂದಿನವರುವೇ ॥ ಕಡಿದಮಡಿದಜಡಜ ಸಖನ । ಕಡೆಯಪಡೆಯಲಾರರೆಂಬ । ಜಡರನುಡಿಯಕಿವಿಯನೊಡ್ಡಿಕೇಳ ಬಾರದೂ ॥ ಸುಟ್ಟನಿಜದಿಬೆಳೆದರವರು । ಕೆಟ್ಟಕಂಣಪಡೆದರವರು । ನೆಟ್ಟ ಕೊರಡುಚಿಗುತಿತೆಂಬರಿಂದಿನವರುವೇ। ಸುಟ್ಟಕೆಟ್ಟನೆಟ್ಟಕೊರಡು । ದೃಷ್ಟ ವಾಗದವರಿಗೆಂಬ । ಭ್ರಷ್ಟನುಡಿಯಕಿವಿಯನೊಡ್ಡಿಕೇಳಲಾಗದು॥ ೨ ॥ ತ ನುವಕೊಟ್ಟರಂದಿನವರು ಧನವಕೊಟ್ಟರಂದಿನವರು। ವನಿತೆಯರನು ಕೊ ಟ್ಟರಂದು ಯಿಂದಿನವರುವೇ ॥ ತನುವಧನವವನಿತೆಯರನ। ಇನಿತನೀಯ ಲಾರರೆಂಬ । ಬಿನಗುನುಡಿಯಕಿವಿಯನೊಡ್ಡಿಕೇಳಲಾಗದೂ ॥ ೩ ॥ ತಲೆ ಯಹೊಡೆದರಂದಿನವರು । ಹೊಳೆಯತಡೆದರಂದಿನವರು । ಚಲುವಮಗ ಳಮುಡಿಯಕೊಬ್ಬರಿಂದಿನವರುವೇ ॥ ತಲೆಯಹೊಳೆಯಮಗಳಮುಡಿ ಯ । ವೊಲಿದುತೋರಿಕೊಡರುಯೆಂಬ। ಹೊಲೆಯನುಡಿಯಕಿವಿಯನೊ ಡ್ಡಿಕೇಳಲಾಗದೂ ॥ ಅಂದಿಗೊಬ್ಬಶಿವನಮೇಣು । ಇಂದಿಗೊಬ್ಬ ಶಿವನ ದುಂಟೆ। ಮಂದನುಡಿದಪಾತಕರ್ಗೆ ನರಕತಪ್ಪದೂ ॥ ಅಂದಿನವರುಯಿಂ ದಿನವರು । ಯೆಂದುನುಡಿಯಭೇದನಿನಗೆ। ತಂದೆಷಡಕ್ಷರೀಯಲಿಂಗಕುಂ ದುರೊಲಿವನೂ ॥ ... ... ೪॥

(೧೯) ಟೀ॥ ಪೂರ್ವಕಾಲದಲ್ಲಿದ್ದ ಮಹಾನುಭಾವರಾದ ಶಿವಶರ ಣರಿಗೆ ಯೀಗಿನವರು ಸರಿಸಮಾನ ಹೋಲುವರೆಂಬುವ ಮಾತನ್ನು ಕಿವಿ ಯಿಂದ ಕೇಳಬಾರದು. ಅಂದಿನ ಕಾಲದಲ್ಲಿದ್ದವರು ಕಡಿದ ಶಿರಸ್ಸಂನು ಪುನಹಾ ಹೊಂದಿದರು, ಅವರು ಸತ್ತಮನುಷ್ಯನನ್ನು ಬದುಕಿಸಿದರು; ಅವರು ಮನ್ಮಥನನ್ನು ತಡೆದರು, ಈಗಿನವರು ಅಂಥಾ ಮಹಾನುಭಾ

ವರನ್ನು ಕುರಿತು— ಅವರು ಕಡಿದ ಶಿರವಂನೂ ಮಡಿದ ಮನುಷ್ಯ ನ್ನೂ ಪಡೆಯಲಾರರೆಂತಲೂ, ಜಡಜಸಖ ನೆನಿಸುವ ಕಾಮನನ್ನು ಡೆಯಲಾರರೆಂತಲೂ, ಹೇಳುವ ಬುದ್ಧಿ ಹೀನರಮಾತಂನು ಕಿವಿಕೊಟ್ಟು ಕೇಳಬಾರದು, ಅಂದಿನ ಮಹಾನುಭಾವರು ಸುಡಲ್ಪಟ್ಟು ಪುನಃ ನಿಜದಿಂದ ಬೆಳದರು. ಅವರು ಕೆಟ್ಟಂಥಾ ದೃಷ್ಟಿಯನ್ನು ಪಡೆದರು, ವರು ನೆಟ್ಟ ಮೊಣತುಂಡು ಚಿಗುರಿತು. ಈಗಿನವರು ಅಂಥವರನ್ನು ಕು ತು ಸುಟ್ಟುಕೆಟ್ಟ ನೆಟ್ಟಿಕೊರಡೆಂಬುದು ಅವರಿಗೆ ಕಾಣಿಸದು ಎಂದು ಹೇಳ ವಭ್ರಷ್ಟರಮಾತನ್ನ ಕಿವಿಕೊಟ್ಟು ಕೇಳಬಾರದು. ಆ ಕಾಲದ ಮಹಾತ್ಮ ರು ತಮ್ಮ ದೇಹವನ್ನೇ ಕೊಟ್ಟರು; ಅವರು ಧನವನ್ನು ಕೊಟ್ಟರು; ಅ ಉ ತಮ್ಮ ಸ್ತ್ರೀಯರನ್ನು ಕೊಟ್ಟರು, ಆದರೆ ಈಗಿನವರು ಅಂಥಾ ಮ ಹಾತ್ಮರನ್ನು ಕುರಿತು— ಅವರು ತನುಧನ ಪ್ರಾಣಾದಿಗಳನ್ನು ಕೊಡ ಲಾರರೆಂದು ಹೇಳುವ ತುಚ್ಛಮಾತನ್ನು ಕಿವಿಕೊಟ್ಟು ಕೇಳಬಾರದು, ಆ ಕಾಲದಲ್ಲಿದ್ದ ಮಹಾತ್ಮರು ತಲೆಯನ್ನು ಹೊಡೆದರು; ಅವರು ನದೀಪ್ರ ವಾಹವನ್ನು ನಿಲ್ಲಿಸಿದರು; ಅವರು ಸೌಂದರ್ಯವತಿಗಳಾದ ತಂಮ ಮ ಕ್ಕಳಮುಡಿಯನ್ನು ಕೊಟ್ಟರು, ಈಗಿನವರು ಅಂಥವರನ್ನು ಕುರಿತು, ಅವರು ತಲೆಯನ್ನು ಕೊಡಲಾರರು; ಅವರು ಹೊಳೆಯನ್ನು ತಡೆಯ ಲಾರರು, ಅವರು ಚಲುವಾದ ಮಗಳ ಮುಡಿಯನ್ನು ಕೊಡಲಾರರು, ಎಂಬದಾಗಿ ಹೇಳುವ ಚಂಡಾಲರ ಮಾತನ್ನು ಕಿವಿಯಿಂದ ಕೇಳಬಾರ ದು, ಆ ಕಾಲದಲ್ಲಿ ಒಬ್ಬ ಶಿವನೂ ಈ ಕಾಲಕ್ಕೆ ಮೊಬ್ಬ ಶಿವನೂ ಉಂಟೇ? ಹೀಗೆ ಭೇದೋಕ್ತಿಯನ್ನಾಡುವ ಪತಿತರಿಗೆ ನರಕವೇ ಆಗುವದು ಅಂ ದಿನವರೆಂದೂ ಇಂದಿನವರೆಂದೂ ಭೇದವಂನೂ ಹೇಳುವ ನಿನಿಗೆ ಸ ರ್ವಜನಕನಾದ ಷಡಕ್ಷರೀಯ ಲಿಂಗಮೂರ್ತಿಯು ಕೊರತೆ ತೋರದ ರೀತಿಯಲ್ಲಿ ಪ್ರಸನ್ನನಾಗುವನು ಎಂದು ಈ ಪದದಿಂದ ಶಿವಶರಣರಂ ನು ದೂಷಿಸುವ ಪಾತಕಿಗಳ ಮಾತನ್ನು ಕಿವಿಕೊಟ್ಟು ಕೇಳ ಬಾರದೆಂ ದೂ, ಅಂದು ಇಂದು ಎಂಬುವ ಭೇದ ಬುದ್ಧಿಯನ್ನೆಸಗಲಾಗದೆಂದೂ, ಶ್ರೀಷಡಕ್ಷರ ಲಿಂಗ ಮೂರ್ತಿಯು ಪ್ರಸನ್ನನಾದರೆ ಶಿವದ್ರೋಹಿಗಳ ದೆ ಸೆಯಿಂದುಂಟಾದ ಕೊರತೆಯು ಪರಿಹಾರವಾಗಿ ಭಗವನ್ಮುಖೋಲ್ಲಾಸ ಕ್ಕೆ ಪಾತ್ರನಾಗುವನೆಂದೂ ಹೇಳ್ದರೆಂದು ತಾತ್ಪರ್ಯವು ॥ ... *

(೨೦) ರಾಗ - ಪರಿವರ್ಧಿನಿಷಟ್ಪದಿ— ಕಂಗೆಡಲ್ಯಾತಕೆಕಳವಳಿ ಸೀಯೆ। ನ್ನಂಗಜಮಾಯೆಗೆಮನಭಯದಿಂ। ಲಿಂಗದಸೂತ್ರವಪಿಡಿದಿರು ತಿರೆಯೆನ್ನಂಗ್ದದಿಭಯವ್ಯಾಕೆ ॥ ಪ ॥ ಅಂಧಕನಿಗೆಸತ್ಯಾರ್ಥವತೋರುವ। ಚಂದವಮೂಕಗೆಮಾತುಂಜೀವಿತ। ಸಿಂಧುವನೊಳಗಳಹೊಳವನುತಪ್ಪಿಸಿ ಪಥವನುತೋರ್ಪಂತೆ ॥ ಹಿಂದಳವಾಸನೆಯುಪರಿಹರಿಸುತ್ತಾ। ಮುಂದಳಸದ್ಗತಿಯನುತೋರುವಘನ। ಸಂದಪುರಾತರವಚನಗಳಿರುತಿರೆಯಾತರಭಯವೆನಗೆ ॥ ೧ ॥ ವರಸಂಜೀವನದೌಷಧವಿರುತಿರೆ। ಮರಣದನೋರ್ರೆಗೆಅಂಜಲದ್ಯಾತಕೆ। ಪರುಷದಕಣಿತವ್ಮ್ಮನೆಯೊಳಗಿರುತಿರೆಬಡತನಕಂಜುವರೇ ॥ ಶರಣರನಿಧಿಯೆಂದೆನಿಸುವಪಂಚಾ। ಕ್ಷರಿಜಿಹ್ವಾಗ್ರದಕೊನೆಯೊಳಿರುತಿರೆ। ದುರಿತಕ್ಕಂಜುವರೇಬಡಮನವೇನಂಬಿರುಭಯಬೇಡಾ॥ ೨॥ ಅಮೃತಾಂಬುಧಿಯಿರೆಹಶಿವಿಸಭಯವೇ। ದ್ಯುಮಣಿಯುತಾನಿರೆತಿಮಿರದಭಯವೇ।ಹಿಮಭಯವೇತಾನಗ್ನಿಯಸನ್ನಿಧಿ ಯಲಿಮೂರ್ತವಮಾಡೀ ॥ ಕ್ರಮಗೆಡಲ್ಯಾಕೈಚಿದ್ಘನಮೂರುತಿ।ಯಮಲನಿರಾಮಯನಿರ್ಗುಣನಿಷ್ಕಲ। ಅಮಲಷಡಕ್ಷರಿಲಿಂಗದಸನ್ನಿಧಿಯಿರ್ರೆಭವಭಯವ್ಯಾಕೆ ॥ ೩ ॥

(೨೦) ಟೀ ॥ ನನ್ನ ಮನವೆಂಬುವದು ಈ ತೋರುವ ಮನ್ಮಥನ ಮಾಯೆಗೆ ಕಳವಳಿಸಿ ಭಯದಿಂದ ಕಂಗೆಡುವದು ಯಾತಕ್ಕೆ ? ಲಿಂಗಸೂತ್ರವೆನಿಸುವ ಶಿವಧಾರವನ್ನು ಎನ್ನ ಅಂಗದಲ್ಲಿಹಿಡಿದಿರಲಾಗಿ ಭಯವ್ಯಾಕೆ ? ಜ್ಞಾನಾಂಧನಿಗೆ ನಿಜಾರ್ಥವನ್ನು ತೋರುವಂತೆಯೂ, ಶಿವಪಂಚಾಕ್ಷರೀಮೊದಲಾದ ಮಂತ್ರಗಳಿಲ್ಲದೆ ಮೂಕನಾದವನಿಗೆ ಸದ್ಗುರೂಪದೇಶಾಪಾದಿತವಾದ ಪುನಶ್ಚರಣರೂಪವಾದ ಮಾತನ್ನು ತಿಳಿಸುವಂತೆಯು ಮಾರ್ಗಭ್ರಷ್ಟನಾದವನಿಗೆ ಸನ್ಮಾರ್ಗವನ್ನು ತೋರಿಸುವಂತೆಯೂ, ಪೂರ್ವ್ವಾರ್ಜಿತ ವಾಸನೆಯನ್ನು ಪರಿಹರಿಸುತ್ತಾ ಮುಂದಿನಸದ್ಗತಿಯನ್ನು ತೋರುವ ಘನವುಳ್ಳ ಪುರಾತನರಾದ ಶರಣರ ವಚನಗಳು ಇರುವಲ್ಲಿ ಯೆನಗೆ ಯಾವ ಭಯವಿರುವದು ? ಶ್ರೇಷ್ಠವಾದ ಸಂಜೀವಿನಿಯೆಂಬುವ ದಿವ್ಯೌಷದ ವಿರುತ್ತಿರಲಾಗಿ ? ಮರಣದ ದುರ್ಗಕ್ಕೆ ಹೆದರುವದ್ಯಾಕೆ ? ಪರುಷವೆಂಬುವ ಶಿಲೆಯ ಕಣಿಯು ತನ್ನ ಮನೆಯಲ್ಲಿ ಇರುತ್ತಿರುವಲ್ಲಿ ದರಿದ್ರಕ್ಕೆ ಹೆದರುವರೇ ? ಶಿವಶರಣರ ನಿಧಿಯೆಂದೆನಿಸುವಂಥಾದ್ದಾದ (ನಮಶ್ಶಿವಾಯ) ಎಂಬುವ ಪಂಚಾಕ್ಷರೀ ಮಹಾಮಂತ್ರವು ನಾಲಿಗೆಯತುದಿಯೊಳ

ಗೆ ಇರುತ್ತಿರಲು, ಪಾಪಕ್ಕೆ ಭಯಪಡುವರೇ ? ಎಲೈ— ದೀನವುನ ಇತರವೂದ ಭಯವು ಬೇಡ ! ನಂಬಿಇರು ! ಅವೃತಸಮುದ್ರವಿರು ಲಾಗಿ ಹಶಿವಿನ ಭಯವೇ ? ಸೂರ್ಯನು ಇರುತ್ತಾ ಕತ್ತಲಿನ ಭಯವಿರ ದೇ ? ತಾನು ಯಜ್ಞೇಶ್ವರನ ಬಳಿಯಲ್ಲಿ ಕೂತುಕೊಂಡು ಹಿವುದ ಭ ಘಂಟೇ ? ಎಲೈ— ವುನವೇ ! ನೀನು ಶ್ರವಪಾತಪ್ಪುವದ್ಯಾಕೆ ? ಚಿದ ನಂದ ಸ್ವರೂಪಿಯಾಗಿಯೂ, ನಿರ್ಮಲನಾಗಿಯೂ, ನಿರಾವುಯನಾ ಯೂ, ನಿಷ್ಕಲನಾಗಿಯೂ, ಪರಿಶುದ್ಧನಾಗಿಯೂ ಇರುವ ಷಡಕ್ಷರೀಲಿ ಗದ ಸನ್ನಿಧಾನವು ಇರುತ್ತಿರುವಲ್ಲಿ ಭವ ಭಯವು ಯಾತಕ್ಕ ಎಂದು ಲಿ ಗಸಂಗಿಯಾದ ತನಿಗೆ ಭವಬಂಧವಿರಲಾರದೆಂದು ಈ ಪದದಿಂದದೃಷ್ಟಾ ತರ ಪಡಿಸಿ ಪೇಳಿದರೆಂದು ತಾತ್ಪರ್ಯವು. ...

(೨೧) ರಾಗ ದೇಶಿ— ದೇವತ್ವವೆಂಬುದದಾವುದೆಂದರಿಯರು। ಕ ಳೂವುನವೇ। ಜೀವತ್ವವಳಿದರೆದೇವತ್ವವಪ್ಪುದು। ಕೇಳುವುನವೇ ॥ ಪ॥ ರಿವಕಿಚ್ಚನೆಹೊಕ್ಕುಬೆರೆಯದೆಹೊರಟರೆ । ಕೇಳುವುನವೇ ॥ ನರರುಗಳು ದೇವತ್ವವೆಂದೆಂಬರು । ಕೇಳುವುನವೇ ॥ ೧॥ ಭರದಿಂದಬಂದುಹೊಳೆಯ ವೇಲೆನಡೆದರೆ । ಕೇಳುವುನವೇ ॥ ಅರರೆಅವರಾಚರಿಸಿದೇವತ್ವವೆಂಬರು ಕೇಳುವುನವೇ ॥ ೨ ॥ ಚಿತ್ತದೊಳಿಹವೂತಹೇಳಾಲುವುತ್ಯಾರು। ಕೇಳು ವುನವೇ ॥ ಸತ್ಯವಿದತಿಶಯದ್ದೇವತ್ವವೆಂಬುದು। ಕೇಳುವುನವೇ ॥ ೩॥ ಹ ತ್ತಿಗಗನದಲ್ಲಿನಡೆದರೆಧರೆಯೊಳು। ಕೇಳುವುನವೇ ॥ ಉತ್ತರೋತ್ತರದೇ ವತ್ವವೆಂಬರು । ಕೇಳುವುನವೇ ॥ ೪ ॥ ದೂರದೃಷ್ಟಿದೂರಶ್ರವಣಗಳಿಂದ ಲಿ। ಕೇಳುವುನವೇ ॥ ಸಾರದೃಷ್ಟಹೆಳೆಣದೇವತ್ವದೆಂಬರು । ಕೇಳುವುನ ವೇ ॥ ೫ ॥ ಆರೈವವುನದಿಷಡಕ್ಷರಿಲಿಂಗವ । ಕೇಳುವುನವೇ ॥ ಬೇರಲ್ಲ ದೊಡಗೂಡುಬಲ್ಲರೆದೇವತ್ವ । ಕೇಳುವುನವೇ ॥ ... ೬॥

(೨೧) ಟೀ॥ ಎಲೈ— ವುನವೇ ಕೇಳು ! ಭಿನ್ನವಾದಿಗಳಾದ ಜ ಡರು ದೇವತ್ವವೆಂಬುವದು ಯಾವದೆಂದರಿಯರು. ಜೀವತ್ವವಳಿದು ಅ ಖಂಡವಸ್ತುವೇ ತಾನಾದರೆ ಅದೇ ದೇವತ್ವವೆನ್ನಿಸುವದು. ಎಲೈ— ವು ನವೇಕೇಳು ! ನರರು ಉರಿಯುವ ಅಗ್ನಿಯಲ್ಲಿ ಹೊಕ್ಕು ಹೊರಟದ್ದಾದರೆ ಅದನ್ನು ಬಲ್ಲವರು ದೇವತ್ವವೆಂದು ಹೇಳುವರು. ಎಲೈ— ವುನವೇಕೇ ಳು ! ವೇಗದಿಂದ ಬಂದು, ಹೊಳೆಯುವೇಲೆ ನಡೆದರೆ ಇಂಥಾ ಅದ್ಭುತ

ಪಾದಕಾರ್ಯವನ್ನು ಆಚರಿಸುವದೇ ದೇವತ್ವವೆಂದು ಹೇಳುವರು. ಎಲೈ ಮನವೇ ಕೇಳು ! ಅನ್ಯರಚಿತ್ತದಲ್ಲಿ ಇರುವಮಾತು ಇಂಥಾದ್ದೆಂದು ಹೇಳಿದಮೇಲೆ ಅವರು ಇದು ನಿಜವೆಂದು ತಿಳಿಯುವ ಆಶ್ಚರ್ಯವು ದೇವತ್ವವೆನಿಸುವದು. ಎಲೈ— ಮನವೇ ಕೇಳು ! ಆಕಾಶಕ್ಕೆ ಹತ್ತಿ ಅಂತರಿಕ್ಷದಲ್ಲಿ ನಡೆದರೆ, ಅಂಥಾ ಅನ್ಯೋನ್ಯವೇ ದೇವತ್ವವೆನಿಸುವದು, ದೂರದಲ್ಲಿರುವದನ್ನುನೋಡುವ ದೃಷ್ಟಿಯೂ, ದೂರದಲ್ಲಿರುವದನ್ನುಕೇಳುವಶ್ರೋತ್ರವೂ ವುಳ್ಳವನಾಗಿ ನೋಡಿ ಕೇಳುವದೇ ದೇವತ್ವವೆನಿಸುವದು, ಎಲೈ— ಮನವೇ ಕೇಳು ! ಸಾದರದ ಮನದಲ್ಲಿ ಷಡಕ್ಷರಲಿಂಗವನ್ನು ಭಿನ್ನವಿಲ್ಲದೆ ಒಡಗೂಡಿರುವದನ್ನು ಅರಿತರೇ ಅದೇ ದೇವತ್ವವೆನಿಸುವದೆಂದು ಈ ಪದದಿಂದ ಅದ್ವಯನಾದ ಶರಣನ ಘನತೆಯನ್ನೂ ಲಿಂಗೈಕ್ಯದಿಂದೊದಗುವ ದೇವತ್ವವನ್ನೂ ಪ್ರಕಟಪಡಿಸಿ ಪೇಳಿದರೆಂಬ ತಾತ್ಪರ್ಯವು. ❀

(೨೨) ರಾಗ- ಕಂದಪದ್ಯ ಶಿವಪೂಜಾಷ್ಟಕ.

ಯೆಳೆಮುತ್ತಿನನವರತ್ನದ । ಥಳಥಳಿಸುವ ನೀಲಪವಳಪಚ್ಚೆಯಬೆಳಗಿಂ। ಧಳಧಳಘುಳುಘುಳುನಾದವು। ಹೊಳೆಯೊಳಗಣರಸದಿಲಿಂಗಮಜ್ಜನಗೈಯ್ವೇಂ ॥ ೧ ॥ ಶಶಿಕಾಂತದಪಾಸರೆಯಿಂ। ಹೊಸವಜ್ರದಗುಂಡುಬಂಡೆತುರುಗಿದಗಿರಿಯಿಂ । ದೊಸರುವನಿರ್ಝರಜಲದಿಂ । ಶಶಿಕಳೆಯಂಧರಿಸಿದಂಗೆ ಮಜ್ಜನಗೆಯ್ವೇಂ ॥ ೨ ॥ ಗಗನವನಡರುವಗಿರಿಯೊಳ್। ಲ್ಮಿಗೆಬೆಳೆದಿಹಗುಲ್ಮಲತೆಯವೃಕ್ಷದನೊಳಲೋ ॥ ಳೊಸಗುವಮಡುಡೊಣೆಜಲದಿಂ । ಮಿಗೆಮನದಣಿವಂತೆಲಿಂಗಮಜ್ಜನಗೈಯ್ವೇಂ ॥ ೩ ॥ ಕೆರೆತೊರೆಸರಬೆಂಚೆಗಳಾ। ವೊರತೆಗಳಿಂಕೂಪಕೊಳನನಿರ್ಮಲಜಲದಿಂ ॥ ಸರಸಿಜದೆಸಳಘರ್ಘ್ಯಗಳಿಂ । ಹರನಿಗೆಪುರಹರನಿಗೊಲಿದು ಮಜ್ಜನಗೈಯ್ವೇಂ.೪॥ ಸುತ್ತೊತ್ತಿಬೆಳೆದಬಿಲ್ವಕ । ಕತ್ತರಿಸಿಯೆಕಾತುತಳಿತತಣ್ಣನದಳದೋಳ್॥ ಚಿತ್ತಜವೈರಿಯಚರಣವ। ನರ್ತಿಯೊಳಾಪತ್ರೆಯಿಂದಪೂಜಿಪನೊಲವಿಂ ॥ ೫ ॥ ಸೊಂಪಿನನುಂಪಿನಲೆುಂಪಿಪ। ಗುಂಪಿನಸಂಪಿಗೆಯವನದತಂಪಿನನೆಲಲೋಳ್ । ಕಂಪಿನಸಂಪಿಗೆಯರಳಿಂ । ಬಿಣ್ಪಿನಚಲುವಂಗಪವನ ಪೂಜಿಪೆನೊಲವಿಂ ॥ ಜಾತಿಸುಪಾಟಲಿವೃಕ್ಷ । ವ್ರಾತಂಜೋತೊಡನೆಕಾತುರಹಿಕವನದೋಳ್ ॥ ಮೂತುಳಕುಸುಮದಿಬಿಸದೇ। ಭೂತೇಶನಚರಣಯುಗವ ಪೂಜಿಪೆ ನೊಲವಿಂ ॥ ೬ ॥ ಭೃಂಗಂಬಳಸದಕಣ್ವನ । ಶೃಂಗಾರದ

ವನಗಳೆಲ್ಲಿವರಕುಸುಮಂಗಳಿಂ ॥ ಸಾಂಗಮಾಗಿಷಡಕ್ಷರ। ಲಿಂಗವನ
ವರತರಬಿಡದೆಪೂಜಿಪೆನೊಲವಿಂ ॥ ಈಶಿವಪೂಜಾಷ್ಟಕಮಂ । ಮೋಸರಿ
ದೆಬರೆದುಮೋದಿಪಠಿಸಿದವರ್ಗಂ । ಈಶನುತನ್ನಯಪುರದೊಳ್ । ಭ
ಸುರಗಣಪದವನಿತ್ತುರಕ್ಷಿಪನೊಲವಿಂ ॥ ... ೯

(೨೨) ಟೀ ॥ ಆಣಿಮುತ್ತುಗಳಿಂದಲೂ, ರತ್ನಗಳಿಂದಲೂ, ಇ
ದ್ರನೀಲಗಳಿಂದಲೂ, ಪಚ್ಚೆಗಳಿಂದಲೂ ಕೂಡಿ ಥಳಥಳಿಸುವಂಥಾದ್ದಾ
ಯೂ, ಘುಳುಘುಳಾಯಮಾನವಾದ ಧ್ವನಿಯಿಂದ ರಂಜಿತವಾಗಿಯು
ಇರುವ ನದಿಯಲ್ಲಿನ ಉದಕದಿಂದ ಲಿಂಗಾಭಿಷೇಕವನ್ನು ಮಾಡುವೆನು
ಚಂದ್ರಕಾಂತ ಶಿಲೆಗಳ ಪಾವಟಿಗೆಯಿಂದಲೂ, ನೂತನವಾದ ವಜ್ರಮ
ಯ ಗುಂಡುಗಳಿಂದಲೂ, ಬಂಡೆಗಳಿಂದಲೂ ನಿಬಿಡವಾಗಿರುವ ಪರ್ವ
ದಿಂದ ಪ್ರವಹಿಸುವ ಪ್ರವಾಹದಿಂದ ಲಿಂಗಾಭಿಷೇಕವನ್ನು ಮಾಡುವೆನು
ಆಕಾಶವನ್ನು ಮುಟ್ಟುವಂಥಾದ್ದಾದ ಪರ್ವತದಲ್ಲಿ ಹೆಚ್ಚಾಗಿ ಬೆಳೆದಿರುವ
ಬಳ್ಳಿ ಪೊದೆ ಮರಗಳ ನೆಳಲುಗಳಲ್ಲಿ ಪ್ರಕಾಶಿಸುವ ಮಡುಗಳು, ಡೋಣೆ
ಗಳು ಮೊದಲಾದವುಗಳಲ್ಲಿನ ಉದಕದಿಂದ ಹೆಚ್ಚಾಗಿ ಮನಸ್ಸುತೃಪ್ತಿಯಾ
ಗುವಂತೆ ಲಿಂಗಾಭಿಷೇಕವನ್ನು ಮಾಡುವೆನು. ಕೆರೆ, ತೊರೆ, ಸರೋವ
ರ, ಮಡು, ಕೊಳ, ಭಾವಿ ಮೊದಲಾದವುಗಳಲ್ಲಿನ ಶುದ್ಧೋದಕ ದಿಂದ
ಲೂ, ತಾವರೆಯೆಸಳಿನ ಅರ್ಘ್ಯಗಳಿಂದಲೂ, ತ್ರಿಪುರಾಂತಕನಾದ ಶಿವ
ನಿಗೆ ಪ್ರೀತಿಯಿಂದ ಅಭಿಷೇಕಮಾಡುವೆನು. ಸುತ್ತುಮುತ್ತಲೂ ಗುಂಪಾ
ಗಿಬೆಳೆದ ಬಿಲ್ವಮರದಲ್ಲಿ ಕತ್ತರಿಸಿ ಕಾದಂಥಾ ಕೋಮಲವಾದ ದಳಗಳಿಂ
ದ ಕಾಮವೈರಿಯಾದ ಶಿವನ ಚರಣಗಳನ್ನು ಅತ್ಯಂತ ಸಂಭ್ರಮದಿಂದ
ಲೂ, ಪ್ರೀತಿಯಿಂದಲೂ ಪೂಜಿಸುವೆನು. ಕೋಮಲವಾಗಿಯೂ ಸೊಗ
ಸಾಗಿಯೂ ಮನೋಹರವಾಗಿಯೂ ಇರುವ ಸಂಪಿಗೇವನದ ಪರಿಮಳ
ಯುಕ್ತವಾದ ಛಾಯೆಯಲ್ಲಿಘುಮುಘುಮಿಸುತ್ತಿರುವ ಸಂಪಿಗೆಹುವ್ವಗ
ಳಿಂದ ಶುಭವಾಗಿಯೂ, ಸುಂದರವಾಗಿಯೂ ಇರುವ ಅಂಗವುಳ್ಳ ಸದಾ
ಶಿವನನ್ನು ಪ್ರೀತಿಯಿಂದ ಪೂಜಿಸುವನು. ಜಾತೀಯ್ಯವಾದ ಬಳ್ಳೇಪಾ
ಟಲಿ ವೃಕ್ಷ ಸಮೂಹಗಳು ಜೋತು, ಕಾತು, ತುಂಬಿರುವವನದಲ್ಲಿ ಮಾ
ತುಳುಂಗದ ಹೂವುಗಳಿಂದ ಭೂತೇಶನಾದ ಶಿವನ ಪಾದಯುಗ್ಮವಂನು
ವಿನಯದೊಂದಿಗೆ ಎಡೆಬಿಡದೆ ಅರ್ಚಿಸುವೆನು, ಭ್ರಮರಗಳು ಮುಟ್ಟದೆ

ಇರುವ ಕಣಿಗಳ ಮರಗಳ ಶೃಂಗಾರವಾದ ವನಗಳಲ್ಲಿ ಶ್ರೇಷ್ಠವಾದ ಪುಷ್ಪಗಳಿಂದ ಷಡಕ್ಷರ ಲಿಂಗಮೂರ್ತಿಯನ್ನು ಒಲಿಮಿನಿಂದ ಸಾಂಗವಾಗಿ ಎಡೆಬಿಡದೆ ಅರ್ಚಿಸುವೆನು. ಈ ರೀತಿಯಾದ ಶಿವಪೂಜಾವಿಧಾನ ರೂಪವಾದ ಅಷ್ಟಕವನ್ನು ಎಡೆಬಿಡದೆ ಸರಿಯಾಗಿ ಬರೆದು ಓದಿದವರಿಗೆ ಈಶ್ವರನು ತನ್ನ ಪುರವೆನ್ನಿಸುವ ಕೈಲಾಸದಲ್ಲಿ ಪ್ರಕಾಶಮಾನವಾದ ಗಣಪದವೆಂಬುವ ಮುಕ್ತಿಯನ್ನು ಅನುಗ್ರಹಿಸಿ ಪ್ರಸನ್ನತೆವೆತ್ತು ರಕ್ಷಿಸುವನೆಂದು ಶಿವಪೂಜಾವಿಧಾನವನ್ನು ವಿವರಿಸಿ ಪೇಳಿದರೆಂಬ ತಾತ್ಪರ್ಯವು. *

(೨೩) ರಾಗಭೋಗಷಟ್ಪದಿ— ಲೋಕದವರಭಕ್ತಿಮುಕ್ತಿ। ಸಾಕುಸೊಗಸಾದೆನೆನಗೆ। ಏಕವಾಹಪರಿಯಮನವು ಬಯಸುತಿರ್ಪುದೂ ॥ ಪ॥ ಯೆನ್ನವೊಡೆಯಯೆನ್ನದೇವ। ಯೆನ್ನಕರ್ತಬಂದನೆಂದು। ಉನ್ನತಾಸನವನು ಇಕ್ಕಿಕೈಯ್ಯಮುಗಿವರು ॥ ಹೊನ್ನಹೆಂಣಹಿಡಿದಮೇಲೆ। ಚುನ್ನವಾಡುತಿಹರುಅವರ। ಭಿನ್ನಭಕ್ತಿಸಾಕುಸೊಗಸುದೋರದೆನ್ನೊಳೂ ॥ ಲೀಲೆಯಿಂದಮನೆಗೆವೊಯ್ದು ಹಾಲುತುಪ್ಪಗಳನುನೀಡಿ। ವೀಳೆಯವನು ಕೊಡುವಭಕ್ತಿಯಿಂದಲಿರ್ಪರೂ ॥ ಮೇಲೆವನಿತೆಧನವಭೂಮಿ। ಮೂಲೆಯೊಳಗೆತಿಲ್ಕಿದವರ।ಆಳುಮಾಡುವವರಭಕ್ತಿಸಾಕುಸೊಗಸದೂ ॥ ಇಚ್ಛೆ ಇಲ್ಲದಿರಲುಅವರ। ವೆಚ್ಚಿಪೂಜೆಮಾಡುತಿಹರು। ನಿಚ್ಚನಿಚ್ಚಕಂಡುತಮ್ಮ ದುರ್ಗುಣಂಗಳಾ ॥ ಓಚ್ಚೆಹೊತ್ತುನುಡಿದುತೋರೆ। ಕಿಚ್ಚಿನಂತೆಆಗುತಿಹರು। ಹುಚ್ಚರುಗಳಭಕ್ತಿಸಾಕುಯೆನಗೆಸೊಗಸದೂ ॥ ೩ ॥ ಒಳ್ಳಿತಾಗಿ ಪೋಡಿಯಾಡಿ। ಲಲ್ಲೆನುಡಿಯನುಡಿಯಲವರ। ಎಲ್ಲಿಗಮಿಸಬೇಡ ನೀವು ನಮ್ಮಮನೆಯೊಳೂ ॥ ಇಲ್ಲಿಪ್ರಮಿಸಿಯೆಂದಬಳಿಕಯೆಳ್ಳನಿತುಮಿಗಡದೋರೆ। ಚಲ್ಲುಗಳವರವರಭಕ್ತಿಸಾಕುಸೊಗಸದು॥ ೪॥ ಮರ್ತ್ಯರುಗಳು ಮೊಳ್ಪಭಕ್ತಿ। ವ್ಯಕ್ತವಾಗಿತೋರದೆನಗೆ। ನಿತ್ಯವಾಗಿತೋರುತಿಹದುನಿಮ್ಮನಿಜಪದಾ ॥ ನಿತ್ಯನಿಮ್ಮಚರಣಯುಗವ। ಚಿತ್ತಮುಚ್ಚಿಯಗಲದಂತೆ। ಕರ್ತಶಿವಷಡಕ್ಷರಾಂಕಮಾಡುಯೆನ್ನನೂ॥ ೫॥

(೨೩) ಟೀ॥ ಲೋಕದೊಳಗಿನ ಭಕ್ತಿಯೂ ಮುಕ್ತಿಯೂ ಸಾಕು, ಅದು ಎನಗೆ ಸೊಗಸಾಗದು. ಎನ್ನಮನವು ಏಕವಾಗುವ ವಿಧವನ್ನುಮಾತ್ರವೆ ಅಪೇಕ್ಷಿಸುತ್ತಿರುವದು. ಲೋಕದವರು ತಮ್ಮ ಮನೆಗೆ ಬಂದ ಚರಮೂರ್ತಿಗಳನ್ನು ಕಂಡು ಎನ ಒಡೆಯನು ಬಂದನೆಂದೂ, ಎನ್ನಸ್ವಾ

ಮಿಯು ಬಂದನೆಂದೂ, ಎನ್ನಕರ್ತನು ಬಂದನೆಂದೂ ಹೇಳಿ ಉನ್ವಾದ ಆಸನವನ್ನು ಹಾಕಿ ಕೈಮುಗಿಯುವರು. ಆ ಚರಮೂರ್ತಿಯ ಬಂದುವೇಳೆ ಕನ್ಯಾಪರಿಗ್ರಹವನ್ನಾಗಲಿ, ಅರ್ಥಪರಿಗ್ರಹವನ್ನಾಗಲಿ, ಮಡಿದ್ದೆ ಉಂಟಾದರೆ ಆಗಲೇ ಅವರನ್ನು ದೂಷಿಸುವರು. ಆದಕಾರಣ ಅಥವರ ಭಿನ್ನಭಕ್ತಿಯೆಂಬುವದು ಸಾಕು. ಅದು ನನ್ನಲ್ಲಿ ಸೊಗಸುತೆರದು. ಸಂಭ್ರಮದಿಂದ ತಮ್ಮಮನೆಗೆ ಕರಕೊಂಡು ಹೋಗಿ ಹಾಲು ತುಪ್ಪಗಳನ್ನುಬಡಿಸಿ, ತಾಂಬೂಲಾ ಕೊಡುವಂಥಾ ಭಕ್ತಿಯಲ್ಲಿ ಇರುವರು ಆ ಮೇಲೆ ಈಷಣತ್ರಯಗಳಿ ಗೊಳಗಾದರೆ ಅಂಥವರನ್ನುನೋಡಿ ಕಿನಾಯುವಾಗಿ ಮಾತಾಡುವರು. ಆದಕಾರಣ ಅವರ ಭಕ್ತಿಯು ಸಾಕು ಅದು ನನಗೆ ಸೊಗಸಾಗಿ ತೋರುವದಿಲ್ಲ. ಯಾವದರಮೇಲೆಯೂ ಇಚ್ಛೆಯಿಲ್ಲದೆ ನಿಸ್ಪೃಹನಾಗಿ ಇದ್ದರೆ ಅಂಥವರನ್ನು ಮೆಚ್ಚಿ ಪೂಜೆ ಮಾಡುತ್ತಿರುವರು. ಹೀಗಿರುತ್ತಾ ತಮ್ಮ ದುರ್ಗುಣಗಳನ್ನು ದಿನಂಪ್ರತಿಯುಯೂ ಕೊಂಚಕೊಂಚವಾಗಿ ಹೇಳಿತೋರಿಸಿದ್ದಾದರೆ ಬೆಂಕಿಯ ಹಾಗೆ ಆಗುತ್ತಿರುವರು. ಇಂಥಾ ಮತಿಹೀನರಾದವರ ಭಕ್ತಿಯು ಸಾಕು. ಅದು ಎನಗೆ ಸೊಗಸಾಗಿತೋರದುಚನ್ನಾಗಿ ಮೋಡಿಯಾಡಿಕೊಂಡುಪ್ರಿಯವಾದಮಾತುಗಳನ್ನೇ ಹೇಳುತ್ತಿದ್ದರೆ ಅಂಥವರನ್ನು ನೀವು ಎಲ್ಲಿಗೂ ಹೋಗಬೇಡಿರಿ, ಇಲ್ಲಿಯೇ ನಮ್ಮಮನೆಯೊಳಗೆ ಸುಖವಾಗಿರಿ ಎಂದು ಹೇಳುವರು. ಅವರಲ್ಲಿ ಎಳ್ಳಷ್ಟೇನಾದರೂ ಕೊರತೆ ತೋರಿದ್ದೇ ವುಂಟಾದರೆ, ಆಗಲೇ ತಿರಸ್ಕರಿಸಿ ಬಿಡುವರು. ಆದಕಾರಣ ಅಂಥವರಭಕ್ತಿ ಸಾಕು. ಅದು ನನಗೆ ಸೊಗಸಾಗಿ ತೋರದು. ಮನುಷ್ಯರುಮಾಡುವ ಭಕ್ತಿಯು ನನಗೆ ಸರಿಯಾಗಿ ತೋರದು, ಎಲೈ— ಸ್ವಾಮಿಯೇ ! ನಿಮ್ಮನಿಜಪದವೇ ನಿತ್ಯವಾಗಿರಿತೋರುವದು, ಎಲೈ— ಕರ್ತನಾದ ಷಡಕ್ಷರಲಿಂಗದೇವನೇ ಮನವನ್ನು ಒಲಿದು ಅಗಲದಹಾಗೆ ನನ್ನನ್ನು ಮಾಡು ಎಂದು ಈ ಪದದಿಂದ ಲೋಕದವರು ಮಾಡುವ ಭಕ್ತಿಯು ಭಿನ್ನವಾದದ್ದೆಂದು ಭಕ್ತಿಮಾರ್ಗವು ಇಂಥಾದ್ದೆಂದೂ ಷಡಕ್ಷರಲಿಂಗೈಕ್ಯವಿಷಯವಾದದ್ದೇ ನಿಜವಾದಭಕ್ತಿಯೆಂದು ಪೇಳಿದರೆಂಬ ತಾತ್ಪರ್ಯವು. *

(೨೪) ರಾಗ- ಭೋಗಷಟ್ಪದಿ—ಧರೆಯೆಸುಖವುಭೋಗವೆನಗೆ। ಹರಿದುಹೋಗಲಯ್ಯನಿಮ್ಮ। ಚರಣಕಮಲದಲ್ಲಿಮನವುಮಗ್ನವಾಗಲಿ॥ಪ॥

ಒಡೆದಗಡಿಗೆಹರಿದಜೋಳಿಗೆ । ಯೆಡೆದಕೈಯ್ಯಮುರಿದಕೋಲು । ಹಿಡಿದುಪೂರನೆಲ್ಲತಿರಿದುತಂದುನೋಡಲು॥ ಪೊಡಲಿಗೈದದಂತೆಮೂಡು।ಪೊಡವಿಮೆಚ್ಚಿ ಸುಖವಮೆಚ್ಚಿ। ಪೊಡೆಯನಿಮ್ಮಮರೆತುಭವಕಬೀಳಲಾರೆನು॥ ೧॥ ಊರನೆಲ್ಲತಿರಿದುಪೊಡಲಪೂರವುಂಬೆನೆಂದುಬರಲು । ದಾರಿಯಲ್ಲಿ ತಿರಿದುದೆಲ್ಲ ಚಲ್ಲಿಹೋಗಲೂ॥ ಪಿಾರಿಆಚೆಪುರವತಿರಿಯೆ । ಆರುಯಿಲ್ಲವೆನಲಿಯೆನಗೆ। ಮೂರಹರನನೆನವುದಿಂತುಟಲ್ಲದಾಗದೂ ॥ ೨ ॥ ಹಳೆಯಹರುವೆಗರಟೆಗಳನು । ಬಲಿದುಗಂಟನಿಕ್ಕಿಹೊದಿಯೆ । ಛಳಿಗಳಾದದೊಂದ.ಕಡೆಗೆಸಾಲದಂದದಿ ॥ ಕಳೆವುತಿರಲುಆದರೊಳರ್ಥ। ವಿಲಿಗಳೆಳದುಪೊಯ್ಯಲೆನಗೆ। ಪೊಲಿದುನಿಮ್ಮಚರಣನೆನವುದಿಂತುಟಾಗದೂ॥ ೩॥ ಒಡೆಯರ.ಗಳಮಂತಕೆಬರಲು । ಜಡಿದುಹಿಡಿದುನೂಕಲೆನ್ನ । ಪೊಡನೆಯೋರ್ವರ.ಗಳಕೀಳಿನಲ್ಲಿಸೇರಲೂ ॥ ಕಡೆಗೆ ಅಟ್ಟುಲವರುಹಾಳು। ನುಡಿಗೆಬರಲು ಸೋರುತಿರಲು। ಪೊಡನೆನಿಮ್ಮನೆನವುದಿಂತುಟಲ್ಲದಾಗದೂ॥ ೪ ॥ ಅಂಗಳವಲಿನಿಲಲಿಕೆನ್ನ। ಹಿಂಗದಿವನುಕಳ್ಳನೆಂದು ।ಹಿಂಗಿಹೋಗುಕಡೆಗೆಯೆಂದುನುಡಿಯಲೆಲ್ಲರೂ॥ ಹಿಂಗೆಯೂಗೊದನಕಜನರ । ಸಂಗಬಿಡದುಷಡಕ್ಷರಿಯ್ಯ। ಲಿಂಗನಂಘ್ರಿ ನೆನವುದಿಂತುಟಲ್ಲದಾಗದೂ॥ ೫॥

(೨೪) ಟೀ। ಎಲೈ— ಸ್ವಾಮಿಯೇ ! ನನಗೆ ಈ ಭೂಮಿಯೊಳಗಣಸುಖಭೋಗಗಳೆಲ್ಲಾ ಪರಿಹಾರವಾಗಲಿ, ನಿಮ್ಮ ಪಾದಕಮಲಗಳಲ್ಲಿ ನನ್ನಮನವು ಮಗ್ನವಾಗಲಿ, ಪೊಡಕುಗಡಿಗೆಯನ್ನೂ ಹರಕು ಜೋಳಿಗೆಯನ್ನೂ ಮುರುಕು ಕೈಕೋಲನ್ನು ಹಿಡಿದು ಊರೊಳಗೆಲ್ಲಾ ತಿರುಪ ಬೇಡಿತಂದು ನೋಡಲಾಗಿ ಅದು ನನ್ನ ಹೊಟ್ಟಿಗೆಹೋಗದರೀತಿಯಲ್ಲಿ ಮೂಡು, ಎಲೈ— ಒಡೆಯನೆ ! ನಾನು ಭೂಮಿಗೂ ಸುಖಕ್ಕೂ ಮೆಚ್ಚಿ ನಿಂಮನ್ನುಮರೆತು ಜನನಾದಿಗಳಿಗೆ ಬೀಳಲಾರೆನು ಪೂರನ್ನೆಲ್ಲಾ ಭಿಕ್ಷ ಬೇಡಿಹೊಟ್ಟೆ ತುಂಬಾವುಂಣುವೆನೆಂದು ಬರಲಾಗಿ ಬರುವ ಮಾರ್ಗದಲ್ಲಿಯೇ ತಿರುಕೊಂಡು ಬಂದದ್ದೆಲ್ಲಾ ಚೆಲ್ಲಿಹೋಗಲು, ತರುವಾಯ ಪಟ್ಟಣದೊಳಗೆ ಹೋಗಿ ಬೇಡಿದಾಗ್ಯೂ ನನಿಗೆಯಾರು ಇಲ್ಲವೆಂದು ಹೇಳಲಿ ಎಲೈ— ಮನ್ಮಥನಾಶಕನಾದ ಶಿವನೇ ! ಹೀಗಾಪರೆ ಹೊತರ್ತ ಮನವೆಂಬುವದು ನೆಟ್ಟಗಾಗದು. ಹಳೇಬಟ್ಟೆ ಚಿಂದಿಗಳನ್ನು ಹೊಲಿದು ಗಂಟುಹಾಕಿ ಹೊದಿಯಲು, ಛಳಿಗೆ ಅದು ಯಾವಕಡೆಗೂ ಸಾಲದಹಾಗೆ ಇರುತ್ತಾ

ಆದರೊಳಗೆ ಅರೆವಾತಿಕಳದು ಹೋಗುತ್ತಿರಲು, ಅರ್ಧ ಇಲಿಗಳು ವ
ಕೊಂಡು ಹೋಗುತ್ತಿರಲು. ಈಮೇರಿಗೆಲ್ಲ ಆದರೆ ಹೊತರ್ನ ನಿನ್ನನ
ಸ್ಮರಿಸುವ ಮನವು ಘುಂಟಾಗಲಾರದು. ಒಡೆಯರುಗಳ ಮಠಕ್ಕೆ ಹೋ
ರೆ ನನ್ನನ್ನು ಬೈದು ಹೊಡೆದು, ನೂಕಿಬಿಡಲಿ, ಕೂಡ್ಲೆ ಒಬ್ಬ ಕೀಳಾದ
ರಲ್ಲಿ ಹೋಗಿ ಶೇರಲಿ, ತರುವಾಯ ಅವರು ಒಡಿಸಿದವೇಲೆ ಹಾಳುಗು
ಗೆ ಬಂದರೆ ಅದು ಸೋರುತ್ತಿರಲಿ, ಹೀಗಾದರೆ ಹೊತರ್ನಾಗಿ ನಿನ್ನನ್ನು
ಧ್ಯಾನಿಸುವದು ಉಂಟಾಗದು. ನನ್ನನ್ನು ಅಂಗಳದಲ್ಲಿನಿಲ್ಲಿಸಲಿ ಎಲ್ಲರ
ಇವನು ಕಳ್ಳನೆಂದುಹೇಳಿ ಛೀ ಆಚೆಗೆ ಹೋಗೂ ಎಂದು ಹೇಳಲಿ, ಈ
ಪ್ರಕಾರವಾಗುವ ವರಿವಿಗೂ ಜನರಸಂಗವು ಬಿಡದು. ಷಡಕ್ಷರಾತ್ಮ
ಪಾದಸ್ಮರಣೆಯೂ ಆಗ ಲರಿಯದೆಂದು ತನುಧನಾದಿಗಳಲ್ಲಿನ ಮಮಕಾ
ರವನ್ನು ಪರಿತ್ಯಜಿಸಿ ಲಿಂಗದಲ್ಲಿ ಧ್ಯಾನವನ್ನು ನೆಲೆಗೊಳಿಸುವ ಅಭ್ಯಾ
ಸವನ್ನು ಪೇಳಿದರೆಂದು ತಾತ್ಪರ್ಯವು. ...

(೨೫) ರಾಗ-ದೇಶಿ — ಎನ್ನಕರದೊಳಿದರ್ನಯೆನ್ನೊಳು ನುಡಿ
ಯುತಾ। ಎನ್ನಾನೆಪೂಜಿಸೀ। ಯೆನ್ನನೆಬೇಡುವದೇವನಸಖಿಯನು । ಕೇ
ಳುಸಖಿಯೇ ॥ ಪ॥ ಸಾಲೋಕ್ಯವೊದಲಾದನಾಲ್ಕುವಿಧಂಗಳು । ಕೇಳು
ಸಖಿಯೆ। ಮೇಲೆನಂಮವರಬಾಗಿಲಕಾಯ್ದಿರ್ಪವು । ಕೇಳುಸಖಿಯೆ॥ ೧ ॥
ಲೀಲೆಯಿಂದವನುಬೇಡುವರಲ್ಲತನ್ನನು। ಕೇಳುಸಖಿಯೆ।ಭಾಳಾಕ್ಷತವೊ್ಮ
ಳುನುಡಿಯದನಕೇಳವ್ವ। ಕೇಳುಸಖಿಯೆ॥ ೨॥ ಅಣಿಮಾದಿಅಷ್ಟಸಿದ್ಧಿ ಗಳು
ನಮ್ಮವರೆಲ್ಲ । ಕೇಳುಸಖಿಯೆ । ತೃಣಮಾತ್ರಲೆಖ್ಖಿಸಿಬಗೆಯರುಮನದೊ
ಳು । ಕೇಳುಸಖಿಯೆ ॥ ೩ ॥ ಅಣಿಮಾದಿಸಿದ್ಧಿಗಳನುಬೇಡಿದೆವೆತಂನ। ಕೇ
ಳುಸಖಿಯೆ । ತ್ರಿಣಯನವೊ್ಮಳುನುಡಿಯದಿರ್ಪುದ್ಯಾತಕ್ಕೆ । ಕೇಳುಸಖಿ
ಯೆ॥ ೪॥ ಅರವತ್ತುನಾಲ್ಕುವಿದ್ಯವುನಮ್ಮಶರಣರ। ಕೇಳುಸಖಿಯೆ । ಚರ
ಣರಕ್ಷಗೆಸರಿಯಲ್ಲಲ್ಲವೆಲ್ಲವು । ಕೇಳುಸಖಿಯೆ ॥ ೫ ॥ ಅರವತ್ತುನಾಲ್ಕುವಿ
ದ್ಯವಬೇಡಿದೆವೆತನ್ನ। ಕೇಳುಸಖಿಯೆ । ಹರನುನವೊ್ಮಳುನುಡಿಯದಿರ್ಪು
ದ್ಯಾಕವ್ವ । ಕೇಳುಸಖಿಯೆ ॥ ೬ ॥ ಹೊಟ್ಟೆಗನ್ನವನಿಕ್ಕದಳುನಮ್ಮದಿಟ್ಟ
ವ್ವ। ಕೇಳುಸಖಿಯೆ ॥ ಉಟ್ಟುಕೊಂಬಡೆನಮ್ಮದಾಸಯಕೊಟ್ಟನು । ಕೇಳು
ಸಖಿಯೆ॥೭॥ ಕೊಟ್ಟರುತನಗೆಬೇಡಿದನೆಲ್ಲಶರಣರು।ಕೇಳುಸಖಿಯೇ । ಕೊ
ಟ್ಟರಾದೆನೆನಮ್ಮವರಿಗೆನಂದಿಯನು । ಕೇಳುಸಖಿಯೇ ॥ ೮ ॥ ಆದರ

ಪರನುವ:ರೆದುದ್ಧುತನ್ನೊಳು। ಕೇಳುಸಖಿಯೆ। ಭೇದಿಸಿತನ್ನೊಳಗಿಲ್ಲದ ಕೇಳುಸಬಿಯೆ ॥೯॥ ನಾದಮಯನುಷಡಕ್ಷರಿಲಿಂಗವು। ಕೇಳುಸಖಿಯೆ।ಭೇದಿಸಿನಪ್ನೊಳುನುಡಿಯುನದ್ಯಾಕವ್ವ । ಕೇಳುಸಖಿಯ ॥ ೧೦ ॥

(೨೫) ಟೀ॥ ಎಲೈ— ಮನವೆಂಬುವ ಗೆಣತಿಯೇಕೇಳು ! ಎನ್ನ ಕೈವಶವಾಗಿದ್ದು,ಎನ್ನೊಂದಿಗೆ ಮಾತಾಡುತ್ತ ಎನ್ನನ್ನೇಭಜಿಸಿ ಎನ್ನನ್ನೇ ಬೇಡುವಂಥಾ ದೇವನೇ ಎನಗೆ ಮಿತ್ರನಾಗಿರುವನು, ಎಲೈ— ಸಖಿಯೇ ಕೇಳು ! ಸಾಲೋಕ್ಯ ,ಸಾಮೀಪ್ಯ,ಸಾರೂಪ್ಯ, ಸಾಯುಜ್ಯಗಳೆಂಬವುಗಳೆಲ್ಲ ನಮ್ಮವರಾದ ಶರಣರುಗಳ ಮನೆಬಾಗಲನ್ನು ಕಾದುಕೊಂಡಿರುವವು, ಎಲೈ— ಸಖಿಯೇಕೇಳು! ಆಸಾಯುಜ್ಯಾದಿ ಮುಕ್ತಿಗಳನ್ನು ತಮ್ಮಲ್ಲಿಶಿವನು ನುಡಿದರೆ ಹೊರ್ತಾಗಿ ಲೀಲೆಯಿಂದಲಾದರೂ ನಮ್ಮಶರಣರುಗಳು ನೋಡಲೊಲ್ಲರು. ಎಲೈ— ಸಖಿಯೆ ಕೇಳು? ನಮ್ಮವರಾದ ಶರಣರು ಅಣಿಮಾ, ಮಹಿಮಾ, ಗರಿಮಾ,ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ,ಈಶತ್ವ,ವಶಿತ್ವಎಂಬುವ ಅಷ್ಟಸಿದ್ಧಿಗಳನ್ನು ಗಣನೆಗೆತಂದು ಎಣಿಸಲಾರರು, ಎಲೈ, ಸಖಿಯೇಕೇಳು ! ತನ್ನನ್ನು ಅಣಿಮಾದಿ ಅಷ್ಟಸಿದ್ಧಿಗಳನ್ನೇನಾದರೂ ಬೇಡಿಕೊಂಡವೇ ? ಮುಕ್ಕಂಣನಾದ ಶಿವನು ನಮ್ಮೊಳಗೆ ನುಡಿಯದೆ ಇರುವದ್ಯಾತಕ್ಕೆ ? ಎಲೈ— ಸಖಿಯೇ ಕೇಳು ! ಅರವತ್ತುನಾಲ್ಕು ವಿದ್ಯೆಗಳೆಂಬುವದು ನಮ್ಮವರಾದ ಶರಣರುಗಳ ಪಾದರಕ್ಷೆ ಗೇನಾದರೂ ಸಮಾನವಾದೀತೇ ? ಎಲೈ— ಸಖಿಯೇಕೇಳು ! ತನ್ನನ್ನು ಅರವತ್ತುನಾಲ್ಕು ವಿದ್ಯೆಗಳನ್ನೇನಾದರೂ ಬೇಡಿಕೊಂಡವೇ ? ಎಲೈ— ಸಖಿಯೇಕೇಳು ! ಹರನು ನಮ್ಮೊಡನೆ ನುಡಿಯದೆಯಿರುವದು ಯಾತಕ್ಕೆ ? ಎಲೈ—ಸಖಿಯೇಕೇಳು ಬಳ್ಳೇತಾಯಿ ಹೊಟ್ಟೆಗೆ ಅನ್ನಾ ಇಕ್ಕಿದಳು. ಉಟ್ಟುಕೊಳ್ಳುವದಕ್ಕೆ ನಂಮಂದಾಸ್ತ್ರೆಯನು ಕೊಟ್ಟನು. ಆದರೆ ನಮ್ಮಶರಣರು ತನಗೆ ಬೇಡಿದ್ದನ್ನೆಲ್ಲಾ ಕೊಟ್ಟರು. ಆದರೆ ನಮ್ಮವರಿಗೆಲ್ಲಾ ನಂದಿಯನ್ನು ಕೊಟ್ಟವನಾದೆನು, ಎಲೈ— ಸಖಿಯೇಕೇಳು ! ತನ್ನೊಳಗೆ ಆದರಣೆಯನ್ನು ಮರತುದು ಮತ್ತು ತನ್ನೊಳದ್ದದ್ದನ್ನೆಲ್ಲಭೇದಿಸಿತು , ಎಲೈ— ಸಖಿಯೇಕೇಳು ! ನಾದಮಯನಾದ ಷಡಕ್ಷರೀಲಿಂಗವು ಯಾತಕ್ಕವ್ವಾ ತನ್ನೊಳಗೆ ಭೇದಿಸಿ ನುಡಿಯಲೊಲ್ಲನೆಂದು ಈಪದದಿಂದ ಶರಣರುಗಳ ಘನತೆಯನ್ನೂ ಲಿಂಗಾನ್ಯೋನ್ಯದ ಪಾರವಶ್ಯವನ್ನು ಪೇಳಿದರೆಂದು ತಾತ್ಪರ್ಯವು. ೨೫॥

(೨೬) ರಾಗ-ಭೋಗಷಟ್ಪದಿ— ಪುಣ್ಯತೀರ್ಥಪುಣ್ಯಕ್ಷೇತ್ರ
ಣ್ಯಶೈಲದಲ್ಲಿಮೂರು । ಕಂಣನಿಲ್ಲಭಕ್ತರುಗಳಹೃದಯವಾಸನೂ॥ ಪ॥
ರ್ಥಪಕ್ಷಿಕೃಷ್ಣವೇಣಿ। ತೀರ್ಥಗವ್ಯತುಂಗಭದ್ರೆ । ತೀರ್ಥಕೋಟಿಭಾಗಿರ
ಯುಭೀಮರಥಿಗಳೂ ॥ ತೀರ್ಥಗೋಪಯಮುನೆಮೊದಲು । ತೀರ್ಥಗ
ನುತಿರುಗುತಿರಲು। ತೀರ್ಥಗಳಲ್ಲಿಲ್ಲಭಕ್ತರಲ್ಲಿಯಿಪ್ಪನೂ॥ ೧ ॥ ಕಾಶಿನೀ
ಕಂಠಸುರಾ । ಮೇಶಕಾಂಚಿಗವ್ಯಕರ್ಣ । ಈಶನದಿಗಳಿಪ್ಪಗುಹೆಯು
ಮದಕೇತಾರಾ ॥ ವಾಸಗಳನುತಿರುಗಿತನವಾಸಗಳನುಅರಿಯುರವರು
ಈಶನಿಹನುಭಕ್ತರುಗಳಹೃದಯವಾಸದೀ ॥ ೨ ॥ ಅನಿಲನೀಲಕಾರ್ತಿಕ
ದ್ರಿಘನಸುರತ್ನಶೈಲವಾದಿ । ಯಿನಿತನೆಲ್ಲತಿರುಗುತಿಹರುಶಿವನನರಸುತ
ಇನಿತುಸಾಧಕರುಗಳೆಲ್ಲ। ಘನಷಡಕ್ಷರಾಂಕನಿರ್ಪ । ದನುವನರಿಯ
ವರುಭಕ್ತರಲ್ಲಿಯೆಂಬುದಾ ॥ ೩

(೨೬) ಟೀ ॥ ತ್ರಿಣೇತ್ರನಾದಹರನು ಪುಣ್ಯತೀರ್ಥದಲ್ಲಿಯೂ, ಪು
ಣ್ಯಕ್ಷೇತ್ರದಲ್ಲಿಯೂ.ಪುಣ್ಯಶೈಲಗಳಲ್ಲಿಯೂ ಇಲ್ಲ;ಆತನು ನಿಜಭಕ್ತರಾ
ವರಹೃದಯದಲ್ಲಿ ವಾಸವುಳ್ಳವನಾಗಿರುವನು. ಪುಣ್ಯತೀರ್ಥಗಳೆನಿಸುವ
ಕ್ಷಿತೀರ್ಥದಲ್ಲಿಯೂ, ಕೃಷ್ಣವೇಣಿಯಲ್ಲಿಯೂ, ತುಂಗಭದ್ರೆಯಲ್ಲಿಯೂ, ಧ
ನುಷ್ಕೋಟಿಯಲ್ಲಿಯೂ, ಭಾಗೀರಥಿಯಲ್ಲಿಯೂ, ಭೀಮರಥಿಯಲ್ಲಿಯೂ
ಯಮುನೆಯಲ್ಲಿಯೂ, ಇವೇಮೊದಲಾದ ನಾನಾತೀರ್ಥಗಳಲ್ಲಿಯೂ ತಿರು
ಗಿಬಂದಾಗ್ಯೂ ಆತೀರ್ಥಗಳಲ್ಲಿ ಇಲ್ಲ. ಆತನುಭಕ್ತರಲ್ಲಿ ಇರುವನು ಪುಣ್ಯ
ಕ್ಷೇತ್ರಗಳೆನಿಸುವ ಕಾಶಿ, ನೀಲಕಂಠ,ರಾಮೇಶ್ವರ,ಕಾಂಚಿ, ಗೋಕರ್ಣ
ಪುಣ್ಯನದಿಗಳಿರುವಸ್ಥಳಗುಹೆ, ಹಿಮವತ್ಕೇತಾರ, ಮೊದಲಾದಸ್ಥಳಗಳನ್ನು
ತಿರಿಗಿಬಂದಾಗ್ಯೂ ಅವರು ಆತನನೆಲೆಯನ್ನು ಕಾಣರು, ಜಗನ್ನಿಯಾಮ
ಕನಾದದೇವನು ಶರಣರುಗಳ ಹೃದಯಮಂದಿರದಲ್ಲಿ ನೆಲೆಗೊಂಡಿರುವ
ದು. ಪುಣ್ಯಶೈಲಗಳೆನಿಸುವ ಮಲಯಾಚಲ, ನೀಲಗಿರಿ, ಕಾರ್ತಿಕಾದ್ರಿಯೆ
ನಿಸುವಕುಮಾರಗಿರಿ, ಘನವಾದಮೇರುಗಿರಿ,ಇವುಮೊದಲಾದವುಗಳನ್ನು
ಶಿವನನ್ನು ಹುಡುಕುತ್ತಾತಿರುಗುತ್ತಿರುವರು, ಇಷ್ಟೆಲ್ಲಾಮೂಡುವ ಸಾಧಕರೆ
ಲ್ಲರೂ ಮಹಾಮಹಿಮನಾದ ಷಡಕ್ಷರ ಲಿಂಗಮೂರ್ತಿಯಾಗಿರುವಂಥಾ
ವನು ಭಕ್ತರಹೃದಯದಲ್ಲಿಇದ್ಧಾನೆಂಬುವರೀತಿಯನ್ನು ಅರಿಯರೆಂದು ಈಪ
ದದಿಂದಶಿವನುಆತ್ಮವೇತ್ತುಗಳಲ್ಲಿಯೇಇರುವನೆಂಬುವದನ್ನು ಪೇಳ್ದರೆಂದು॥

(೨೭) ರಾಗಭೋಗಷಟ್ಪದಿ— ಯೆನಿಸನೋದಿಫಲವದೇನು। ಎ
ನಿಸಕೇಳಿಫಲವದೇನು । ಮನಸುತನ್ನ ದುರ್ಗುಣಗಳಬಿಡದುಶಿವಶಿವಾ॥ಪ॥
ಇಂದುಧರನಚರಣದಲ್ಲಿ। ದೊಂದಿಸುಖದಲಿರದುಮನವು । ಕುಂದದನ್ಯ
ವಿಷಯದತ್ತಹರಿವುದೆಂತೆನೇ ॥ ಒಂದುಶುನಿಯಹಿಡಿದುತಂದು । ಅಂದಳ
ವನುಯೇರಿಸಿರಲು। ಮುಂದೆಆಡುವದಕಂಡುನೆಗೆದವೊಳ್ಕೆಯಾಯಿತೂ॥
ಸೊಗಸಿಶಿವನಮಂತ್ರವನ್ನು । ನೆಗಳುವುದಕೆಯೆನ್ನಜಿಂಹೆ। ವಗಡಿಸುವದು
ನಾಳುನುಡಿಯ ಯೆಸಗದೆಂತೆನೆ॥ ಹಗಲುಯಿರುಳುತನ್ನ ಬಾಯಿ।ಶಿಗೆವುದ
ರಿಯದಂತೆಯೆನಲು। ಜಗುಳುವುದಕೆಯಲಸದಂತೆಜಿಹ್ಮೆಯಲಸದೂ॥ ಮಂ
ಗಳಾತ್ಮಷಡಕ್ಷರೀಯ । ಲಿಂಗನಡಿಯಪೂಜಿಸುವಡೆ । ಕೊಂಗಿಮನವಸ್ವ
ಸ್ಥಿರವನುಯ್ಯೆದದೆಂತೆನೇ ॥ ಹಿಂಗದೂಲಿದುಗಂಧಪುಣಿಗೆ । ಸಂಗಹಾಡಿ
ಸುತ್ತತೊಡೆಯ । ಭೃಂಗವಾಡಿಯಾಡಿಯಿರದೆಪೋಡುವಂದದೀ ॥

(೨೭) ಟೀ ॥ ಹರಮಹಾದೇವಾ ? ಎಷ್ಟು ಓದಿದರೆ ಫಲವೇನು ಎಷ್ಟು ಕೇಳಿದರೆ ಫಲವೇನು ? ಮನಸ್ಸು ತನ್ನ ದುರ್ಗುಣಗಳನ್ನು ಬಿಡಲೊಲ್ಲದು. ಚಂದ್ರಶೇಖರನ ಪಾದದಲ್ಲಿ ಹೊಂದಿ ಮನವು ಸುಖದಲ್ಲಿ ಇರದು. ಹ್ಯಾಗಂದರೆ— ಒಂದು ನಾಯನ್ನು ತಂದು ಅದನ್ನು ಪಾಲಕ್ಕಿಯಲ್ಲಿ ಕೂಡಿಸಿದ್ದಾದರೆ ಅದು ಅಮೇಧ್ಯವನ್ನು ಕಂಡು ಧುಮುಕುವಹಾಗೆಯೇ ಮನವಾದದ್ದು ಧ್ಯಾನಾರೂಢವಾಗಿದ್ದಾಗ್ಯೂ ಇತರವಿಷಯವೆನ್ನಿಸುವ ಬಾಹ್ಯ ವ್ಯಾಪಾರಗಳ ಕಡೆಗೆ ಹರಿಯುತ್ತಿರುವದು, ಚನ್ನಾಗಿ ಶಿವನ ಮಹಾಮಂತ್ರವನ್ನು ಉಚ್ಚರಿಸುವದಕ್ಕೆ ಯೆನ್ನ ನಾಲಿಗೆಯು ವಿರೋಧಿಸುವದು, ಹ್ಯಾಗಂದರೆ,ಹಗಲೂ ರಾತ್ರಿಯೂ ತನ್ನ ಬಾಯಿ ಶೀಳುವದನ್ನು ಅರಿಯದಹಾಗೆ ನಾಯಿ ಹ್ಯಾಗೆ ಎಲುಬುವೊದಲಾದವುಗಳನ್ನು ಕಚ್ಚುತ್ತಿರುವದೋ ಅದೇರೀತಿಯಲ್ಲಿ ನಾಲಿಗೆಯು ದುರ್ವ್ಯಾದಗಳನ್ನಾಡುವದಕ್ಕೆ ಆಯಾಸಗೊಳ್ಳದ ,ಮಂಗಳಾತ್ಮಕನಾದ ಷಡಕ್ಷರಮೂರ್ತಿಲಿಂಗನ ಪಾದಕಮಲಗಳನ್ನಾರಾಧಿಸಬೇಕಾದರೆ— ಮನವಾದದ್ದು ವಕ್ರವಾಗಿ, ಸ್ಥಿರತ್ವವನ್ನು ಹೊಂದಲರಿಯದು, ಹ್ಯಾಗಂದರೆ— ಮಮತೆ ಮೂಡಿ ಹೂಂಣಿಗೆ ಪುನುಗನ್ನು ತೊಡೆದರೆ ಭೃಂಗವು ಬಂದು ಪ್ರೊಡ್ಯಾಡುವಹಾಗೆ ಇರದೆ ಓಡಿಹೋಗುವ ಮೇರೆಗೆ ಶಿವಾರ್ಚನೆಯ ವಿಷಯವ

ಲ್ಲಿ ವಿಮುಖವಾಗುವದೆಂದು ಮನೋಚಾಂಚಲ್ಯವನ್ನು ಈ ಪದದಿಂ
ರುಪಿದರೆಂದು ತಾತ್ಪರ್ಯವು. ... ...

(೨೮) ರಾಗ, ಭೋಗಷಟ್ಪದಿ– ಧರೆಯೊಳಾನುತನುವಧರಿ
ಗಿರಿಯುಸರಸಿಸರಸಿಜಾಂಡ । ಹಿರಿದುದೊಡ್ಡಿತಾದವೈಸೆಯೆನಗೆದೊಡ್ಡಿತೆ
ಪ॥ ಮೊಟ್ಟೆಯನ್ನಹೊತ್ತನರನು। ಶಿಟ್ಟನಿಳಿಯಲಾರದಂತೆ।ಸೃಷ್ಟಿಯೊಳ
ವುದಿಸಿನಾನುಕಷ್ಟತನುವನೂ ॥ ತೊಟ್ಟದೆಸೆಗಳಿಂದಧರೆಯಗಟ್ಟಬೆಟ್ಟ ಗಿರಿ
ಳೆಲ್ಲ। ಶ್ರೇಷ್ಠವಾದವೈಸೆಮಳಲಗುಪ್ಪೆಯೆನಗಿವೂ ॥ ೧॥ ಕೋಳದೊಳಗ
ಶಿಲುಕಿದವನು । ಕಾಲುವೆಗಳನೆಗವುದಕ್ಕೆ । ಸಾಲದಂತೆತನುವಧರಿಸಿಬಂ
ದಕಾರಣಾ ॥ ಏಳುವಾರಿಧಿಗಳುತನಗೆ । ಕಾಲಿನಲ್ಲಿಮೊಳಲೊಳೆಳೆದು।ಕಾ
ಲುವೆಗಳಹಾಗೆಯೆನಗೆದೊಡ್ಡಿತಪ್ಪುದೇ॥ ಕಾರಪಂಜರದೊಳುಶಿಲುಕಿಹಾ
ರಲಾರದಂತೆಯೆನಗೆ । ವಾರಿಜೋದ್ಭವಾಂಡವೆಲ್ಲದೊಡ್ಡಿತಪ್ಪುದೇ ॥ ೨
ಮಾರವೈರಿಷಡಕ್ಷರೀಯ್ಯ । ನೀರನೆನಗೆಮುನಿದುದೊಡ್ಡ । ಘೋರತನು
ವತೊಡಿಸಿನರಗೆಕೊಟ್ಟಕಾರಣ ॥ ... ೩।

(೨೮) ಟೀ॥ ಭೂಮಿಯೊಳಗೆ ನಾನು ಶರೀರವನ್ನು ಧರಿಸಿದ
ಕಾರಣ ಪರ್ವತಗಳಿಂತಲೂ, ಸರಸ್ಸುಗಳಿಂತಲೂ, ಬ್ರಹ್ಮಾಂಡವೆಂತಲೂ
ಬಹಳ ದೊಡ್ಡದಾಗಿ ತೋರಿತಲ್ಲದೆ ಅವುತನಗಿಂತಲೂ, ದೊಡ್ಡವುಗಳಾದ
ವೇ ? ಭಾರವಾದ ಹೊರೆಯನ್ನು ಹೊತ್ತಿರುವ ಮನಷ್ಯನು ತಿಟ್ಟಿಯನ್ನು
ಇಳಿಯಲಾರದೆ ಇರುವಹಾಗೆಯೇ ನಾನು ಭೂಮಿಯೊಳಗೆ ಜನಿಸಿ ಕ
ಷ್ಟಕರವಾದ ತನುವನ್ನು ಧರಿಸಿರುವ ಕಾರಣಗಳಿಂದ ಭೂಮಿಮೇಲಣಗು
ಟ್ಟುಗಳೂ, ಬೆಟ್ಟಗಳೂ, ಪರ್ವತಗಳೂ ಇವುಗಳೆಲ್ಲಾ ಶ್ರೇಷ್ಠವಾದವಷ್ಟೆ ?
ಈ ಸಮಸ್ತವೂ ಎನಗೆ ಮಳಲು ಗುಡ್ಡೆಯಾಗಿರುವದು ಕೋಳದೊಳಗೆ ಶಿ
ಕ್ಕುಬಿದ್ದವನು ಕಾಲುವೆಗಳನ್ನು ದಾಟುವದಕ್ಕೆ ಆಗದೆ ಇರುವಂತೆ ಶೃಂ
ಖಲಾರೂಪವೂದ ತನುವನ್ನು ಧರಿಸಿ ಬಂದಿರುವದರಿಂದ ಏಳು ಸಮು
ದ್ರಗಳೂ ಯೆಂದೆನ್ನಿಸುವದೇಹೊರ್ತಾಗಿ ಅವುಗಳು ತನಗೆ ಕಾಲಿನಿಂದ
ಮರಳಿನಲ್ಲಿ ಯೆಳೆದಕಾಲುವೆಗಳಹಾಗೆ ಇರುವವು. ಉಕ್ಕಿನ ಪಂಜರದೊ
ಳಗೆ ಶಿಕ್ಕಿಕೊಂಡ ಪಕ್ಷಿಯು ಹಾರಲಾರದೆ ಇರುವಹಾಗೆ ಎನಗೆ ಈಬ್ರಂ
ಹ್ಮಾಂಡವೆಲ್ಲಾ ದೊಡ್ಡದಾಗುವದೇ ? ಕಾಮಹರನಾದ ಷಡಕ್ಷರ ರೂಪಿ
ಯಾದವನು ಎನಗೆ ಕೋಪಗೊಂಡು ಘೋರವಾದ ತನುವನ್ನು ತನಗೆ

ತೊಡಿಸಿ ಕೊಟ್ಟಕಾರಣ ಸಕಲವಾದ ನೋಟಗಳೂ ದೊಡ್ಡವಾಗಿ ತೋರ ಬಂತಲ್ಲದೆ ನನಗಿಂತಲೂ ದೊಡ್ಡವಾದದ್ದು ಯೂವದು ಇಲ್ಲವೆಂದು ಈ ಪದದಿಂದ ಸ್ಥೂಲತನುವಿನ ಭಾವನೆಯಿಂದ ತೋರಬರುವ ಬ್ರಹ್ಮಾಂಡಾದಿಗಳಿಗಿಂತಲೂ ಯೂವದೂ ಇರಲಾರದೆಂದು ಬ್ರಹ್ಮವೇ ತಾನಾದೆನೆಂಬ ಬ್ರಂಹೈಕ್ಯವನ್ನು ಕುರಿತು ಪೇಳಿದರೆಂದು ತಾತ್ಪರ್ಯವು.

(೨೯) ರಾಗ- ಭೋಗಷಟ್ಪದಿ— ಹಲವುವಿದ್ಯೆಹಲವುಶಾಸ್ತ್ರ। ಹಲವುಮಂತ್ರಗಳನೆಕಲಿತು। ಹಲವುಭವಕಬಂದರೈಸೆನಿಮ್ಮಹಿರಿಯರೂ॥ ಪ॥ಸುರಪಧನುಇಂದ್ರಜಾಲ। ತುರಗವಾಗೆಯಕ್ಷಿಣಿಸೆ।ಕೊರಳುಬೆರಳು ಅಗ್ನಿಜಲಸ್ತಂಭವೆಲ್ಲವಾ ॥ ಅರಿವುತಿಪ್ಪೆ ಮರುಳನೀನುಗಿರಿಯನಗುಳಿಯಿಲಿಯಹಿಡಿದ। ಪರಿಗಳೈಸೆಯೇನುಸುಖವುಹೇಳುಸಾಧಕಾ॥ ೧ ॥ ಕಂದಗಣಿತಧಾತುನಿಘಂಟು। ಪಂದಪಂಚಕಾವ್ಯಮೂಘು।ಪೊಂದುವುಳಿಯದಂತೆ ಕಲಿವುತಿರ್ಪೆಯದರಿನಿಂ ॥ ಒಂದುಕಾಳುನೆಲ್ಲಿಗಾಗಿ। ಮಂದರಾದ್ರಿಯನಿತಜೋಳ। ತಂದುತಿರಿಯುತಿರ್ಪನರನಮೂಳ್ಕಪಾತಕಾ॥ ೨ ॥ ಧರೆಯೊಳಖಿಳಮಂತ್ರಗಳನು। ಬರೆದುಕಲಿಯುತಿರ್ಪನೀನು। ಹಿರಿಯಗುಡಿಯಕೆಡಹಿಮೊಳೆಯಹೊಡದಮೂಳ್ಕೆಯಿಂ ॥ ಅರಿದುಷಡಕ್ಷರೀಯವರನ ಪರಮಮಂತ್ರನನ್ನುಜಪಿಸಿ। ಹರುಷವಿದಿಯುಪಡೆದಮೂಳ್ಕಕೇಳುಮೂನವ ॥ ೩ ॥

(೨೯) ಟೀ॥ ವಿಧಾವಿಧವಾದ ವಿದ್ಯೆಗಳನ್ನೂ ನಾನಾಪ್ರಕಾರವಾದ ಶಾಸ್ತ್ರಗಳನ್ನೂ, ಪರಿಪರಿಯೂದ ಮಂತ್ರಗಳನ್ನೂ, ಕಲಿತು ನಿಂಮ ಹಿರಿಯರಲ್ಲಾ ಅನೇಕ ಜನ್ಮಗಳಿಗೆ ಹೋದರಷ್ಟೆ? ಎಲೈ—ಸಾಧಕನೇ! ಇಂದ್ರಧನುಸ್ಸು, ಇಂದ್ರಜಾಲ, ತುರುಗವಾಗ, ಯಕ್ಷಿಣಿ, ಅಗ್ನಿಸ್ತಂಭ, ಜಲಸ್ತಂಭ, ವಾಯುಸ್ತಂಭ, ಇವುಗಳನ್ನೆಲ್ಲಾ ಅರಿಯುತ್ತಿರುವಿಯಲ್ಲಾ, ಎಲೇ—ಮರುಳೇ! ಬೆಟ್ಟವನ್ನು ಅಗಿದು ಇಲಿಹಿಡಿದ ರೀತಿಯಲ್ಲಿರುವದೆ ಹೊರ್ತು ಅವುಗಳಿಂದ ಏನುಸುಖವು ಉಂಟಾಗುವದು ಹೇಳು. ಕಂದ, ಗಣಿತ, ಧಾತು, ನಿಘಂಟು, ಪಂಚಕಾವ್ಯಗಳು, ಮೂಘು, ಇವುಗಳು ಒಂದೂ ಉಳಿಯದೆ ಎಲ್ಲವನ್ನು ಕಲಿಯುತ್ತಿರುವಿ ಯಲ್ಲಾ? ಎಲೇ— ಪಾತಕನೇ! ಒಂದು ಕಾಳು ನೆಲ್ಲಿಗಾಗಿ ಮಂದರಾಚಲದಷ್ಟು ಜೋಳವನ್ನು ಭಿಕ್ಷವೆತ್ತುವವನಹಾಗೆ ಇರುವದೇ ಹೊರ್ತು ಅದರಿಂದ ಸುಖವೇನು ಇರುವದು ಹೇಳು? ಭೂಮಿಯೊಳಗೆ ಸಮಸ್ತ ಮಂತ್ರಗಳನ್ನೂ

ನೀನು ಬರೆಬರೆದು ಕಲಿಯುತ್ತಿರುವಿ. ಹೀಗೆ ಮಾಡುವದು ದೊಡ್ಡಗು
ಯಂನು ಕಡವಿ ಬೆಕ್ಕನ್ನು ಹೊಡೆದ ಹಾಗಿರುವದು. ಎಲೋ—ಮನ
ಜನೇ ಕೇಳು ! ಷಡಕ್ಷರ ಮಹಾಮಂತ್ರ ಮೂರ್ತಿಯಾದವನ ಪರಮೊ
ತ್ತಮವಾದ ಮಂತ್ರವನ್ನು ಅರಿತು ಜಪಿಸಿದ್ದಾದರೆ ಸಂತೋಷದ ನಿಕ್ಷೇ
ವನ್ನು ಪಡಕೊಂಡ ಹಾಗೆ ಇರುವದೆಂದು ಈ ಪದದಿಂದ ಇತರವಾ
ವಿದ್ಯೆಗಳಿಂದಲೂ, ಇತರ ಶಾಸ್ತ್ರಗಳಿಂದಲೂ, ಇತರ ಮಂತ್ರಂಗಳಿಂ
ಲೂ, ಸಚ್ಚಿದಾನಂದವು ದೊರೆಯಲಾದ್ದರಿಂದ ಶೈವ ವಿದ್ಯೆಯನ್ನೂ, ಶೈ
ವಶಾಸ್ತ್ರಗಳನ್ನೂ, ಶೈವಮಂತ್ರವನ್ನೂ, ಅನುಷ್ಠಿಸಬೇಕೆಂದು ಪೇಳಿ
ರೆಂಬ ತಾತ್ಪರ್ಯವು. ... ...

(೩೦) ರಾಗ- ಕುಸುಮಷಟ್ಪದೀ—ಎನಗೆನಿಮ್ಮನೆನೆನೆವ। ಮನ
ನೇಬಯಸುವೆನು। ಘನವಾಗಿಯಿದರಿಂದಮೇಲರಿಯೆನೂ॥ ಪ॥ ನಿಮ್ಮನೆ
ನವುದೆಹರುಷ। ನಿಮ್ಮನೆನವುದೆವರುಷ। ನಿಮ್ಮನೆನವುದೆಕಾಮಧೇನುವೆ
ನಗೇ॥ ನಿಮ್ಮನೆನವುದೆಗತಿಯು। ನಿಮ್ಮನೆನವುದೆಮತಿಯು। ನಿಮ್ಮನೆನ
ವುದೆಯಿಹಪರದಸುಖವುಯನಗೆ॥ ೧ ॥ ನಿಮ್ಮನೆನವುದೆತಪವು। ನಿಂಮ
ನೆನಹುದೆಜಪವು। ನಿಮ್ಮನೆನವುದೆಸಕಲಪರಮತತ್ವ॥ ನಿಮ್ಮನೆನಹುದೆ
ನಿತ್ಯ। ನಿಮ್ಮನೆನಹುದೆಸತ್ಯ। ನಿಮ್ಮನೆನಹುದೆವ್ಯಕ್ತಕೈಲಾಸವೂ॥ ೨ ॥ ತ
ನುದಂಡನೆಯಮಾಡಿ। ಜನುಗಲ್ಯಾತಕೆಮರುಳೆ। ಘನಗಿರಿಯಮೇಲೆತ
ಪವಿರಲ್ಯಾತಕೇ॥ ಮನಸಿಜಾರಿಯನೆನವು। ಮನದೊಳಗೆನೆಲಸಲಾ। ಘ
ನಪರಮಕೈಲಾಸತನ್ನೊಳಿಹುದೂ॥ ೩ ॥ ಹಲವುತೀರ್ಥವುಕ್ಷೇತ್ರ। ಹಲ
ವುಗಿರಿಗಂಹರವು। ತೊಳಲಿಬಳಲುತ್ತಲಿರಲದ್ಯಾತಕೇಮನವೇ॥ ಮಲ
ಹರನನೆನಹುತಾ। ನೆಲಸಿರಲುಮನದೊಳಗೆ। ಹಲವನರಸುವದೇನುತಾ
ನೇಶಿವನೂ॥ ೪॥ ಸುರಲೋಕವೇನೆನಗೆ। ನರಲೋಕವೇನೆನಗೆ। ಉರಗ
ಮಯಲೋಕತಾನಾದಡೇನೂ॥ ಗುರುಷಡಕ್ಷರಿವರನ। ಪರಮಮಂ
ತ್ರದನೆನೆವು। ದೊರಕೊಳಲುಶಿವಲೋಕತಾನಿರ್ಪುದೇ॥ ೫॥

(೩೦) ಟೀ॥ ಎಲೈ— ಶಿವನೇ ! ನನಗೆ ಬಹಳವಾಗಿರುವ ನಿಮ್ಮ
ಧ್ಯಾನವನ್ನೇ ಬಯಸುವೆನು; ಇದಕ್ಕಿಂತ ಮತ್ಯಾವದನ್ನೂ ಅರಿಯೆನು.
ಎಲೈ— ಮಹಾದೇವಾ ! ನನಗೆ ನಿಮ್ಮನ್ನು ನೆನೆಯುವದೇ ಹರುಷವು,
ನಿಮ್ಮನ್ನು ನೆನೆಯುವದೇ ವರುಷವು; ನಿಮ್ಮನ್ನು ನೆನೆಯುವದೇ ಯೆನಗೆ

ಕಾವುಥೇನುವು. ನಿಮ್ಮ ಸ್ಮರಣೆಯೇ ಗತಿಯೂಗಿಯೂ, ನಿಮ್ಮ ಸ್ಮರಣೆ ಯೇ ಮತಿಯೂಗಿಯೂ, ನಿಮ್ಮ ಸ್ಮರಣೆಯೇ ಯೆನಗೆ ಇಹಪರಸುಖ ವಾಗಿಯೂ ಇರುವದು, ನಿಮ್ಮ ಸ್ಮರಣೆಯೇಜಪವಾಗಿಯೂ, ತಪವಾಗಿ ಯೂ, ಪರತತ್ವವಾಗಿಯೂ ಇರುವದು, ಮತ್ತು ನಿಮ್ಮ ಸ್ಮರಣೆಯೇ ನಿತ್ಯವಾದದ್ದಾಗಿಯೂ, ಸತ್ಯವಾದದ್ದಾಗಿಯೂ, ವ್ಯಕ್ತವಾದ ಕೈಲಾಸ ವಾಗಿಯೂ ಇರುವದು, ಎಲೇ—ಮರುಳಾದ ಮನವೇ ! ದೇಹವಂನು ದಂಡಿಸಿ ಕಷ್ಟಪಡುವದ್ಯಾತಕ್ಕೆ ? ಉನ್ನತವಾದ ಪರ್ವತಾಗ್ರದಲ್ಲಿ ತಪಸ್ಸು ಮೂಡುವದ್ಯಾತಕ್ಕೆ ? ಕಾಮವೈರಿಯೂದ ಪರಮೇಶ್ವರನ ಧ್ಯಾನವು ಮನದೊಳಗೆ ಪ್ರಾಪ್ತವಾಗಿ ನೆಲೆತಿರುವದಾದರೆ, ಘನವಾದ ಪರಮಕೈ ಲಾಸವೇ ತನ್ನೊಳಗಿರುವದು. ಹಲವು ತೀರ್ಥಕ್ಷೇತ್ರಗಳನ್ನೂ ಹಲವು ಗಿರಿ ಗುಹೆಗಳನ್ನೂ ತಿರುಗಿ ಆಯೂಸಗೊಳುವದ್ಯಾತಕ್ಕೆ? ಎಲೇ— ಮನವೇ ! ಮನದೊಳಗೆ ಪಾಪ ಪರಿಹಾರಕನಾದ ಮಹಾದೇವನ ಸ್ಮ ರಣೆಯು ನೆಲೆಗೊಳ್ಳಲು, ಇತರವಾದವುಗಳನ್ನು ಹುಡುಕುವದೇನು ? ತಾನೇ ಶಿವನಾಗಿರುವನು, ಯೆನಗೆ ದೇವಲೋಕವೇನೂ, ಭೂಲೋಕ ವೇನು ? ಸರ್ಪಗಳಿಂದ ಕೂಡಿರುವ ಪಾತಾಳ ಲೋಕವೇನು ? ಗುರು ಮೂರ್ತಿಯೂದ ಷಡಕ್ಷರೀವರನ ಪರಮ ಮಂತ್ರ ಧ್ಯಾನವು ಮನದೊ ಳಗೆ ನೆಲೆಗೊಂಡದ್ದಾದರೆ, ಶಿವಲೋಕ ತಾನೇ ಇರುವದೆ? ಎಂದು ಈ ಪ ದದಿಂದ ಸಕಲಮಂತ್ರ ತಂತ್ರ ತೀರ್ಥ ಕ್ಷೇತ್ರಗಳನ್ನು ಹುಡುಕುವದರಿಂ ದ ಶಿವನನ್ನರಿಯಲಾಗದೆಂತಲೂ, ಸದ್ಗುರುಮೂರ್ತಿಯೂದಷಡಕ್ಷರಶಿವಾ ನುಗ್ರಹದಿಂದೊದಗಿದ ಮಹಾಮಂತ್ರಧ್ಯಾನವು ಮನದೊಳು ನೆಲೆಗೊಂ ಡರೆ ತಾನೇ ಶಿವನಾಗಿರುವನಲ್ಲದೆ, ಬೇರೆ ಮತ್ಯಾವಲೋಕವೂ ಇರಲಾ ರದೆಂದು ಪೇಳಿದರೆಂಬ ತಾತ್ಪರ್ಯವು. S 004.072 ✻

(೩೧) ರಾಗ- ಕುಸುಮಷಟ್ಪದಿ— ಎನ್ನಕರದೊಳಗಿರ್ದ। ಯೆ ನ್ನೊಳ್ಯಾತಕನುಡಿಯೆ। ಯೆನ್ನ ಭವಭವದಲ್ಲಿಬಿಡದಾಳ್ದನೇ॥ಪ॥ ಯೆನ್ನಚಿಂ ತಾಮಣಿಯೆ। ಯೆನ್ನಪರುಷದಕಣಿಯೆ । ಯೆನ್ನ ಬೇಡಿದಡೀವಸುರಭೂ ಜವೆ॥ ಯೆನ್ನಸಂಜೀವನವೆ । ಯೆನ್ನಪರಮಾಯುಷವೆ । ಯೆನ್ನಕರದೊಳ ಗಿರ್ದಯೂಕೆನುಡಿಯೇ॥ ೧॥ ಯೆನ್ನಗತಿಮತಿಯುನೀ । ನೆನ್ನಚೈತನ್ಯವೇ ಯೆನ್ನನಗಲದೆಕೂಡಿಬಿಡದಾಳ್ದನೇ ॥ ಯೆನ್ನಯಿಹಪರಸುಖವೆ । ಯೆನ್ನ

ಮುಕ್ತಿಯಸಿರಿಯೆ। ಯೆನ್ನ ಕರದೊಳಗಿರ್ದು ಮಾತನಾಡಿಯೇ ॥ ೨ ॥
ನ್ನ ಭಾಗ್ಯದವಧುವೆ। ಯೆನ್ನ ಭಕ್ತಿಯ ನಿಧಿಯೆ । ಯೆನ್ನ ಮನವೆಂಬವ
ಯತಿಲಕವೇ॥ ಯೆನ್ನ ಹೃದಯಾಲಯದ ಚಿನ್ಮಯದ ಮೂರ್ತಿಯೇ। ಯೆ
ಕರದೊಳಗಿರ್ದು ಮಾತನಾಡಿಯೇ॥ ೩॥ ಯೆನ್ನ ಮಾತೆಯು ನೀನು ! ಯೆ
ನತಾತನು ನೀನೆ। ಯೆನ್ನ ಬಂಧುವು ಬಳಗ ಸಖನು ನೀನೆ । ಯೆನ್ನ ಪತಿಯ
ನೀನೆ ಯೆನ್ನ ಸತಿಯು ನೀನೆ ಯೆನ್ನ ಕರದೊಳಗಿರ್ದು ಮಾತನಾಡಿಯೇ॥
ಎನ್ನ ಕುಲಗುರುವೆ ನೀ । ನೆನ್ನ ವಿದ್ಯದ ಗುರುವೆ । ಯೆನ್ನ ಭವಭವದ
ಬಿಡದ ಗುರುವೆ ॥ ಯೆನ್ನ ದೀಕ್ಷಾಗುರುವೆ । ಯೆನ್ನ ಮೋಕ್ಷದ ಗುರುವೆ
ಯೆನ್ನ ಕರದೊಳಗಿರ್ದು ಮಾತನಾಡಿಯೇ ॥ ಯೆನ್ನ ಮನದ ನಚ್ಚೈತ್ರ। ಎ
ನ್ನ ಘನಸುಖಪಾತ್ರ। ಯೆನ್ನ ಮನವೆಂಬ ವಾರಿಧಿಗೆ ಚೈತ್ರಾ॥ ಯೆನ್ನ ಜ್ಞಾನ
ನೇತ್ರ। ಯೆನ್ನ ಪುಣ್ಯದ ಗಾತ್ರ । ಯೆನ್ನ ಕರದೊಳಗಿರ್ದು ಮಾತನಾ
ಯೆ॥ ೬॥ ಯೆನ್ನ ಕೈಗೆ ತಂದು ಭಿನ್ನವನು ಮಾಡಿನ್ನು। ಅನ್ಯವೇನಾನಿನಗೆ
ಳುಗುರುವೆ॥ ಯೆನ್ನೊಳಗೆ ನುಡಿಯದಿರೆ ನಿನ್ನ ಭವಭವದಿನಾ। ಬೆನ್ನ ಬಿಡ
ವನೆ ಷಡಕ್ಷರಿಲಿಂಗವೇ॥ ...

(೩೧) ಟೀ॥ ಎಲೈ—ನನ್ನ ಜನ್ಮ ಜನ್ಮಾಂತರಗಳಲ್ಲಿಯೂ ಯೆ
ಬಿಡದಂತೆ ಕಾಪಾಡಿದ ಪೊಡೆಯನೇ ! ಎನ್ನ ಕೈವಶವಾಗಿದ್ದೂ ಎನ್ನೊ
ಡೆ ಯಾತಕ್ಕೆ ಮಾತಾಡಲೊಲ್ಲೆ; ನನ್ನ ಅಭೀಷ್ಟಗಳನ್ನು ಕೊಡುವ ಚಿಂತಾ
ಮಣಿಯೆಂಬುವ ದಿವ್ಯರತ್ನವೇ ! ನನ್ನ ದರಿದ್ರ ವಿಚ್ಛಿತ್ತಿಯನ್ನು ಮಾಡುವ
ಪರುಷವೆಂಬುವ ಶಿಲೆಯೇ ! ನನ್ನ ಕೋರಿದ್ದನ್ನು ಅನುಗ್ರಹಿಸಿಕೊಡುವ
ಕಲ್ಪವೃಕ್ಷವೇ ! ನನ್ನನ್ನು ನಿತ್ಯಜೀವದಲ್ಲಿ ಶೇರಿಸಬೇಕಾಗಿ ಮರಣಾದಿಗ
ಳನ್ನು ಪರಿಹರಿಸುವ ಸಂಜೀವನಿ ಯೆಂಬುವ ಔಷಧಿಯೇ ! ನನ್ನ ಪರ
ಮಾಯುಷ್ಯವೇ ! ನನ್ನ ಕೈಯೊಳಗಿದ್ದು ನನ್ನೊಂದಿಗೆ ಯಾತಕ್ಕೆ ಮಾ
ತಾಡಲಾರೆ? ಎನ್ನ ಗತಿಯೂ, ಮತಿಯೂ, ಆಗಿರುವ ಎನ್ನ ಚೈತನ್ಯ
ವೇ ! ಯೆನ್ನನ್ನು ಅಗಲದೆ ಕೂಡಿಬಿಡದಿರುವ ಆಳಿದವನೇ! ನನ್ನ ಇಹಪ
ರಗಳ ಸುಖವೇ ! ನನ್ನ ಮುಕ್ತಿಯ ಐಶ್ವರ್ಯವೇ ! ನನ್ನ ಕೈಯೊಳಗಿದ್ದು
ಯಾತಕ್ಕೆ ಮಾತಾಡಲಾರೆ ! ನನ್ನ ಭಾಗ್ಯಕಾಂತೆಯೇ ! ನನ್ನ ಭಕ್ತಿನಿಧಿ
ಯೇ ! ನನ್ನ ಮನಸ್ಸೆಂಬುವ ಕಾಂತೆಯ ತಿಲಕವೇ ! ಯೆನ್ನ ಹೃದಯವಾ
ಸಿಯಾಗಿರುವ ಚಿನ್ಮಯಾಕಾರನೇ ! ನನ್ನ ಕೈಯೊಳಗೆ ಇದ್ದು ಯಾತಕ್ಕೆ

ಮಾತಾಡಲಾರೆ ! ನನ್ನ ತಾಯಿಯೂ,ನನ್ನ ತಂದೆಯೂ, ನನ್ನ ಅಜ್ಜನೂ ನನ್ನಬಂಧು ಬಳಗಗಳೂ ನೀನೇ ನನ್ನಗಂಡನೂ ನೀನೇ ನನ್ನ ಹೆಂಡತಿಯೂ ನೀನೆ, ನನ್ನ ಕೈಯೊಳಗಿದ್ದು ಯಾತಕ್ಕೆ ಮಾತಾಡಲಾರೆ ! ನಂನ ಕುಲಗುರುವೇ ! ನನ್ನ ವಿದ್ಯಾಗುರುವೆ ! ನನ್ನ ಜನ್ಮ ಜನ್ಮಾಂತರಗಳಲ್ಲಿಯೂ ಬಿಡದಂಥಾಗುರುವೇ ! ನನ್ನದೀಕ್ಷಾಗುರುವೇ । ನನ್ನಮೋಕ್ಷದ ಗುರುವೇ ! ನನ್ನ ಕೈಯೊಳಗೆ ಇದ್ದು ಯಾತಕ್ಕೆ ಮಾತಾಡಲಾರೆ ! ನನ್ನ ಮನವೆಂಬುವ ವನದ ವಸಂತಕಾಲವೇ ! ನನ್ನಘನವಾದ ಸುಖವಾದಪಾತ್ರವೇ ! ನನ್ನಘನವಾದ ಸುಖದಪಾತ್ರವೇ ! ನನ್ನಮನವೆಂಬುವ ಸಾಗರಕ್ಕೆ ಪೂರ್ಣಚಂದ್ರನೇ ! ನನ್ನಜ್ಞಾನದೃಷ್ಟಿಯೇ! ನನ್ನಪುಣ್ಯಮೂರ್ತಿಯೇ ನನ್ನ ಕೈಯೊಳಗೆ ಇದ್ದು ನನ್ನೊಡನೆ ಯಾತಕ್ಕೆಮಾತಾಡಲಾರೆ? ಎಲೈ, ಗುರುವೇ ! ನನ್ನಲ್ಲಿ ಬಂದು,ಭಿನ್ನವನ್ನು ಮಾಡಿದೆಯಲ್ಲಾ ! ನಾನು ನಿನಗೆ ಅನ್ಯನೇ ಹೇಳು ! ಎಲೈ,ಷಡಕ್ಷರಲಿಂಗರೂಪಿಯಾದಶಿವನೇ ! ನನ್ನೊಡನೆ ಮಾತಾಡದಿದ್ದಹಾದರೆ, ನಿನ್ನನ್ನುನಾನು ಜನ್ಮ ಜನ್ಮಾಂತರಕ್ಕೂ ಬಿಟ್ಟೇನೇ ಎಂದು ಈ ಪದ್ಯದಿಂದ ಸಾನ್ನಿಧ್ಯವಾಗಿರುವ ಶಿವನು ಪ್ರಸನ್ನನಾಗದೆ ಇದ್ದಾಗ್ಯೂ ಜನ್ಮಾಂತರಕ್ಕಾದರೂ ಶಿವನನ್ನು ಅಗಲಿರಬಾರದೆಂಬ ಶಿವೈಕ್ಯವನ್ನು ಹೇಳಿದರೆಂಬ ತಾತ್ಪರ್ಯವು. ... ❋

(೩೨) ರಾಗ- ದೇಶಿ. ಮೋಹವಿಲ್ಲದಪೂಜೆಯೆನಿಸುಕಾಲಗಳಿಂದ ಕೇಳುಮನವೇ। ದೇಹಿಗೆತಾಮಾಡಿಫಲವೇನುಅದರಿಂದ । ಕೇಳುಮನವೇ॥ ಪ ॥ ಹಸಿಯಗೋಡೆಯಹರಳಿಂದಲಿಯಿಟ್ಟಲು । ಕೇಳುಮನವೇ ॥ ಮಸೆದ ಕೂರಲಗಿಂದಬಳೆಯನಯೆಚ್ಚಂತೆ। ಕೇಳುಮನವೇ ॥ ೧ ॥ ಬಸ್ಮೆದುಲಿಂಗವನೋಡಿದಾಕ್ಷಣಬೇಗವು। ಕೇಳುಮನವೇ ॥ ಬೆಸುಗೆಗಳಿಲ್ಲದಮೋಹವಧ್ಯಾತಕೆ। ಕೇಳುಮನವೇ ॥ ೨ ॥ ಪುರುಷನಂಗಾಂಗವಬಯಸುವಲಲನೆಯು । ಕೇಳುಮನವೇ । ಪರಿಮಳದರಳಿಗೆಭ್ರಮರನೆಳಸುವಂತೆ । ಕೇಳುಮನವೇ ॥ ೩ ॥ ಪರಮಭೇದಲಿಂಗಕರದೊಳಗಿರುತಿರೆ। ಕೇಳುಮನವೇ ॥ ಪರರಣೆಸದುಚಿತ್ತವೇತರಮೋಹವು। ಕೇಳುಮನವೇ ॥ ೪ ॥ ಬಿಸಿಯಾದ ಹಾಲ್ಲೋಳುಮುಸುಡಿಕ್ಕಿದಶುನಿಯು । ಕೇಳುಮನವೆ ॥ ಸಸಿನೆಕಾಣುತ ಕೊಸರೊಡುವತೆರನಂತೆ। ಕೇಳುಮನವೆ ॥ ೫ ॥ ನುಸುಳುವಚಿತ್ತವಬಲು ಹಿಂದಪಿಡಿತಂದು । ಕೇಳುಮನವೆ ॥ ಶಶಿಧರನೊಳಗಿಡದೇತರಮೋಹವು ।

ಕೇಳುಮನವೆ ॥ ೬ ॥ ಸವತಿಯಶಿಶುಹಶಿದಳುಶಿರೆಸವತಿಯು । ಕೇಳುಮನವೆ ॥ ಜವನೂರನಡಿಗೆಗೆಮೊಲೆಯೂಡುವಂದದಿ । ಕೇಳುಮನವೆ ॥ ೭॥ ವಲಿಂಗವನುನೋಡಿಕರದಲ್ಲಿಚಿತ್ತಕ್ಕೆ । ಕೇಳುಮನವೆ ॥ ಭವಕಂಜಿನೆನದ ಧ್ಯಾತರಮೋಹವು। ಕೇಳುಮನವೇ ॥ ೮ ॥ ಬಿಡದೆಜಾರನುಜಾರೆಕಣ್ಮ ಯಾದರೆ। ಕೇಳುಮನವೆ ॥ ತಡೆದೋಡುವಾನಂದದೊಳುಚಿತ್ತವು। ಕೇಳ ಮನವೆ ॥ ೯॥ ವೃಢಷಡಕ್ಷರಲಿಂಗವನುಕಾಣುತಾಕ್ಷಣ। ಕೇಳುಮನವೆ ಬಿಡಿಸಿದಂದದಿತೊಡರದಮೋಹವ್ಯಾತಕ್ಕೆ । ಕೇಳುಮನವೆ ॥ ೧೦

(೩೨) ಟೀ ॥ ಎಲೈ— ಮನವೇಕೇಳು ! ದೇಹಧಾರಿಯಾದವನಿಗ ಮೋಹವಿಲ್ಲದಂಥಾ ಪೂಜೆಯನ್ನು ಎಷ್ಟು ಕಾಲಗಳಿಂದಲೂ ಮಾಡಿದಾ ಗ್ಯೂ ಫಲವೇನು ? ಎಲೈ— ಮನವೇ ಕೇಳು ! ಹಶಿಯಾದ ಗೋಡೆಯ ಮೇಲೆ ಕೆಸರನ್ನುಮೆತ್ತಿದರೆ,ತೀಕ್ಷ್ಣವಾದ ಆಯುಧದಿಂದ ಗಾಜುಬಳೆಯ ನ್ನು ಹೊಡೆದಹಾಗಿರುವದು. ಭಕ್ತಿಪುರಸ್ಸರವಾಗಿ ಲಿಂಗವನ್ನುನೋಡಿ ದಕ್ಷಣವೇ ಐಕ್ಯಗಳಿಲ್ಲದೆ ಇರುವ ಮೋಹವೆಂಬುವದು ಯಾತಕ್ಕೆ? ಎಲೈ ಮನವೇ ಕೇಳು ! ಪರಿಮಳವನ್ನು ದುಂಬಿಗಳುಹುಡುಕುವಹಾಗೆ ಪುರು ಷನು ಸ್ತ್ರೀಯ ಅಂಗಾಂಗಗಳನ್ನು ಹುಡುಕುತ್ತಿರುವನು. ಎಲೈ—ಮ ನವೇ ಕೇಳು ! ಲಿಂಗವು ಮಹಾಭೇದದಿಂದ ಕೈಯೊಳಗೆ ಇರುತ್ತಿರಲು ಚಿತ್ತವು ಭೇದವನ್ನುಬಿಟ್ಟು ಐಕ್ಯವನ್ನು ಪಡೆಯಲಾರದು. ಇದುಯೆಂಥಾ ಮೋಹ ? ಎಲೈ— ಮನವೇಕೇಳು ! ಬಿಶಿಯಾದಹಾಲಿನಲ್ಲಿ ಮುಖವಿಟ್ಟ ಬೆಕ್ಕಾದದ್ದು ಗಾಬರಿಗೊಂಡು ಓಡಿಹೋಗುವಪ್ರಕಾರದಲ್ಲಿ ತಪ್ಪಿಸಿಕೊಂ ಡು ಹೋಗುವ ಚಿತ್ತವನ್ನು ಬಲಾತ್ಕಾರವಾಗಿ ಹಿಡುಕೊಂಡು ಬಂದು, ಚಂದ್ರಧರನಾದ ಶಿವನೊಳಗೆ ಇಡದೆ ಎಂಥಾಮೋಹ? ಎಲೈ—ಮನವೇ ಕೇಳು ! ಸವತಿಯಮಗುವ ಹಶಿವಿಗೆ ಅಳುತ್ತಿದ್ದರೆಸವತಿಯಾದವಳು ಮಗುವು ಸಾಯುವಹಾಗೆ ಮೊಲೆ ಕೊಡುವಪ್ರಕಾರವಾಗಿ ಶಿವಲಿಂಗವನ್ನು ನೋಡಿ ಕರದಲ್ಲಿ ಚಿತ್ತಕ್ಕೆ ಜನನಾದಿಗಳಿಗಂಜುವಮೋಹವೆಂಥಾದ್ದು? ಹಾ ದರಗಿತ್ತಿಯನ್ನು ಹಾದರಗಾರನು ನೋಡಿದರೆ ಆಕೆಕಣ್ಣಿಗೆ ಮರೆಯಾ ದರೆ ಮನವು ತಡೆಮಾಡದೆ ಓಡಿ ಹೋಗುತ್ತಿರುವದು. ಎಲೈ— ಮನವೇ ಕೇಳು ! ಮಹಾದೇವನಾದ ಷಡಕ್ಷರಲಿಂಗಮೂರ್ತಿಯನ್ನು ಕಾಣುತ್ತಾ, ಆ ಕೊಡ್ಲೆ ಬಿಡಿಸಿದಹಾಗೆ ತೊಡರಿಕೊಳ್ಳದೆ ಇರುವದು ಎಂಥಾಮೋಹ

ವೆಂದು ಲಿಂಗದಲ್ಲಿ ದೃಢವಾದ ಮನವನ್ನು ನಿಲ್ಲಿಸಬೇಕಾದ ಕ್ರಮವನ್ನು ದೃಷ್ಟಾಂತಪಡಿಸಿ ಪೇಳಿದರೆಂದು ತಾತ್ಪರ್ಯವು. ... *

(೩೩) ರಾಗ- ಕುಸುಮಷಟ್ಪದಿ— ತನುವಿಡಿದುದುಷ್ಕೃತವ। ನೆನಿತೆನಲುಪೇಳುವೆನು। ಮನವೊಲಿದುಕೇಳುನೀನೆಲೆಯಾತ್ಮನೆ ॥ಪ॥ ಅನ್ನಉದಕದಚಿಂತೆ। ಯೆಂಣೆನೀರಿನಚಿಂತೆ। ಬಣ್ಣಬಳಿದಾಭರಣತೊಡುವಚಿಂತೆ। ಮಣ್ಣುಮನೆಗಳಚಿಂತೆ। ಹೊನ್ನುಹೆಂಣಿನಚಿಂತೆ। ಇನ್ನುಪುತ್ರರಚಿಂತೆಬಳಲ್ದಚಿಂತೆ ॥೧॥ ಅರಸುಗಳಭಯವಿದಕೆ। ಇರದೆಚೋರರಭಯವು। ಮರಳಿಅಗ್ನಿಯಭಯವುನೀರೆಭಯವು॥ ಉರಗವ್ಯಾಘ್ರನಭಯವು। ಅರಿರೋಗಗಳಭಯವು। ಕರಕಷ್ಟತನುವಿದಕೆಭಯವುನೋಡ ॥ ೨॥ ಶೀತೋಷ್ಣಗಳಭೀತಿ ಭೂತಬ್ರಂಹನಭೀತಿ। ಪೋತುನಡಿಯಲುಮುಳ್ಳದಸಿಯಭೀತಿ ॥ ಮಾತುಮದಸದಭೀತಿ। ರಾತ್ರಿಗುಳಿಯಲುಭೀತಿ। ಈತನುವಹಿಡಿದಿನಿತುಭೀತಿನೋಡಾ ॥ ೩ ॥ ಆಗಲದಕೆನಿನಿತು। ಸಾಗಿಸಲುನಿನಗೆತನು। ಆಗಹುದೆಧರೆಗಗನವೃಳ್ಳನಕಲೂ ॥ ಆಗಹುಟ್ಟಿದಬಳಿಕ। ಬೇಗಸಾವೀತನುವ। ಹಾಗೆಮನವನೆನೀನುನಂಬಬಹುದೂ ॥ ೪ ॥ ಇಂತಪ್ಪತನುವಿನ। ಭ್ರಾಂತಳಿದುಲಿಂಗದ। ಭ್ರಾಂತಿಯೊಳಗಿರುನಿನಗೆ ಸ್ಸುಖವಪ್ಪುದೂ। ಮುಂತೆನಿನ್ನಸುಖತನ್ನಂತೆಮಾಡುವನೊಲಿದು। ಕಂತುಹರಶಿವಷಡಕ್ಷರಲಿಂಗವು ॥ ... ೫ ॥

(೩೩) ಟೀ॥ ಎಲೈ— ಆತ್ಮನೇ ! ನೀನು ಮನಸ್ಸುಕೊಟ್ಟು ಕೇಳು ! ಶರೀರವನ್ನು ಧರಿಸಿ,ಅಕೃತ್ಯಗಳೆಷ್ಟೆಂದು ಹೇಳಲಿ, ಅನ್ನೋದಕಗಳ ಚಿಂತೆಯೂ, ಎಂಣೆ ನೀರುಗಳ ಚಿಂತೆಯೂ, ಮಾಳಿಗೆ ಮನೆಗಳಚಿಂತೆಯೂ, ಹೊನ್ನು ಹೆಂಣುಗಳ ಚಿಂತೆಯೂ, ಇನ್ನೂ ಮಕ್ಕಳ ಚಿಂತೆಯೂ, ಆಯಾಸದ ಚಿಂತೆಯೂ, ದೇಹಧಾರಿಗೆ ಅಕೃತ್ಯಗಳಾಗಿರುವವು, ಮತ್ತು ಈ ದೇಹಕ್ಕೆ ರಾಜಭೀತಿಯೂ, ಚೋರಭಯವೂ, ಅಗ್ನಿಭಯವೂ, ಜಲಭಯವೂ, ಸರ್ಪಭಯವೂ, ವ್ಯಾಘ್ರಭಯವೂ, ಶತ್ರು ರೋಗಗಳ ಭಯವೂ ಮೊದಲಾದ ಮಹಾಕಷ್ಟಗಳ ಭಯವು ಈ ದೇಹಕ್ಕೆ ಇರುವದು, ಮತ್ತು ಈ ಶರೀರಕ್ಕೆ ಛಳಿ ಬಿಸಿಲುಗಳ ಭೀತಿಯೂ,ಭೂತಭೇತಾಳಾದಿಗಳ ಭೀತಿಯೂ, ದಾರಿ ನಡಿಯುವಾಗ ಮುಳ್ಳುಗಳ ಭೀತಿಯೂ, ಕಾಮಭೀತಿಯೂ, ರಾತ್ರೀ ಹಗಲುಗಳ ಭೀತಿಯೂ ಇಂತಿಷ್ಟು ಭೀತಿಗಳು

ತನುವೆನ್ನು ಧರಿಸಿರುವದರಿಂದುಂಟಾಗುವವು. ಆದರೆ ಆಗಲಿ, ಅದಕ್ಕೆ
ನು ಯೆಂದು ಆಕಾಶ ಭೂಮಿಗಳಿರುವವರಿವಿಗೂ ಸಾಗಿಸುವದಕ್ಕೇನಾ
ರೂ ಆದೀತೇ ? (ಜಾತಸ್ಯಮರಣಂಧೃವಂ) ಎಂಬಂತೆ ಹುಟ್ಟಿದಾಗಲ
ಈ ತನುವಿಗೆ ಮರಣವು ತಪ್ಪಿದ್ದಲ್ಲವೆಂದು; ಎಲೈ— ಮನವೇ ! ನೀನುನಂ
ಬು, ಈ ಪ್ರಕಾರವಾದ ತನುವಿನಭ್ರಾಂತಿಯು ಅಳಿದು ಲಿಂಗದ ಭ್ರಾಂತಿ
ಯುಳ್ಳವನಾಗಿರುವಿಯಾದರೆ, ನಿನಗೆ ಸುಖವುಂಟಾಗುವದು ಮುಂದಕ್ಕೆ
ಕಾಮಹರನಾದ ಷಡಕ್ಷರಲಿಂಗವು ನಿನ್ನನ್ನು ತನ್ನಂತೆಯೇ ಪ್ರೀತಿಯಿಂದ
ಮಾಡುವನೆಂದು ಈಪದದಿಂದ ತನುಧರ್ಮಗಳು ಕಷ್ಟಕರವಾದವುಗಳಾದ್ದ
ರಿಂದ ಆದರಲ್ಲಿನ ಭ್ರಾಂತಿಯಳಿದು ಲಿಂಗಧ್ಯಾನಾಸಕ್ತನಾಗುವದಾದರೆ
ಶಿವಸಾರೂಪ್ಯ ಸುಖಾನುಭವವನ್ನೈದುವನೆಂದು ಹೇಳಿದರೆಂದು ತಾ:

(೩೪) ರಾಗ- ಕುಸುಮಷಟ್ಪದಿ— ಧರೆಯತ್ತಲೆನ್ನುವನು। ಬರಿಸ
ದಿರುಸದ್ಗುರುವೆ । ಧರೆಯಪಾಪದೊಳುನಾಜನಿಸಲಾರೇ ॥ ಪಲ್ಲ॥ ಹುಸಿಕ
ಳವುಡಂಬಕವು। ನುಸುಳುಹೋಗಿರೆತಳ್ಳಿ । ಹಿಸುಣಹೀನಾದಯದ ಶಬ್ದ
ಗಾರಾ ॥ ಕಿಸುಕಳವುಭೀಮರಥಿ । ವಿಷಮವಿಗಡವುಕುರುಬ। ಹೊಸಹು
ರುಡುಜಾರರಜನಿತಾಲಯಾ॥ ೧ ॥ ನಿರುದೆಯುವುನಿಷ್ಟುರವು। ದುರುಳತ್ವ
ಧಾಳಕವು । ಪರಬಂಧಕವುಡಂಭವಪವಾದವು ॥ ನೆರೆಚಂಡಿತನಪೊಲಬು।
ಪರಧನದವಂಚನೆಯು । ಪರರಕೆಡಿಸುವಸಿದ್ಧಿಗಳುಮಂತ್ರದಾ॥ ಹರನರ್ಚ
ಕರುಅಲ್ಪ । ಪರನಿಂದಕರುಬಹಳ । ಗುರುಭಕ್ತರಲ್ಪಗರು ವಿಗಳುಬಹ
ಳಾ ॥ ಹರಸ್ಮೃತಿಯಬಿಟ್ಟುತಾ । ನೆರಸ್ಮೃತಿಯಲಾಲಿಪರು । ನಿರಯದಾ
ವಹವಾಗಿತೋರುತಿಹರೂ॥ ೩॥ ಪತಿವ್ರತೆಯರಿಲ್ಲಪರ । ಸತಿಮುಖಿಯ ರಿ
ರುತಿಹರು । ಜಿತಕಾಮರಿಲ್ಲವತಿಕಾಮರಿಹರು ॥ ವ್ರತನೇಮಗಳದಿಲ್ಲ । ಕೃ
ತಕಿಗಳುಘನವೈಯ್ಯ । ಕ್ಷಿತಿಪಕಾತ್ರಯಮಾದತಾರಮನೆಯೂ ॥ ೪ ॥ಇ
ಲ್ಲವೆನಬಾರದಲೆ । ಇಲ್ಲುಂಟುಧರ್ಮಗಳು । ಕಲ್ಲೊಳಗೆಅಡಗಿರ್ಪ ಪ
ರುಷದಂತೆ ॥ ಖುಲ್ಲಮಾನವನೆನಗೆ । ಪೊಳ್ಳಿದರುಕಾಣಿಸರು । ಪೊಲ್ಲೆಮು
ತೃರಪಡಕ್ಷರಿಲಿಂಗವೇ ॥ ... ... ೫ ॥

(೩೪) ಟೀ॥ ಎಲೈ— ಸದ್ಗುರುಮೂರ್ತಿಯೇ ! ನಾನು ಧರೆಯ
ಪಾಪದೊಳಗೆ ಜನ್ಮಿಸಲಾರೆ ನಾದಕಾರಣಧರೆಕಡೆಗೆ ಎನ್ನುವದನ್ನು ನನಿ
ಗೆ ಬರಮಾಡದೆ ಇರು; ಸುಳ್ಳು ಕಳ್ಳತನ, ಡಂಭತನ, ಮೋಸ,ಅವಿವೇಕ

ದುರ್ಜನ, ಅಪಮಾನ, ದುರ್ಭಾಷೆ, ಕೊರಚಾಟ, ಕೊಲೆ, ತಂತ್ರ, ಕಠಿನ, ಜಪುಣತನ, ವಿಧಾವಿಧವಾದ ಚಾಡಿ, ಜಾರರ ತವರುಮನೆ ಯೆನಿಸು ವಪಾಪವು ಧರೆಯೊಳಗೆ ನಿಬಿಡವಾಗಿರುವದು. ಮತ್ತು ನಿರ್ದಯವು, ನಿಷ್ಠೂರ, ದುಷ್ಟತನ, ವೈಯ್ಯಾರ, ಪರಧನದ ವಂಚನೆ, ಪರರಸೊತ್ತನ್ನು ಕೆಡಿಸುವ ಮಂತ್ರಸಿದ್ಧಿಯು ಇವೇ ಮೊದಲಾದವುಗಳೆಲ್ಲಾ ಭೂಮಿಯಲ್ಲಿ ಪಾಪವಾಗಿರುವದು. ಶಿವನನ್ನು ಪೂಜಿಸುವಂಥವರು ಕೊಂಚಮಂದಿ, ಪರರನ್ನು ದೂಷಿಸುವವರು ಬಹುಮಂದಿ, ಸದ್ಗುರುಭಕ್ತರಾಂಥವರು ಕೊಂಚಮಂದಿ, ಗರ್ವಿಷ್ಠರು ಬಹುಮಂದಿ, ಶೈವಶಾಸ್ತ್ರವನ್ನು ಇಲ್ಲವೆ ಶಿವಾಶ್ರಯವನ್ನು ಬಿಟ್ಟು, ನರರ ಆಶ್ರಯವನ್ನು ಮಾಡುವಂಥವರು ನರಕದ ಮನೆಯವರಾಗಿ ಕಾಣುತ್ತಿರುವರು. ಪತಿವ್ರತೆಯರೆಂಬವರಿಲ್ಲ, ಪರಪುರುಷನಿಗೆ ಆಯತ್ತರಾದವರು ಇರುತ್ತಿರುವರು, ಜಿತೇಂದ್ರಿಯರೆಂಬುವರಿಲ್ಲ, ಬಹು ಕಾಮಾಸಕ್ತರಾದವರು ಇರುತ್ತಿರುವರು. ವ್ರತನೇಮಗಳೆಂಬವುಗಳೇನೂ ಇಲ್ಲ, ಕೃತ್ರಿಮಗಳು ಬಹಳವಾಗಿರುವವು, ಭೂಮಿಯು ಪರರ ಆಶ್ರಯವಾದ ತೌರಮನೆಯಾಗಿರುವದು. ಎಲೇ— ಮನವೇ! ಆದರೆ ಇಲ್ಲವೆಂದು ಹೇಳಬೇಡ, ಧರ್ಮಿಷ್ಠರು ಕಲ್ಲಿನೊಳಗೆ ಅಡಗಿರುವ ಪರುಷಶಿಲೆಯಂತೆ ಇಲ್ಲಾ ಉಂಟು. ಎಲೈ—ಷಡಕ್ಷರಲಿಂಗವೇ! ನಾನು ಕೆಟ್ಟಮನುಷ್ಯನಾದ್ದರಿಂದ ವೊಳ್ಳೇಯವರು ನನಿಗೆಗೋಚರವಾಗಲರಿಯರು ಆದಕಾರಣ ಮನುಷ್ಯತ್ವವನ್ನು ವೊಲ್ಲೆನೆಂದು ಈ ಪದದಿಂದ ಭೂಮಿಯಲ್ಲಿ ನರನಾಗುವದು ಪಾಪಕ್ಕೆ ಗುರಿಯಾಗುವದೆಂದೂ, ಮನುಷ್ಯತ್ವವು ಬೇಡವಾದ್ದೆಂದೂ, ಪೇಳಿ ದೈವತ್ವವನ್ನು ಸಾಧಿಸಿ ಪಡೆಯಬೇಕೆಂದು ಪೇಳಿದರೆಂಬ ತಾತ್ಪರ್ಯವು. ... *

(೩೫) ರಾಗ ಕುಸುಮಷಟ್ಪದಿ—ನಮ್ಮನೆಯಕೇಳಕ್ಕಬ್ರಹ್ಮಬಂದೆಡೆಗೊಂಡು। ನಮ್ಮನೆಯಸುತಬಂಧುಗಳಕೊಂದಿತೂ॥ ಪ ॥ ಯೇಳುಮಕ್ಕಳಕೊಂತು। ಯೇಳುತೊತ್ತಿರಕೊಂತು। ಮೇಲೈವರಣಗಳಕೊಂದಿಕ್ಕಿತೂ॥ ಕಾಳಿನೊಳಗಿರುತಿರ್ಪ। ಜಾಳಿಗೆಲ್ಲವಶಿಂತು। ಬಾಳಲೀಸದು ಮನೆಯನೆಲ್ಲರಂತೇ ॥ ೧ ॥ ಮೂರುಕರುಗಳುಕೊಂತು। ಮೂರುಪಶುಗಳಕೊಂತು। ಮೂರೈದುಕೋಣಗಳಕೊಂದಿಕ್ಕಿತೂ॥ ಮೂರುಸೊಸೆಯರಕೊಂತು। ಮೂರಳಿಯರನುಕೊಂತು। ಕೇರಿಕೇರಿಗಳಲ್ಲಿಹರಿವೃತಿ

ದಕೋ ॥ ೨ ॥ ಜಡೆಗಳನುಕೆದರಿತಾ । ಹಿಡಿದುಶೂಲದಿಪೆಣನ । ಬಿ
ದೆವ್ಮೈಯೊಳುಹಾವತೊಡರಿಸಿಹುದೂ ॥ ಕಡಿದತಲೆಕರದೊಳಗೆ। ಅರಿ
ತಲೆಕೊರಳೊಳಗೆ। ಬಿಡದೆನ್ನನಂಜಿಸುತಬರುತಲಿದಕೋ ॥ ೩ ॥ ಇರುಳ
ಸುಳಿಯಲಿಕಂಜಿ। ಪುರವಮೂರುಹಾಳಾಗಿ । ನೆರದಜನರುಗಳೆಲ್ಲವೋಡಿ
ಕ್ಕಾ॥ ಪುರಪುರದಮಧ್ಯದಲಿ। ವುರಿವುತ್ತಿರುಗುತಿದೆ। ಇರುಳನಾಕಣ್ಣು
ಚ್ಚಲವ್ಮನವ್ವಾ॥ ೪ ॥ ಇನ್ನೇಂವೆಯೆನ್ನುವನು । ಬೆನ್ನಬಿಡದಕ್ಕ ಕ್ರಿಯ್ಯ ।
ತಂನನಗಲಿದಳೆಂದುಹಿಂದುಮುಂದೂ ॥ ಎಂನಕಾದಿರುತಿಹುದು । ತಂನ
ಹೆಸರೇನೆನಲು। ಚೆಂನಷಡಕ್ಷರಿಯಲಿಂಗವಂತೇ॥ ೫॥

(೩೫) ಟೀ ॥ ಅಕ್ಕಾ ಕೇಳು ! ನಮ್ಮಮನೆಯನ್ನು ಬ್ರಹ್ಮವೆಂಬು ವದು ಬಂದು ಆಕ್ರಮಿಸಿಕೊಂಡು, ನಮ್ಮ ಮನೆಯಲ್ಲಿರುವ ನೆಂಟರಿಷ್ಟ ರನ್ನೆಲ್ಲಾ ಕೊಂದಿತು. ಹ್ಯಾಗಂದರೆ—ಏಳು ಮಕ್ಕಳೆನಿಸುವ ಏಳು ಧಾತುಗಳನ್ನೂ. ಏಳು ತೊತ್ತಿರೆನಿಸುವ ಏಳು ವ್ಯಸನಗಳನ್ನೂ, ಐವರಣ್ಣರೆನಿಸುವ ಐದು ಇಂದ್ರಿಯಗಳನ್ನೂ ಕೊಂದುಬಿಟ್ಟಿತು. ಮತ್ತು ಕಾಳೆಂದೆನ್ನಿಸುವ ಭವಬೀಜದಲ್ಲಿನ ಮೊಳಕೆಯನ್ನು ತಿಂದುಬಿಟ್ಟಿತು. ಎಲ್ಲವರಹಾಗೆ ಮನೆ ಯೆನಿಸುವ ದೇಹವನ್ನು ಬಾಳಲೀಸದು. ಪರಂತು, ಮೂರುಕರುಳೆನಿಸುವ ಮೂರು ಅವಸ್ಥೆಗಳನ್ನೂ, ಮೂರು ಪಶುಗಳೆನಿಸುವ ಮೂರು ಗುಣಗಳನ್ನೂ, ಮೂರು ಐದು ಕೋಣಗಳು ಎನಿಸುವ ಅಷ್ಟಮದಗಳನ್ನೂ ಕೊಂದುಹಾಕಿತು. ಮತ್ತು ಮೂರು ಸೊಸೆಯರೆನಿಸುವ ಹೆಣ್ಣು, ಹೊನ್ನು, ಮಣ್ಣು ಎಂಬವುಗಳನ್ನೂ, ಮೂರು ಅಳಿಯರೆನ್ನಿಸುವ ತಾಪತ್ರಯಗಳನ್ನೂ ಸಂಹರಿಸಿತು. ಇಗೋ ! ಕೇರಿಕೇರಿಗಳೆನಿಸುವ ಇಪ್ಪತ್ತೈದು ತತ್ವಗಳಲ್ಲಿಯೂ ಸಂಚರಿಸುತ್ತಿದೆ. ಅದು ಜಡೆಗಳನ್ನು ಕೆದರಿಕೊಂಡು, ಶೂಲದ ಮೊನೆಯಲ್ಲಿ ಹೆಣವನ್ನು ಹಿಡಿದು, ಮೈಯೊಳಗೆಲ್ಲಾ ಸರ್ಪಗಳನ್ನು ಸುತ್ತಿಕೊಂಡಿರುವದು. ಕತ್ತರಿಸಿದ ತಲೆಯನ್ನು ಕೈಯಲ್ಲಿ ಹಿಡುದುಕೊಂಡು, ಹರದ ತಲೆಗಳನ್ನು ಕೊರಳಿಗೆ ಸರಾಪೋಣಿಸಿ ಹಾಕಿಕೊಂಡು, ನನ್ನನ್ನು ಅಡಿಗಡಿಗೆ ಹೆದರಿಸುತ್ತಾ, ಇಗೋ ! ಬರುತ್ತಲಿದೆ, ಮೂರುಪಟ್ಟಣಗಳನ್ನ ಹಾಳಾಗಿ ಮಾಡಿದ್ದರಿಂದಲೂ, ಕತ್ತಲೆಯನ್ನು ನಾಶನಾಮಾಡಿದ್ದರಿಂದಲೂ, ಅದರ ಕಾಟವನ್ನು ತಾಳಲಾರದೆ ರಾತ್ರಿ ಸಂಚಾರಕ್ಕೆ ಸುದಾಹೆದರಿ, ಜನವೆಲ್ಲಾ ಓಡಿ

ಹೋಗುತ್ತಲಿದೆ. ಪಟ್ಟಪಟ್ಟಗಳ ನಡುವೆಯೂ ಸುಡುತ್ತಾ ತಿರುಗುತ್ತಲಿದೆ. ರಾತ್ರಿಯಲ್ಲಿಯೂ, ನಾನು ಕಣ್ಣು ಮುಚ್ಚಲಾರೆನಮ್ಮಾ! ಅಕ್ಕತಿಯ್ಯಾ ಕೇಳು! ನಾನಿನ್ನೇನೆಂದು ಹೇಳಲಿ ? ಆ ಬ್ರಹ್ಮವು ನನ್ನನ್ನು ಬಿಡಲೊಲ್ಲದಲ್ಲಾ ? ತನ್ನನ್ನು ಅಗಲಿದೆನು ಎಂದು ಹಿಂದುಮುಂದೂ ಎಡೆಬಿಡದೆ ಕಾದುಕೊಂಡಿರುವುದು, ತನ್ನ ಹೆಸರೇನೆಂದು ಕೇಳುವಲ್ಲಿ ಅದರ ಹೆಸರು ಚನ್ನ ಷಡಕ್ಷರಲಿಂಗವಂತೆಯೆಂದು, ಈ ಪದದಿಂದ ಬ್ರಹ್ಮವು ತನ್ನೊಳಗೆ ತಾನೇ ತಾನಾಗಿ ನೆಲೆತು, ಶರೀರದಲ್ಲಿನ ಸಕಲ ಇಂದ್ರಿಯಾದಿಗಳನ್ನೂ ನಾಶನಮಾಡಿ ಸಾಕ್ಷಾತ್ತಾದ ಶಿವಲೀಲೆಯನ್ನು ತೋರುತ್ತಲಿಥೆಯೆಂದು ಪೇಳಿದರೆಂಬ ತಾತ್ಪರ್ಯವು. ... *

(೩೬) ರಾಗ-ವಾರ್ಧಿಕಷಟ್ಪದಿ—ಯುಗವನಂತವುಗುಹಿಂತಿರುತಿಹವು ಅವರಲ್ಲಿ। ಜಗವನಾಳಿದರಾಯರುಗಳುಹೋದರುಕೆಲರು। ಮಿಗೆದನುಜಮನುಜರವಧಿಗಳಿಲ್ಲದಮರಗಣಸುರಸಿದ್ಧರುಗಳಳಿದರೂ ॥ ಪ ॥ ಆನಂದಸ್ವೇದಜಂ ತಾನುಂಜರಾಯುಜಂ। ಯೇನೆಂಬೆನಂಡಜಂ ಬೀಜಜಂ ಯುಗಮುಂದೆ। ನೀನೋಡುಭಿನ್ನ ಯುಕ್ತವ್ಯಕ್ತವೆಮದಾಯು ಮಣಿರಣಂಮೂನ್ಯರಣವೂ॥ ನೂನಯುಗವೀಶ್ವರಾಜ್ಞಾಕಾಲಸಂಮತಂ। ನೀನುತಿಳಿಕೃತತ್ರೇತದ್ವಾಪರಂಕಲಿಯುಗಂ। ತಾನುತಿರುತಿರುಗಿಮರಮರಳಿಹೋಗುತಿಹವುಮೂಢರಿವಗಳನರಿಯರೂ॥ ೧॥ಆದಿಮನುಮಿಂದ್ರನುಕಾಲಸ್ಥಲಂದುಂಧು। ಮೊದಿರೇಶಂಬುಸುತಹರಿಶ್ಚಂದ್ರರೋಹಿತಂ। ವಾದಿನಳಕೃಪಚ್ಯವನಪೂರುರವಸುಗಳಿಂಪರೀತಾಪ್ರಿಯವರನಿಂದಾ ॥ ಭೂಧವಂ ಮಾಂಧಾತನಾಭಗೀರಥನಾದಿ। ಯಾದಪರಿತಾಪಿಯೂಗಿರುವಗೋಪಾಲತಾ। ನಾದಿಯಹನಂದಗೋಪಾಲವಸುದೇವ ಶ್ರೀಕೃಷ್ಣಾದಿಗಳು ಅಳಿದರೂ ॥ ತಾಳಾಸುರಂಪಂಚಮೇಢ್ರಾಸುರಂವ್ಯಾಘ್ರು। ಲಾಳಾಸುರಂಶಕಟವಿಕಟಾಸುರಂನರಕ। ವ್ಯಾಳಾಸುರಂಕಾಕಮೂಕಾಸುರಂರಾವಣಂಸೋಮಕಾಸುರಕನೂ ॥ ಜ್ವಾಲಾಸುರಂರಕ್ತಬೀಜಾಧರಂನಮುಚಿ। ಕಾಳಾಥರಂಬಲಿಯು ದೇವಾಂತಕಂಜಂಭ। ಜಾಳಂಧರಂಭಸ್ಮದೇವಾಸುರಂಮುಖ್ಯವಾಗಿರ್ದಸುರರಳಿದರೂ॥ ೩॥ ಗೋರಟಂಚರ್ಪಟಿಯುರತ್ನಗೋಪಂವ್ಯಾಳಿ। ಧೀರಮಥ್ಯಾಂಧ್ರುನಾಗಾರ್ಜುನಂಖರ್ಪರಂ। ಧಾರುಣಿಯೊಳಳಿದರಿಮುನದಿಚ್ಛೆಮರಣದಶ್ರೌದ್ರೋಣಭೀಷ್ಮರುಅಳಿದರೂ ॥ ವಾರಿಜಾಕ್ಷಂ

ವಾರಿಜೋದ್ಭವಂಮೊದಲಾದ। ಸೂರೇಂದ್ರನಿರ್ಜರರುಯಕ್ಷ ಕಿಂನರಗ
ಡ। ಮೂರುತಾಪನನವರು ಈರೇಳುಲೋಕದೊಳಗಳಿದರುಳಿದರ ಕಾ
ನೂ॥ ಇವರವೂತಂತಿರಲಿಯೌದುಂಬರದವೃಕ್ಷ। ತವೆಕಾಲಕಾಲಕ್ಕೆ ಫ
ದೋರಿಯಳಿವಂತೆ। ಶಿವನೊಳಗೆಬ್ರಹ್ಮಾಂಡಕೋಟಿಗಳು ಬಗೆದೊಗೆದ
ತೋರಿಯಡಗುತಲಿರ್ಪವೂ॥ ಭವರಹಿತವುಲವೂಯೆಗಳರಹಿತಫಲರ
ತ। ಶಿವಗಣಂಗಳುನಿತ್ಯಸುಖದೊಳಿರುತಿಹರುಗಡ। ಶಿವಷಡಕ್ಷರಲಿಂ
ದೊಳಗಡಗಿಹೊರಗಿನಳಿವುಳಿವುಳಿವುಗಳನೋಡುತಿಹರು॥ ೫

(೩೬) ಟೀ॥ ಲೆಖ್ಖವಿಲ್ಲದಂತೆ ಕೃತಾದಿ ಚತುರ್ಯುಗಗಳು ನ
ಶವನ್ನೈದುತ್ತಿರುವವು. ಅವುಗಳಲ್ಲಿ ಜಗತ್ತನ್ನು ಆಳಿದ ಕೆಲಕೆಲ ಅರಸ
ಗಳೂ, ಮನುಷ್ಯರೂ, ದೇವದೈತ್ಯರುಗಳೂ, ಸಿದ್ಧಸಾಧ್ಯರುಗಳೂ, ಮೊ
ದಲಾದ ಅನೇಕರು ಅಳಿದರು. ಮತ್ತು ಸ್ವೇದಜ, ಅಂಡಜ, ಉದ್ಭಿಜ,
ರಾಯುಜ, ಎಂಬುವ ನಾಲ್ಕು ವಿಧವಾದ ಸೃಷ್ಟಿಗಳೂ ಈಶ್ವರಾಜ್ಞಾನ
ಸಾರವೂದ ಕಾಲವಶದಿಂದ ಕೃತ ತ್ರೇತಾದಿ ಯುಗಗಳಲ್ಲಿಯೂ ಅಳಿದ
ಹೋಗುತ್ತಿರುವದನ್ನು ಮೂಢರಾದವರು ಅರಿಯರು. ಆದಿಮನು,ದು
ಧುಮೂರ, ಹರಿಶ್ಚಂದ್ರ, ರೋಹಿತ, ನಳ, ಕೃಪ, ಚ್ಯವನ, ಪುರೋರ
ಸ್ಸ, ಮಾಂಧಾತ, ಭಗೀರಥ, ಯಾದವರು, ನಂದಗೋಪನು, ವಸುದೆ
ವನು ಶ್ರೀಕೃಷ್ಣನು ಮೊದಲಾದವರೆಲ್ಲಾ ಅಳಿದರು. ಮತ್ತು ಕಾಳಾಸ
ರ, ಪಂಚಮೇಢ್ರಾಸುರ, ವ್ಯಾಘ್ರಾಸುರ, ಲಾಳಾಸುರ, ಶಕಟಾಸುರ
ವಿಕಟಾಸುರ, ನರಕಾಸುರ, ವ್ಯಾಳಾಸುರ, ಕಾಕಾಸುರ, ಮೂಕಾಸುರ
ರಾವಣಾಸುರ, ಸೋಮಕಾಸುರ, ಜ್ವಾಲಾಸುರ, ರಕ್ತಾಸುರ, ಬೀಜಾ
ಸುರ, ನಮುಚಿ, ಬಲಿ, ಜಲಂಧರ, ಭಸ್ಮಾಸುರ ಇವರೇ ಮೊದಲಾದ ಅ
ಸುರರೆಲ್ಲಾ ಅಳಿದರು. ಮತ್ತು ಗೋರಟ, ಚರ್ಪಟಿ, ರತ್ನಗೋಪ, ಮ
ಧ್ಯಾಂಧ್ರನಾಗಾರ್ಜುನ, ಖರ್ಪರ, ಈ ಮೊದಲಾಗಿ ಭೂಮಿಯೊಳಗ
ದ್ದ ಸಿದ್ಧರೆಲ್ಲಾ ಅಳಿದರು. ಸ್ವೇಚ್ಛಾಮರಣವುಳ್ಳವರಾದ ಭೀಷ್ಮದ್ರೋ
ಣಾದಿಗಳೂ ಅಳಿದರು. ವಿಷ್ಣುಬ್ರಹ್ಮರೇ ಮೊದಲಾದ ನಿತ್ಯಸೂರಿಗಳ
ಜರಾವರ್ಜಿತರಾದ ದೇವ ದಾನವ ಗಂಧರ್ವ ಯಕ್ಷ ಕಿನ್ನರ ಕಿಂಪುರು
ಷರೇ ಮೊದಲಾಗಿರುವ ಏಳುಲೋಕದೊಳಗಿರುವರನ್ನೊಬ್ಬರನ್ನೂ ಅ
ಳಿದವರನ್ನು ನಾಕಾಣೆನು. ಅತ್ತೀಮರದಲ್ಲಿ ಕಾಯಿಗಳು ಕಾತು ಉದ

ರಿಹೋಗುವಹಾಗೆ ಶಿವನಲ್ಲಿ ಬ್ರಹ್ಮಾಂಡಕೋಟಿಗಳೆಲ್ಲಾ - ಉಂಟಾಗಿ ತೋರಿ ಈಶ್ವರಾಜ್ಞೆಯಿಂದ ನಾಶವನ್ನೈದುವ ಇವರ ಮಾತು ಹಾಗಿರಲಿ; ಭವರಹಿತರಾಗಿಯೂ, ಪಾಪರಹಿತರಾಗಿಯೂ, ಕಳಂಕ ಕಲ್ಮಷಗಳಿಲ್ಲದವರಾಗಿಯೂ ಇರುವ ಶಿವಶರಣರಾದವರು ಷಡಕ್ಷರಲಿಂಗೈಕ್ಯವಂನುಪಡೆದು, ಶಿವನೊಳಗಿದ್ದುಕೊಂಡು, ಹೊರಗೆ ಆಗಿ ಹೋಗುತ್ತಿರುವವುಗಳನ್ನೆಲ್ಲಾ ನೋಡುತ್ತಿರುವರೆಂದು ಈಪದ್ಯದಿಂದ ಪ್ರಪಂಚವೆಂಬುವದು ಮಿಥ್ಯೆಯೆಂದೂ ಶಿವೈಕ್ಯವಾದ ಶರಣರು ಇದನ್ನರಿತಿರುವರೆಂದೂ ಪೇಳಿದರೆಂಬ ತಾತ್ಪರ್ಯವು. ... ... *

(೩೭) ರಾಗ- ಕುಸುಮಷಟ್ಪದಿ— ಮಾಯೆನೀನತಿಚಲುವೆ । ಕಾಯುವುನ್ನವೆಚಲುವು । ಹೇಯವಾಯಿತುವೊಳವನರಿತಬಳಿಕಾ ॥ಪ॥ ನಿನ್ನ ಮುಖಚಂದ್ರನೊಲು । ನಿನ್ನಕ್ಷಿಕಮಲದಳ । ನಿನ್ನಕುಚಪೊಂಗಲಶದಂತೆ ಮಾಯೆ । ನಿನ್ನಂಗಕನಕಲತೆ। ನಿನ್ನಧರುಬಿಂಬಫಲ। ನಿನ್ನನೀಕ್ಷಿಸಿಸೋಲದವರಾರೆಲೇ ॥ ೧ ॥ ನಿನ್ನಮೃದುವಚನಕಂ । ನಿನ್ನದೈನ್ಯೋಕ್ತಿಗಂ । ನಿನ್ನಕಡೆಗಂಣನೋಟದಭಾವಕೇ ॥ ನಿನ್ನನಸುಮುನಿಸಿಗಂ। ನಿನ್ನಚಾತುರ್ಯಕಂ । ನಿನ್ನಬೇಳುವೆಗೆಸಿಲುಕದವರಾರೂ ॥ ೨ ॥ ಅಂಣತಮ್ಮನುತಂದೆ । ತನ್ನಪುತ್ರನುಅಳಿಯ । ಇನ್ನುಳ್ಳಪುರುಷರಾದವರೆಲ್ಲರೂ ॥ ನಿಂನ ಮೋಹವುಯೆಂಬ ! ಉನ್ನತದಪಾಶದಲಿ । ತಿಂಣನೇಬಿಗಿದಿರ್ಪನುಸುಳ್ವರಾರು ॥ ನಿನ್ನೊಳಗೆಕಾಲನಿಹ। ನಿನ್ನೊಳಗೆಕಾಮನಿಹ। ನಿನ್ನೊಳಗೆನೆಳಲುಗತ್ತಲೆಗಳಿಹವೂ ॥ ನಿನ್ನೊಳಗೆವಿಷವಿಹುದು । ನಿನ್ನೊಳಗೆನರಕಗಳು । ಇನ್ನುನಿನ್ನನುಗೆಲುವರಾರುಮಾಯೆ ॥ ೪ ॥ ಕಾಮುಕಮಲಾದಿನಿ, ರ್ನಾಮುಕಾಡುವಮಾಯೆ । ಭೀಮನೆನಿಸುವಷಡಕ್ಷರಲಿಂಗನಾ ॥ ನಾಮರೆಯಹೊಕ್ಕುನೆರೆ। ಕಾಮರಿಹೊಗದಂತೆ ನೀಮುಂನದುಶ್ಚರಿತೆಯೊಳಗರಿವೆನೂ ॥ ... ... ೫ ॥

(೩೭) ಟೀ ॥ ಎಲೈ— ಮಾಯಾದೇವಿಯೇ ! ನೀನು ಅತ್ಯಂತ ಸೌಂದರ್ಯವುಳ್ಳವಳು ? ಶರೀರವು ನೋಡಿದರೆ ಅದಕ್ಕಿಂತಲೂ ಚಲುವಾದದ್ದು. ಆದರೆ ಒಳ ಮರ್ಮವನ್ನು ಕಂಡಬಳಿಕ ಹೇಸಿಕೆಯಾಯಿತು. ಎಲೈ ಮಾಯಾದೇವಿಯೇ ! ನಿನ್ನಮುಖವು ಚಂದ್ರನಂತೆಯೂ, ನಿನ್ನ ಕಂಣು ತಾವರೇಯೆಸಳಿನಹಾಗೆಯೂ, ನಿನ್ನ ಸ್ತನಗಳು ಭಂಗಾರು ಕಲಶಗಳ

ಹಾಗೆಯೂ, ನಿನ್ನ ಅಂಗಾಂಗಗಳು ಬಂಗಾರಿನ ಬಳ್ಳಿಯಹಾಗೆಯೂ, ನ್ನ ತುಟಿಯು ತೊಂಡೆಹಣ್ಣಿನಹಾಗೆಯೂ ಇರುವದರಿಂದ ಇಂಥಾ ಲುವೆಯಾದ ನಿನ್ನನ್ನು ದೃಷ್ಟಿಸಿ ನಿನಗೆ ಸೋಲದೆ ಇರುವವರು ಯಾರು ಎಲೈ— ಮಾಯಾದೇವಿಯೇ! ನಿನ್ನ ಸವಿನುಡಿಗೂ, ನಿನ್ನ ಮೇಲ್ನಡೆಗೂ ನಿನ್ನ ಕಡೆಗಣ್ಣಿನನೋಟದ ಭಾವಕ್ಕೂ, ನಿನ್ನ ಸೂಕ್ಷ್ಮವಾದ ಕೋಪಕ್ಕೂ ನಿನ್ನ ಚಮತ್ಕಾರಕ್ಕೂ, ನಿನ್ನ ಮೊಂಕುಮಾಡುವ ಸಾಹಸಕ್ಕೂ ಸಿಕ್ಕಿಕೊಳ್ಳದೆ ಇರುವವರು ಯಾರು ? ಎಲೈ— ಮಾಯಾದೇವಿಯೇ ! ಅಣ್ಣ, ತಮ್ಮ, ತಂದೆ, ಮಗ, ಅಳಿಯ ಇನ್ನೂ ಉಳ್ಳಂಥಾ ಪುರುಷರು ಯಾರುಂಟೋ ಅವರೆಲ್ಲರನ್ನೂ ನಿನ್ನ ಮೋಹಪಾಶವೆಂಬುವ ದೊಡ್ಡದಾದ ಹಗ್ಗದಲ್ಲಿ ಕಟ್ಟಿ ಬಿಗಿದಿರುವಿಯಲ್ಲಾ ? ಈ ಕಟ್ಟನ್ನು ಬಿಡಿಸಿಕೊಳ್ಳುವಂಥವ ರ್ಯಾರು ? ಎಲೈ— ಮಾಯಾದೇವಿಯೇ ! ನಿನ್ನೊಳಗೆ ಕಾಲನೂ, ಕಾಮನೂ, ನೆಳಲೂ, ಕತ್ತಲೂ, ವಿಷವೂ, ನರಕವೂ, ಮೊದಲಾದವುಗಳೆಲ್ಲಾ, ಇರುವದಲ್ಲಾ ! ಇನ್ನು ನಿನ್ನನ್ನು ಗೆಲ್ಲುವವರ್ಯಾರು ? ಎಲೈ— ಮಾಯಾದೇವಿಯೇ ಕೇಳು ! ಕಾಮನು, ಕಮಲ, ಮೊದಲಾದದರಿಂದ ಸಂಪೂರ್ಣವಾಗಿ ಪೀಡಿಸುವವಳಾಗಿರುವಂಥಾ ನಿನಗೆ ನಿರ್ಮೂಲವನ್ನುಂಟು ಮಾಡುವ ಭೀಮನಾದ ಷಡಕ್ಷರಿಲಿಂಗವನ್ನು ನಾನು ಮರೆಹೊಕ್ಕೆನು. ನೀನು ಮಹಾದುಶ್ಚರಿತೆಯುಳ್ಳವಳೆಂದೂ, ಕಾಮಾದಿಗಳು ಮೊಳಗೆ ತೇರಕಾಡದೆಂದೂ ಅರಿವೆನೆಂಬದಾಗಿ ಈ ಪದದಿಂದ ಮಾಯಾಸ್ವರೂಪವನ್ನೂ, ಅದರ ಕಾರ್ಯವನ್ನೂ ತೋರಪಡಿಸಿ, ಅದನ್ನು ತಿರಸ್ಕರಿಸಿ ಶಿವನಲ್ಲಿ ಶರಣಾಗತನಾಗಿ ಮಾಯೆಯನ್ನು ಜಯಿಸತಕ್ಕದ್ದೆಂಬುವದಂನು ಹೇಳಿದರೆಂದು ತಾತ್ಪರ್ಯವು. ... ... *

(೩೮) ಭಾಮಿನಿ ಷಟ್ಪದಿ— ಮೊಲಿದಲಲನೆಯನಗಲುವದುತಾ ಬಲಿದಲಿಂಗದಿಮನವನಿಟ್ಟರೆ । ಚಲಿಸದಿಹಶಿವನಂಶಕಲ್ಲದೆ ನರರಿಗೆಂತಹುದೂ ॥ ಪ ॥ ಮುನಿದನೆಲ್ಲಗೆಲಲ್ಲೆಗರೆದತಿ । ವಿನಯದಿಂದಲಿತೋರಕುಚವನು । ಇನೆಯನಿದೆಯೊಳುಸಾರ್ಚಿಯಧರವಜೆಂಹೆಯೊಳಗಿರಿಸಿ ॥ ಮುನಿಸುತಿಳಿಯದಡೆನ್ನಕೊಲ್ಲೆಂ । ದೆನುತಮುದ್ದಿಸಿದೈನ್ಯಗರೆವಳ । ಮನದಿನೆನೆಯದೆಇರ್ಪುದದುತಾಶರಣಗೆಂತಿಹುದೂ ॥ ೧ ॥ ಬಲಿದಪುರುಷನವಿನಯದಿಂದಲಿ । ಯಳೆದುಮಂಚದಮೇಲೆಮಲಗಿಸಿ । ಬಲುಹಿಸಿಂತ್ರಾಂಬೂ

ಲಗುಟುಕನುಕೊಟ್ಟುಬಿಗಿದಪ್ಪೀ ॥ ನಲಿದುಅಧರವಸವಿದುಸೊಗಸಿಂ । ಬಳಲುಕಂಗಳಮುಚ್ಚಿತೆರೆವಳ। ನುಳಿವುದದುಶಿವನಂಶಕಲ್ಲದೆ ನರರಿಗೆಂತಹುದೂ ॥೨॥ ಕುರುಳುಕುಣಿವುತಮುತ್ತಿನೋಲೆಯ। ಮಿರುಗುಹೊಳೆಯುತಕೊರಳಮುತ್ತಿನ । ಸರವುಕಲಕುತತೊಟ್ಟಕುಚಯುಗ ಮದರುತಿರೆಬಳಿಕಾ ॥ ಶರಗಿನಿಂದಲಿಬೆಮುತನಲ್ಲನ । ಪೊರಸಿಮುಖವನುಮರಳಿನೆರವಳ । ದೊರೆವುದದುಶಿವನಂಶಕಲ್ಲದೆ ನರರಿಗೆಂತಹುದೂ ॥ ೩॥ ತೊಡೆಗಳೊಂದಿರೆನಡುವೆನೇಮದ । ಮುಡಿಯಕೇಶವುಸಡಿಲೆಬ್ಬೆತಲೆ । ಪೊಡನೆಗೆಂಟಿಕ್ಕಿರಲುತಿಲಕವುಬೆಮರಿನಿಂದಳಿಯೇ॥ ಸಡಿಲೆಮುತ್ತಿನಬೊಟ್ಟುಫಣೆಯೊಳು। ಮುಡಿದಕುಸುಮದಭಾವದವಳನು । ಬಿಡುವದದುಶಿವನಂಶಕಲ್ಲದೆನರರಿಗೆಂತಹುದೂ ॥ ೪॥ ಸುರತದಂತ್ಯದಿಬಳಲಿದಾತನ। ನೊರಗಿಸುತಕುಚಯುಗದಮಧ್ಯದಿ । ಪರವಶದಿಮೆರದಿರುವಚಲುವೆಗೆತಿಕ್ಕಿಬಿಡುವುದಕೇ॥ ಪರಕೆಪರತರಶಿವಷಡಕ್ಷರ । ಪರಮಲಿಂಗದಿಮನವುತಿಲ್ಕಿರೆ। ಹೊರಗೆಮರೆದಿಹಶರಣಗಲ್ಲದೆನರರಿಗೆಂತಹುದೂ ॥ ... ೫॥

(೩೮) ಟೀ ॥ ತನ್ನನ್ನು ಒಲಿದಂಥಾ ಸ್ತ್ರೀಯನ್ನು ಅಗಲುವಂಥಾದ್ದು ಪ್ರಬಲವಾಗಿ ಲಿಂಗದಲ್ಲಿ ಮನಸ್ಸನ್ನಿಟ್ಟ ಮೇಲೆ ಏಕಚಿತ್ತಮನೋಭಾವವಾಗಿರುವಂಥಾ ಶಿವಾಂಶವುಳ್ಳಾತಗಲ್ಲದೆ ನರರಿಗೆ ಎಲ್ಲಿಯಾಗುವದು ? ಕೋಪಗೊಂಡಿರುವ ಪ್ರಿಯನಿಗೆ ಪ್ರೀಯವಾದ ಸವಿನುಡಿಗಳಂನು ಹೇಳಿ ಬಹಳ ವಿನಯದೊಂದಿಗೆ ದಟ್ಟವಾದ ಸ್ತನಗಳನ್ನು ಪ್ರೀಯನ ಎದೆಯಮೇಲೆ ಇಟ್ಟು ತುಟಿಯನ್ನು ಆತನ ಬಾಯೊಳಗೆ ಇರಿಸಿ, ಕೋಪವನ್ನೂ ಇಳಿಯದೆ ಇರುವದಾದರೆ, ತನ್ನನ್ನುಕೊಂದು ಬಿಡನ್ನುತ್ತಾ, ಆತನಿಗೆಮುದ್ದಿಟ್ಟು ದೀನಭಾವದಿಂದ ಮಾತಾಡುವಂಥವಳನ್ನು ಮನಸ್ಸಿನಲ್ಲಿಯಾದರೂನೆನೆಯದೆ ಇರುವದು ಶಿವಾಂಶಕ್ಕಲ್ಲನೆ ಇತರನಿಗೆಹ್ಯಾಗೆ ಆಗುವದು ? ಪ್ರೀತಿಮಾಡಿದ ಪುರುಷನನ್ನು ವಿನಯದಿಂದಲೂ, ಸರಸದಿಂದಲೂ, ಎಳಕೊಂಡುಬಂದು,ಮಂಚದಮೇಲೆ ಮಲಗಿಸಿ ಬಲಾತ್ಕಾರದಿಂದ ತನ್ನ ತಂಬುಲಗುಟಕನ್ನು ಆತನ ಬಾಯಿಗೆ ಕೊಟ್ಟು ಬಿಮ್ಮನೆಅಪ್ಪಿಕೊಂಡು ಅಧರವನ್ನು ಚುಂಬಿಸಿ, ಆಂದದಿಂದ ಅರೆಗಂಣುಮುಚ್ಚಿ ತೆರೆಯುವಂಥಾವಳನ್ನು ತ್ಯಜಿಸಿಬಿಟ್ಟು ಬಿಡುವಂಥಾದ್ದು ಶಿವನಂಶರಾದ ಶರಣರಿಗಲ್ಲದೆ ಸಾಮಾನ್ಯರಾದ ನರರಿಗೆ ಹ್ಯಾಗೆ ಆಗುವದು. ವಕ್ರವಾದ

ಮುಂಗೂದಲು ನರ್ತಿಸುತ್ತಾ, ಮುತ್ತಿನತಾಟಂಕಾಭರಣ ಕಾಂತಿಯು
ಳಥಳಿಸುತ್ತ ಕಂಠದಲ್ಲಿನ ಮುತ್ತಿನಹಾರವು ಅಲ್ಲಾಡುತ್ತ ಸ್ತನದ್ವಯವು
ಕಂಪಿಸುತ್ತಾ ಇರಲು, ಅತ್ಯಂತಸುಖಾನುಭವಾನಂತರ ಬೆಮತಪ್ರಿಯನ
ನು ಶರಗಿನಿಂದ ವೊರಸಿ ಮುಖವನ್ನು ಪುನಶ್ಚ ಮುಖದೊಂದಿಗೆ ಕೂ
ಸುವಂಥವಳನ್ನು ಪರಿತ್ಯಜಿಸುವದು ಶಿವನಂಶಕಲ್ಲದೆ ನರರಿಗೆ ಹ್ಯಾಗೆ
ಗುವದು ? ತೊಡೆಗಳು ಇಕ್ಕಟ್ಟಾಗಿ ಕೂಡಿರಲು, ನಡುವು ಬಳುಕುತ್ತಿ
ಲು ಮುಡಿಯ ಕೂದಲು ಸಡ್ಲವಾಗುತ್ತಿರಲು, ಬೈತಲೆಯಲ್ಲಿನ ತಿಲಕವ
ಬೆವರಿನಿಂದ ಮಲಿನವಾಗಲು ಮುತ್ತಿನಬೊಟ್ಟು ಸಡ್ಲವಾಗಲು, ಮುಡಿಯ
ಹೂಗಳು ಜಾರುತ್ತಿರಲು, ನೋಡಲತಿ ಮನೋಹಾರಿಣಿಯಾಗಿ ರತ್ಯಂ
ತವನ್ನನುಭವಿಸಿದಂಥವಳನ್ನು ನೋಡಿ ಬಿಟ್ಟುಬಿಡುವದು ಶಿವನಂಶಕ್ಕಲ್ಲದ
ಸಾಮಾನ್ಯಮನುಷ್ಯರಿಗೆಹ್ಯಾಗೆ ಆಗುವದು ? ಸಮರತಿ ಸುಖಾನುಭವಾ
ನಂತರದಲ್ಲಿಆಯಾಸಗೊಂಡಂಥಾ ಪ್ರಿಯನನ್ನು ಸ್ತನದ್ವಯಗಳನಡುವೆ ಬ
ರಗಿಸುತ್ತಾ ಪರವಶತ್ವದಿಂದ ಒಪ್ಪುತ್ತಿರುವಚೆಲುವಿಗೆ ಶಿಕ್ಕಿಕೊಂಡು ಅಂ
ಥವಳನ್ನು ಪರಿತ್ಯಜಿಸುವದಕ್ಕೆ ಪರಾತ್ಪರನಾದ ಷಡಕ್ಷರಾಂಕ ಮಹಾ
ಲಿಂಗದಲ್ಲಿ ಮನಸ್ಸುಸಂಘಟಿಸಿ,ಬಾಹ್ಯವ್ಯಾಪಾರಗಳನ್ನೆಲ್ಲಾ ಮರೆತಿರುವ
ಶಿವಶರಣರಿಗಲ್ಲದೆ ನರರಿಗೆ ಹ್ಯಾಗೆ ಆಗುವದೆಂದು ಈ ಪದದಿಂದ ಶಿವನ
ಲ್ಲಿ ನಿಶ್ಚಲವಾದಮನವುಳ್ಳ ಮಹಾನುಭಾವನು ಜಿತಕಾಮನಾಗಿರುವನೆಂ
ದು ಪೇಳಿದರೆಂಬ ತಾತ್ಪರ್ಯವು. ... ... *

(೩೯) ರಾಗ. ಕುಸುಮಷಟ್ಪದಿ— ಎನ್ನಕಾಯವುನಿನಗೆ। ಉನ್ನ
ತಾಲಯವಾಯಿ । ತಿಂನೆನಗೆಭಯವುಂಟೆಯೆಲೆಲಿಂಗವೆ॥ ಪ ॥ ಎನ್ನಕಾ
ಲುಗಳೆರಡು । ಉನ್ನತದಕಂಭವೈ । ಯೆನ್ನವೊಡಲೇನಿಮಗೆ ದೇವಾಲ
ಯಾ ॥ ಎನ್ನತೋಳುಗಳೆರಡು । ಉನ್ನತದಮದನಕೈ । ಯೆನ್ನಶಿವಸಾ
ವರ್ಣಕಲಶವೈಯ್ಯಾ ॥ ೧ ॥ ಎಂನಕಿವಿಕೀರ್ತಿಮುಖಯೆನ್ನನಾಲಿಗೆಘಂಟೆ
ಎನ್ನನಯನಗಳೆರಡುಜ್ಯೋತಿನಿಮಗೆ ॥ ಎನ್ನಮುಖವೆದ್ವಾರ। ವೆನ್ನದಂ
ತವೆಯದಕೆ। ಮಿನ್ನುತಿಹಮುತ್ತಿಕದಸೂಸಕಗಳೂ॥ ೨ ॥ ಎನ್ನಧರಜವಳಿ
ಗದ । ಯೆಂನನಾಸಾಪುಟವು । ನಿನ್ನಿಯಿಂಸೌರಭ್ಯರಸಘಟಿತವೂ ಚಂ
ನಾಗಿಬೀಸುವಾ । ಹೊನ್ನಜಾಳೇಂದ್ರವೈ । ಇನ್ನುಳ್ಳವುಪಕರಣವೆಂತೆಂ
ದೆನೇ ॥ ಯೆನ್ನಸಮತೆಯಜಲವು । ಯೆನ್ನಸದ್ಗುಣಗಂಧ । ಯೆನ್ನನಿತ್ಯ

ತ್ವವೇಅಕ್ಷತೆಗಳೂ ॥ ಯೆನ್ನಜ್ಞಾನವೆಪುಷ್ಪ । ಯೆನ್ನಭಕ್ತಿಯೆಬೋನ । ಯೆನ್ನಮನವೆನಿಮಗೆಪೂಜಾರಿಯೂ॥ ೪ ॥ ಇಂತಪ್ಪಪೂಜೆಯನು । ಸಂತಸದಿಕೈಕೊಳುತ । ಕಂತುಹರಶಿವಷಡಕ್ಷರಲಿಂಗವು॥ ಮುಂತೆಯೆಂನೊಳಗೆನಿಶ್ಚಿಂತನಾಗಿರುತಿರಲು । ಚಿಂತೆಯುಂಟೇಹಲವುಭವಭೀತಿಯೊ॥ ೫॥

(೩೯) ಟೀ॥ ಎಲೈ—ಲಿಂಗಮೂರ್ತಿಯಾದ ಶಿವನೇ ! ನನ್ನದೇಹವೇ ನಿನಗೆ ಮನೆಯಾಯಿತು. ಹೀಗಿರುವಲ್ಲಿ ನಿನಗೆ ಭಯವುಂಟೆ ? ನನ್ನ ಕಾಲುಗಳೆರಡು ಪವಿತ್ರವಾದ ಕಂಭಗಳಾದವು. ನನ್ನ ದೇಹವೆ ನಿಮಗೆ ಶಿವಾಲಯವಾಯಿತು. ನನ್ನ ಎರಡು ತೋಳುಗಳು ಉನ್ನತವಾದ ಲಾಲಮಡಿಗೆಗಳಾದವು. ನನ್ನ ಶಿರಸ್ಸೇ ನಿನಗೆ ಬಂಗಾರಕಲಶವಾಯಿತಯ್ಯಾ, ನನ್ನ ಕಿವಿಯು ಕೀರ್ತಿಮುಖವಾಯಿತು. ನನ್ನ ನಾಲಿಗೆ ಘಂಟೆಯಾಯಿತು ನನ್ನ ಎರಡು ಕಂಣುಗಳು ನಿಮಗೆ ಜ್ಯೋತಿಗಳಾದವು. ನನ್ನ ಮುಖವೇ ಶಿವಾಲಯದ ದ್ವಾರವಾಯಿತು, ನನ್ನ ಹಲ್ಲುಗಳೇ ತೋರುತ್ತಿರುವ ಹೂವಿನ ಕುಚ್ಚುಗಳಾದವು, ನನ್ನ ತುಟಿಗಳು ಜೋಡುಕದಗಳಾದವು. ನನ್ನ ಮೂಗೆಂಬುವದೇ ಪರಿಮಳದಿಂದ ತುಂಬಿರುವ ಕರಡಿಗೆಯಾಗಿರುವದು. ನನ್ನ ರೆಪ್ಪೆಗಳೆರಡೂ ನಿನಗೆ ಚಾಮರಗಳು, ಇನ್ನು ಉಳಿವ ಪೂಜಾಸಾಮಗ್ರಿಗಳು ಹ್ಯಾಗೆಂದರೆ,— ನನ್ನ ಸಮತೆಯೆಂಬುವದೇ ಜಪವು, ನನ್ನ ಸದ್ಗುಣವೆಂಬುವದೆ ಗಂಧ. ನನ್ನ ನಿತ್ಯವೇ ಅಕ್ಷತೆಗಳು. ನನ್ನ ಜ್ಞಾನವೇ ಪುಷ್ಪವು, ನನ್ನ ಭಕ್ತಿಯೇ ನೈವೇದ್ಯವು, ನನ್ನ ಮನವೇ ನಿಮಗೆ ಪೂಜಾರಿಯು, ಈರೀತಿಯಾದ ಶಿವಾರ್ಚನೆಯನ್ನು ಸದಾ ಅಂಗೀಕರಿಸಿಕೊಳ್ಳುತ್ತಾ, ಕಾಮಹರನಾದ ಶಿವಷಡಕ್ಷರಲಿಂಗವು ಮುಂದೆ ನನ್ನೊಳಗೆ ನಿಶ್ಚಿಂತನಾಗಿರುತ್ತಿರಲು, ಹಲವುವಿಧವಾದ ಭವಭಯದಚಿಂತೆ ಇರುವದೇಯೆಂದು ಈಪದದಿಂದ ಆತ್ಮೀಕವಾದ ಶಿವಪೂಜಾವಿಧಾನವನ್ನೂ ಕರಚರಣಾದ್ಯವಯವಗಳೆಲ್ಲಾ ಶಿವಾಧೀನವಾಗಿರತಕ್ಕದ್ದೆಂಬುವದನ್ನೂ ಹೇಳಿದರೆಂದು ತಾತ್ಪರ್ಯವು. ... ... ✱

(೪೦) ರಾಗ ಕುಸುಮಷಟ್ಪದಿ.— ಘನಮಹಿಮಲಿಂಗವೆ । ಅನುಪಾಣಿಯನ್ನಕರ । ವನಜಕ್ಕೆಬಂದ.ಚುಳುಕಾದಿರಲ್ಲಾ॥ ಪ॥ ತರಣಿಕೋಟಿಯುಪ್ರಭೆಯ । ಕಿರಿದೆನಿಪಬೆಳಗಿನಾ । ವರಮೇರುಶೈಲಾಗ್ರದೊಳಗೊಪ್ಪವಾ । ಹರಗಣಂಗಳಸುಖನ । ನೆರೆಯುಳಿದ.ಯೆನ್ನಕರ । ಸಂಸಿಜ

ಕೆಬಂದುಚುಳುಕಾದಿರಲ್ಲಾ ॥ ೧ ॥ ಹರಿಯುಜರತಿಂಥಿಣಿಯ । ಸುರರು
ವೊ ತ್ತವಾ । ವರಮುನೀಶ್ವರರುಗಳಸಂತಾನದಾ ॥ ಹರುಷದಾನ
ದೊಳು । ನೆರೆಯುಳಿದುಯನ್ನಕರ । ಸರಸಿಜಕೆಬಂದುಚುಳುಕಾದಿರಲ್ಲ
೨ ॥ ಹರಿಗೆನಿಲುಕದಚರಣಸರಸಿಜೋದ್ಭವಭವಗೆ । ಅರಿಸಿಕೊಳ್ಳದ
ವ್ಮ ಶ್ರೀಮುಕುಟವೂ ॥ ಪರಮವಾಚಾತೀತ । ಕಿದಿರಾಗಿಯೆನ್ನಕರ । ಸ
ಸಿಜಕೆಬಂದುಚುಳುಕಾದಿರಲ್ಲಾ ॥ ಮಡದಿಗಿರಿಜಾತೆಯಳ ತೊಡೆಯವೆ
ಲಿಂದಿಳುಹಿ । ವೊಡನೆಗುಹಗಣಪರಿರೆಸರ್ವರೆನಿಪಾ ॥ ಕಡುಮೋಹರಿ
ಸುಖ । ವ್ಮೃಡನೆನ್ನಕರದೊಳಗೆ । ಯೆಡೆಗೈದಿಬಳಲಿಚುಳುಕಾದಿರಲ್ಲ
೪ ॥ ಯೆನ್ನಲ್ಲಿಯುಪಚಾರ । ವಿನ್ನೇನುನಿಮಗುಂಟು । ಸನ್ನುತದಶಿವ
ಡಕ್ಷರಲಿಂಗವೇ ॥ ಯೆನ್ನಮನಪ್ರಾಣವನು । ಹೊನ್ನಹಾವುಗೆಯಾಗಿ
ನಿನ್ನಚರಣಕೆಯೋಗ್ಯಮೆಟ್ಟಿಗವಿಸೀ ॥ ... ೫

(೪೦) ಟೀ॥ ಮಹಾಘನವಾದ ಲಿಂಗವೇ ಯನ್ನ ಹಸ್ತಕಮಲಕ್ಕೆ ಅನುವಾಗಿಬಂದು ಲೇಸಾದಿರಲ್ಲಾ ? ಕೋಟಿಸೂರ್ಯಪ್ರಕಾಶದ ಬಬ್ಬುಳಿಯನ್ನು ನಿರಾಕರಿಸುತ್ತಿರುವ ಕಾಂತಿಯುಳ್ಳ ಮಹಾ ಮೇರು ಗಿರಿಯ ತುದಿಯಲ್ಲಿ ಒಪ್ಪುತ್ತಲಿರುವ ಶಿವಗಣಗಳ ಸುಖವೆನ್ನಲ್ಲಾ ಪೂರ್ಣವಾಗಿ ಬಿಟ್ಟುಬಿಟ್ಟು ಯೆನ್ನ ಕೈಗೆ ಬಂದು ಲೇಸಾದಿರಲ್ಲಾ ? ವಿಷ್ಣುಬ್ರಹ್ಮರುಗಳ ಸಮೂಹವೂ ದೇವಸಮುದಾಯವೂ, ಋಷೀಂದ್ರರಗುಂಪೂ, ಇವ್ರಗಳನ್ನೆಲ್ಲಾ ಉಂಟಾಗಿರುವ ಸಂಭ್ರಮವಾದ ಆನಂದಗಳನ್ನೆಲ್ಲಾ ಬಿಟ್ಟುಬಿಟ್ಟು ಯೆನ್ನ ಹಸ್ತಕಮಲಕ್ಕೆ ಬಂದು ಲೇಸಾದಿರಲ್ಲಾ ? ವಿಷ್ಣುವಿಗೆ ಶಿಕ್ಕದಂಥಾ ನಿಮ್ಮ ಚರಣವೂ, ಬ್ರಹ್ಮನಿಗೆ ಶಿಕ್ಕದಂಥಾ ನಿಮ್ಮ ಕಿರೀಟವೂ ವಾಕ್ಕಿಗೂ ಮಿಂಚಿದಪರತ್ವವೂ ಪಿರಿದಾಗಿದ್ದೂ, ಎನ್ನ ಹಸ್ತಕಮಲಕ್ಕೆ ಬಂದು ಲೇಸಾದಿರಲ್ಲಾ ? ಪತ್ನಿಯೂದ ಪಾರ್ವತಾದೇವಿಯ ತೊಡೆಯುಮೇಲಿಳಿಂದ ಇಳಿಸಿ, ಸಂಗಡಲೇ ಷಣ್ಮುಖನೂ, ಗಣಪತಿಯೂ, ಸಮುಖದಲ್ಲಿ ಇರಲು, ಬಹಳ ಮೋಹರೀತಿಯೂದ ಸುಖವುಳ್ಳ ಶಿವನು ನನ್ನ ಕೈಯೊಳಗೆ ಬಂದು ಆಯಾಸದಿಂದ ಲೇಸಾದಿರಲ್ಲಾ ? ನನ್ನಿಂತ ನಿಮಗೆ ಇನ್ನೇನು ಉಪಚಾರವಿರುವದು? ಎಲೈ— ಶ್ಲಾಘ್ಯವಾದ ಶಿವಷಡಕ್ಷರಲಿಂಗವೇ! ನನ್ನ ಮನವನ್ನೂ, ನನ್ನ ಪ್ರಾಣವನ್ನೂ, ಹೊನುಹಾವುಗೆಗಳಾಗಿಮಾಡಿಕೊಂಡು ನಿಮ್ಮ ಪಾದಗಳಿಗೆ ಯೋಗ್ಯವಾಗಿ ಮೆಟ್ಟಿಕೊಂಡು ಬಿಜಮೂ

ಡಿಸಿರೆಂದು ಪ್ರಾಣಮನಗಳನ್ನು ಶಿವದಾಸ್ಯತ್ವದಲ್ಲಿ ನೆಲೆಗೊಳಿಸಿ ಶಿವಾರ್ಚನೆಯಂ ಗೈಯ್ಯಬೇಕೆಂಬದನ್ನು ಪೇಳಿದರೆಂಬ ತಾತ್ಪರ್ಯವು.

(೪೧) ರಾಗ- ಭೋಗಷಟ್ಪದಿ— ಧರೆಯಭೋಗದಸ್ಥಿರವನು। ಅರಿವಹಾಗೆ ಪೇಳ್ವೆಕೇಳು। ಅರಿದುತಿಳಿದುಮರೆದುಶಿವನಭಜಿಸುಸಂತತಾ॥ ಪ॥ ಪುರದೊಳೋರ್ವವಿದ್ಯೆಧನವನು। ಹಿರಿದುದಿವಸಧೊರೆಯಕಾದು। ಹೊರಡದಿರಲುವೊಂದುತಂತ್ರನೆನೆದನೆಂತನೇ ॥ ಸುರರಚರನುಹೊರಗೆ ಬಂದು। ಪುರದಬಾಗಿಲೊಳಗೆನಿಂದು। ಧೊರೆಯುಬರಲಿಹೇಳಿರೀವನೆಕೆಬಂದನೂ॥ ೧॥ ಓಡಿಹೋಗಿಧೊರೆಗೆಹೇಳೆ। ನೋಡಿಬಂನಿರೆನುತಕಳುಹೆ। ನೋಡಿಬಂದುಜೀಯ್ಯಧಿಟವುಯನುತಹೇಳಲೂ ॥ ಗಾಢನೆದ್ದುಗಜದಶಿರದಿ। ರೂಢನಾಗಿಸೇನೆಸಹಿತ। ವೋಡಿಬರಲುವನದಮಧ್ಯದೊಳಗೆಸಂದಣೀ॥ ೨॥ ಅನಿತರಿಂದಮುಂದೆಬರಲು। ಕನಕಮಯದಬಾಗಿಲಲ್ಲಿ। ಮಿನುಗುತಿರ್ಪಮೇಲುಕೋಟಿರತ್ನಕಲಶವೂ ॥ ಅನಿತರಿಂದಮುಂದೆಬರಲುಕನಕಪೀಠವಲ್ಲಿಯಿಂದ್ರ। ನನುಪದಸುವೋಲಗವನುನೃಪತಿಕಂಡನೂ॥ ೩ ॥ ಆವದಾವಕಡೆಗೆನೋಡೆ। ತೀವಿದಾನೆಕುದುರೆಮಂದಿ। ಭಾವಿಸಲ್ಕೆ ಅರಿದುಕನಕರಥಗಳಿರ್ಪವೂ ॥ ದೇವಕನ್ನೆಯರುಗಳಖಿಳ। ತೀವಿಯಿರಲುವಾಲಗದೊಳು। ಭೂಮಿಯೊಳಗೆಕಂಡು ತಲೆಯತೂಗುತಿರ್ದನೂ ॥ ೪ ॥ ತಳಿತಸತ್ತಿಗೆಗಳುಕೂಡಿ। ಬಳಸಿನಲ್ಲಿಯೊಪ್ಪುತಿಹುದು। ಮಿಳಿತಚಾಮರಗಳುಕೋಟಿಢಾಳಿಸುತ್ತಿರೇ ॥ ಬಳಸಿಸುರರುಯಕ್ಷರುಗಳು। ಕುಳಿತುಯಿರಲುವೋಲಗದೊಳು। ವೊಳಗೆವೊಳಗೆನೃಪತಿಹೆದರಿಕೈಯ್ಯಮುಗಿದನೂ ॥ ೫ ॥ ಕೈಯ್ಯಮುಗಿದುಕುಳ್ಳಿರಿಸುತ। ಜೀಯ್ಯವಿಧವೆವಿದ್ಯೆಯೆನಲು। ವೊಯ್ಯನೆಲ್ಲಬಯಲುಮಾಡಿಹೋಗಲಾನೃಪಂ ॥ ಮೈಯ್ಯಮರೆದುಬೆರಗುವಟ್ಟು। ಜೀಯ್ಯವಿದುವೆಚೋದ್ಯವೆನಲು। ಕೈಯ್ಯನೆತ್ತಿವಿದ್ಯದವನಪೊಗಳೆಕಂಡನೂ॥ ೬॥ ಸಾಂಗವಾಗಿಧರೆಯಭೋಗ। ಕಂಗಳಿಂಗೆತೋರುತಿಹುದು । ಹಿಂಗಿಹೋಹುದನಿತುಬೇಗಯಿದರ ತೆರನೊಲೂ ॥ ಮಂಗಳಾತ್ಮಷಡಕ್ಷರೀಯ್ಯ। ಲಿಂಗನಡಿಯಭಜಿಸುನಿನಗೆ। ಅಂಗವಹುದು ನಿತ್ಯಪದವು ನಂಬುಮಾನವಾ॥ ... ೭॥

(೪೧) ಟೀ॥ ಎಲೈ—ಮನುಷ್ಯನೇ ಕೇಳು ! ಭೂಮಿಯ ಭೋಗ ಅಸ್ಥಿರವನ್ನು ತಿಳಿಯುವಂತೆ ಹೇಳುವೆನು; ನೀನು ಅರಿತಾಗಲೀ, ಮ

ರೆತಾಗಲೀ, ತಿಳಿದಾಗಲೀ, ಸರ್ವದಾ ಶಿವನಂನು ಭಜಿಸುತ್ತಿರು. ಪ
ಟ್ಟಣದೊಳಗೆ ಬ್ಬ ಘನವಿದ್ವಾಂಸನು ಬಹುದಿನಗಳವರಿವಿಗೂ ಧೊರೆ
ನ್ನು ಕಾದುಕೊಂಡಿದ್ದಾಗ್ಯೂ ಅವನು ಹೊರಗೆ ಬಾರದೆ ಇದ್ದಕಾರಣ
ಬಂದಾನೊಂದು ತಂತ್ರವನ್ನು ಮಾಡಿದನು; ಅದು ಹ್ಯಾಗಂದರೆ,—
ದೇವತೆಗಳ ಚರನು ಬ್ಬನು ಈ ಪಟ್ಟಣದಬಾಗಲಿಗೆ ಬಂದು ನಿಂತು ಧ
ರೆಯನ್ನು ಬರಹೇಳಿರೆಂದು ಹೇಳಿ ಬಾದು ವನಕ್ಕೆ ಬಂದನು. ಬಾಗಲ
ಕಾವಲಗಾರರು ಓಡಿಹೋಗಿ ಈ ವಿವರವನ್ನು ಧೊರೆಗೆ ತಿಳಿಸಲಾಗಿ,
ಧೊರೆಯು ಹೌದೋ ಅಲ್ಲವೋ ನೋಡಿ ಬನ್ನಿರೆಂದು ಹೇಳಿ ಕಳುಹಿ
ಲು, ಅವರು ಹೋಗಿ ನೋಡಿ ಬಂದು ಹೌದು ಸ್ವಾಮಿ ! ನಿಶ್ಚಯವೆ
ದೇ ಹೇಳಲಾಗಿ, ಅರಸನು ಬೇಗನೆ ಎದ್ದು ಆನೆಯಮೇಲೆ ಕೂತುಕೊಂ
ಡು ಸಕಲ ಸೇನಾ ಸಮೇತನಾಗಿ ಓಡಿಬರುತ್ತಿರಲು, ಆ ವನದ ನಡುವೆ
ಹೋಗುತ್ತಾ ಇದ್ದನು. ಆ ವನದ ನಟ್ಟನಡುವೆ ಬಹಳ ಗುಂಪುಗಳಿದ್ದವು
ಅದರಾಚೆಯಲ್ಲಿ ಭಂಗಾರದಿಂದ ಮಾಡಲ್ಪಟ್ಟ ಬಾಗಿಲುಗಳಲ್ಲಿ ಪ್ರಕಾಶಿಸ
ತ್ತಿರುವ ಕೋಟಿ ರತ್ನಕಲಶಗಳನ್ನು ನೋಡಿದನು; ಅದರ ತರುವಾಯ
ಇನ್ನೂ ಮುಂದೆ ಹೋಗುತ್ತಾ ದೇವೇಂದ್ರನ ಓಲಗದ ಚಾವಡಿಯನ್ನು
ಕಂಡನು. ಮತ್ತು ಯಾವಕಡೆಗೆ ಕಣ್ಣಿಟ್ಟುನೋಡಿದರೆ ಆ ಕಡೆಯಲ್ಲೆಲ್ಲಾ
ಪರಿಪೂರ್ಣವಾಗಿರುವ ಆನೆಗಳೂ, ಕುದುರೆಗಳೂ, ಕಾಲ್ದಾಳುಗಳೂ,
ಭಂಗಾರದ ರಥಗಳೂ ಇರುವವು; ಎಲ್ಲಾ ದೇವಕನ್ನಿಕೆಯರೂ, ಓಲಗ
ದಲ್ಲಿ ತುಂಬಿ ಇದ್ದರು; ಇಂಥಾ ಅದ್ಭುತವನ್ನು ಭೂಮಿಯೊಳಗೆನೋ
ಡಿ ಅರಸನು ತಲೆತೂಗುತ್ತಾ ಇದ್ದನು. ಮತ್ತು ಅಲ್ಲಿ ಅಗಲಿಸಿ ಹಿಡಿದ
ಛತ್ರಿಗಳು ಗುಂಪಾಗಿ ಹಿಡಿದಿರುವದು, ಚಿಂಮುವ ಚಾಮರಗಳು ಕೋ
ಟ್ಯಾಂತರ ಪ್ರಕಾಶಿಸುವವು, ಸುರರು, ಯಕ್ಷರು, ಮುಂತಾದವರೆಲ್ಲಾ
ಗುಂಪುಕೂಡಿ ಆ ಓಲಗದೊಳಗೆ ಕುಳಿತಿರುವರು, ಅವುಗಳನ್ನೆಲ್ಲ ಒಳ
ಗೊಳಗೆ ಅರಸನುನೋಡಿ ಹೆದರಿ ಕೈಮುಗಿದನು. ಆಗಲಾ ವಿದ್ವಾಂಸ
ನು ನಮಸ್ಕಾರಮಾಡಿ ಈ ರಾಯನನ್ನು ಕೂಡಿಸಿ ಎಲೈ— ಅರಸೇ ! ವಿ
ದ್ಯೆಯಂಬುವದು ವಿಥವೆಯೆಂದು ಹೇಳಿದಮಾತ್ರದಿಂದಲೇ ಅಲ್ಲಿ ತೋರು
ತ್ತಿದ್ದವುಗಳೆಲ್ಲಾ ಬಯಲಾಗಿ ಹೋಗಲು, ಆ ರಾಯನು ಮ್ಯೂಮರದು ಬೆ
ರಗಾಗಿ ಆಹಾ ಎಷ್ಟು ಆಶ್ಚರ್ಯವೆಂದು ಹೇಳಿ ವಿದ್ವಾಂಸನನ್ನು ಕೈ

ಯುತ್ತಿ ಕೊಂಡಾಡುತ್ತಿದ್ದನು, ಸಂಪೂರ್ಣವಾಗಿಯೇ ಭೂಮಿಯಭೋಗವು ಕಣ್ಣುಗಳಿಗೆ ತೋರುತ್ತಿರುವದು ; ಅಷ್ಟರಲ್ಲಿ ಕ್ಷೀಣಿಸಿ ಮಾಯವಾಗಿ ಹೋಗುವದು, ಈ ಇಂದ್ರಜಾಲ ವಿದ್ಯೆಗನುಸಾರವಾದ ಧರೆಯ ಭೋಗವನ್ನು ಬಯಸದೆ, ಮಂಗಳಾತ್ಮಕನಾದ ಷಡಕ್ಷರಲಿಂಗದ ಚರಣವನ್ನು ಭಜಿಸು ! ನಿನಗೆ ನಿತ್ಯಪದವುಳ್ಳ ಅಂಗವಾಗುವದು. ಇದನ್ನು ನಂಬಿರುಯೆಂದು, ಈ ಪದದಿಂದ ಭೂಭೋಗಾದಿಗಳು ಅಸ್ಥಿರವಾದವುಗಳೆಂದು ದೃಷ್ಟಾಂತಪಡಿಸಿ ಹೇಳಿ, ಷಡಕ್ಷರಲಿಂಗ ಚರಣಗಳನ್ನಾಶ್ರಯಿಸಿ ದೃಢವಾಗಿ ನಂಬಿರಬೇಕೆಂಬುವದನ್ನು ಪ್ರಕಟಪಡಿಸಿದರೆಂಬ ತಾತ್ಪರ್ಯವು. ... ... *

(೪೨) ರಾಗ- ಭೋಗಷಟ್ಪದಿ— ನಿನ್ನರೂಪಿನವರುಬಂದು। ಯೆನ್ನಬಿಡದೆನೊಯ್ಯನವರು । ನಿನ್ನಹಾಗೆಕಾಬಭಕ್ತಿಯೆಂದಿಗಪ್ಪುದೋ ॥ ಪ॥ ಬಂದಬಳಿಯಹೋದಬಳಿಯ। ನಿಂದಬಳಿಯನೆನೆದಬಳಿಯ। ಚಂದಗೆಡಿಸಿನುಡಿವುತಿರಲುಚರನದೋರ್ವನೂ ॥ ಇಂದುಧರನನೆನವನುನವ । ನೆಂದುನೋಡಬಯಿದನೆಂದು । ಕುಂದದಿರ್ಪಭಕ್ತಿಯೆನಗೆಯೆಂದಿಗಪ್ಪುದೋ ॥ ೧ ॥ ಇಂದುಧರನರೂಪಿನಿಂದಬಂದುಚರಣರಕ್ಷೆವೆರಸಿ । ನೊಂದಿತೆಂದುಅಳುಕದೆನ್ನ ಕೆಡಹಿಕಳೆದೊಡೇ ॥ ಕುಂದದವರ ಶಿವಸ್ವರೂಪ । ರೆಂದುಭಾವಿಸುತ್ತಮನವು । ಚಂದವಳಿಯದಿಪ್ಪಮನವದೆಂದಿಗಪ್ಪುದೊ॥ ಮಾರಹರನರೂಪಿನಿಂದ । ಚೋರರುಗಳುಬಂದುಕಟ್ಟಿ । ಧಾರಿಯಲ್ಲಿಸುಲಿದುಕೊಳಲು ಇದರ್ದೆಲ್ಲವಾ ॥ ಮಾರವೈರಿತಾನೆಬಂದು । ಸೂರೆಮಾಡಿಹೋದನೆಂಬ । ಸಾರಮನದಭಕ್ತಿಯೆನಗೆಯೆಂದಿಗಪ್ಪುದೋ ॥ ೩ ॥ ಹರನರೂಪಿನಿಂದಹಗೆಯು । ತರುಬಿಬಂದು ಯೆಂನಹಿಡಿದು । ಇರಿದುಬಿಡದೆಕಡಹಿಕಡಿದು ಕೊಚ್ಚುತಿರ್ದೊಡೇ ॥ ಅರಿದುಅವರ ಕಂಡಬಳಿಕ । ಗುರುಸ್ವರೂಪನೆಂದುನಂಬಿ । ಅರಿಗಳೆನ್ನದಿರ್ಪಭಕ್ತಿ ಯೆಂದಿಗಪ್ಪುದೋ ॥ ೪॥ ನರನದೋರ್ವಬಂದುಯೆನ್ನ। ಶಿರದಲಿಡಲುಪಾದವನ್ನು। ವರಷಡಕ್ಷರಾಂಕತಾನೆಬಂದುಕರುಣದೀ ॥ ಚರಣಯುಗವನಿಟ್ಟನೆಂನ। ಶಿರದಮೇಲೆಯೆನುತನಂಬಿ। ಹರುಷಗೊಳುವಭಕ್ತಿಯೆನಗೆದೆಂದಿಗಪ್ಪುದೋ ॥

(೪೨) ಟೀ ॥ ಎಲೈ— ಶಿವನೇ। ನಿನ್ನರೂಪಿನವರಾದ ಶಿವಮೂರ್ತಿಗಳು ಬಂದು ಎನ್ನನ್ನುಬಿಡದೆ ಪೀಡಿಸುವದಾದರೂ, ಅವರನ್ನು ನಿಂ

ನಹಾಗೆಯೇ ಕಾಣುವ (ಸರ್ವಂಶಿವಮಯಂಜಗತ್ ಶಿವಾತ್ಪರತರಂನಾಸ್ತಿ) ಇತ್ಯಾದಿಭಾವನೆಯು ಎಂದಿಗೆಉಂಟಾಗುವದೋ? ಬಂದಲ್ಲಿಯೂ, ಹೋದಲ್ಲಿಯೂ, ನಿಂತಲ್ಲಿಯೂ, ಒಬ್ಬ ಚರಮೂರ್ತಿಯ ಹೀನೈಸಿ ಮಾತಾಡಿದ್ದಾದರೆ, ಚಂದ್ರಶೇಖರನನ್ನು ಧ್ಯಾನಿಸಿದ ಮನಸ್ಸನ್ನು ಬಯಿಂದನೊಂದು ಭಾವಿಸಿ ಕೊರತೆಗೊಳ್ಳದೆ ಇರುವ ಭಕ್ತಿಯು ಯೆಂದಿಗುಂಟಾಗುವದೋ ? ಶಿವಸ್ವರೂಪದಿಂದೊಪ್ಪುವ ಒಬ್ಬ ಚರಮೂರ್ತಿಯು ಕಾಲಿನಲ್ಲಿ ಪಾದರಕ್ಷೆ ಮೆಟ್ಟಿಕೊಂಡುಬಂದು ನೊಂದೀತೆಂದು ಹೆದರದೆ ನನ್ನನ್ನು ಕೆಡವಿಕೊಂಡು ಹೊಡೆದದ್ದಾದರೆ, ಕೊರತೆಪಡದೆ ಅವರನ್ನು ಶಿವಸ್ವರೂಪರೆಂದೇ ಭಾವಿಸಿ ಚನ್ನಾಗಿರುವ ಮನವು ಯೆಂದಿಗೆ ಉಂಟಾಗುವದೋ ? ಕಾಮಹರನ ಸ್ವರೂಪದಿಂದ ಕಳ್ಳರು ಬಂದು ದಾರಿಕಟ್ಟಿ ಇದ್ದದ್ದನ್ನೆಲ್ಲಾ ಸುಲುಕೊಳ್ಳಲು, ಕಾಮಹರನು ತಾನೇಬಂದು, ಎಲ್ಲವಂನೂ ಕೊಳ್ಳೆಯಿಟ್ಟುಕೊಂಡು ಹೋದನೆಂದು ಹೇಳುವ ಸ್ಥಿರತ್ವವುಳ್ಳ ಮನೋಭಕ್ತಿಯು ಎಂದಿಗೆ ಉಂಟಾಗುವದೋ ? ಶಿವರೂಪಿನಿಂದ ಶತೃವು ಅಟ್ಟಿಕೊಂಡು ಬಂದು ಹಿಡುಕೊಂಡು ತಿವಿದು, ಬಿಡದೆ ಕಡಿದು ತುಂಡು ತುಮುರಾಗಿ ಕತ್ತರಿಸುತ್ತಿರಲು, ಅವರನ್ನು ನೋಡಿದತರುವಾಯ ಅವರು ಗುರುಮೂರ್ತಿಗಳೆಂದರಿದು ನಂಬಿ ಅವರು ಶತೃಗಳೆಂದು ಹೇಳದಿರುವ ಮನೋಭಕ್ತಿಯು ಎಂದಿಗೆ ವುಂಟಾಗುವದೋ ? ಯಾವನಾದರೊಬ್ಬ ಮನುಷ್ಯನು ಬಂದು, ನನ್ನ ತಲೆಯಮೇಲೆ ತನ್ನ ಕಾಲುಗಳನ್ನು ಇಡಲು, ಶ್ರೇಷ್ಠನಾದ ಷಡಕ್ಷರಾಂಕ ಲಿಂಗಮೂರ್ತಿಯು ತಾನೇ ಬಂದು ಕರುಣದಿಂದ ತನ್ನ ಪಾದಗಳನ್ನು ಇಟ್ಟನೆಂದುನಂಬಿ,ಸಂತೋಷಗೊಳ್ಳುವ ಭಕ್ತಿಯು, ಎನಗೆ ಎಂದಿಗೆ ಉಂಟಾಗುವದೊ ಎಂದು ಈಪದದಿಂದ ಶಿವಶರಣರಿಗೆಲ್ಲಾ ನಮ್ರನಾಗಿದ್ದುಕೊಂಡು ನಿಜಭಕ್ತಿಯನ್ನು ಅಭ್ಯಾಸಮಾಡುವಾಗ ಯಾವ ಕೊರತೆಯನ್ನು ಎಣಿಸದೇ ದೃಢವಾದ ಮನೋನಿಶ್ಚಯ ವುಳ್ಳವನಾಗಿರಬೇಕೆಂದು ಪೇಳಿದರೆಂಬ ತಾತ್ಪರ್ಯವು. *

(೪೩) ರಾಗ - ಪರಿವರ್ಧಿನೀಷಟ್ಪದಿ— ಶಿವಲಿಂಗವಹೃತ್ಪಿಂಡದ ಮಧ್ಯದಿ । ತವೆಜಾನಿಸುತಂಪರವಶನಂದದಿ । ಭವಗಿರಿಪವಿಯೆಂದೆನಿಸುವಘನಶಿವಯೋಗದೊಳೆಂದಿಹೆನೊ ॥ ಪ ॥ ಪದಕಂಭಾವದಗುಡಿತೋರಣದಿಂ । ಮದಗಜಜಯದಿಂದೆಸೆವನಲತ್ಪದಿ । ಮುದವೆದಗೊಂಡಿಹ

ಕರಚರಣಚತುಷ್ಟಯವುಂತ್ರದಿಗೂಡೀ ॥ ಒದಗಿಸಿಬಹುಮುಖಚರಣಪದಾತಿಯ । ಪದುಳದಿಮಧ್ಯದತನುವಿನರಥದಿಂ । ಸದಮಳಲಿಂಗವಹರುಷದಿ ನಾದಿಗೊಂಬುತಲೆಂದಿಹೆನೊ ॥ ೧ ॥ ಚಿನ್ನದನೆಲೆಯೊಳುಬೆಳ್ಳಿಯವೊರಡಿಸು । ರನ್ನದಗಿರಿಗಳ ಪಚ್ಚೆಯಕೋ(ಡ್ಗ । ಲ್ಲುನ್ನತನೀಲದಗುಂಡುಪವಾಳದಲತೆವೈಡೂರ್ಯಗಳಾ ॥ ಸನ್ನುತವೆಸೆವಾಹಸುರುವುತ್ತ್ರನೆಲ । ಮಿಂನಿಸುವಜ್ರದಅರೆಯಿಂದೊಪ್ಪುವ । ಹೃನ್ಮಂಡಲಚಿದ್ಭೂಮಿಯಮಧ್ಯದಿಲಿಂಗದೊಳೆಂದಿಹೆನೊ ॥ ೨॥ ಭೋಂಕನೆಕೊತ್ತವವಿದ್ಯುಲ್ಲತೆಯತೆ । ಶಾಂಕನಭಾಸ್ಕರಶತಕೋಟಿಪ್ರಭೆ । ಧಿಂಕಿಡುತಂತಾಬೆಳಗುವಬ್ರಂಹಸುರಂಧ್ರದಮಧ್ಯದಲೀ ॥ ಶಂಖದಘಂಟೆಯಜೊಗಟೆವಾಸುಕಿ । ಕಿಂಕಿಣಿಕಿಂನರಿವೀಣೆಯತೆರದಿಂ । ರೊಂಕಾರಿಪವೊಂಕಾರದ ಪ್ರಣವಸುನಾದದೊಳೆಂದಿಹೆನೋ ॥ ೩ ॥ ಕುಟಿಲದವಾಯೆಯಹರಿಸಿತಮಸ್ಸಿನ । ಪಟಲಕಜ್ಞಾನದಜ್ಯೋತಿಯಬೆಳಗಿಸಿ । ಪಟುಗೊಳಿಸುತಮದ ವಾರುತರಂತಾನೇಕವವಾಡುತಲೀ ॥ ಫುಟನೆಗೆದೂರ್ಧ್ವವನಡರಿಸಿಯಾತ್ಮನ । ನಿಟಿಲದಮಧ್ಯದತೇಜೋರಾಸಿಯ । ಮಠದೊಳುಚಿನ್ಮಯಲಿಂಗದಸಮರಸಮೇಳದೊಳೆಂದಿಹೆನೋ ॥ ೪ ॥ ಕರುಣದಕಳೆಕಳ ವಿಲ್ಲದಸುರರುಗ । ಳರುವಿಗೆನಿಲುಕದ ಕಾರ್ತಿಕತರುಗಳ । ಬರಿಕೋಟಲೆಗಳ ಹೋರಟೆಗೆತ್ತದವಮುನಿಗಳಭಾವಕ್ಕ ॥ ಅರಿಸದಶಾಸ್ತ್ರಿಕೆ ನಿಲುಕದವೇದಕೆ । ಕುರುಪಿಡಲರಿಯದಚರಿತನನಗಹರ । ಪರವಷಡಕ್ಷರಲಿಂಗದನಿಜಸುಖ ಧ್ಯಾನದೊಳೆಂದಿಹೆನೋ ॥ ... ... ೫ ॥

(೪೩) ಟೀ ॥ ಶಿವಲಿಂಗವನ್ನು ಹೃದಯಕುಹರ ಮಧ್ಯದೊಳಗೆ ವಿಶೇಷವಾಗಿ ಧ್ಯಾನಿಸುತ್ತಾ, ಪರವಶದಹಾಗೆ ಜನನವೆಂಬುವ ಪರ್ವತಕ್ಕೆ ವಜ್ರಾಯುಧವೆನಿಸುವ ಘನವಾದ ಶಿವಯೋಗದಲ್ಲಿ ಎಂದಿಗೆ ಇರುವೆನೋ, ಪದಕದಂತೊಪ್ಪುವ ಗುಡಿತೋರಣಗಳಿಂದಲೂ, ಮದ್ದಾನೆಯ ಹಾಗೆ ಪ್ರಕಾಶಿಸುವ ಅಗ್ನಿಯಿಂದಲೂ, ಸಂತೋಷವನ್ನು ಅವಲಂಬಿಸಿರುವ ಕರಚರಣಾದಿಗಳ ಮಂತ್ರದಿಂದಲೂ, ಕೂಡಿ ಬಹುಮುಖವಾದ ಚರಣದ ಕಾಲ್ಬಲವಂನು ವೊದಗಿಸಿ, ಜತನದಿಂದ ನಡುವೆ ಇರುವ ಶರೀರವೆಂಬುವ ರಥದಿಂದ ಸದಮಳವಾದ ಲಿಂಗವನ್ನು ನಾನು ಎದುರುಗೊಳ್ಳುತ್ತಾ ಎಂದಿಗಿರುವೆನೋ ಭಂಗಾರುವುನೆಯಲ್ಲಿ ಬೆಳ್ಳಿಯಶಿಟ್ಟುಗಳಿಂದ

ಲೂ, ರತ್ನದ ಪರ್ವತಗಳಿಂದಲೂ, ಪಚ್ಚೆಯ ಶಿಖರಗಳಿಂದಲೂ, ಚಿತ್ರ
ವಾದ ನೀಲದಗುಂಡ ಗಳಿಂದಲೂ, ಪ್ರವಾಳದ ತೆನೆಗಳಿಂದಲೂ, ವೈಡೂ
ರ್ಯಗಳಿಂದಲೂ, ಹಸರುಮುತ್ತುಗಳಿಂದಲೂ, ವಜ್ರದಬಂಡೆಗಳಿಂದಲೂ
ಪ್ರಕಾಶಿಸುತ್ತಿರುವ ಹೃದಯಮಂಡಲ ಮಧ್ಯದಲ್ಲಿ ಚಿದ್ರೂಪಿಯಯನಿಷ
ಲಿಂಗದೊಂದಿಗೆ ಎಂದಿಗೆ ಇರುವೆನೊ ? ಥಳಕ್ಕೆಂದು ಮಿಂಚುವ ಬಳ್ಳಿಗ
ಳೆಹಾಗೆಯು ಕೋಟಿಸೂರ್ಯರ ಪ್ರಕಾಶವನ್ನು ಕವಿಸುತ್ತಿರುವ ಬೆಳಕನ್ನು
ವಿಸ್ತಾರ ಪಡಿಸುತ್ತಲಿರುವ ಬಳ್ಳೀ ಬ್ರಂಹರಂಧ್ರದನಡುವೆ ಶಂಖ, ಘಂ
ಟೆ, ಜಾಗಟೆ, ಗಗ್ಗರಿ, ಕಿನ್ನರಿ, ವೀಣೆ ಈ ಮೊದಲಾದವುಗಳಹಾಗೆ ರೋ
ಕರಿಸುವ ಓಂಕಾರದ ಪ್ರಣವನಾದದೊಂದಿಗೆ ಎಂದಿಗೆ ಇರುವೆನೊ ? ಕು
ಟಿಲವಾದ ಮಾಯೆಯನ್ನು ಪರಿಹರಿಸಿ ಅಜ್ಞಾನವೆಂಬುವ ಅಂಧಕಾರಕ್ಕೆ
ಜ್ಞಾನವೆಂಬ ಜ್ಯೋತಿಯನ್ನು ಬೆಳಗಿಸಿ ಮದವಾಯುವನ್ನು ನೆಟ್ಟಗೆಮಾ
ಡಿ ತಾನು ಒಂದು ಮೂಡಿ ಪುಟಕ್ಕನೆ ಹಾರಿ ಆತ್ಮನನ್ನು ಊರ್ಧ್ವಕ್ಕೆ
ಹೊಂದಿಸಿ ಲಲಾಟಭ್ರೂಗಳ ಮಧ್ಯದಲ್ಲಿ ತೇಜೋರಾಶಿಯಾದ ಮಂ
ದೊಳಗೆ ಲಿಂಗದಮೇಳದ ಸಮರಸದೊಳಗೆ ಎಂದಿಗೆ ಇರುವೆನೊ ? ಕರ
ಣಗಳ ಗದ್ದಲಗಳಿಲ್ಲಂಥಾ ದೇವತಗಳ ಜ್ಞಾನಕ್ಕೆ ಶಿಕ್ಕದಂಥಾ, ಭೇದವಾದಿ
ಗಳ ವ್ಯರ್ಥವಾದ ಹೋರಾಟಕ್ಕೆ ಸಾಧ್ಯವಾಗದಂಥಾಋುಷಿಗಳ ಭಾವ
ಕ್ಕೆ ಅರಿಸದಂಥಾ ಶಾಸ್ತ್ರಿಕ್ಕೆ ಶಿಕ್ಕದಂಥಾ ವೇದಕ್ಕೆ ಗುರುತಿಡ ಲರಿಯ
ದಂಥಾ, ಪುಣ್ಯಚರಿತನಾದ ಶಿವಷಡಕ್ಷರ ವರಲಿಂಗದ ನಿಜಸುಖಧ್ಯಾನ
ದೊಳಗೆ ಎಂದಿಗೆ ಇರುವೆನೋ ಎಂದು ಈ ಪದದಿಂದ ಶಿವಯೋಗದ
ಭ್ಯಾಸದಿಂ ಬ್ರಂಹಕಪಾಲವನ್ನು ಭೇದಿಸಿ, ಜ್ಯೋತಿರ್ಮಯನಾಗಿ ಶಿವ
ಲಿಂಗಾನ್ಯೋನ್ಯ ಸುಖಾನುಭವ ಧ್ಯಾನಮಂ ಪಡೆಯತಕ್ಕ ದೆಂಬುವದಂ
ನು ಪೇಳಿದರೆಂಬ ತಾತ್ಪರ್ಯವು. ... *

(೪೪) ರಾಗಭೋಗಷಟ್ಪದಿ— ಧರೆಯಭೋಗವಂನುಮೆಚ್ಚಿ ಹ
ರನಮರೆದುಕಡಲುಬೇಡ। ಧರೆಯಭೋಗಕನಸಿನಂತೆನೋಡುಮೂನವಾ॥
ಪ ॥ ತಿರುಕನೋರ್ವನೂರಮುಂದೆ । ಮುರುಕುಧರ್ಮಶಾಲೆಯಲ್ಲಿ। ಪೂರ
ಗೆಯಿರುತಲೊಂದುಕನಸುಕಂಡನೆಂತೆನೇ ॥ ಪುರದಅರಸುಸತ್ತರವಗೆ ವ
ರಕುಮೂರರುಗಳುಇಲ್ಲ । ಕರಿಯಕೈಯ್ಯಾಕುಸುಮಮಾಲೆ ಯಿತ್ತುಪುರ
ದೊಳೂ । ೧॥ ಬಿಡಲುಹಾರಕೊರಳಿನಲ್ಲಿ । ತೊಡರಿಸುವದುಅವರಪಟ್ಟ।

ಕೊಡೆಯರನ್ನೊಳ್ಪವೆಂದು ಬಿಡಲು ಅಲ್ಲಿಯೇ ॥ ಒಡನೆತನ್ನಕೊರಳಿನ
ಲ್ಲಿ । ತೊಡರಿಸಲ್ಕಂಡುತಿರುಕ । ಪೊಡವಿಯೊಡೆಯನಾದೆನೆಂದುಹಿಗ್ಗು
ತಿರ್ದನೂ ॥ ೨ ॥ ಪಟ್ಟಕಟ್ಟಿಯಿವಗೆನೃಪರು । ಕೊಟ್ಟರಖಿಳಕನ್ನೆಯರ
ನು । ನೆಟ್ಟನವನುರಾಜ್ಯವಾಳ್ದ ಕನಸಿನಲ್ಲಿಯೇ ॥ ಅಟ್ಟುಗೆಗಳುಕೂಡಿ
ಪತಿಯು । ಪುಟ್ಟಸುಖದೊಳಿರಲಿಕವಗೆ । ಹುಟ್ಟಿಹೆಣ್ಣುಗಂಡುಮಕ್ಕ
ಳಾದವಾಗಲೇ ॥ ೩ ॥ ಓಲಗದಲಿಯರುತತೊಡೆಯ । ಮೇಲೆಮಕ್ಕಳಾ
ಡುತಿರಲು । ಲೀಲೆಯಿಂದಚಾತುರಂಗಬಲವನೋಡುತಾ ॥ ಲೋಲನಾಗಿ
ಯಿರುತನೆನದ । ಕೇಳುಮಂತ್ರಿಮಕ್ಕಳಿಂಗೆ । ಬಾಲೆಯರನುನೋಡಿಮ
ದುವೆಮಾಡಬೇಕಲ್ಲೈ ॥ ೪ ॥ ನೋಡಿಬನ್ನಿರೆನಲುಜೀಯ್ಯ । ನೋಡಿಬಂದೆವೆ
ನಲುಬೇಗ । ಮಾಡುವಿವಾಹಮಂಟಪದೊಳುಸಕಲಕಾರ್ಯವಾ ॥ ಗಾಡ
ಲಾಗೆಸಂಭ್ರಮಗಳು । ಮಾಡುತಿರ್ದಮದುವೆಯನ್ನು । ಕೂಡಿದಖಿಳರಾ
ಯರುಗಳುಮೆಚ್ಚುವಂದದಿ ॥ ೫ ॥ ಧನದಮದವುರಾಜ್ಯಮದವು । ವನಿತೆ
ಮದವುಸುತರಮದವು । ಜನಿತವಾಗಿಕನಸಿನಲ್ಲಿಹಿಗ್ಗುತಿರ್ದನೂ ॥ ಅನಿ
ತರೊಳಗೆನೃಪರದಂಡು । ಮನೆಯಮುತ್ತಿದಂತೆಯಾಗೆ । ಕನಸುಕಾಂ
ಬುತಿರ್ದಹೆದರಿಕಣ್ಣುತೆರೆದನೂ ॥ ೬ ॥ ಮರೆಯುತಿರ್ದಭಾಗ್ಯವೆಲ್ಲ ।
ಹರಿಯಿತೆನುತರರಿವುದಕ್ಕೆ । ಮರಳಿನಾಚುತಿರ್ದಮರುಳಿನಂತೆಯಾಗದೇ ॥
ಸಿರಿಯುಕನಸಿನಂತೆಯೆಂದು । ಆರಿತಷಡಕ್ಷರೀಯವರನ । ಹರುಷದಿಂ
ದಭಜಿಸುನಿತ್ಯಸುಖವುತಪ್ಪದು ॥ ... *

(೪೪) ಟೀ॥ ಎಲೈ— ಮನುಷ್ಯನೇ ! ಭೂಮಿಯ ಭೋಗವಂ
ನು ನಂಬಿ, ಶಿವನನ್ನು ಮರೆತು ಕೆಡಬ್ಯಾಡ, ಭೂಮಿಯ ಭೋಗವೆಲ್ಲಾ
ಸ್ವಪ್ನದ ಹಾಗೆಯೇ ಇರುವದು ನೋಡು ? ಒಬ್ಬ ತಿರುಪಗಾರನು ಪೂ
ರುಮುಂದಿನ ಹರಕು ಧರ್ಮಛತ್ರದಲ್ಲಿ ಬಿದ್ದಿರುವಲ್ಲಿ ಒಂದಾನೊಂದು ಕನಸು
ಕಂಡನು ಅದು ಹ್ಯಾಗೆಂದರೆ— ಆ ಪಟ್ಟಣದ ಅರಸು ಸತ್ತಿರುವನು,
ಅವನಿಗೆ ಮಕ್ಕಳಿಲ್ಲದಕಾರಣ ಪಟ್ಟದಾನೆಕೈಗೆ ಹೂಮಾಲಿಕೆಯನ್ನುಕೊ
ಟ್ಟು ಪಟ್ಟಣದೊಳಗೆ ಬಿಡಲು, ಅದು ಯಾರಕೊರಳಿಗೆ ಹಾರವನ್ನುಹಾಕು
ವದೋ ಅವರೇ ಪಟ್ಟಣಕ್ಕೆ ಅರಸಾಗುವಂತೆ ಮಾಡುವೆವೆಂದು ಬಿಡಲು, ಅ
ಲ್ಲಿಯೇ ಆ ಕೂಡ್ಲೆ ತನ್ನ ಕೊರಳಿಗೆ ಹಾರವನ್ನು ಹಾಕಿದಂತೆ ಈ ತಿರುಪ
ಗಾರನು ಕಂಡು ಭೂಪತಿಯಾದೆನೆಂದು ಸಂಭ್ರಮದಿಂದ ಹಿಗ್ಗುತ್ತಾ ಇದ್ದ

ನು. ಈತನಿಗೆ ಅರಸಪಟ್ಟವನ್ನು ಕಟ್ಟಿ ಸಕಲವನ್ನೂ, ರಾಜಕನ್ನಿಕೆ
ನೂ ಕೊಟ್ಟರು. ಆ ತಿರುಕನು ಸ್ವಪ್ನದಲ್ಲಿಯೇ ಚೆನ್ನಾಗಿ ರಾಜ್ಯ
ಆಳಿದನು. ಹೀಗಿರುತ್ತಾ ರಾಣಿವಾಸದೊಡನೆ ಕೂಡಿ ಹೇಳಕೊಡ
ಸುಖವೊಳಗೆ ಇರುತ್ತಿರಲಾಗಿ, ಅವನಿಗೆ ಒಂದು ಗಂಡುಮಗುವೂ
ದು ಹೆಣ್ಣು ಮಗುವೂ, ಆಗಲೇ ಆದವು. ಆ ಕೊಟ್ಟೆ ಬಿಲಗದಲ್ಲಿ
ರುತ್ತಾ ತನ್ನ ತೊಡೆಯಮೇಲೆ ಮಕ್ಕಳು ಆಡುತ್ತಿರಲು. ಅನಂತ
ಚತುರಂಗದ ಸೇನೆಯನ್ನು ನೋಡುತ್ತಾ, ಲೋಲನಾಗಿ ಬಾದಾಲ
ಚನೆಯನ್ನು ನೆನದು. ಎಲೈ — ಮಂತ್ರಿಯೇ ಕೇಳು ! ಮಕ್ಕಳಿಗೆ ಕ
ಗಳ ನೋಡಿ ಮದುವೆಮಾಡಬೇಕ್ಕಯ್ಯಾ ! ಅದ್ದರಿಂದ ಒಳ್ಳೇ ಕಂನಿಕ
ನ್ನು ವಿಚಾರಿಸಿಕೊಂಡು ಬನ್ನಿ ಅನ್ನಲು, ಮಂತ್ರಿಯು ಆಗಲೇ ನೋ
ಬಂದೆನೆಂದು ಹೇಳಲು, ಮದುವೆ ಮಂಟಪದೊಳಗೆ ಸಕಲ ಕಾರ್ಯಗಳ
ಬೇಗ ಮಾಡಿಸು ಅನ್ನುವದು, ಸಕಲ ಕಾರ್ಯಗಳೂ ಬಹು ಶೀಘ್ರ
ಮಾಡಿಯಾಗಲು, ಸಂಭ್ರಮದಿಂದ ಮದುವೆಯನ್ನು ಮಾಡಿಸುತ್ತಾ ಇ
ಮದುವೆಗೆ ಕೂಡಿ ಬಂದಂಥಾ ಎಲ್ಲಾ ರಾಯರುಗಳೂ ಮೆಚ್ಚುವಹಾ
ಮದುವೆ ಮಾಡಿಸಿದನು. ತರುವಾಯ ಧನದಮದವೂ, ರಾಜ್ಯದಮದವೂ
ಸ್ತ್ರೀಮದವೂ, ಪುತ್ರಮದವೂ, ಉಂಟಾಗಿ ಕನಸಿನಲ್ಲಿ ಹಿಗ್ಗುತ್ತಾ ಇದ್ದನ
ಅಷ್ಟರೊಳಗೆ ಪರರಾಯರ ದಂಡು ಬಂದು ಮನೆಯನ್ನು ಮುತ್ತಿಕೊಂ
ಹಾಗೆ ಆಗಲು, ಕನಸು ಕಾಣುತ್ತಾ ಇದ್ದು ಹೆದರಿಕೊಂಡು ಕಣ್ಣು ತೆರೆ
ನು. ಆಗ ಮೆರೆಯುತ್ತಾ ಇದ್ದ ಭಾಗ್ಯವೆಲ್ಲಾ ಹರಿಯಿತೆಂದು ತಿರುಕೊಳ
ವದಕ್ಕೆ ನಾಚಿಕೊಂಡಿರುವ ಹುಚ್ಚನಹಾಗೆ ಭೂಮಿಯ ಸಂಪತ್ತೆಲ್ಲಾ ಕ
ಸಿನ ಕಾರ್ಯಕ್ಕೆ ಸಮಾನವಾದದ್ದೆಂದು ಅರಿತು ಷಡಕ್ಷರವರನ್ನು ಸ
ತೋಷದಿಂದ ಭಜಿಸು, ಹೀಗೆ ಮಾಡುವಿಯಾದರೆ, ನಿನಗೆ ನಿತ್ಯಸುಖ
ತಪ್ಪದೆಂದು ಈ ಪದದಿಂದ ಪ್ರಾಪಂಚಿಕದ ಮಾಯಾರೂಪವಾದ ಭೋ
ಗಾದಿಗಳನ್ನು ನಶ್ವರವಾದದ್ದೆಂದರಿತು, ಶಾಶ್ವತನಾದ ಶಿವನನ್ನೇ ಭಜ
ನಿತ್ಯವಾದ ಸುಖವನ್ನು ಪಡೆಯತಕ್ಕದ್ದೆಂದು ನರನಿಗೆ ಬುದ್ಧಿ ಪೇಳಿದರೆಂ
ತಾತ್ಪರ್ಯವು.

... ...

(೪೫) ರಾಗ- ಕುಸುಮಷಟ್ಪದಿ — ಭವಕಾಟಕಾರದೇ । ಶಿವ
ಶರಣರಮನೆಯ। ತವೆದ್ವಾರದೊಳಗುಬಿದ್ದಿಸುಳಹುರ್ತ್ರಿಯಯ್ಯಾ॥ ಪ॥ ದ್ವೇ

ಷೂನವನುನಾ। ಭಾಷೆವಂತನದಲ್ಲ। ಈಶನೊಳು ಸಲುಗೆಯೆನಗೆಂತಪ್ಪುದೂ॥ ಘೂಸಿಯೂದನುಭವದಿ। ವೋಸರಿಸದೇಯೆಂನ। ಈಶನಂಘ್ರಿಗೆ ಪೊಲಿದು ಸಲಹಿರೈಯ್ಯಾ ॥ ೧ ॥ ಉದ್ದರಿಸುವರಕಾಣೆ। ಇದ್ದೆಸೆಯಕೆಡಿಸಿದೆನು। ಹೊದ್ದರಿಂನೆಂನವೂದ್ದೆಸೆಯನಾನೂ॥ ಬಿದ್ದೆನಿಂವುಂಗಳದಿ। ಉದ್ಧರಿಸಿಯಲ್ಲದೊಡೆ। ವೊದ್ದುಕಡೆಗೆನ್ನನ್ನುನೂಕಿರಯ್ಯಾ ॥ ೨ ॥ ನೀತಿಯರಿಯದೆನಾನು। ಪಾತಕದನಡೆಯಲ್ಲಿ। ಭೂತಳದೊಳಂನಡದೆಗತಿಯೂವುದೂ॥ ಓತುಕರುಣಿಸಿನೀವುಷಾತಕಾಭ್ರಕೆಜಿಂಝು। ವಾತರೆಂಬುದಕೇಳಿಬಂದೆನಾನೂ ॥ ೩ ॥ ತಪ್ಪನೋಡದೆಯಂನ। ವೊಪ್ಪವಿಟ್ಟೇನಡಿಸಿ। ತಿಪ್ಪೆಯನುಬಗೆದಲ್ಲಿಯೇನಿಪ್ಪುದೂ। ಸಪ್ಪಥರುನಿವುಗುಂಟೆ। ಇಪ್ಪೆನಾಗೆಯುನಿವುಗೆ। ಅಪ್ಪದಪ್ಪದದೊಂದುವುಂಟೆಹೇಳೀ ॥ ೪ ॥ ಯೆಲ್ಲಾಪುರಾತನರು। ಯೆಲ್ಲಿನೆನೆದಲ್ಲಿಯೆ। ನ್ನಲ್ಲಿಯಿಪ್ಪುದನಾನು ಬಲ್ಲೆನಾಗೀ॥ ಇಲ್ಲಿನತನಾಗಿನಾ। ನಿಲ್ಲಿಕೃಪೆಯೆಂನುವಡೆ। ಸಲ್ಲಲಿತಶಿವಷಡಕ್ಷರಲಿಂಗವೇ॥ ... ... ೫॥

(೪೫) ಟೀ॥ ಸಂಸಾರಿಕವೂದ ಜನನಾದಿ ಬಾಧೆಗೆ ತಡೆಯಲಾರದೆ, ಶಿವಶರಣರುಗಳ ಮನೆಯ ಬಾಗಿಲೊಳಗೆ ಬಿದ್ದೆನು, ಎನ್ನನ್ನು ರಕ್ಷಿಸಿರಯ್ಯಾ, ನಾನು ದ್ವೇಷಿಯೂದ ಮನುಷ್ಯನು, ನಿಜವಾದ ಮಾತುಳ್ಳವನಲ್ಲ. ಹೀಗಿರುವ ನನಿಗೆ ಶಿವನಲ್ಲಿ ಹ್ಯಾಗೆ ಸಲಿಗೆ ಉಂಟಾಗುವದು. ಸಂಸಾರದಲ್ಲಿ ಘೂಸಿಯೂದೆನು ನನ್ನನ್ನು ಕೈಬಿಡದೆ, ಈಶನ ಪಾದಗಳಿಗೆ ಪ್ರೀತನಾಗಿ ಮಾಡಿ ಕಾಪಾಡಿರೈಯ್ಯಾ, ಇದ್ದದಿಕ್ಕನ್ನು ಕೆಡಿಸಿಕೊಂಡೆನು. ನನ್ನನ್ನು ಉದ್ಧರಿಸುವವರನ್ನು ಕಾಣೆನು, ನನ್ನನ್ನು ಒಂದು ದಿಕ್ಕಿನಲ್ಲಿಯೂ ಶೇರಿಸರು, ನಾನು ನಿಮ್ಮ ಅಂಗಳದಲ್ಲಿ ಬಿದ್ದೆನು, ನನ್ನನ್ನು ಉದ್ಧರಿಸಿರಿ, ಇಲ್ಲದಿದ್ದರೆ ಕಾಲಿಂದ ಒದ್ದು ನನ್ನನ್ನು ನೂಕಿಬಿಡಿರಯ್ಯಾ ! ನೀತಿಯನ್ನರಿಯದೆ, ನಾನು ಪಾತಕದ ನಡತೆಯಲ್ಲಿ ಭೂಮಿಯಲ್ಲಿ ನಡೆಯುತ್ತಾಬಂದೆನು; ಎನಗೆ ಏನುಗತಿ ? ನೀವುಗಳು ಪಾಪವೆಂಬುವ ಮೇಘಕ್ಕೆ ಜಿಂಝೂಮಾರುತರೆಂಬುವದನ್ನು ಕೇಳಿ ! ನಿಮ್ಮ ಸನ್ನಿಧಾನಕ್ಕೆ ಬಂದಿರುವೆನು, ದಯಮಾಡಿ ನನ್ನನ್ನು ಕಾಪಾಡಿರೈಯ್ಯಾ, ತಪ್ಪನ್ನುನೋಡದೆ ನನ್ನನ್ನು ಶುಚಿಮಾಡಿ ನಡಿಸಿರಿ ತಿಪ್ಪೆಯನ್ನು ಬಗೆದರೆ ಅಲ್ಲೇನಿರುವದು ನೀವು ಸನ್ಮಾರ್ಗಿಗಳಾಗಿರುವವರಿಂದ ನಿಮ್ಮೊಳಗೆ ಭೇದವುಂಟೇ ? ನಾ

ನು ನಿಮಗೆ ಅನ್ಯನೆಂಬುವದು ವುಂಟೇ ? ಹೀಗೆ ಮಾಡಲಾಗದು, ಎಲ
ಪೂರ್ವಿಕರಾದ ಶರಣರೂ ಎಲ್ಲೆಲ್ಲಿಸ್ಮರಿಸಿದರೆ ಅಲ್ಲಲ್ಲಿಯೇ ನನ್ನಲ್ಲಿ ಇ
ವದಂನು ನಾನು ಬಲ್ಲೆನಾದ ಕಾರಣ, ನಾನು ಇಲ್ಲಿ ನಮ್ರನಾಗಿ, ಇ
ಯೇ ಕೃಪೆಯನ್ನುವದಾದರೆ, ಚನ್ನಷಡಕ್ಷರ ಲಿಂಗವೇ ಪ್ರಸನ್ನನಾಗ
ಎಂದು ಈ ಪದದಿಂದ ಸಾಕ್ಷಾತ್ ಶಿವಸ್ವರೂಪರಾದ ಶಿವಶರಣರುಗ
ದಾಸ್ಯವೃತ್ತಿಯನ್ನು ಪಡಪು ಶಿವಾನುಗ್ರಹಕ್ಕೆ ಪಾತ್ರನಾಗತಕ್ಕದ್ದೆಂದ
ಪೇಳಿದರೆಂಬ ತಾತ್ಪರ್ಯವು. ...

(೪೬) ರಾಗ- ಕುಸುಮಷಟ್ಪದಿ — ಎನ್ನಸರ್ವಾಂಗವನು। ಎನ್ನ
ಪರಿಣಾಮಕ್ಕೆ । ಚನ್ನಾಗಿಸಲಿಸುವೆನುಯೆಲೆಲಿಂಗವೆ॥ ಪ॥ ಎನ್ನಹೃದಯ
ವುನಿಮಗೆ। ವುನ್ನತದಮನೆಯಯ್ಯ । ಎನ್ನಮುಖಮುಖಶಾಲೆನಿಮಗಪ್ಪ
ದೂ ॥ ಎನ್ನನವಚಕ್ರಗಳು । ಬಿನ್ನಣದನವನೆಲೆಯು । ಹೊನ್ನವುಪ್ಪ
ಗೆಯಾಗಿಪ್ಪುದಯ್ಯಾ ॥ ೧ ॥ ಎನ್ನಹೃತ್ಕಮಲವದುರಂನಖಚಿತಗಳಪ್ಪ
ನಿನ್ನಶಯನಕಮಂಚವಾಗಿರ್ಪುದೂ ॥ ಎನ್ನಜ್ಞಾನವುನಿಮಗೆವುನ್ನತದ
ತಲೆಗಿಂಬು । ಯನ್ನಯಾಚಾರವೇ ಚರಣಭಟನೂ । ೨ ॥ ಎನ್ನಶ್ರೋ
ತ್ರವುನಿಮ್ಮ। ಸನ್ನುತದನುಡಿಗಳನು । ಭಿನ್ನವಿಲ್ಲದೆಕೇಳ್ವದಾಸಿನಿಮಗೇ
ಎನ್ನಕೋರ್ಕೆಯುಚಲುವ । ನಿನ್ನಚರಣವತೊಳೆವ । ಮನ್ನಣೆಯತೊ
ತ್ತಾಗಿರ್ಪುದೈಯ್ಯಾ ॥ ೩ ॥ ಎನ್ನನಯನವುನಿಮಗೆ । ರನ್ನವಳಗಿನಚಲ
ತಿ । ಯೆನ್ನಘ್ರಾಣವುನಿಮಗೆ ದೃಢಭರಣಿಯೂ । ಎನ್ನಜಿಹ್ವೆಯುನಿ
ಮಗೆ । ಮಂನಣದತಾಂಬೂಲ । ಹೊಂನಪಡುಗವುದಾಗಿಮೆರಧಿರ್ಪು
ದಾ॥ ೪ ॥ ಎನ್ನಕೈಗಳುಯೆರಡು । ನಿನ್ನಪಾದವನೊಲಿದು । ಚನ್ನಾಗಿ
ತೊಳೆದಿರ್ಪಹೆಂಗಳ್ಕೈಯೂ ॥ ಯೆನ್ನಕಾಲುಗಳೆರಡು । ನಿನ್ನಮಜ್ಜನಗಳಿ
ಗೆ। ಪನ್ನೀರುಗಳತರುವತೊತ್ತಿರಯ್ಯಾ॥ ಎನ್ನಪ್ರಾಣವುಯಿದುವೆ। ನಿನ್ನ
ರತಿಸುಖಗಳಿಗೆ । ಭಿನ್ನವಿಲ್ಲದೆಯಿಪ್ಪ ಸತಿಯುಬಳಿಕಾ ॥ ಎನ್ನಮನವದು
ಬಿಡದೆ। ಯೆನ್ನನಿಂನನುತಂದು। ಚನ್ನಾಗಿಬಂದುಗೂಡಿಪಕೆಳದಿಯೂ॥
೬ ॥ ಇಂತೆಸರ್ವಾಂಗವನು । ಮುಂತೆನ್ನಪ್ರಾಣವನು। ಸಂತಂವಿಗೆತಾ
ನುಕೈಕೊಳುತಿರೇ॥ ಭ್ರಾಂತಿಭ್ರಮೆಯಳಿಯುತ್ತ। ಚಿಂತೆಯಿನ್ನೇಕಯ್ಯ।
ಕಂತುಹರಶಿವಷಡಕ್ಷರಲಿಂಗವೇ॥ ... ೭॥

(೪೬) ಟೀ॥ ಎಲೈ—ಲಿಂಗಮೂರ್ತಿಯಾದ ಶಿವನೇ ! ಎನ್ನಸರ್ವಾಂಗವ

ನ್ನು ನಿನ್ನ ಪೂಜಾವಿಧಾನಕಾರ್ಯಕ್ಕೆ ನಿನಗೆ ಚನ್ನಾಗಿ ಸಮರ್ಪಿಸುವೆನು, ನನ್ನಹೃದಯವು ನಿನಿಗೆ ವುನ್ನತವಾದ ಗೃಹವೈಯ್ಯಾ, ನನ್ನ ಮುಖವುನಿನಗೆ ಯಜ್ಞಶಾಲೆಯಾಗಿರುವದು. ನನ್ನ ಒಂಭತ್ತು ಚಕ್ರಗಳೆನಿಸುವ ನವದ್ವಾರಗಳೂ ನಿನ್ನನಿವಾಸವಾದ ಭಂಗಾರದಉಪ್ಪರಿಗೆಯಾಗಿರುವ ದೈಯ್ಯಾ ! ಯೆನ್ನ ಹೃದಯ ಕಮಲವೆಂಬುವದು ರತ್ನಖಚಿತವಾದ ನಿಂನ ಶಯನಕ್ಕೆ ಮಲಗುವ ಮಂಚವಾಗಿರುವದು, ನನ್ನ ಜ್ಞಾನವೆಂಬುವದು ನಿನಗೆ ವುನ್ನತವಾದ ತಲೆದಿಂಬಾಗಿಯೂ, ನನ್ನ ಆಚಾರವೆಂಬುವದೇ ನಿನಗೆ ಪಾದಸೇವಕನಾಗಿಯೂ ಇರುವದು, ನನ್ನ ಕಿವಿಗಳೆರಡೂ ನಿಂಮ ಸ್ತೋತ್ರದ ಮಾತುಗಳನ್ನಾಲಿಸಿ ಭಿನ್ನವಿಲ್ಲದೇ ಕೇಳುವ ನಿಂಮದಾಸಿಯಾಗಿಯೂ ನನ್ನ ಕೋರಿಕೆಯೆಂಬುವದು ನಿನ್ನ ಚಲುವಾದ ಪಾದಗಳನ್ನು ತೊಳೆಯುವ ಮನ್ನಣೆಯು ತೊತ್ತಾಗಿಯೂ ಇರುವದೈಯ್ಯ ನನ್ನ ಕಂಣುಗಳೆರಡೂ ನಿಮಗೆ ರತ್ನದೀಪದ ಹಣತಿಯಾಗಿಯೂ, ನನ್ನಮೂಗೆಂಬುವದು ನಿಮಗೆ ಭದ್ರವಾದ ಪರಿಮಳದ ಭರಣಿಯಾಗಿಯೂ, ನಂನ ನಾಲಿಗೆಯು ನಿಮಗೆ ತಾಂಬೂಲದ ಭಂಗಾರುತಟ್ಟೆಯಾಗಿಯೂ, ಮೆರೆಯುತ್ತಿರುವದು, ನನ್ನಕೈಗಳೆರಡೂ ನಿಮ್ಮಪಾದವನ್ನು ಭಕ್ತಿಯಿಂದ ಚನ್ನಾಗಿ ಅಭಿಷೇಕಿಸುವ ಕನ್ನಿಕೆಗಳು, ನನ್ನ ಪಾದಗಳೆರಡೂ ನಿಮ್ಮ ಅಭಿಷೇಕಕ್ಕೆ ಪನ್ನೀರುಗಳನ್ನು ತರುವ ತೊತ್ತಿರುಗಳಾಗಿರುವವು. ನನ್ನ ಈ ಪ್ರಾಣವೆಂಬುವದೇ ನಿಮಗೆ ರತಿಸುಖಗಳಿಗೆ ಭೇದವಿಲ್ಲದೇ ಇರುವ ಸತಿಯಾಗಿಯೂ, ನನ್ನ ಮನವಾದದ್ದು ಯೆಡೆಬಿಡದೆ ನನ್ನನ್ನೂ ನಿನ್ನನ್ನೂ ತಂದು ಚನ್ನಾಗಿ ಬಾದು ಕೂಡಿಸುವ ಸಖಿಯಾಗಿಯೂ ಇರುವದು. ಈ ರೀತಿಯಲ್ಲಿ ನನ್ನ ಸರ್ವಾಂಗವನ್ನೂ ಮುಖ್ಯವಾಗಿ ನನ್ನ ಪ್ರಾಣವಂನೂ, ನಿರಂತರವು ಸಂತೋಷದಿಂದ ಪರಿಗ್ರಹಿಸುತ್ತಿರಲು. ಭ್ರಾಂತಿ ಭ್ರಮೆಯು ಅಳಿಯುತ್ತಿರಲು, ಎಲೈ— ಮಾರಹರನಾದ ಷಡಕ್ಷರಲಿಂಗವೇ ! ಚಿಂತೆಯೆಂಬುವದು ಇನ್ಯಾತಕ್ಕೆ ಯೆಂದು ಈ ಪದದಿಂದ ಕರಚರಣಾದ್ಯವಯವಗಳನ್ನು ಪ್ರಾಣವನ್ನು ಭಗವಂತನಿಗೆ ಅರ್ಪಿಸಿದಬಳಿಕ ತಾನೇಶಿವನಾಗಿ ನಿಶ್ಚಿಂತೆಯೆಂದಿರುತ್ತಿರುವನೆಂದು ಹೇಳಿದರೆಂಬ ತಾತ್ಪರ್ಯವು. *

(೪೭) ರಾಗ- ಕುಸುಮಷಟ್ಪದಿ— ಶಿವನೊಳಗೆವಿಶ್ವಾಸ । ಶಿವನೊಳಗೆನಂಬಿಕೆಯು । ಶಿವನೊಳಗೆಮೋಹವಿರೆತಾನೆಶಿವನೂ ॥ ಪ॥ ಕುರಿ

ಯಹಿಕ್ಕೆಯತಂದು । ಹರನೆಂದುಭಾವಿಸುತ । ಕುರಿಯಹಾಲನುಕರದ
ತಂದೆರೆಯುತಾ ॥ ಇರುತಿರಲುತಂದೆಶಿವ । ಪರಿತಂದುಕೇಳಿಭಲ । ಶಿರವ
ಲಿದವಿಶ್ವಾಸವನುನೋಡಿರೆ॥ ೧ ॥ ಭೂಮಿಯೊಳಗಭಿಮಾನ। ಕಾಮಿನಿ
ಯರಿಂದಿಲ್ಲ । ಸೋಮಧರಚರರೂಪಿ ನಿಂದಬಂದೂ ॥ ಕಾಮಿನಿಯಬೇ
ಡಿತ್ತ। ಯಾಮಿಪನುಬಲ್ಲವನು । ಆಮಹಾವಿಶ್ವಾಸ ವನುನೋಡಿರೇ।
೨ ॥ ಏಣಾಂಕಧರನಿರವು । ಪೂಣೆಯಾಗದುಯೆನುತ । ಕೇಣಸರಕಾಗಿಕ
ರಯುಗವಕಡಿದೂ ॥ ಕ್ಷೋಣಿಯನುನಿಲ್ಲಿಸಿಯೆ । ಜಾಣಕರವನುಪಡೆದ
ಬಾಣನೆಂಬನನಂಬುಗೆಯನೋಡಿರೆ ॥ ೩ ॥ ಹಾಲಪಾಯಸತನ್ನ । ನಾ
ಲಿಗೆಗೆಸವಿಯಲಾ । ಬಾಲೆತಾನೆಂಬುದನೆವುಳಿದುಬಳಿಕಾ ॥ ಲೀಲೆಯಿಂದ
ಲಿಕಳಃಹಿ । ಶೂಲಿಗುಣಿಸಿದನಮ್ಮ । ಬೋಳಿಯಕ್ಕನಮೋಹವನುನೋ
ಡಿರೇ ॥ ೪ ॥ ಇಂತಪ್ಪವಿಶ್ವಾಸವಿಂತಪ್ಪನಂಬುಗೆಯು। ಇಂತಪ್ಪಮೋಹ
ತನಗಿಲ್ಲದನಕಾ॥ ಸಂತತದಿಲಿಂಗವನುಮುಂತೆಪೂಜಿಸುತಿರಲು । ಯೆಂತೊ
ಲಿವನ್ನೈಷಡಕ್ಷರಲಿಂಗವೂ ॥ ... ೫ ॥

(೪೭) ಟೀ ॥ ಶಿವನೊಳಗೆ ವಿಶ್ವಾಸವೂ, ಆತನೊಳಗೆ ನಂಬಿಕೆ
ಯೂ, ಆತನೊಳಗೆ ಮೋಹವೂ ಇದ್ದರೆ, ತಾನೇ ಸಾಕ್ಷಾತ್ ಶಿವನಾಗಿ
ರುವನು. ಕುರಿಯ ಇಕ್ಕೆಯನ್ನು ತಂದು, ಅದನ್ನೇ ಶಿವನೆಂದು ಭಾವಿಸಿ,
ಕುರೀಹಾಲು ಕರದುತಂದು ಅದಕ್ಕೆ ಅಭಿಷೇಕಿಸುತ್ತಾ, ಇರುತ್ತಿರಲಾಗಿ,
ತಂದೆಯಾದ ಶಿವನು ಪ್ರಸನ್ನತೆವೆತ್ತು ಶಾಬಾಸೆಂದು ಹೊಗಳಿದಂಥ ಒ
ಬ್ಬಾನೊಬ್ಬ ಭಕ್ತನವಿಶ್ವಾಸವನ್ನು ಕೇಳಿನೋಡಿದ್ದೀರಾ ! ಭೂಮಿಯೊ
ಳಗೆ ಅಭಿಮಾನವೆಂಬುವದು ಸ್ತ್ರೀಯರಿಗಿಂತಲೂ, ಬೇರೆ ಇಲ್ಲ ವಷ್ಟೇ ?
ಹೀಗಿರುತ್ತಾ ಪರಶಿವನು ಚರರೂಪಿನಿಂದ ಬಿಜಮಾಡಿ ಒಬ್ಬ ಭಕ್ತನಂನು
ಬೇಡಿದಕ್ಕೆ ಆ ಭಕ್ತನು ಬೇಡಿದಾತನ ಇಷ್ಟಪ್ರಕಾರವಾಗಿ ತನ್ನ ಹೆಂಡತಿ
ಯನ್ನು ಒಪ್ಪಿಸಿಕೊಟ್ಟ ವಿಶ್ವಾಸವನ್ನು ನೋಡಿದಿರಾ ? ಚಂದ್ರಶೇಖರ ಆ
ವಾಸವು ತನಗೆ ಕೊರತೆಯಾಗ ಬಾರದೆನ್ನುತ್ತಾ, ಭಕ್ತಿಗಾಗಿ ಎರಡು ಕೈ
ಗಳನ್ನೂ ಕಡಿದು ಭೂಮಿಯಲ್ಲಿ ನಿಲ್ಲಿಸಿ ಬುದ್ಧಿವಂತನಾದ ಬಾಣನೆಂಬು
ವನ ನಂಬಿಕೆಯನ್ನು ನೋಡಿದಿರಾ ? ಹಾಲಿನ ಪಾಯಸವು ತನ್ನ ನಾಲಿ
ಗೆಗೆ ರುಚಿಸುತ್ತಿರಲು ಆ ಹೆಂಗಸು ತನ್ನ ಮೊಗುವು ಉಣುವದಂನುಬಿ
ಡಿಸಿ, ಅದನ್ನು ಶಿವನಿಗೆ ಉಣಿಸಿದ ವಿಧವೆಯ ಮೋಹವೆಂಬುವ ದಂನು

ನೋಡಿದಿರಾ ? ಈ ರೀತಿಯಾದ ವಿಶ್ವಾಸವೂ - ಈವಿಧವಾದ ನಂಬಿಕೆಯೂ, ಈಪ್ರಕಾರವಾದ ಮೋಹವೂ, ನನಿಗೆ ದೊರೆಯದೆ ಇರುವದರಿಂದ ಸಂತೋಷದಿಂದ ಲಿಂಗವನ್ನು ಇನ್ನು ವೇಳಾದರೂಪೂಜಿಸುತ್ತಿರದಿದ್ದರೆ ಷಡಕ್ಷರಲಿಂಗಮೂರ್ತಿಯಾದ ಶಿವನು ಹ್ಯಾಗೆ ಪ್ರಸನ್ನನಾಗುವನೆಂದು ಈ ಪದದಿಂದ ಶಿವಾನುಗ್ರಹವನ್ನು ಪಡೆಯಬೇಕಾದರೆ ಭಕ್ತಿ ನಂಬಿಕೆ ವಿಶ್ವಾಸಗಳೆಂಬುವ ಮೂರು ಸಾಧನಗಳನ್ನು ಪಡೆಯತಕ್ಕದ್ದೆಂದು ದೃಷ್ಟಾಂತ ಪಡಿಸಿ ಪೇಳಿದರೆಂಬ ತಾತ್ಪರ್ಯವು. ... *

(೪೮) ರಾಗ - ಕುಸುಮ ಷಟ್ಪದಿ — ಹರನೆನಾನಿಮ್ಮಲ್ಲಿ| ವರವಬೇಡುವೆನೊಂದ । ಶರಣರಿಗೆಭೃತ್ಯನಾಗಿರಿಸೆನ್ನುವಾ । ಪ ॥ ಅವರಲ್ಲಿಶಿವನು ಇಹ| ಶಿವನುಇರ್ದಲ್ಲಿತಾ| ತವೆಸಕಲಶರಣಗಣಮೆರದಿಪ್ಪುದೂ ॥ ಅವರಂಗಳೆವುನಿತ್ಯ । ಶಿವಲೋಕವಾಗಿಹುದು| ಅವರಘುನಕಿನ್ನೇನಸರಿಯಕಾಣೆ ॥ ಅವರಕಿಂಕರನಾಗಿ । ಅವರಪಾದವತೊಳೆದು| ಅವರಪಡುಗವಬೆಳಗಿತೊಳೆದುತಂದೂ ॥ ಅವರಹಾವುಗೆವಿಡಿದು । ಅವರಡಿಗಳೆಂವೊರಿಸಿ|ಅವರಿಚ್ಚೆಯೊಳಗಿರ್ಪವರವನೆನಗೇ ॥ ೨॥ ಅವರುಂಡುಮಿಕ್ಕುದನು । ಅವರುಟ್ಟುಬಿಟ್ಟುದನು । ಅವರುಗುದತಂಬುಲವಸವಿದುನಾನೂ ॥ ಅವರಂಗಳವಗುಡಿಸಿ । ಅವರಬಾಗಿಲಕಾಯ್ದು| ಅರರಕೀಳಲಿಸೇರಿಕೊಂಡಿರ್ಪುದಾ॥ ೩ ॥ ಅವರಯೆತ್ತಾಗಿನಾ । ನವರತೊತ್ತಾಗಿನಾ| ನೆವರಪಶುವಾಗಿಸುಖಮಿರುತಿರ್ಪುದಾ॥ ಅವರಬಾಗಿಲೊಳಿರ್ಪ । ತವೆಸುವೊಳಿಗನಾಗಿ| ಅವರಚರಣದಧೂಳಿತೊಡೆದಿರ್ಪುದಾ । ೪ ॥ ಶಿವನಿಮ್ಮಘುನಕಿಂದ| ಅವರಘುನಪತ್ಯಧಿಕ । ಅವರಂಗಳದ್ವಿತೀಯ್ಯಕೈಲಾಸವೂ ॥ ಅವರನ್ನಭವಭವದಿ| ತವೆಬಿಡದೆಯಿರ್ಪುದನು । ಶಿವಷಡಕ್ಷರವರನೆಪಾಲಿಸೆನಗೇ ॥ ೫ ॥

(೪೮) ಟೀ ॥ ಎಲೈ— ಶಿವನೇ ! ನಿನ್ನ ಶರಣರಾದವರಿಗೆ ನಾನು ಭೃತ್ಯನಾಗಿರುವಂತೆ ನನ್ನನ್ನು ಇರಿಸು ಎಂಬುವ ಬಾದುವರವನ್ನು ಬೇಡಿಕೊಳ್ಳುವೆನು, ಅವರಲ್ಲಿ ಶಿವನು ನೆಲೆಗೊಂಡಿರುವನು, ಶಿವನು ನೆಲೆಇರುವಲ್ಲಿ ಎಲ್ಲಾ ಶರಣರ ಸಮೂಹವುತುಂಬಿಇರುವದು-ಅವರ ಅಂಗಳವೇ ನಿತ್ಯವಾದ ಶಿವಲೋಕವಾಗಿರುವದು. ಅವರ ಮಹತ್ತಾದ ದೊಡ್ಡಸ್ತಿಕೆಗೆ ಮತ್ತೇನೂ ಸರಿಯಾದದ್ದನ್ನು ಕಾಣೆನು, ನಾನು ಅವರಿಗೆ ಕಿಂಕರನಾಗಿ- ಅವರ ಚರಣಗಳನ್ನು ತೊಳೆದು,ಅವರ ಪಡಗವಂನುಬೆಳಗಿ ತೊಳಕೊಂ

ಡು ಬಂದು, ಅವರ ಪಾದುಕೆಗಳನ್ನು ಹಿಡಿದು ಅವರ ಪಾದಕ್ಕೆ ತೊಡಿ
ಅವರ ಇಷ್ಟಾನುಸಾರವಾಗಿರುವವರನ್ನೇ ನಾನುಬೇಡಿಕೊಳ್ಳುವೆನು.
ವರು ಆರೋಗಣೆಮಾಡಿದ ಶೇಷಾನ್ನವನ್ನೂ ಅವರು ಧರಿಸಿ ಕಳೆದ
ಬಿಸುಟ ವಸ್ತ್ರವನ್ನೂ, ಅವರು ಮೆದ್ದು ಉಗುಳಿದ ತಾಂಬೂಲವಂ
ನಾನು ಉಡು ಪಟ್ಟು, ಅವರ ಅಂಗಳವಂನು ಗುಡಿಸಿ, ಅವರ ಮನ
ಬಾಗಲು ಕಾದುಕೊಂಡು ಅವರಿಗೆಲ್ಲಾ ಕೀಳಾದವನಾಗಿ ಬಿದ್ದಿರುವ ವರ
ನ್ನು ಬೇಡಿಕೊಳ್ಳುವೆನು. ನಾನು ಅವರ ಯೆತ್ತಾಗಿಯೂ ಅವರ ತೊತ್ತಾ
ಗಿಯೂ, ಅವರ ಪಶುವಾಗಿಯೂ ಸುಖವಾಗಿ ಇರುವದನ್ನೂ, ಅವರಬಾ
ಗಲಲ್ಲಿ ಬಿದ್ದಿರುವ ಊಳಿಗದವನಾಗಿ ಅವರ ಪಾದಧೂಳನ್ನು ಪೊರಸು
ತ್ತಿರುವದನ್ನು ಬೇಡಿಕೊಳ್ಳುವೆನು. ಎಲೈ— ಶಿವನೇ ! ನಿಮ್ಮ ಘನಕ್ಕಿಂ
ತಲೂ ಅವರ ಘನವು ಅತ್ಯಧಿಕವಾದದ್ದು; ಅವರ ಅಂಗಳವೇ ಎರಡನೆ
ಕೈಲಾಸವಾಗಿರುವದು. ಅವರನ್ನು ಜನ್ಮಜನ್ಮಾಂತರದಲ್ಲಿಯೂ ಬಿಡದ
ಇರುವಂಥಾವರನ್ನು, ಎಲೈ— ಷಡಕ್ಷರವರನೇ ! ನನಿಗೆ ಅನುಗ್ರಹಿಸ
ಸ್ವಾಮಿಯೆಂದು ಈಪದದಿಂದ ಶಿವಶರಣರೇ ಸಾಕ್ಷಾತ್ ಶಿವಶರಣರೇ
ಸಾಕ್ಷಾತ್ ಶಿವಮೂರ್ತಿಗಳೆಂತಲೂ ಅವರ ದ್ವಾರಾ ಶಿವನನ್ನು ಭಜಿಸ
ತಕ್ಕದ್ದೆಂತಲೂ ಪೇಳಿದರೆಂಬ ತಾತ್ಪರ್ಯವು. ...

(೪೯) ರಾಗ- ಕುಸುಮಷಟ್ಪದಿ— ಎಲ್ಲಶರಣರನೆನೆದು । ಇಲ್ಲಿ
ನಾನತನಾಗಿ । ಯೆಲ್ಲರನುವೊಂದೊಂದುಬೇಡಿಕೊಂಬೇ ॥ ಪ ॥ ಭಕ್ತಿಯಿ
ಲ್ಲದಧರೆಯು । ವ್ಯಕ್ತವಾಗಿರುತಿರಲು। ಭಕ್ತಿತ್ರಯವಕಲಿಸಿಮುಕ್ತರೆನಿಸೀ ॥
ಮುಕ್ತಿಪದವಿಗೆತಂದ । ಕರ್ತುಬಸವೇಶನತಿ । ಭಕ್ತಿಭಿಕ್ಷವನೀಡಿಸಲಹೊ
ಯನ್ನಾ॥೧॥ಶಿವನೊಳಗೆಪ್ರಾಣಮನವು। ತವೆಬೆರಸಿಹೋರಳಿದು। ಶಿವಬೆಳ
ಗಿನೊಳುಪರಮತಪವನೈದೀ॥ ಶಿವನುತಾನಾಗಿರ್ದಶಿವಸಿದ್ಧರಾಮಯ್ಯ।
ಶಿವಲೋಕಭಿಕ್ಷವನುನೀಡುಯೆನಗೇ ॥ ೨ ॥ ಉರ್ವಿಪತಿಯಂಬಿಟ್ಟುನಿರ್ವಾ
ಣಾಯುತೆಯಾಗಿ । ಸರ್ವಕರಣೇಂದ್ರಿಯದಗುಣಗಳಳಿದೂ ॥ ಪರ್ವತೇಶನ
ಬೆರೆದ । ಸರ್ವಸುಖಿಮಹದೇವಿ। ನಿರ್ವಾಣಭಿಕ್ಷವನುನೀಡುಯೆನಗೆ ॥ ೩॥
ಇಂಬರಿದುಶಿವನೊಳಗೆ । ಸಂಭ್ರಮದನುಡಿಗಲಿತು। ಕುಂಭಿನಿಯಜನನೊ
ಳಗೆನುಡಿಗಳರಿತೂ ॥ ಗಂಭೀರನಾಗಿಸ್ವಯಂಬುವದಜಂಗುಣ । ಗಂಭೀ
ಭಿಕ್ಷವನುನೀಡುಯೆನಗೇ ॥ ೪ ॥ ನಮ್ಮಶರಣರುಬಹಳ । ಧರ್ಮಿಗಳ ನಿ

ರ್ಮಳರು । ಪೊರ್ಮ್ಮೆಯುಂಭಿಕ್ಷವನುಯಿಲ್ಲೆನ್ನರೂ ॥ ಸಮ್ಯಾನಸರ್ವಗುಣ । ಧರ್ಮಭಿಕ್ಷವನುಂಡು । ನಮ್ಮುಮೆನುಶಿವಷಡಕ್ಷರಲಿಂಗವಾ ॥ ೫ ॥

(೪೯) ಟೀ॥ ಎಲ್ಲಾ ಶಿವಶರಣರನ್ನೂ ಸ್ಮರಿಸಿ, ನಾನು ಇಲ್ಲಿ ನಮ್ರನಾಗಿ, ಎಲ್ಲರನ್ನೂ ಒಂದೊಂದು ವರವನ್ನು ಬೇಡಿಕೊಳ್ಳುವೆನು, ಭಕ್ತಿಯಿಲ್ಲದಂಥಾ ಭೂಮಿಯು ವ್ಯಕ್ತವಾಗಿ ಇರುತ್ತಿರಲಾಗಿ ಭಕ್ತಿತ್ರಯವನ್ನುಪದೇಶಿಸಿ ಮುಕ್ತರೆನ್ನಿಸಿ, ಮುಕ್ತಿಪದವಿಗೆ ತಂದ ಕರ್ತರ್ಪವಾದ ಬಸವೇಶ್ವರಸ್ವಾಮಿಗಳವರೇ ! ನನಗೆ ಭಕ್ತಿಭಿಕ್ಷವನ್ನು ಅನುಗ್ರಹಿಸಿಕೊಟ್ಟು ನನ್ನನ್ನು ಕಾಪಾಡು. ಶಿವನೊಳಗೆ ಪ್ರಾಣಮನಗಳನ್ನು ಐಕ್ಯಮಾಡಿ. ಬಾಹ್ಯ ವ್ಯಾಪಾರ ರೂಪವಾದ ಇಂದ್ರಿಯಗಳ ವಿಷಯವೆಲ್ಲಾ ಕೆಟ್ಟು, ಶಿವಪ್ರಕಾಶದಲ್ಲಿ ಮಹಾ ತಪಸ್ಸನ್ನು ಹೊಂದಿ, ತಾನೇ ಶಿವಸ್ವರೂಪಿಯಾಗಿರುವ ಶಿವಸಿದ್ಧ ರಾಮಯ್ಯನವರೇ ನನಗೆ ಶಿವಲೋಕ ಭಿಕ್ಷವನ್ನು ನೀಡಿರಿ, ಅರಸನನ್ನು ಬಿಟ್ಟು ನಿರ್ವಾಣದಿಂದ ಕೂಡಿದಾತಳಾಗಿ, ಎಲ್ಲಾ ಕರಣೇಂದ್ರಿಯಗಳ ಗುಣಗಳೂ ಅಳಿದು, ಪಾರ್ವತೀಪತಿಯನ್ನು ಬೆರತಿದಂಥಾ ಸರ್ವಸಖಿಯಾದ ಮಹಾದೇವಿಯೇ ನನಗೆ ನಿರ್ವಾಣವೆನಿಸುವ ಮುಕ್ತಿಭಿಕ್ಷವನ್ನು ನೀಡು. ಶಿವನೊಳಗೆ ಸಲಿಗೆವೆತ್ತು, ಸಂಭ್ರಮವಾದ ಮಾತು ಕಲಿತು, ಭೂಮಿಯೊಳಗಿರುವ ಜನಗಳೊಳಗೆಲ್ಲಾ ಮಾತು ಕಲಿತು. ಗಂಭೀರನಾಗಿರುವ ಸ್ವಯಂಭೂವರಾದ ಜಂಗಂಣನವರೇ, ನನಗೆ ಗಂಭೀರಭಿಕ್ಷವನ್ನು ನೀಡಿರಿ, ನಮ್ಮ ಶರಣರುಗಳು ಬಹಳ ಧರ್ಮಿಷ್ಠರೂ, ಬಹಳ ನಿರ್ಮಲರೂ, ಆದದರಿಂದ ಒಂದುಕಾಲಕ್ಕೂ ಭಿಕ್ಷವಿಲ್ಲವೆಂದು ಹೇಳಲಾರರು, ಸಮ್ಯಾನವಾದ ಸರ್ವಗುಣ ಧರ್ಮದ ಭಿಕ್ಷವಂನುಂಡು, ಶಿವಷಡಕ್ಷರ ಲಿಂಗವನ್ನು ನಂಬಿರುವೆನೆಂದು ಈ ಪದದಿಂದ ಪೂರ್ವಿಕರಾದ ಶಿವಶರಣರುಗಳ ಅನುಗ್ರಹದಿಂದ ಭಕ್ತಿತ್ರಯವನ್ನು ಬೇಡಿಕೊಂಡು ಲಿಂಗದಲ್ಲಿ ನಂಬಿಕೆ ಯಿಡತಕ್ಕದ್ದೆಂದು ಪೇಳಿದರೆಂಬ ತಾ.

(೫೦) ರಾಗ- ಭೋಗಷಟ್ಪದಿ— ಕಾಯಮಾಯಜಾಯಮೆಂದು ಕಾಯಮೋಹವನ್ನುಮರೆವ । [illegible]ಯುವೈರಿಶಿವನನೆನವುದೆಂದಿಗ್ವುದೋ ॥ ಪ ॥ ಬಿಡದೆನಿದ್ರೆಯುಗಳ್ತಿರಲು । ಬಿಡದೆಹಸಿವುತೃಷೆಯುವೆಸನ । ಬಿಡನೆಯಿಂದಕೆ [illegible]ಗುತಿರ್ಪುದೂ ॥ ಬಿಡಲವೆಂಬ್ಬೆ ಶಿವನಸುಖವ । [illegible] । ಬಿಡದಪ್ರೋದ್ರಿನಂತೆಕಾಂ

ಬುದೆಂದಿಗಪ್ಪುದೋ ॥ ಹಗಲುಯಿರಳುವಗರವನ್ನು । ಮಿಗಿಲುತುಂಬಿಸಿ
ರಿವುತಿಹುದು । ತೊಗಲಚೀಲಶುಕ್ಲದೊರತೆಕರುಳುಜಾಳಿಗೇ ॥ ಅಗಡ
ಬೀಡುಮು ಕ್ತಿಕೇಡು । ಜಗದಿಜನಿಸಿಕೆಡುವತನುವ । ರಗಟುಗಿಂದಕಡೆಯ
ಕಾಂಬುದೆಂದಿಗಪ್ಪುದೋ ॥ ೨॥ಬಿರಿತಕಿವಿಗಳಲ್ಲಿಗುಗ್ಗೆವೊರತೆಕಣ್ಣಿನಲ್ಲಿಜೊ
ರ । ಬರಿಯಶ್ಲೇಷ್ಮವೃಗುಳಬಾಯಗೊಂಣೆಮೂಗಿನಾ ॥ ಸುರಿವತನು
ಮುಚ್ಚಿಶಿವನ । ಮರೆಸುಕೆಡುವಶರಿರವಿದನು । ಕಿರವಿಗಿಂತಕಡೆಯಕಾಂ
ಬುದೆಂದಿಗಪ್ಪುದೋ ॥ ೩ ॥ ಛಳಿಯತಾಳಲಾರದೊಮ್ಮೆ । ಝಳ
ತಾಳಲಾರದಿದನು । ಒಲಿದುರಕ್ಷಣೆಯನುಮಾಡಲೇನಕೊಡುವದೂ
ಘುಳಿಸಿಪಾಪಮಂನುಯಮನ । ಬಳಿಗೆವೊಯ್ವತನುವನಾಯ । ಹಳಗ
ಗಿಂದಕಡೆಯಕಾಂಬುದೆಂದಿಗಪ್ಪುದೊ ॥ ೪ ॥ ಅಂಗವೀಗಲಿದೊರ್ಡೇನು
ಅಂಗದಿಚ್ಛೆಗಾಢದೊಳಿದು। ಮಂಗಳಾತ್ಮಷಡಕ್ಷರೀಯ್ಯಲಿಂಗನೆನೆವನೂ
ಹಿಂಗದಂತೆಹೃದಯದಲ್ಲಿ । ಸಂಗಿಸುತ್ತಲಿರಲುಭೇದ । ಭಂಗವಳಿದುನಿತ್ಯ
ಪದಕೆಕರ್ತನಪ್ಪರೂ॥ ... ... ೫॥

(೫೦, ಟೀ॥ ಶರೀರವೆಂಬುವದು ಮಾಯೂಸತಿಯೆಂದರಿತು, ಅದ
ರಲ್ಲಿನ ಮೋಹವನ್ನು ಮರೆತು ಮಾಯೆಗಳ ವೈರಿಯಾದ ಶಿವನನ್ನು ನೆನೆ
ಯುವದು ಯೆಂದಿಗೆ ಉಂಟಾಗುವದೋ ? ನಿದ್ರೆ, ಹಸಿವು, ಬಾಯಾರಿಕೆ,
ಈ ಮುಂತಾದವುಗಳ ವ್ಯಸನವು ಎಡೆಬಿಡದೆ ಪೀಡಿಸುತ್ತಿರಲು, ಅಡಿಗಡಿ
ಗೆ ಸುಖದುಃಖಗಳು ತಾಕುತ್ತಿರುವವು. ಇಂಥಾ ದೇಹವನ್ನುಮೆಚ್ಚಿ ಶಿವ
ನಲ್ಲಿನ ಸುಖವನ್ನು ಕೆಡಿಸುವ ಈ ಶರೀರವನ್ನು ಒಡೆದ ಮೋಡಿಗೆಸಮಾ
ನವಾಗಿ ಕಾಣುವದು ಯೆಂದಿಗೆ ಉಂಟಾಗುವದೋ ? ಹಗಲೂ, ರಾತ್ರಿ
ಯೂ, ಆಹಾರವನ್ನು ಚನ್ನಾಗಿ ತುಂಬಿಸಿಕೊಂಡು, ಅದನ್ನೇ ಸುರಿ
ಯುತ್ತಾ ಇರುವದು, ಇದು ತೊಗಲು ಚೀಲವಾಗಿಯೂ, ರೇತಸ್ಸಿನ ಒ
ರತೆಯುಳ್ಳದ್ದಾಗಿಯೂ, ಕರುಳುಗಳ ಪೆಟ್ಟಿಗೆಯೂಗಿಯೂ, ಮೂಂಸದಿಂದ
ತುಂಬಿರುವಂಥಾದ್ದಾಗಿಯೂ, ಮುಕ್ತಿಯನ್ನು ನಾಶಮಾಡಿಕೊಳ್ಳುವಂ
ಥಾದ್ದಾಗಿಯೂ, ಭೂಮಿಯಲ್ಲಿ ಜನಿಸಿ ಕೆಟ್ಟು ಹೋಗುವ ತನುವನ್ನು ತಂ
ಗಿನ ಹಳೆಚಿಪ್ಪೆಗಿಂತಲೂ ಕಡೆಯಾಗಿ ಕಾಣುವದು ಎಂದಿಗೆ ಆಗುವ
ದೋ ? ಬಿರಿದಿರುವ ಕಿವಿಗಳಲ್ಲಿ ಗುಗ್ಗೆಯು, ಕಣ್ಣುಗಳಲ್ಲಿ ಜೋರುಸೋ
ರುವದೂ, ಬರೀ ಲೋಳೆಯು ವೃಗುಳುವಬಾಯೂ, ಗೊಂಣೆ ಸೋರು

ವ ಮೂಗೂ, ಇವುಗಳನ್ನೆಲ್ಲಾ ಸುರಿಸು ತ್ತಿರುವ ತನುವನ್ನು ಮೆಚ್ಚಿ ಶಿವನ ನ್ನು ಮರೆತು ಕೆಡುವಂಥಾ ಶರೀರವನ್ನು ಹಳೇ ಎಕ್ಕಡದ ಚಕ್ಕಳಕ್ಕಿಂತ ಕಡೆಯಾಗಿ ಕಾಣುವದು ಎಂದಿಗೆ ಆಗುವದೋ ! ಸ್ವಲ್ಪ ಛಳಿಯನ್ನು ತಾಳಲಾರದೆ, ಕೊಂಚ ಶಖೆಯನ್ನು ತಡೆಯಲಾರದೆ, ಇರುವ ಈ ಶರೀರವನ್ನು ಮಮತೆಮಾಡಿ ಕಾಪಾಡಿದ್ದಾದರೆ ಏನು ಕೊಡುವದು ? ಪಾಪ ವನ್ನು ಹೇರಾಳವಾಗಿ ಸಂಪಾದಿಸಿ ಯಮನ ಬಳಿಗೆ ತೆಗದುಕೊಂಡು ಹೋಗುವ ಶರೀರವನ್ನು ನಾಯಿಗಿಂತಲೂ, ಕಡೆಯಾಗಿ ಕಾಣುವದು ಎಂದಿಗೆ ಆಗುವದೋ ? ಈಗಲೀ ಅಂಗವಿದ್ದರೇನು ? ಇಲ್ಲದಿದ್ದರೇನು ? ಅಂಗದ ಇಚ್ಛೆಯನ್ನು ತೊರೆದು ಮಂಗಳಾತ್ಮಕನಾದ ಷಡಕ್ಷರಿಯ್ಯ ಲಿಂಗದ ಪ್ರೀತಿಯನ್ನು ಕಡಿಮೆಯಾಗದಹಾಗೆ ಹೃದಯದಲ್ಲಿ ಸಂಗಪಡಿಸುತ್ತಿರಲು ಭಂಗವಳಿದು ನಿತ್ಯಪದವಾದ ಕೈಲಾಸಕ್ಕೆ ಅಥವಾ ಸಾಯುಜ್ಯ ಮುಕ್ತಿಗೆ ಕರ್ತನಾಗುವೆನೆಂದು ಈ ಪದದಿಂದ ದೇಹಾಭಿಮಾನವನ್ನು ತೊರೆದು ಲಿಂಗದಲ್ಲಿ ಮೋಹವುಳ್ಳಾತನಾಗಿ ಲಿಂಗ ಧ್ಯಾನದೊಳಗಿರುವದಾದರೆ ಮುಕ್ತಿಯುಂಟಾಗುವದೆಂದು ತಾತ್ಪರ್ಯವು. ❋

(೫೧) ರಾಗ- ಭೋಗಪಟ್ಪದಿ—ಚಂದ್ರಧರನಿಗೊಲಿಯದಿರ್ಪ । ಇಂದ್ರಿಯಗಳನೋಯಿಸದೊಡೆ। ಸಾಂದ್ರವಾದ ಕೋಪವೆನಗೆ ಲೋಪವಾಗದೂ ॥ ಪ ॥ ಕಷ್ಟನುಡಿಯಬಿಡದೆವೊಲಿದು । ಮುಟ್ಟಿಕೇಳ್ವೆಹಾಗೆ ಶಿವನ। ಶ್ರೇಷ್ಠವಾದ ಶಾಸ್ತ್ರಕೇಳದಿರ್ಪಕಿವಿಯೊಳೂ ॥ ಹೆಟ್ಟಮೊಳೆಯಕೊಡತಿಯಲ್ಲಿ। ತಟ್ಟಿತಾಕೆಯಿಂಚೆಗಾಗಿ । ಕಟ್ಟುವುಗಿಯದನಕಯೆಂನರೆಟ್ಟುಹೋಗದೂ ॥ ೧ ॥ ಮೆಚ್ಚಿಶಿವನಸೋಂಕಿಸೊಕ್ಕಿ । ಹೆಚ್ಚಿಮಳಲುಕಾವಗೊಲಿದು। ನಿಚ್ಚಲನ್ಯಸೋಂಕುಗಳಿಗೆಯುಳಿವತೊಕ್ಕನೂ ॥ ಕೊಚ್ಚಿ ಕೊಚ್ಚಿ ಕಡಿದು ಕಡಿದು । ನುಚ್ಚುನುರಿಯುಮಾಡವನಕ । ಕೆಚ್ಚುಗೊಂದಕೋಪದುರಿಯು ಕಿಚ್ಚುವೋಗದೂ ॥ ೨ ॥ ಬಿಡದೆಲಿಂಗವನ್ನುನೋಡ । ಲೊಡನೆಯು ಶುಭ್ರಜಲಗಳುಕ್ಕಿ । ಕಡೆಗೆಪರಿಯದಧಮರೂಪನೋಳ್ಪನಯನಕೇ ॥ ಒಡೆಯುಹೆಟ್ಟಿಮೇಳತಂದು । ಕೆಡಹಿಹೊಯ್ದುದಸಿಗಳಲ್ಲಿ । ಜಡಿವದನಕಯೆನ್ನಕೋಪ ವಡಗಿಪೋಗದೂ ॥ ಶೂಲಧರನ ಹಾಡಿ ಹಾಡಿ । ಲೀಲೆ ಮಿಕ್ಕು ಪೊಗಳದನ್ಯ । ಕಾಳುನುಡಿಯ ಹಗಲುಯಿರಳು ನುಡಿವಜಿಂಹೆಯೂ ॥ ಸೀಳಿಸೀಳಿಹೋಳುಮಾಡಿ ಮೇಲೆಸುಣ್ಣನೀರನೆರೆದು । ಮೂ

ಲೆಗಟ್ಟದನಕವುದಜ್ವಾಲೆಹೋಗಡೂ ॥ ಲಿಂಗಕಿರಿಸಿ ಕಳೆದಅರಳ । ಭ್ರ
ಗದಂತೆ ಅರಿವಮೂಗ । ಹಾಂಗೆಕೀಳದನಕಕೋಪಹರಿದುಹೋಗದು
ಮಂಗಳಾತ್ಮಷಡಕ್ಷರೀಯ್ಯ । ಲಿಂಗನಡಿಗೆ ಒಲಿಯದಿಂದ್ರಿ । ಯಂಗ
ಳಿಯದನಕಸುಖವುಸಾಂಗವೂಗದು॥ ... ೫೧

(೫೧) ಟೀ॥ ಚಂದ್ರನನ್ನು ಧರಿಸಿರುವಾತನಾದ ಶಿವನಿಗೆ ಒಲಿಯ ದೆ ಇರುವಂಥಾ ಇಂದ್ರಿಯಗಳನ್ನು ನೋಯಿಸದಿದ್ದರೆ, ನನಗೆ ಸಂಪೂರ್ಣವಾಗಿರುವ ಕೋಪವು ಪರಿಹಾರವಾಗದು, ಕಷ್ಟತರವಾದ ಮಾತುಗಳನ್ನು ಪ್ರೇಮದೊಂದಿಗೆ ಮುಟ್ಟಿ ಕೇಳುವಪ್ರಕಾರ ಶೈವಶಾಸ್ತ್ರವಂನ ಕೇಳದೆ ಇರುವ ಕಿವಿಯೊಳಗೆ ಜಡಿದಿರುವಮೊಳೆಯನ್ನು ಕೊಡತಿಯಿಂದ ಹೊಡೆದು ತಟ್ಟಿದರೆ ಆಚೆವರಿವಿಗೂ ಇಳಿಯದೇ ಇರುವತನಕ ನನ್ನ ಕೋಪದರಭಸವು ಹೋಗಲಾರದು. ಶಿವನನ್ನು ಮರೆಮಾಡಿ ಬಹಳ ಸೊಕ್ಕಿ, ಸುಖಕ್ಕೆ ಅಪೇಕ್ಷೆಪಟ್ಟು ಅನ್ಯವಾದವುಗಳು ಸಂಪರ್ಕಕ್ಕೆ ಅಪೇಕ್ಷಿಸುವ ಚರ್ಮವನ್ನು ತುಮುರು ತುಮುರಾಗಿ ಕಡಿದು ಕಡಿದು, ಚೂರು ಚೂರಾಗಿ ಮಾಡುವವರಿಗೂ ಅಪಾರವಾಗಿರುವ ಕೋಪವು ನನಗೆ ಪರಿಹಾರವಾಗಲರಿಯದು. ಲಿಂಗಸಂದರ್ಶನವಾದ ಕೂಡ್ಲೆ ತಪ್ಪದೆ ಆನಂದ ಬಾಷ್ಪವನ್ನು ಸುರಿಸದೆ, ಅಧಮವಾದ ರೂಪಗಳನ್ನು ನೋಡುವ ಕಣ್ಣುಗಳನ್ನು ಒಡೆಯಹೆಟ್ಟಿ, ಮರಳುತಂದು ಸುರಿತು ದಶೆಯಿಂದಕೂರುವವರಿವಿಗೂ ಕೋಪವು ಅಡಗದು ಶೂಲಧರನಾದ ಶಿವನನ್ನು ಕೀರ್ತಿಸಿ ಕೀರ್ತಿಸಿ, ಆನಂದಾತಿಶಯದಿಂದ ಹೊಗಳದೆ, ಅನ್ಯವಾದ ದುರ್ವಾಕ್ಯಗಳನ್ನು ಹಗಲೂ, ರಾತ್ರಿಯೂ ಹೇಳುತ್ತಿರುವ ನಾಲಿಗೆಯನ್ನು ಕೀಳಿಕೀಳಿ, ಹೋಳುಗಳು ಮಾಡಿದತರುವಾಯ ಸುಣ್ಣದನೀರು ಸುರಿದು ಅದನ್ನು ಮೊಲೆ ಕಟ್ಟುವವರಿವಿಗೂ ಮನದ ಉರಿಯು ಹೋಗದು. ಲಿಂಗಕ್ಕೆ ಅರ್ಪಿಸಿ ತೆಗದ ನಿರ್ಮಾಲ್ಯವನ್ನು ಭ್ರಮರದಹಾಗೆ ಪುಷ್ಪವಾಸನೆಯಂ ನರಿಯದಿರುವ ಮೂಗನ್ನು ಹಾಗೆಯೇ ಕೀಳುವತನಕ ಕೋಪವು ಹರಿದು ಹೋಗದು. ಮಂಗಳಾತ್ಮಕನಾದ ಷಡಕ್ಷರಲಿಂಗಮೂರ್ತಿಯಾದ ಶಿವಚರಣಕ್ಕೆ ಒಲಿಯದೆ ಇರುವ ಇಂದ್ರಿಯಗಳು ಅಳಿಯುವವರಿವಿಗೂ ಸುಖವು ಸಾಂಗವಾಗದೆಂದು ಈ ಪದದಿಂದ ಪಂಚೇಂದ್ರಿಯಗಳ ದುರಿಚ್ಛೆಗಳನ್ನೆ

ಲ್ಲಾ ಭಂಗಪಡಿಸಿ, ಇಂದ್ರಿಯನಿಗ್ರಹವನ್ನು ಮಾಡಿದರೇ ವಿನಹಾ ನಿಜಸುಖವು ಸಮಗ್ರವಾಗಿ ದೊರೆಯಲಿಕ್ಕಿಲ್ಲವೆಂದು ಹೇಳಿದರೆಂಬ ತಾ ॥ *

(೫೨) ರಾಗ- ಭೋಗಷಟ್ಪದಿ— ಲಿಂಗದಲ್ಲಿಮನವಬೆರಸಿ। ದಂಗೆ ಕಿರಿದುಹಿರಿದುಯಿಲ್ಲ। ಅಂಗಗುಣವನುಳಿದುನಿಜವನರಿದಕಾರಣ ॥ಪ॥ ಅಂಬಕಹುಳಅಮೃತದನ್ನ । ಕಂಬಳಿಗಳುಕನಕದೂಟ। ಅಂಬುಧಿಗಳುಕಾಲುವೆಗಳುಸಮವದಾಗಿರೇ ॥ ನಂಬಿಲಿಂಗದಲ್ಲಿಮನವ। ತುಂಬಿಹೊರಗೆಮರೆದನಾಗಿ । ಕುಂಬಿಣಿಯೊಳುಹಿರಿದುಕಿರಿದುದೋರದಾತಗೇ ॥ ೧॥ ಕನಕದುಪ್ಪರಿಗೆಯುತಿಪ್ಪೆ। ಕನಕಶೈಲಹುಲ್ಲಮೊರಡಿ । ಮಿನುಗುತಿಪ್ಪರನ್ನಕಲ್ಲುಸಮವದಾತಗೇ ॥ ಘನಕಘನವದಾದಲಿಂಗ । ಮನವನುಂಗಿಕೊಂಡಿತಾಗಿ । ಇನಿತುಹಿರಿದುಕಿರಿದುಕಾಣಬಾರದಾತಗೇ ॥ ೨॥ ಅರಳಮಂಚಸರಳಹಾಸು । ವರಸುಗಂಧಪುಡಿಯುಧೂಳಿ । ಅರಶಿಕನಕಪುಡಿಯಧಾರನೊಲುಸಮವದೂ ॥ ನರಕಪರವದಾದಲಿಂಗ । ಶರಧಿಯಲ್ಲಿಮುಳಿಗಿಬಳಿಕ । ಹೊರದೆಮರದೆನಾಗಿಹಿರಿದುಕಿರಿದುತೋರದೂ ॥ ೩ ॥ ಹಿರಿಯರಿವರುಕಿರಿಯರಿವರು । ಅರಿಗಳಿವರುಮಿತ್ರರಿವರು । ಅರಸರಿವರುಭಂಟರಿವರುಯೆಂದುತೋರದೂ ॥ ಕರಣುಹರಣವೆಲ್ಲಲಿಂಗ । ಕಿರಣವಾಗಿಹೊರಗೆಮರೆದೂ । ಇರುವನಾಗಿಹಿರಿದುಕಿರಿದುತೋರಬಾರದೂ ॥ ೪॥ಇದುವೆಸುಖವುಇದುವೆದುಃಖ । ವಿದುವೆಮೃದುವುಯಿದುವೆಕಠಿಣ। ವಿಧುವೆಶೀತವಿದುವೆಉಷ್ಣವೆಂದುತೋರದೂ ॥ ಮುದದಿಷಡಾಕ್ಷರಿಯಲಿಂಗ। ಬದಗಿತಾನೆಯಾದನಾಗಿ । ಯಿದಿರಿನಲ್ಲಿಹಿರಿದುಕಿರಿದುಕಾಣಬಾರದೂ ॥ ೫ ॥

(೫೨) ಟೀ ॥ ಲಿಂಗದಲ್ಲಿ ಮನವನ್ನು ಬೆರಸಿದ ಮಹಾನುಭಾವನಿಗೆ ಅಂಗಗುಣವನ್ನು ಬಿಟ್ಟು ನಿಜವನ್ನು ಅರಿತಿರುವಕಾರಣ ಹಿರಿದೆಂತಲೂ, ಕಿರಿದೆಂತಲೂ,ಭೇದಭಾವನೆಯು ಇಲ್ಲ ಅಂಬಲಿಯಾದರೂ ಅಮೃತಾನ್ನವಾದರೂ, ಕಂಬಳಿಯಾದರೂ,ಭಂಗಾರದ ಪೀತಾಂಬರವಾದರೂ ಸಮುದ್ರವೂ, ಕಾಲುವೆಯೂ ಸಮವಾಗಿಯೇ ಇರೋಣದರಿಂದ ನಂಬಿ ಶಿವಲಿಂಗದಲ್ಲಿ ಮನವನ್ನು ಪೂರ್ಣಮಾಡಿ, ಬಾಹ್ಯವ್ಯಾಪಾರಗಳನ್ನೆಲ್ಲಾ ಮರೆತಿರುವಾತನಾದ ಕಾರಣ ಭೂಮಿಯೊಳಗೆ ಹಿರಿದೆಂತಲೂ,ಕಿರಿದೆಂತಲೂ ಆತನಿಗೆ ತೋರದು. ಭಂಗಾರದ ಉಪ್ಪರಿಗೆಯೂ, ತಿಪ್ಪೆಯೂ, ಭಂಗಾರಬೆಟ್ಟವೂ ಹುಲ್ಲುಮೆದೆಯೂ, ಪ್ರಕಾಶಿಸುತ್ತಿರುವ ರತ್ನವೂ, ಸಾ

ಧಾರಣವಾದ ಕಲ್ಲೂ, ಒಂದೇ ಆಗಿರುತ್ತಾ ಘನಕ್ಕೆ ಘನವಾದ ಲಿಂಗ
ನು ಮನವು ಆಕ್ರಮಿಸಿ ಕೊಂಡಿರೋಣದರಿಂದ ಸ್ವಲ್ಪವಾದರೂ ಸಂ
ದೂ ದೊಡ್ಡದೂ ಯೆಂಬುವ ಭೇದವೇ ಆತನಿಗೆ ತೋರಲರಿಯದು.
ವ್ವಿನ ಮಂಚವೂ ಬಾಣಗಳ ಹಾಸಿಕೆಯೂ, ಒಳ್ಳೇಪರಿಮಳಗಂಧವ
ಮಣ್ಣಿನಧೂಳಿಯೂ, ಭಂಗಾರದ ವುಡಿದಾರವೂ, ನೂಲಿನ ಹಗ್ಗವೂ,
ಷ್ಟವಾಗಿಯೇ ತೋರುತ್ತಾ ಪರಾತ್ಪರವಾದ ಲಿಂಗಸಾಗರದಲ್ಲಿ ಮು
ಗಿದ ತರುವಾಯ ಬಾಹ್ಯಗಳನ್ನೆಲ್ಲಾ ಮರೆತಾತನಾಗಿರೋಣದರಿಂದ
ರೀದೆಂತಲೂ, ಕಿರೀದೆಂತಲೂ, ಆತನಿಗೆ ಭೇದವೇನೂ ತೋರಲರಿಯದ
ಇವರು ಹಿರಿಯರೆಂತಲೂ, ಇವರು ಕಿರಿಯರೆಂತಲೂ, ಇವರುಶತ್ರುಗಳ
ತಲೂ, ಇವರು ಮಿತ್ರರೆಂತಲೂ, ಇವರು ಅರಸರೆಂತಲೂ, ಇವರು ಭ
ಟರೆಂತಲೂ, ತೋರಲರಿಯದು, ಯಾಕಂದರೆ— ಕರಣಗಳು ಪ್ರಾ
ವೂ ಸಮಸ್ತವೂ ಲಿಂಗಕಿರಣವಾಗಿಯೇ ಬಾಹ್ಯವನ್ನು ಮರೆತಿರುವಾತನ
ದಕಾರಣ ಹಿರಿದೆಂದೂ - ಕಿರಿದೆಂದೂ - ಆತನಿಗೆ ತೋರದು, ಇದ
ಸುಖವೆಂದೂ, ಇದು ದುಃಖವೆಂದೂ; ಇದುಮೃದುವೆಂದೂ, ಇದು ಕ
ಣವೆಂದೂ, ಇದು ಶೀತವೆಂದೂ, ಇದು ಉಷ್ಣವೆಂದೂ ತೋರದು,ಆನ
ದದಿಂದ ಷಡಕ್ಷರಲಿಂಗವು ಪ್ರಾಪ್ತವಾಗಿ ತಾನೇ ಶಿವನಾಗಿರುವಕಾರಣ
ದಿರಿನಲ್ಲಿ ಹಿರಿದೆಂದೂ ಕಿರಿದೆಂದೂ ಕಾಣಬರಲಾರದೆಂದು ಈ ಪದದಿಂದ
ಶಿವೈಕ್ಯವನ್ನು ಪಡೆದಾತನು ಸಮದೃಕ್ಕಾಗಿ ಸಕಲವೂ ಒಂದೇ ಯೆಂಬು
ವ ಅಭೇದ ಬ್ರಹ್ಮಾನಂದಾನುಭವವನ್ನೈದುವನೆಂದು ಪೇಳಿದರೆಂಬ ತಾ
ತ್ಪರ್ಯವು. ... ...

(೫೩) ರಾಗ- ಪರಿವರ್ಧಿನಿ— ತಾನೆಂದರಿಯದೆಯಿದಿರೆಂದರಿಯ
ದೇ। ಯೇನೂಯಿಲ್ಲದೆಯಿರುತಿಹಶಿವತಾ । ನಾನೆಂದದಿವರ ಮೂರುತಿ
ಯಾದನ। ಧ್ಯಾನದೊಳೆಂದಿಹೆನೋ॥ ಪಲ್ಲ ॥ ಘನಮಹಿಮನನೆನೆದಾಕ್ಷ
ಣಮಾತ್ರದಿ। ಜನಿಯಿಸಿಗತಿಸುತಿರುವಬ್ರಹ್ಮಾಂಡಂ। ವನಜೋದ್ಭವವ
ನಜಾಕ್ಷನುಜನಿಸಲು। ಕರವವರೊಲವಿನಲೀ॥ ವನಜೋದ್ಭವನೀಸೃಜಿ
ಯಿಸುಲೋಕವ। ವನಜಾಕ್ಷನೆನೀರಕ್ಷಿಸುಯೆನುತಲಿ। ಅನುಮಿತ್ತವರಿಂ
ವಂದಿಸಿಕೊಂಬನ ಧ್ಯಾನದೊಳೆಂದಿಹೆನೋ॥ ೧ ॥ ತಪ್ತಸುಕಾಂಚನಪ್ರ
ಭೆಗಳನೆಲದೊಳು। ವಪ್ಪಸುತಿಹರತ್ನಂಗಳಕಂಬದಿ। ಒಪ್ಪುವ ವಜ್ರದ

ತೊಲೆಯೊಂದಿದಿಲೋವೆಗಳಿಂ ಚೆಲುವಾಗೀ ॥ ತಪ್ಪದೆಬೆಳಗುವವೋಲಗಶಾಲೆಯೊ । ಳಿಪ್ಪ ಶಿವರಗಣಚಕ್ರದಮಧ್ಯದ । ಸರ್ಪಾಭರಣಶಶಿಧರಿಸಿದನಧ್ಯಾನದೊಳೆಂದಿಹೆನೊ ॥ ೨॥ ಜಗದಗಲದಶಶಿಕಾಂತರದವೇದಿಕೆ । ಮುಗಿಲುದ್ಧವಮಾಣಿಕ್ಯದಕಂಭದಿ । ಬಿಗಿದಿಹನೀಲದತೊಲೆಗಳು। ಒಪ್ಪುವಮಣಿಮಂಟಪದೊಳಗೇ ॥ ಹಗಲಿರುಳೆನ್ನದೆತುಂಬಿಹಮುನಿಗಳು। ಪೊಗುಮಿಗೆವಂದ್ಯದಜಯಘುಘೋಷದಿ । ಸೊಗಸುತಲಿಹನಗ ಜಾಪತಿಯೋಲಗಧ್ಯಾನದೊಳೆಂದಿಹೆನೋ ॥ ೩ ॥ ಹರಿಯಜಸುರದೇವೇಂದ್ರರಯಕ್ಷರ । ಗರುಡೋರಗಸುರಗಂಧರ್ವಾಸುರ । ವರಕಿನ್ನರಕಿಂಪುರುಷಸಿದ್ಧರಸಾಧ್ಯರಯೋಗಿಗಳಾ ॥ ಸುರಚಿರವರಮಣಿಮಕುಟದಬೆಳಕಿಂ । ತೆರಪಿಲ್ಲದಕಳಕಳೆರವದೋಲಗ । ದಿರುವಿನಮಧ್ಯದೊಳೊಪ್ಪುವಶಿವನಧ್ಯಾನದೊಳೆಂದಿಹನೋ ॥೪॥ ಝುಗಝುಗಿಸುವಶಶಿಸೂರ್ಯರಬೆಳಗಿಂ। ಮಿಗೆದೇವರ್ಕಳಮಕುಟದಬೆಳಗಿಂ । ಸೊಗಸೊಗಸುತಲಿಹರತ್ನದಓಲಗಶಾಲೆಯತೇಜದೊಳೊ ॥ ಗಗನದಕಕುಭಂಗಳಸುರೆಶೀವಿದಹಗಲಿರುಳೆನ್ನದಓಲಗದೊಳಗಿಹ। ನಗೆಮೊಗದಸುಷಡಕ್ಷರಲಿಂಗದಧ್ಯಾನದೊಳೆಂದಿಹೆನೋ ॥

(೫೩) ಟೀ ॥ ತಾನು ಎಂಬದಾಗಿಯೂ, ಎದುರು ಎಂಬದಾಗಿಯೂ, ಯಾವದೊಂದೂ ಅರಿಯದೆ, ಏನೂ ಯಿಲ್ಲದೆ ಇರುತ್ತಿರುವ ಶಿವನೂ ತಾನೇ ಆನಂದಮಯಮೂರ್ತಿಯಾಗಿರುವಂಥಾತನ ಧ್ಯಾನದೊಳಗೆ ಎಂದಿಗೆ ಇರುವೆನೊ ? ಘನಮಹಿಮೆಯುಳ್ಳಾತನನ್ನು ಸ್ಮರಿಸಿದಮಾತ್ರದಲ್ಲಿ ಈ ಬ್ರಹ್ಮಾಂಡವೆಂಬುವದು ಜನಿಸಿತು, ಆ ಬ್ರಹ್ಮಾಂಡದೊಳಗೆ ವಿಷ್ಣುವೂ ಬ್ರಹ್ಮನೂ ಜನಿಸಿದರು. ಆಗ ಬ್ರಹ್ಮನನ್ನು ಸೃಷ್ಟಿಸುವಕಾರ್ಯದಲ್ಲಿಯೂ ವಿಷ್ಣುವನ್ನು ಪರಿಪಾಲಿಸುವ ಕಾರ್ಯದಲ್ಲಿಯೂ ನಿಯಮಿಸುತ್ತಾ, ಅವರುಗಳಿಂದ ನಮಸ್ಕಾರಮಾಡಿಸಿ ಕೊಳ್ಳುತ್ತಿರುವಾತನ ಧ್ಯಾನದಲ್ಲಿ ಎಂದಿಗೆ ಇರುವೆನೋ ? ಏಳು ಭಂಗಾರುಕೋಟೆಗಳ ಕಾಂತಿಮಧ್ಯದೊಳಗೆ ಪ್ರಕಾಶಿಸುವಂಥಾ ಭೂಮಿಯಲ್ಲಿ ವಿಸ್ತಾರವಾದ ರತ್ನದಗಂಭಗಳಿಂದಲೂ, ವಜ್ರದ ತೊಲೆಗಳಿಂದಲೂ-ಬೋದಿಗೆ ಲೋವೆಗಳಿಂದಲೂ ಅತಿರಮಣಿಯ್ಯವಾಗಿ ಕಂಗೊಳಿಸುತ್ತಲಿರುವ ಓಲಗದ ಶಾಲೆಯೊಳಗಿರುವ ಗಣಂಗಳ ನಡನಡುವೆ ನಾಗಭೂಷಣನಾಗಿಯೂ, ಚಂದ್ರಧರನಾಗಿಯೂ,ಇರುವಾತನಧ್ಯಾನದಲ್ಲಿ ಎಂದಿಗೆ ಇರುವೆನೊ? ಲೋಕದಷ್ಟು ಅ

ಗಲವಾದ ಚಂದ್ರಕಾಂತಶಿಲೆಯ ಜಗತಿ ಕಟ್ಟೆಯಿಂದಲೂ, ಆಕಾಶವನ್ನ ಉದ್ದವಾದ ಮಾಣಿಕ್ಯದ ಕಂಭದಿಂದಲೂ, ಕಟ್ಟಿರುವ ನೀಲರತ್ನದ ತೊಲೆಗಳಿಂದಲೂ ಒಪ್ಪುತ್ತಲಿರುವ ರತ್ನಮಂಟಪದೊಳಗೆ ಹಗಲು ಇರುಳು ಅನ್ನದೆ ತುಂಬಿರುವ ಮುನಿಗಳು ಎಡೆಬಿಡದೆ ಸುತಿಗೈಯುತ್ತಿರು ಜಯಜಯಧ್ವನಿಯಿಂದ ಸೊಗಸುವೆತ್ತಾತನಾದ ಗಿರಿಜೆಯರಸನ ಓಲಗ ಧ್ಯಾನದೊಳಗೆ ಎಂದಿಗೆ ಇರುವೆನೋ ? ಹರಿ ಬ್ರಹ್ಮದೇವೇಂದ್ರರೇ ಮೊದಲಾದ ಯಕ್ಷ, ಗರುಡ, ಉರಗ, ಸುರ; ಗಂಧರ್ವ- ಅಸುರ, ಕಿನ್ನರ, ಕಿಂಪುರುಷ, ಸಿದ್ಧ, ಸಾಧ್ಯ, ಯೋಗೀಂದ್ರರು ಮೊದಲಾದವರುಗಳ ರತ್ನಖಚಿತವಾದ ಕಿರೀಟಗಳ ಬೆಳಕಿನಿಂದಕೂಡಿ, ತೆರಪಿಲ್ಲದ ಕಳಕಳಧ್ವನಿಯುಳ್ಳ ಶಿವಾಸ್ಥಾನದ ಮಧ್ಯದೊಳಗೆ ಒಪ್ಪುತ್ತಲಿರುವ ಪರಶಿವನಧ್ಯಾನದೊಳಗೆ ಎಂದಿಗೆ ಇರುವೆನೋ ? ಥಳಥಳಿಸುತ್ತಲಿರುವ ಚಂದ್ರಸೂರ್ಯರ ಪ್ರಕಾಶದಿಂದಲೂ, ಹೆಚ್ಚಾದ ದೇವತೆಗಳ ಕಿರೀಟಗಳ ರತ್ನ ಕಾಂತಿಯಿಂದಲೂ, ಥಳಥಳಾಯಿಸುತ್ತಿರುವ ರತ್ನಮಯವಾದ ಶಿವಸಭಾಸ್ತಾನಾದಪ್ರಕಾಶದಿಂದಲೂ, ಆಕಾಶವನ್ನು ಮುಟ್ಟುತ್ತಲಿರುವ ರತ್ನಕಂಭಗಳುತುಂಬಿರುವ ಅಧಿಕವಾದ ಪ್ರಕಾಶದಿಂದ ಹಗಲು ರಾತ್ರಿಗಳೆಂಬ ಭೇದವೇನೂ ತೋರದೇ ಇರುವ ಆಸ್ಥಾನದಲ್ಲಿ ಒಪ್ಪುತ್ತಿರುವಮುಗುಳುನಗೆಯುಳ್ಳಾತನಾದ ಷಡಕ್ಷರಲಿಂಗದ ಧ್ಯಾನದಲ್ಲಿ ಎಂದಿಗೆಇರುವೆನೋ ಎಂದು ಈಪದದಿಂದ ಸರ್ವೋತ್ಕೃಷ್ಟವಾದ ದ್ರವ್ಯಸಾಧನಗಳಿಂದ ಸದಾಶಿವನ ಮಾನಸಪೂಜಾವಿಧಾನವನ್ನು ಪೇಳಿದರೆಂಬ ತಾತ್ಪರ್ಯವು. *

(೫೪) ರಾಗ- ಭೋಗಷಟ್ಪದಿ— ಎಂದಿಗಹುದೋನಿಮ್ಮನೆನಹುದು। ಯೆಂದಿಗಹುದೊನಿಮ್ಮನಿಜವದು। ಯೆಂದಿಗಹುದೊನಿಮ್ಮಪೂಜೆಯಮಾಡುವಾಸುಖವು॥ ಪ ॥ ಕಂಡಬಳಿಯಲಿನದಿಯುಕೊಳಗಳು। ಕಂಡಬಳಿಯಲಿಪುತ್ರಪುಷ್ಪವು। ಕಂಡಬಳಿಯಲಿನಿಮ್ಮಪೂಜೆಯ ಮಾಡಲೊಲ್ಲದೆಯೇ ॥ ಕಂಡಕಂಡೂರಗಳತಿರುಗುತ। ಕಂಡಕಂಡರಮನೆಗೆಹೊಕ್ಕರೆ। ತುಂಡುಮೂಳನು ಆಗಿಸುಮ್ಮನೆ ಕೆಟ್ಟೆನಕಟಕಟಾ ॥ ೧ ॥ ಶೂಲಪಾಣಿಯಚರಣಯುಗವನು। ಲೀಲೆಯಿಂದಲೆನೆನದುನೆನದೂ । ಕಾಲಕರ್ಮಂಗಳನು ಗೆಲ್ಲುತಮುಕ್ತಿಪಡೆಯದೆಯೇ ॥ ಹೇಲನರಸುತ ತಿರುಗುತಿರ್ಪ। ಮೂಳಹಂದಿಯತೆರದಿತ್ರೈವಿಧ। ಹೇಳನದ ಹುಚ್ಚಿಂದನಿಂಮನು ಮರೆತೆ

ನೆಕಟಕಟಾ ॥ ಎಳೆಯಚಂದಿರಧರನಿಗೊಲಿದೂ । ಎಳಸದನ್ಯನಸುಖವ ಸಂಗವು । ಕಳೆಗಳರಿಯುತ ನಿತ್ಯಸುಖವನುಪಡೆಯಲೊಲ್ಲದೆಯೇ ॥ ಎಲುವುನರಗಳುತೊಗಲುಪೊದದಿಹ । ಹಳೆವತೊಗಲನಪೊತ್ತುನಾನೆರೆ । ಹೊಲೆಯನಂತಿರೆಮರದೆನಿನ್ನ ಸುಕೆಟ್ಟೆನಕಟಕಟಾ ॥ ೩ ॥ ಸತ್ಯಗುರುಗಳ ಕೂಡಲಾಡೀ । ನಿತ್ಯಶಿವನನುಭಜಿಸಿನುತಿಸುತ । ಮರ್ತ್ಯದಾರ್ಶಿಯು ಬಾರದಂತೇಮಾಡಿಕೊಳ್ಳದಲೇ ॥ ವ್ಯರ್ಥವಾಗಿಯೆಕೆಡುವಹೆಂಣಲಿ । ಚಿತ್ತಕೆಡಿಸುವಳಧರಕಚ್ಚುವ । ಕತ್ತೆಹೊಲೆಯನದಾಗಿನಿಮ್ಮನುಮರದೆನಕಟಕಟಾ ॥ ೪ ॥ ಸೃಷ್ಟಿಯೊಳಗೇವುದಿಸಿನಾನತಿ । ಶ್ರೇಷ್ಠನಲ್ಲವುಹಿರಿಯರೊಳಗೂ । ನಿಷ್ಠೆಯಿಲ್ಲವುಲಿಂಗದಲ್ಲಿಯು ಬ್ರಂಹನಾನಲ್ಲಾ ॥ ಕಷ್ಠತನವನು ಮರೆಸಿನಿಮ್ಮಯ । ನಿಷ್ಠೆನಿಜವೊಲಿದಿತ್ತುಕರುಣಾ । ದೃಷ್ಟಿಯಲಿನೋಡ್ರೈಷಡಕ್ಷರಲಿಂಗವೇಯನ್ನ ॥ ... ... ೫॥

(೫೪) ಟೀ ॥ ಎಲೈ— ಶಿವನೇ ! ನಿಮ್ಮ ಸ್ಮರಣೆಯು ಎಂದಿಗೆ ಉಂಟಾಗುವದೋ ? ನಿಮ್ಮ ನಿಜವು ಯಾವಾಗ್ಯೆ ದೊರೆಯುವದೋ ! ನಿಮ್ಮ ಅರ್ಚನೆಯನ್ನು ಗೈಯುವ ಪರಮಸುಖವು ಎಂದಿಗೆ ಲಭ್ಯವಾಗುವದೋ ! ಕಂಡಕಂಡೆಡೆಯಲ್ಲೆಲ್ಲಾ ನದಿಗಳೂ, ಸರೋವರಗಳೂ, ಕಂಡೆಕಂಡೆಡೆಯಲ್ಲೆಲ್ಲಾ ಪತ್ರಪುಷ್ಪಗಳೂ ಇರುತ್ತಾ, ನಿಮ್ಮನ್ನು ಪೂಜಿಸದೆ, ಕಂಡಕಡೆ ಊರುಗಳಿಗೆಲ್ಲಾ ತಿರುಗುತ್ತಾ, ಕಂಡಕಂಡವರಮನೆಗಳಿಗೆಲ್ಲಾ ಹೋಗುತ್ತಾ, ತುಚ್ಛನಾಗಿ ಆಯ್ಯೋ ? ನಾನು ಕೆಟ್ಟೆನಲ್ಲಾ, ಶೂಲಪಾಣಿಯೂದ ಶಿವನಪಾದಗಳನ್ನು ಸಂತೋಷದಿಂದ ಸ್ಮರಿಸಿ ಕಾಲಕರ್ಮಗಳನ್ನೆಲ್ಲಾ ಜಯಿಸಿ, ಮುಕ್ತಿಯನ್ನು ಹೊಂದದೇನೇ ಅಮೇಧ್ಯವನ್ನು ಹುಡುಕುತ್ತಿರುವ ಪೋಲುಹಂದಿಯಹಾಗೆ ಹೆಂಣು, ಹೊನ್ನು, ಮಣ್ಣುಗಳೆಂಬುವ ಹೇಸಿಕೆಯಾದ ಹುಚ್ಚಿನಿಂದ ನಿಮ್ಮನ್ನು ಮರೆತು, ಅಕಟಾ ಕೆಟ್ಟೆನಲ್ಲಾ ? ಬಾಲಚಂದ್ರನನ್ನು ಧರಿಸಿದಾತನಾದ ಶಿವನಿಗೆ ಪ್ರೀತವಾಗಿ ಶರೀರಸಂಬಂಧವಾದ ಇತರಸುಖಗಳಿಗೆ ಅಪೇಕ್ಷಿಸಿ, ನಿತ್ಯವಾದ ಸುಖವನ್ನು ಪಡೆಯಲೊಲ್ಲದೇ ಎಲುಬುಗಳಿಂದಲೂ, ನರಗಳಿಂದಲೂ, ತೊಗಲಿನಿಂದಲೂ ಕೂಡಿರುವಂಥಾ ತುಚ್ಛವಾದ ಶರೀರವನ್ನು ನಾನುಧರಿಸಿ, ಹೊಲೆಯನಹಾಗೆ ಇದ್ದುಕೊಂಡು ನಿಮ್ಮನ್ನು ಮರತು ಅಕಟಕಟಾ ಕೆಟ್ಟೆನಲ್ಲ ! ಸತ್ಯಗುರುಗಳ ಸಹವಾಸದಿಂದಿದ್ದು, ನಿತ್ಯದಲ್ಲಿಯೂ ಶಿವನಂ

ನು ಪೂಜಿಸುತ್ತಾ, ಮನುಷ್ಯಶರೀರವು ಮತ್ತೆಬಾರದರೀತಿಯಲ್ಲಿ ಪೊ
ಕೊಳ್ಳದೆ, ವ್ಯರ್ಥನಾಗಿಯೇ ಕೆಡುವಂಥಾದ್ದಾದ ಹೊಣಿನಲ್ಲಿಬಿದ್ದು ಅ
ಚಿಯೂದ ಅವಳ ತುಟಿಯನ್ನು ಕಚ್ಚಿ ಮಣ್ಣಾತಿನ್ನುವ ಕತ್ತೆಯಂದದ
ಹೊಲೆಯನಾಗಿ ನಿಮ್ಮನು ಮರೆತು ಅಯ್ಯೋ ಕೆಟ್ಟೆನಲ್ಲಾ ? ಭೂ
ಯೊಳಗೆ ನಾನು ಜನ್ಮವೆತ್ತಿ ಹಿರಿಯರೊಳಗೆ ಶ್ರೇಷ್ಠನೆನ್ನಿಸಿಕೊಳ್ಳ
ಲಿಂಗದಲ್ಲಿ ನಿಷ್ಠೆಯಿಲ್ಲದೇ ಬ್ರಹ್ಮವೂ ಆಗದೇ ಇರುವಂಥಾ ನನ್ನ ಕಷ್ಟ
ವಾದ ದೇಹವಂನು ಮರೆಮಾಡಿ, ನಿಮ್ಮಲ್ಲಿನ ನಿಷ್ಠೆಯುಳ್ಳದ್ದಾದ ನಿಜ
ವನ್ನು ಅನುಗ್ರಹಿಸಿ, ಎಲೈ— ಷಡಕ್ಷರಲಿಂಗವೇ ! ನನ್ನನ್ನು ಕ
ಣಾದೃಷ್ಟಿಯಿಂದ ಕಟಾಕ್ಷಿಸು ಎಂದು ಈ ಪದದಿಂದ ಮನುಷ್ಯನು ಹೇ
ಕೆಯೂದ ದೇಹವನ್ನು ಧರಿಸಿ, ದುರಿಚ್ಛೆಗಳಿಗೊಳಬೀಳುವಂಥಾ ದೇಹವ
ನು ಪರಿತ್ಯಜಿಸಿ, ನಿತ್ಯಸುಖವಹವೂದ ಲಿಂಗಸಾಯುಜ್ಯವನ್ನು ಹೊ
ದಲಿಕ್ಕೆ ಲಿಂಗಾನುಗ್ರಹಕ್ಕೆ ಪಾತ್ರನಾಗುವ ಹಾಗೆ ನಡೆಯಬೇಕೆಂದು ಪ
ಳಿದರೆಂಬ ತಾತ್ಪರ್ಯವು. ... ...

(೫೫) ರಾಗ- ಭೋಗಷಟ್ಪದಿ— ಒಡಲುಹಿಡಿದಿಹ ಜಡನುನಾ
ನೈ । ಒಡಲುಯಿಲ್ಲದ ಅಜಡನೀನೈ । ಒಡೆಯನೀನೆಪೊಲಿಸದನಕಾಬಲ
ಸಲಾಪುವೆನೆ॥ಪ॥ಹೆಳೆವಮರದಾತುದಿಯೊಳಿದರ್ಾ । ಫಲವಬಯಸಿಯೆಬ
ಳಲುವಂದದಿ। ಚಲುವಹೆಂಣನುಅಧಮಬಯಸಿಯೆಬಳಲುವಂದದಲೀ
ಎಳೆಯಚಂದಿರಧರನಸುಖವನು। ಎಳಸಲಹುದೇಯೆನಗೆಶಿವನಿಗೆ। ಒಲಿದ
ನಿಮ್ಮಯಕರುಣವೆನ್ನೊಳಗಾಗದಿರದನಕಾ॥ ೧॥ ದಾಸಿಯರಸನಬಯಸಿ
ಶರಗನು। ಓಸರಿಸುವಂದದಲಿಮುಂದದು। ಘೋಷಘುಂಟೆಯುಝೂವವ
ನುತಾಬಯಸುವಂದದಲೀ॥ ಈಶನಿಮ್ಮಯನಿತ್ಯಸುಖವನು। ಹೇಸಿಮನು
ಜನುತನಗೆಬಹುದಿತೆ । ವಾಸರಿಸದೇನಿನ್ನ ನೀನೇಬಲಿಯದಂದಾಕಾ॥ ಒಡೆ
ದಬೊಂಬೆಯಪ್ರತುಮೆಚಲುವಾ। ಗುಡಿಯಬಯಸುವತೆರದಿಬಹುತರ। ಬ
ಡವನಾದವನಾನುಬಯಸಿಯೆಬಳಲುವಂದದಲಿ॥ ಒಡೆಯನಿಮ್ಮಯನಿತ್ಯ
ಸುಖವನು।ಬಡವನಾನೆರೆಬಯಸಬಹುದೇ। ಬಿಡದೆನೀನೇಕರುಣಿಯೆನ್ನೊ
ಳಗಾಗದಂದಾಕಾ॥ ೩॥ ಬಾಳದೋತ್ತಮಕನಕಚಿತ್ರದ । ಶಾಲೆಗಳತಾಬ
ಯಸುವಂದದಿ। ಆಳುಅಂದಳವನ್ನುಯೇರಲುಬಯಸುವಂದದಲೀ॥ ಶೂ
ಲಧರನಾನಿಮ್ಮಸುಖವನು। ಕಾಲಬಡವನುಬಯಸಬಹುದೇ। ಲೀಲೆಯಿಂ

ದಲೆನಿನ್ನನೀನೆಬಲಿಯದಂತಾಕಾ॥ ಒಡಲುನಿ ತ್ತೂಸುತರನಿ ತ್ತೂ। ಮಡದಿಧನವನುಧರಣಿಯಿ ತ್ತೂ। ಪಡೆದರೈಸೆಶಿವನಸುಖವನುಬರಿದೆಬಪ್ಪುದೆತಾ॥ ವಡೆಯನಹಷಡಕ್ಷರಿಯಲಿಂಗವು। ಬಡವನಿವನೂಯೆಂದುಬಿಡದೆ। ಒಡನೆಕರುಣಿಯದಾಗದನಕಾಯೆನ್ನೊಳಪ್ಪುವುದೇ॥ ೫೫॥

(೫೫) ಟೀ॥ ಎಲೈ— ಶಿವನೇ! ನಾನು ದೇಹದಾರಿಯೂದ ಜಡನಾದ್ದರಿಂದಲೂ ನೀನುದೇಹವಿಲ್ಲದ ಅಮೇಯ ಚಿನ್ಮೂರ್ತಿಯೂಗಿಯೂ ಇರುವದರಿಂದ ಒಡೆಯನಾದ ನೀನು ಪ್ರಸನ್ನನಾಗುವದಕ್ಕೆ ಮುಂಚಿತವಾಗಿ ನಾನು ನಿನ್ನನ್ನು ಪ್ರೀತಿಮೂಡಲಾಪೆನೆ, ಕೈಕಾಲುಗಳಿಲ್ಲದ ಹೆಳವನು ಯೆತ್ರವಾದ ಮರದತುದಿಯಲ್ಲಿರುವ ಹಂಣನ್ನು ಬಯಸಿ ಬಳಲುವಹಾಗೆಯೂ, ಚಲುವೆಯೂದ ಹೆಣ್ಣನ್ನು ಅಧಮನು ಬಯಸಿ ಬಳಲುವ ಹಾಗೆಯೂ ನನಿಗೆ ಚಂದ್ರಶೇಖರನಾದ ಶಿವನಸುಖವನ್ನು ಬಯಸಿದ್ದಾದರೆ,ಕೈಶೇರುವದೇ ? ಎಲೈ — ಶಿವನೇ ! ಪ್ರಸನ್ನನಾದ ನಿಮ್ಮಕರುಣೆಯುದೊರೆಯುವತನಕ ನಿನ್ನಸುಖವು ದೊರೆಯಲಾರದು. ದಾಸಿಯು ಅರಸನಂನು ಬಯಸಿ ಮೇಲುಶರಗನ್ನು ಓರೆ ಮೂಡುವಹಾಗೆಯೂ, ಮುರಿದುಹೋದ ಘಂಟೆಯು ಜಾವವನ್ನು ಬಯಸುವಹಾಗೆಯೂ, ಎಲೈ— ಒಡೆಯನಾದ ಶಿವನೇ ! ನಿನ್ನನ್ನು ನೀನು ಒಲಿಯುವ ಪರ್ಯಂತರಕ್ಕೂ ನಿಂಮ ನಿತ್ಯ ಸುಖವಾದದು ಹೇಸಿದ ಮನುಷ್ಯನಿಗೆ ನೆಟ್ಟಗೆ ಬರುವದೆ ? ಒಡದುಹೋದ ವಿಗ್ರಹವು ಚಲುವಾದ ಗುಡಿಯನ್ನು ಬಯಸಿದಹಾಗೆಯೂ, ಕಡುಬಡವನಾದವನು ಯಾವ ಅಸಾಧ್ಯವಾದದ್ದನ್ನಾದರೂ ಬಯಸುವಹಾಗೆಯೂ. ಎಲೈ— ಒಡೆಯನಾದಶಿವನೇ ! ನೀನೇ ಒಲಿದು ಪ್ರಸನ್ನನಾಗುವ ಪರ್ಯಂತರಕ್ಕೂ ಬಡವನಾದ ನಾನು ನಿಮ್ಮ ನಿತ್ಯಸುಖವಂನು ಬಯಸಬಹುದೆ ! ಗುಡಿಶೆಟ್ಟಿಯೂಗಿರುವಂಥವಳು ಭಂಗಾರಿನಿಂದ ನಿರ್ಮಿತವಾದ ಮಲಗುವಮನೆಯನ್ನು ಬಯಸುವಹಾಗೆಯೂ, ಆಳುಪಾಲಕಿಯನ್ನು ಹ ತ್ತುವದಕ್ಕೆ ಬಯಸಿದಹಾಗೆಯು, ಎಲೈ— ಶೂಲಧರನಾದ ಶಿವನೇ ! ಲೀಲೆಯಿಂದ ನಿನ್ನನ್ನು ನೀನು ಒಲಿಯುವ ಪರ್ಯಂತರಕ್ಕೂ ಬಿಕಾರಿಯೂದ ನಾನು ನಿನ್ನ ನಿತ್ಯಸುಖವನ್ನು ಬಯಸಬಹುದೇ ? ಪೂರ್ವೀಕರಾದ ಮಹಾತ್ಮರೆಲ್ಲಾ ತಮ್ಮ ಶರೀರವನ್ನೂ, ಮಕ್ಕಳನ್ನೂ, ಹೆಂಡತಿಯನ್ನೂ, ಧನವನ್ನೂ, ಭೂಮಿ ಮೊದಲಾದವುಗಳನ್ನೂ ಕೊಟ್ಟು ಶಿವ

ಸುಖವನ್ನು ಪಡೆದರಲ್ಲಾ ? ಹೀಗಿರುವಲ್ಲಿ ಅಂಥಾ ಅಮೂಲ್ಯವಾದ ಸು
ಖವು ಬಡವನಿಗೆ ಸುಮ್ಮನೇ ಬರುವದೇ ? ಎಲೈ—ಬಡೆಯನಾದ ಷ
ಕ್ಷರ ಲಿಂಗವೇ! ಇವನು ಬಡವನೆಂದೆನ್ನುತ್ತಾ,ನನ್ನೊಳಗೆ ಕೃಪಾಳು-ವಾ
ವವರಿವಿಗೂ ನಿನ್ನಸುಖವು ನನಿಗೆ ಹ್ಯಾಗೆ ಉಂಟಾಟುಗುವದೆಂದು
ಪದದಿಂದ ಶೈವಸುಖವನ್ನು ಪಡೆಯಲೋಸುಗ ತನು ಧನ ಪ್ರಾಣಾದಿ
ಳನ್ನು ಶಿವಾರ್ಪಣವೂಡಿ ಲಿಂಗಾನ್ಯೋನ್ಯದ ಶಿವಾನುಗ್ರಹವನ್ನು ಪ
ಯತಕ್ಕದ್ದೆಂದು ಹೇಳಿದರೆಂಬ ತಾತ್ಪರ್ಯವು॥

(೫೬) ರಾಗ- ಭೋಗಷಟ್ಪದಿ— ನಾನು ವೊಲಿದರೆ ಫಲವದೆ
ನ್ನೈ । ನೀನೊಲಿಯದನಕಾಲುತಿವನೇ । ಯೇನುಮಾಡಲುಫಲವದೇನ್ನೈ
ಬಳುಲುಭ್ರಮೆಯುಅದೂ॥ ಪ॥ ಜಪವ್ರಮಾಡಲುಫಲವದೇನ್ನೈ । ತಪ
ಮಾಡಲುಫಲವದೇನ್ನೈ । ಅಪರಿಮಿತ ಶಾಸ್ತ್ರವನುಪಠಿಸಲುಫಲವದೇನ
ಯ್ಯಾ ॥ ತ್ರಿಪುರವೈರಿಯುತನ್ನತಾನೇ । ಸಪಥದೋರಿಸಿಒಲಿವದನಕಾ
ಉಪಮೆಯಿಂದಲಿಮಾಡಿತುದಿಗೇಕೆಟ್ಟುಪ್ರೋಪುದುದೂ॥ ೧॥ ಹೆಣ್ಣಬಿಟ್ಟರೆಫ
ಲವದೇನ್ನೈ। ಹೊನ್ನಬಿಟ್ಟರೆಫಲವದೇನ್ನೈ । ಮಣ್ಣಾಳಿದುನಿರ್ಭರನದಾದರ
ಫಲವದೇನಯ್ಯಾ। ಪನ್ನಗೇಂದ್ರಾಭರಣಗೊಲಿದೂ। ಪುಂನತದಿಫಲಕೊ
ಡುವದನಕಾ। ಅನ್ಯರುಗಳನುನೋಡಿ ಮಾಡಿಕೆಟ್ಟುಪೋಗುವುದೂ॥ ೨॥ ಗಿ
ರಿಗಳಲ್ಲಿಯುಗವಿಗಳಲ್ಲಿಯು । ತರಗಲಿರಿಸಿಯೆಕೊಂಡುತನುವನು । ಮರೆ
ದುಅಸ್ತಿಯಮಾತ್ರವಿರ್ದೂಫಲವದೇನಯ್ಯಾ ॥ ಹರನುತನ್ನಮತಾನೆ ಒಲಿ
ಯುತ। ಕರುಣವಾಗುವದನಕತಾನೇ । ಪರರನೋಡಿಯೆಮಾಡಿಕಡಗೇ
ಕೆಟ್ಟುಪೋಗುವುದೂ॥ ೩॥ ಕೋಡುಗಲ್ಲಿನತುದಿಯಮೇಲೆಯೆ। ನೀಡಿಕಾಲ
ನುಗಗವಕಾಗಿಯೆ । ಕೂಡೆವುಗ್ರದತಪವಮಾಡಿದು ಫಲವದೇನಯ್ಯಾ ॥
ರೂಢಿಗೀಶನು ಒಲಿದುಕರುಣದಿ । ನೋಡಿವಲಿಯುವದನಕಪರರನು ।
ನೋಡಿಮಾಡಿನಿತೆಲ್ಲಕಡೆಗೇಕೆಟ್ಟುಪೋಗುವದೂ॥ ೪॥ ಮುನ್ನ ಮಾಡಿದ್ದವ
ರಕಂಡೂ। ಇನ್ನುನೋಡುತಮಾಡಿಬಳಲುತ । ಬನ್ನಬಡುತಲೆಯಿರಲು
ಕಡೆಗೇಕೆಟ್ಟುಪೋಗುವದೂ ॥ ತನ್ನತಾನೇಪಕ್ವವಾಗಿಯೆ । ತನ್ನತಾನೇಪ
ಥಕನಿಲ್ಲಿಸಲು । ತನ್ನತಾನೇಷಡಕ್ಷರಿಯದಲಿಂಗನೊಲಿಯುವದೂ॥ ೫೬॥

(೫೬) ಟೀ॥ ಎಲೈ— ಶಿವನೇ ! ನೀನು ಒಲಿಯುವಪರ್ಯಂತರಕ್ಕೂ
ನಾನು ಒಲಿದು ಫಲವೇನು ? ಏನು ಮಾಡಿದರೂ ಪ್ರಯೋಜನವೇನು ?

ಇದು ವ್ಯರ್ಥವಾದ ಭ್ರಾಂತಿಯಾಗಿರುವದು. ಜಪವನ್ನು ಮಾಡಿದಾಗ್ಯೂ, ತಪಸ್ಸನ್ನು ಮಾಡಿದಾಗ್ಯೂ, ಮಿತಿಮೀರಯಿಲ್ಲದಂತೆ ಶಾಸ್ತ್ರಗಳನ್ನು ಓದಿಕೊಂಡಾಗ್ಯೂ ಏನುಫಲ ? ತ್ರಿಪುರಾಂತಕನಾದ ಶಿವನು ನನ್ನನ್ನು ತಾನೇ ಒಲಿಯುವತನಕ ಅಧಿಕವಾಗಿ ಮಾಡಿದ ಜಪತಪಾಭ್ಯಾಸಗಳೆಲ್ಲಾ ಕಡೆಗೆ ವ್ಯರ್ಥವಾಗುವವು. ಹೆಂಣು ಹೊನ್ನು ಮಂಣುಗಳೆಂಬುವ ಈಷಣತ್ರಯಗಳನ್ನು ಬಿಟ್ಟು, ನಿರ್ಭರನಾದ್ದರಿಂದ ಫಲವೇನು ? ನಾಗಭೂಷಣನಾದ ಶಿವನು ಪ್ರಸನ್ನನಾಗುವ ವರಿವಿಗೂ ಅನ್ಯರಾದವರನ್ನು ನೋಡಿ ಹೀಗೆಲ್ಲಾಮಾಡಿ ಕೆಟ್ಟುಹೋಗುವದಲ್ಲದೇ, ಪ್ರಯೋಜನವೇನು ? ಬೆಟ್ಟಗಳಲ್ಲಿಯೂ, ಗವಿಗಳಲ್ಲಿಯು ತರುಗೆಲೆಮನೆಗಳಲ್ಲಿಯೂ ಇದ್ದುಕೊಂಡು, ಶರೀರವನ್ನು ಮರದು, ಎಲುಬುಮಾತ್ರವೇ ಇದ್ದು ದೇಹದಂಡನೇಮಾಡುವದರಿಂದ ಏನುಫಲ ? ಹರನು ತನ್ನನ್ನು ತಾನು ಒಲಿಯುವತನಕಾ ಅನ್ಯರನ್ನು ನೋಡಿ, ವಿಧವಿಧವಾದ ಕಾರ್ಯಗಳನ್ನೆಲ್ಲಾ ಮಾಡಿ, ಕಡೆಗೆಕೊಟ್ಟು ಹೋಗುವದು, ಬೆಟ್ಟದತುದಿಯುಮೇಲೆ ತಲೆಕೆಳಕಾಗಿ ನಿಂತು, ಕಾಲುಗಳನ್ನು ಆಕಾಶಕ್ಕೆಚಾಚಿ, ಉಗ್ರವಾದ ತಪಸ್ಸನ್ನುಮಾಡಿ ಫಲವೇನು ? ಪ್ರಪಂಚಕ್ಕೆಲ್ಲಾ ಒಡೆಯನಾದ ಶಿವನು ಒಲಿಯುವವರಿವಿಗೂ ಪರರಂನು ನೋಡಿ ಮಾಡಿದವುಗಳೆಲ್ಲಾ ತುದಿಗೆ ಕೆಟ್ಟು ಹೋಗುವದು. ಮೊದಲುಮಾಡಿದವರನ್ನು ನೋಡಿ ಇನ್ನೂ ತಾನುಮಾಡಿ ವ್ಯಥಾರ್ಯಯಾಸ ಗೊಂಡು ಭಂಗಪಡುತ್ತಾಇದ್ದರೆ, ಕೊನೆಗೆ ಏನೂ ಫಲವಿಲ್ಲದೆ ಕೆಟ್ಟುಹೋಗುವದು, ತನ್ನಷ್ಟಕ್ಕೆತಾನೇ ಪಕ್ವವಾಗಿ ತನ್ನಷ್ಟಕ್ಕೆತಾನೇ ದಾರಿಗೆ ಬಂದರೆ ಷಡಕ್ಷರಲಿಂಗಮೂರ್ತಿಯು ತನ್ನನ್ನು ತಾನೇ ಒಲಿಯುವನೆಂದು ಈ ಪದದಿಂದ ಪೂರ್ವೀಕರು ಮಾಡಿದ ನಿಷ್ಫಲವಾದ ಜಪತಪಾದಿಗಳನ್ನು ಮಾಡಿದಾಗ್ಯೂ ಪ್ರಯೋಜನವಿಲ್ಲದಿರುವಕಾರಣ (ಶಿವೋಹಂ) ಎಂಬುವ ಶಿವಭಾವವನ್ನು ಪಡೆದು ಇರುವದಾದರೆ ಶಿವನು ಪ್ರಸನ್ನತೆವೆತ್ತು ಒಲಿಯುವನೆಂದು ಪೇಳಿದರೆಂಬ ತಾತ್ಪರ್ಯವು. ... *

(೫೭) ರಾಗ-ಭೋಗಷಟ್ಪದಿ— ಪನ್ನಗೇಂದ್ರಭರಣಕೇಳು ನಿನ್ನವಿಕಳವಸ್ಥೆಯಲ್ಲಿ। ಎನ್ನಪ್ರಾಣಬಿಡುವಹಾಗೆಯೆಂದಿಗಪ್ಪುದೊ ॥ಪ॥ ಕಿರಿಯಶಿಶುವುತಾಯನಪ್ಪಿ । ಅರಸಿಅರಸಿತೊಳಲಿಬಳಲಿ । ಇರದೆತಾಯವಿಕಳದಿಂದಸಾಯುವಂದದೀ ॥ ಹರನಮೆಚ್ಚಿಮರಳುಗೊಂಡು। ಇರುಳು

ಹಗಲ:ನೆನದುನೆನದು। ಹರಣಬಿಡುವಹಾಗೆಯೆನಗೆಯೆಂದಿಗಪ್ಪುದೊ
೧ ॥ ದಶದವಸ್ಥೆಯುಳ್ಳಕಾಂತೆ । ಬಸೆದುಪುರುಷಬಾರದಿರಲು। ಸಸಿನೆಂ
ವನವಿಕಳತೆಯಲಿಸಾವತೆರದಲೀ ॥ ಶಶಿಯಧರಿಸಿದವಗೆಸೋತು। ಹಸಿವ
ರಿತುವಿಕಲತೆಯಲಿ। ಅಸುವಬಿಡುವಹಾಗೆಯೆನಗೆಯೆಂದಿಗಪ್ಪುದೋ॥
ಧನವಬಹಳಘಳಿಸಿದವನು। ತನುವಬಿಡುವಕಾಲದಲ್ಲಿ। ಧನದವಿಕಳತೆ
ಲಿ ಪ್ರಾಣಬಿಡುವತೆರನೊಲೂ ॥ ಮನಸಿಜಾರಿಯೆನ್ನುಮೆಚ್ಚಿ। ನೆನದುನೆ
ದುವಿಕಳತೆಯಲಿ। ತನುವಬಿಡುವಹಾಗೆಯೆನಗೆಯೆಂದಿಗಪ್ಪುದೋ॥ ಬ
ಧುವರ್ಗವುಳ್ಳನರನು। ಸಂದುಹೋಹಕಾಲದಲ್ಲಿ। ಕುಂದದವರವಿಕಳತೆಯ
ಲಿಸಾವತೆರನೊಲೂ ॥ ಇಂದುಧರನನೆನದುನೆನದು। ಕುಂದಿಕುಸಿದುವಿಕ
ತೆಯಲಿ। ಹಿಂದೆಮರದುತನುವಮರವುದೆಂದಿಗಪ್ಪುದೋ ॥೪॥ಎಲ್ಲಿಮೆಚ್ಚ
ಯೆಲ್ಲಿಮೋಹ। ಎಲ್ಲಿಪ್ರೀತಿಯೆಲ್ಲಿಪ್ರೇಮ। ಯೆಲ್ಲಿಅವರವಿಕಳತೆಯಲಿಸಾ
ತೆರನೊಲೂ ॥ ಇಲ್ಲಿಹಿಂದುಮುಂದುಮರದು। ಇಲ್ಲಿಷಡಕ್ಷರೀಯಲಿಂಗ
ದಲ್ಲಿಪ್ರಾಣಬಿಡುವಹಾಗೆ ಯೆಂದಿಗಪ್ಪುದೋ॥ ... ೫

(೫೭) ಟೀ॥ ಎಲೈ— ಶೇಷಾಭರಣನಾದ ಶಿವನೇ ಕೇಳು ! ನಿ
ನ ವಿಕಳವಾದ ಅವಸ್ಥೆಯಲ್ಲಿ ಯನ್ನಪ್ರಾಣವನ್ನು ಬಿಡುವಹಾಗೆ ಎಂದಿಗೆ
ಆಗುವದು ! ಎಳೇ ಮೊಗುವಾದದ್ದು ತನ್ನ ತಾಯಿತಪ್ಪಿ, ಹುಡಿಕಿಹುಡು
ಕಿ ತಿರುಗಿ ಆಯಾಸಗೊಂಡು ಅರಚಿ ತಾಯಿಯ ವಿಕಳದಲ್ಲಿಯೇ ಪ್ರಾಣ
ವನ್ನು ಬಿಡುವಹಾಗೆ, ಶಿವನ ಮಹಿಮೆಗಳನ್ನೆಲ್ಲಾ ಕೈಕೊಂಡು ಅಹೋ
ರಾತ್ರವೂ ಧ್ಯಾನಿಸಿ ಧ್ಯಾನಿಸಿ, ಪ್ರಾಣಬಿಡುವಹಾಗೆ ಯೆನಗೆ ಯೆಂದಿಗೆ
ಆಗುವದೋ ? ವಿರಹಾವಸ್ಥೆಯಿಂದ ಸಾಯಲಿಕ್ಕಿರುವ ಸ್ತ್ರೀಯು ತನ
ಪ್ರಿಯನಾದ ಗಂಡನು ಬಾರದೆಯಿದ್ದರೆ,ಛಕ್ಕನೆ ಅವನವಿಕಳದಲ್ಲಿಯೇ ಸಾ
ಯುವಹಾಗೆ ಚಂದ್ರಧರನಾದ ಶಿವನಿಗೆಸೋತು, ಹಸಿವನ್ನು ಅರಿತು ವಿಕ
ಳತೆಯಿಂದ ಪ್ರಾಣವನ್ನು ಬಿಡುವಹಾಗೆ ಯೆನಗೆ ಎಂದಿಗೆ ಆಗುವದೊ?
ಬಹಳದ್ರವ್ಯವನ್ನು ಸಂಪಾದಿಸಿದವನು ಶರೀರವನ್ನು ಬಿಡುವ ಕಾಲದಲ್ಲಿ
ಹಣದಮೇಲಣ ಮೋಹದವಿಕಳತೆಯಿಂದ ಸಾಯುವಹಾಗೆ, ಕಾಮವೈ
ರಿಯಾದ ಶಿವನನ್ನು ಮೆಚ್ಚಿ, ನೆನದುನೆನದೂ ವಿಕಳತೆಯಿಂದ ಶರೀರವಂ
ನು ಬಿಡುವಹಾಗೆ ಯೆನಗೆ ಯೆಂದಿಗೆ ಉಂಟಾಗುವದೋ, ಬಂಧು ಬಳ
ಗಗಳುಳ್ಳ ಮನುಷ್ಯನು ತನ್ನ ಅವಸಾನಕಾಲದಲ್ಲಿ ಕೊರತೆಪಟ್ಟು ಅವರ

ವಿಕಳತೆಯಿಂದಲೇ ಪ್ರಾಣವನ್ನು ಬಿಡುವಹಾಗೆ ಚಂದ್ರಧರನಾದ ಶಿವನನ್ನು ನೆನದುನೆನದೂ, ಕುಗ್ಗಿತಗ್ಗಿ, ವಿಕಳತೆಯಿಂದ ಶರೀರವನ್ನು ತ್ಯಜಿಸುವದು ಯೆನಗೆ ಎಂದಿಗೆ ಆಗುವದೋ? ವೆಚ್ಚಿಕೆಯೂ, ಪ್ರೀತಿಯೂ,ಮೋಹವೂ- ಪ್ರೇಮವೂ ಎಲೆಲ್ಲಿ ಇರುವದೋ ಅಲ್ಲಲ್ಲಿ ವಿಕಳತೆಯುಳ್ಳವರಾಗಿ ಸಾಯುವಹಾಗೆ ಇಲ್ಲಿ ನಾನು ಹಿಂದು ಮುಂದುಗಳೆಂಬವುಗಳನ್ನೆಲ್ಲಾಮರೆದು, ಇಲ್ಲಿರುವ ಷಡಕ್ಷರೀಯ ಲಿಂಗಮೂರ್ತಿಯಲ್ಲಿ ಪ್ರಾಣವಂನು ಬಿಡುವಹಾಗೆ ಯೆನಗೆ ಯೆಂದಿಗೆ ಆಗುವದೋ ಎಂದು ಈ ಪದದಿಂದ ಪ್ರಾಣಾವಸಾನಕಾಲದಲ್ಲಿ ಯಾದರೂ ಲಿಂಗದಲ್ಲಿನ ಮೋಹಾದಿಗಳನ್ನು ಬಿಡದೆ ಲಿಂಗೈಕ್ಯವನ್ನು ಪಡೆಯಬೇಕೆಂಬುವದನ್ನು ದೃಷ್ಟಾಂತರ ಪಡಿಸಿ ಪೇಳಿದರೆಂಬ ತಾತ್ಪರ್ಯವು. ... ೫೭॥

(೫೮) ಯಾಕಬಯಲಭ್ರಾಂತುನಿನಗೆ। ಸಾಕುಪರರತಿಳುಹದಿರುವಿ। ವೇಕಿಯಾಗಿನಿನ್ನನೀನೆ। ತಿಳಿದುನೋಡಲೇ ॥ ಪ ॥ ತನ್ನತಾನೆಪಕ್ವವಾದ। ಹಣ್ಣುತೊಟ್ಟುಕಳಚಿಬಿದ್ದು। ಮುನ್ನಿನಂತೆಹೋಗಿತೊಟ್ಟು ಹತ್ತಬಲ್ಲುದೇ ॥ ಬನ್ನಬಡುವಜನ್ಮರೀತಿ। ತನ್ನನಿಜವಅರಿಯದಾತ್ಮ। ಮುನ್ನಿನಂತೆಲೋಕದವರಕೂಡಲಪ್ಪುದೇ ॥ ಹಸಿಯಕಾಯಕೊಯ್ದುತಂದು ಬಿಸಿಯತೋರಿಮುಸುಕಿಯಿಡಲು। ನಸಿದುಕೆಡುವದಲ್ಲದದುವೆಪಕ್ವವಪ್ಪುದೇ ॥ ೧॥ ಕಸೆದುಪಕ್ವಆತ್ಮನನ್ನು। ಸಸಿನೆತಿಳುಹಿಬೋಧಿಸಿದಡೆ। ಅಸಮಜ್ಞಾನಿಯಾಗಿಶರಣರುಗಳಬೆರವನೇ ॥ ೨॥ ನಿತ್ಯಜ್ಞಾನತಪವುಮೌನನಿತ್ಯಕ್ಷಮೆಯುದಮೆಯುಶಾಂತಿ। ವೃತ್ತಮತ್ವಮಿರಲುಪಕ್ವವೆಂದು ಅರಿವುದೂ ॥ ಒತ್ತಿನೋಡಲವರಮನವ। ಮತ್ತೆಬೈದುಹೊಯ್ದುನೋಡಿ। ಚಿತ್ತದಲ್ಲಿಸ್ವಸ್ಥವಾಗಿಕಲಕದಿರ್ಪರೇ ॥ ೩॥ ಹುಸಿಯುಹುರುಡುಡಂಭಕತ್ವ। ಕೊಸರುಕೋಪನೀಚಹೃದಯ। ನುಸುಳುವಿಷಯವಿರಲಪಕ್ವವೆಂದು ಅರಿವುದು॥ ಸನಿನೆಅವನಕಣ್ಣಿನೋಡೆ। ಕಿಸುಕಳತ್ವತೋರುತಿಹುದು। ವಸದುಅವರತಿಳಿಯೆಸ್ವಸ್ಥಶರಣರಪ್ಪರೇ ॥ ಇವರಭೇದವರಿಯದನಕ। ಅವರತಿಳುಹಿಫಲವದೇನು! ಭವಕೆಹೋಗಲವನುತನಗೆತೋರಬರ್ಪುದೇ॥ ಭವದಕಡೆಯಕಂಡಬಳಿಕ। ಶಿವನನಿಜವುತಾನೆಬಹುದು। ಶಿವಷಡಕ್ಷರಾಂಕನಿಮ್ಮಶರಣರಪ್ಪರು। ... ... ೫॥

(೫೮) ಟೀ ॥ ಎಲೈ– ಆತ್ಮವೇ! ನಿನಗೆ ವ್ಯರ್ಥವಾದಭ್ರಾಂತು

ಯಾತಕ್ಕೆ, ಸಾಕು ಅನ್ಯರನ್ನು ನೋಡದ ಸ್ಥಿತಿಯುಂಟಾಗಿ ನಿನ್ನ ನ್ನು ನೇ ತಿಳಿದುನೋ ತನ್ನಷ್ಟಕ್ಕೆತಾನೆ ಕಳಿತಹಣ್ಣು ತೊಟ್ಟು ಕಳಚಿದ್ದಮೇ ಮೊದಲಿನಹಾಗೆಯೇ ಹೋಗಿ ತೊಟ್ಟನ್ನು ಹತ್ತಿಕೊಳ್ಳ ಬಲ್ಲದೇ ? ಅ ರಂತೆಯೇ ಭಂಗಪಡುತ್ತಿದ್ದ ಜನ್ಮವು ತೀರಿ ತನ್ನ ನಿಜವನ್ನು ಅರಿತಂಥ ಆತ್ಮವು ಮೊದಲಿನಹಾಗೆ ಲೋಕದವರನ್ನು ಕೂಡಬಲ್ಲುದೇ ಹಶೀಕ ಯನ್ನು ಕೊಯಿದುತಂದು ಶಬೆಯನ್ನು ತೋರಿಸಿ ಮುಚ್ಚಿಟ್ಟರೆ, ಅದ ಕಂದಿ, ಕುಂದಿ, ಕೆಟ್ಟುಹೋಗುವದೇಹೊರ್ತಾಗಿ ಚನ್ನಾಗಿ ಪಕ್ವವಾಗು ದೇ? ಅದರಂತೆಯೇ ಪಕ್ವಕ್ಕೆ ಬಾರದಿದ್ದ ಆತ್ಮನನ್ನು ಚನ್ನಾಗಿ ತಿಳಿಸಿ ಬೋಧಿಸಿದರೆ, ಅಧಿಕವಾದ ಜ್ಞಾನಿಯಾಗಿ ಶರಣರುಗಳನ್ನು ಬೆರೆಯು ನೇ ; ನಿತ್ಯವಾದ ಜ್ಞಾನವೂ, ತಪವೂ, ಜಪವೂ, ಕ್ಷಮೆದಮೆಗಳೂ, ಶಮೆ ಯೂ ಇರುವದಾದರೆ ಅದನ್ನು ವುತ್ತಮಪಕ್ಷವೆಂದೇ ಅರಿಯತಕ್ಕದ್ದು ಆದರೆ, ಅವರ ಮನಸ್ಸನ್ನು ಒತ್ತಿನೋಡುವಲ್ಲಿ ಮತ್ತೇಬೈದು, ಹೊಯಿ ದು, ನೋಡಿದರೆ, ಮನಸ್ಸಿನಲ್ಲಿ ಸ್ವಸ್ಥರಾಗಿ ಕಲಕಲದೇ ಇರುವರೇ, ಬ ರೀಮೋಸವೂ, ಡಾಂಭೀಕವೂ, ಆಲಸ್ಯವೂ, ಕೋಪವೂ, ನೀಚವಾದಹೃ ದಯವೂ, ಕಳ್ಳತನವೂ, ಮೋಹವೂ ಇದ್ದರೆ ಅದನ್ನು ನಿಕೃಷ್ಟವಾದ ಪಕ್ಷ ವೆಂದು ಅರಿಯತಕ್ಕದ್ದು, ಆದರೆ ಅಂಥವರನ್ನು ಕಲಕಿನೋಡಿದ್ದಾದರೇ, ದುರ್ಜನತ್ವವೇ ತೋರುವದು, ಆದಕಾರಣ ಅಂಥವರು ಸ್ವಸ್ಥರಾದ ಶ ರಣರಾದಾರೆ ! ಇವರಭೇದವು ಪರಿಹರಿಸಲ್ಪಡುವ ಪರ್ಯಂತರಕ್ಕೂ ಅಂ ಥವರನ್ನೆಲ್ಲಾ ತಿಳಿಸಿ ಏನು ಪ್ರಯೋಜನ ; ಭವಕ್ಕೆ ಹೋಗಬೇಕಾದರೆ, ಅವುಗಳನ್ನು ತನಗೆ ತೋರಬರುತ್ತಾರೆ, ಆ ಭವದ ಅಂತ್ಯವನ್ನು ಕಂಡತ ರುವಾಯ ಶಿವನನಿಜವು ತಾನೇಬರುವದು. ಎಲೈ— ಷಡಕ್ಷರಲಿಂಗಮೂ ರ್ತಿಯಾದಶಿವನೇ ಭವದ ಅಂತ್ಯವನ್ನೆ ತ್ರಿದಿ ನಿನ್ನ ಸುಖವನ್ನು ಕಂಡಬಳಿ ಕ ನಿನ್ನ ಶರಣನಾಗುವನೆಂದು ಈ ಪದದಿಂದ ಸದ್ವಿದ್ಯೆಗಳನ್ನಾಗಲಿ, ದು ರ್ವಿದ್ಯೆಗಳನ್ನಾಗಲಿ, ಈ ಪ್ರಪಂಚದಲ್ಲಿ ಮಾಡುತ್ತಿದ್ದರೂ, ಈ ನರಜನ್ಮಾಂ ತರದಲ್ಲಿ ಮತ್ತೆ ಜನ್ಮವೆತ್ತದೆ ಇರುಪಂಥಾ ನಿನ್ನ ಸುಖವನ್ನು ಬಲ್ಲಾತನೇ ನಿನಗೆ ಶರಣನಾಗಿರುವನೆಂದು ಪೇಳಿದರೆಂಬ ತಾತ್ಪರ್ಯವು. *

(೫೯) ರಾಗ- ಭೋಗಷಟ್ಪದಿ— ದೇವನಿಮ್ಮರೂಪಿನವರು। ಆ ಪರಿಯನಟಿಸುತಿರಲು । ದೇವನಿಮ್ಮಹಾಂಗೆಕಾಂಬೆನನ್ಯಗಾಹೆನೊ ॥ ಪ॥

ಚರನದೊರ್ವಪರರಸತಿಯ । ಕರೆದುತಂದುತನ್ನಮುಂದೆ । ನೆರಯುತಿರಲುಜರೆದುಅವರನನ್ಯಭಾವದಿ ॥ ಮರಳಿಕಂಡೆನಾದೊಡೆಂನ । ಕೊರದುಮೂಗನಿಟ್ಟಿಗೆಯಲಿ। ಬರಸಿಕಂನಡಿಯನುತೋರಿನಗಿಸುಜಗದಲಿ॥೧॥ ಅಳುಕದೊರ್ವಚರನುಕನ್ನ । ಗಳೆವೃತಂದುಯೆನ್ನಮುಂದೆ । ಇಳುಹಿಕೊಂಡುಯಿರಲುಅವರನನ್ಯಭಾವದಿ ॥ ತಿಳಿವೆನಾದೊಡೆನ್ನಹಿಡದು । ಘುಳಿಲನೆನ್ನನಾಲಿಗೆಯನು । ಪೃಳಿಯದಂತೆಕೊರದುಬಿಸುಟುನಗಿಸುಜಗದೊಳು॥ ೨। ಹರನರೂಪುಧರಿಸಿಯೊರ್ವ । ನೆರಯುತಿರಲುಹೊಲತಿಯನ್ನು । ಅರಿತುಅವರನನ್ಯಭಾವದಿಂದಕಂಡೊಡೆ ॥ ಹರನೆನೀನೆಹಿಡಿದುಯೆನ್ನ । ಕರಗಿಕಾದಸೀಸವನ್ನು । ಯೆರಸಿಬಾಯೊಳಿರದೆಸುಂಣಗದಡುತುಂಬಿಸಿ॥ ೩ ॥ ಕಳ್ಳರಾಗಲವರುಬಹಳ । ಸುಳ್ಳರಾಗಲವರುವಿಷಯ । ದಲ್ಲಿಪ್ರತರಾಗಿತಿರುಗುತಿರಲಿಧರೆಯೊಳು ॥ ಒಳ್ಳಿತಪ್ಪಶಿವನರೂಪ । ನಲ್ಲಿಯಿರಲುಅವರನಾನು । ಖುಲ್ಲತನದಿಜರಿದೆನಾದೊಡೆನ್ನಶಿಕ್ಷಿಸು ॥ ೪ ॥ ಒಡೆಯನೆಮಗೆಯಾಕೆನಾಡ । ಗೊಡವೆನಿಮ್ಮರೂಪುಯಿರಲು । ಒಡೆಯನೆಂದುನಮಿಸಿಶುದ್ಧಹಲವದ್ಯಾತಕೆ ॥ ಮೃಡಷಡಕ್ಷರಾಂಕನಿಮ್ಮ । ಬೆಡಗುತಿಳಿಯಲಬರವಾಗಿ । ಒಡೆಯರುಗಳನಂತುಯಿಂತುಯೆನ್ನಬಾರದು॥ ... ... ೫॥

(೫೯) ಟೀ॥ ಎಲೈ—ದೇವನೇ! ನಿನ್ನ ರೂಪಿನವರಾದ ಶಿವಮೂರ್ತಿಗಳು ಯಾವಪ್ರಕಾರದಲ್ಲಿ ನಡಿಸುತ್ತಿದ್ದಾಗ್ಯೂ, ದೇವಾ! ನಿನ್ನ ಹಾಗೆಯೇ ಕಾಣುವೆನೇ ವಿನಹಾ ಅನ್ಯವನ್ನು ಕಾಣೆನು. ಒಬ್ಬಾನೊಬ್ಬ ಚರಮೂರ್ತಿಯು ಪರಸ್ತ್ರೀಯನ್ನು ಕರತಂದು ತನ್ನಮುಂದೆ ಆಕೆಯೊಡನೆ ರಮಿಸುತ್ತಿದ್ದಾಗ್ಯೂ, ನಾನು ಅವರನ್ನು ಜರೆದು ಅನ್ಯಭಾವದಿಂದ ಮತ್ತೇ ಅವರನ್ನು ಕಂಡದ್ದೇ ಆದರೆ ನನ್ನ ಮೂಗನ್ನು ಶಸ್ತ್ರದಿಂದಕೊರೆದು, ಬರತಿಬಿಟ್ಟು ಕನ್ನಡಿಯನ್ನು ತೋರಿಸಿ, ಜಗತ್ತಿನಲ್ಲಿ ನನ್ನನ್ನು ಲೋಕದವರಿಂದೆಲ್ಲಾ ನಗಿಸು, ಒಬ್ಬ ಚರಮೂರ್ತಿಯು ಭಯವಿಲ್ಲದೆ ಕನ್ನಕೊರೆದು, ಕದ್ದು ತಂದು ನನ್ನಮುಂದೆ ಇಟ್ಟುಕೊಂಡಿದ್ದಾಗ್ಯೂ ಅಂಥವರನ್ನು ಅನ್ಯಭಾವದಿಂದ ನಾನು ತಿಳಿಯುವೆನಾದರೆ, ಥಕ್ಕನೇ ನನ್ನನ್ನು ಹಿಡುಕೊಂಡು, ನನ್ನನಾಲಿಗೆಯನ್ನು ನಿರ್ಮೂಲವಾಗಿ ಕೊಯಿದು ಬಿಸಾಟು, ಲೋಕದೊಳಗೆಲ್ಲಾ ನನ್ನನ್ನು ನಗಿಸಿ. ಶಿವರೂಪವನ್ನು

ಧರಿಸಿದ ಒಬ್ಬ ಚರಮೂರ್ತಿಯು ಚಾಂಡಾಲ ಸ್ತ್ರೀಯೊಂದಿಗೆ ಕ್ರೀಡಿಸ ಸುತ್ತಿದ್ದಾಗ್ಯೂ, ಅಂಥವರನ್ನು ಅರಿತು, ನಾನು ಅನ್ಯಭಾವದಿಂದ ಡೆನಾದರೆ, ಎಲೈ— ಶಿವನೇ ! ನನ್ನನ್ನು ನೀನೆ ಹಿಡುಕೊಂಡು, ಸೀಸ ಕರಿಗಿಸಿ ನನ್ನ ಬಾಯೊಳಗೆ ಹೊಯಿದು, ಸುಣ್ಣದ ಕಸರನ್ನು ನನ್ನ ಬಾ ಯೊಳಗೆ ತುಂಬಿಸು. ಎಲೈ— ಶಿವನೇ ! ನಿನ್ನ ರೂಪಿನವರಾದಂಥ ನಿನ್ನ ಗಣರು ಕಳ್ಳರಾಗಿಯಾಗಲಿ, ಬಹಳ ಸುಳ್ಳುಗಾರರಾಗಿಯಾಗಲ ಜಾರರಾಗಿಯಾಗಲಿ, ಕಾಣಿಸಿಕೊಂಡು ಭೂಮಿಯಮೇಲೆ ತಿರುಗುತ್ತ ಇರಲಿ,ಹ್ಯಾಗಿದ್ದಾಗ್ಯೂ ಉತ್ತಮೋತ್ತಮನಾದಶಿವನ ರೂಪದಲ್ಲಿ ಅವರ ಇದ್ದದ್ದೇಆದರೆ, ಅಂಥವರನ್ನು ನಾನು ದೋಷಾರೋಪಣೆಮಾಡಿ ನಿಂ ಸಿದೆನಾದರೆ ನನ್ನನ್ನು ನೀನೇಶಿಕ್ಷಿಸು. ಎಲೈ— ಒಡೆಯನಾದ ಶಿವನೇ ನಮಗ್ಯಾಕೆ ? ಲೋಕಕ್ಕೆಲ್ಲಾ ಅಲಂಕಾರಭೂತವಾದ ನಿಮ್ಮರೂಪವು ರು ತ್ತಿರಲಾಗಿ,ಒಡೆಯನೆಂದು ಅನ್ನಿಸುವ ನಿನ್ನ ಶರಣಾಗಳಾದ ಚರಮೂ ರ್ತಿಗಳನ್ನು ನಮಸ್ಕರಿಸೋಣದರಿಂದಲೇ ಶುದ್ಧನಾಗುತ್ತಿರುವಲ್ಲಿ ಹಲವ ಬಗೆಗಳು ನನಿಗೆಯಾತಕ್ಕೆ : ಎಲೈ—ಸಾಕ್ಷಾತು ಶಿವಮೂರ್ತಿಯಾದ ಷ ಡಕ್ಷರಲಿಂಗದೇವನೇ! ನಿಮ್ಮಘನವು ಅಪಾರವಾಗಿರುವ ಕಾರಣ ತಿಳಿಯ ದೆ, ಒಡೆಯರಯ್ಯಗಳನು ಹಾಗೆ ಹೀಗೆಂದು ಹೇಳಬಾರದೆಂದು ಈಪದ ದಿಂದ ಶಿವರೂಪಧಾರಿಗಳಾದ ಜಂಗಮಮೂರ್ತಿಗಳಲ್ಲಿ ಯಾವ ಕೊರತೆ ಯನ್ನು ಭಾವಿಸದೆ ಅವರನ್ನು ನಮಸ್ಕರಿಸುತ್ತಾ, ಅವರನ್ನೇ ಶಿವನೆಂದು ಸದ್ವಿವೇಕದಿಂದ ಅರಿತಿರುವದಾದರೆ ಪರಿಶುದ್ಧನಾಗಿರುವನಾದ್ದರಿಂದ ಶಿವ ಸ್ವರೂಪಿಗಳಾದ ಜಂಗಮ್ಮಯ್ಯರುಗಳನ್ನು ಕುರಿತು ಯಾವದೊಂದು ಕೆ ಟ್ಟಮಾತನ್ನೂ ಹೇಳಲಾಗದೆಂದು ಪೇಳಿದರೆಂಬ ತಾತ್ಪರ್ಯವು॥ ೬೯॥

(೭೦) ರಾಗ-ಭೋಗಷಟ್ಪದಿ—ಮುನ್ನನಮ್ಮಶರಣರುಗಳು। ನಿಂ ನಕಾಡಿದುದಕೆಯಿಓಗ। ಯೆನ್ನಮೇಲೆಹಗೆಯಮಗುಚ.ತಿಹಿರೊಕಾಣೆನೊ॥ ಪ ॥ ಶರಣಾಂಬಿಯಂಣಹಿಂದೆ । ತಿರಿಗಿಸಿದನುಹಡಪವಿಡಿಸಿ । ಬೆರಸಿಕೊಲ್ಲ ಬಂದಕವಿಯಕಾಯನೆನುತಲೀ ॥ ಪರಮಮಾಗಿದೇವತನ್ನ । ಹೊರೆಯ ಹೊರಿಸಲಾಗಿತಲೆಯು । ವುರಿದುದಕ್ಕೆಯೆನ್ನಕಾಡಿದಪಿರೊಕಾಣೆನೊ ॥ ೧ ॥ ಚೋಳಿಯಕ್ಕವುಂಡುಬಿಟ್ಟ । ಹಾಲಹಗ್ಗಿಯನ್ನುಮರಳಿ। ಹೇಳ ದಾಕೆತನಗೆಕೊಟ್ಟಳೆಂಬತಿಟ್ಟಿಗೆ ॥ ಚೋಳರಾಯತನ್ನಕೆರೆಗೆ । ಬಾಳಮಾ

ಗಿಮುಂಣುಹೊರಿಸಿ । ಆಳುಗೊಳಲುಯೆನ್ನಕಾಡಿದಪಿರೊಕಾಣೆನೂ ॥ ೨ ॥ ಸತ್ತಿಯಕ್ಕಹುಟ್ಟಿಯಲ್ಲಿ । ಒತ್ತಿತನ್ನತಿವಿದಳೆಂದು । ಮಿಥ್ಯತನವಮುಡಗಿಕೊಂಡು ಮತ್ತದಲ್ಲದೇ ॥ ನಿತ್ಯಸೌಖ್ಯಕೊಂಡನಿಮ್ಮ । ನೆತ್ತಿಕಲ್ಲಿಗುಟ್ಟಿದವರ । ಭೃತ್ಯನಿವನುಯೆಂದು ಕಾಡಿದಪಿರೊಕಾಣೆನೂ ॥ ಶಂಭುನೀವುವುಂಣದಿರಲು । ನಂಬಿಯಕ್ಕಕೊಲ್ಲಬಂದು । ಳೆಂಬಶಿಟ್ಟಮುಡಗಿಕೊಂಡುಮತ್ತದಲ್ಲದೇ ॥ ಕುಂಭಿಣಿಯೊಳುಬಾಣಬೈದು । ನಂಬಿದವನುಬಳಿಕಲವರ । ನಂಬಶಿಟ್ಟಿಗವರಕಾಡಿದಪಿರೊಕಾಣೆನೂ ॥ ೪ ॥ ಅಲ್ಲದಿದೊರ್ಡನ್ನನೇಕ । ಯಿಲ್ಲಿಕಾಡಿದಪಿರಿನೀವು । ಯೆಲ್ಲರಲ್ಲಿಕರುಣಿಯೆಂಬರಯ್ಯನಿಮ್ಮನೂ ॥ ಫುಲ್ಲವಿಶಿಖಮುಯನಿಗೆನ್ನ । ನಿಲ್ಲಿಕೊಡದೆನಿಮ್ಮಚರಣ । ದಲ್ಲಿ ಯೆನ್ನನಿರಿಸುಷಡಕ್ಷರಿಯಲಿಂಗವೇ॥ ... ೫॥

(೬೦) ಟೀ॥ ಎಲೈ— ಶಿವನೇ ! ಪೂರ್ವದಲ್ಲಿ ನಿಮ್ಮಶಣರುಗಳಾದವರು ನಿನ್ನನ್ನು ಕಾಡಿದ್ದಕ್ಕೆ ಈಗ ನನ್ನಮೇಲೆ ಹಗೆತನವನ್ನು ತಿರುಗಿಸುವಿರೋ ಏನೋ ಕಾಣೆನಲ್ಲಾ ? ಶರಣನಾದ ನಂಬಿಯಣ್ಣನನ್ನು ಹಿಂದಕ್ಕೆ ಹಡಪವನ್ನು ಇಡಿಸಿ ನಿನ್ನನ್ನು ತಿರುಗಿಸಿದನಲ್ಲಾ ? ಕೂಡಲಿಕ್ಕೆ ಬಂದಂಥಾ ಕವಿಯನ್ನು ಕಾಯುತ್ತಿರು ಅನ್ನುತ್ತಾ, ಪರಮನಾದ ಮೂಗಿದೇವನು ತನ್ನ ಹೊರೆಯನ್ನು ಹೊರಿಸಲಾಗಿ ತಲೆ ಉರಿಯಿತೆಂಬುವದಕ್ಕೇನಾದರೂ ನನ್ನನ್ನು ಕಾಡುತ್ತಿರುವಿರೋ ? ಚೋಳಿಯಕ್ಕನೆಂಬವಳು ಉಂಡಮಿಕ್ಕ ಹಾಲು ಹುಗ್ಗಿಯನ್ನು ಮರಸಿ, ಆ ಸಂಗತಿಯನ್ನು ಹೇಳದೆ ತನಗೆ ಕೊಟ್ಟಳಲ್ಲಾ ಎಂಬುವಕೋಪಕ್ಕೂ ಚೋಳರಾಯನು ತಂನ ಕೆರೆಕಟ್ಟೆಗೆ ಬಹಳವಾಗಿ ಮುಂಣು ಹೊರಿಸಿ, ನಿನ್ನನ್ನು ತಂನ ದಾಸನಾಗಿ ಮಾಡಿದ್ದಕ್ಕೂ ನನ್ನನ್ನು ಕಾಡುತ್ತೀರೋ ಕಾಣೆನಲ್ಲಾ ? ಸತ್ಯಕ್ಕನೆಂಬವಳು ತನ್ನನ್ನು ಪುಟ್ಟಿಯಲ್ಲಿ ಒತ್ತಿ ನೂಕಿದಳೆಂದು ಹಗೆ ತನವಂನು ಮಡಗಿಕೊಂಡು, ಮತ್ತು ಅದೂ ಅಲ್ಲದೆ, ನಿತ್ಯಸುಖವನ್ನು ಕೈಕೊಂಡು ನಿಮ್ಮನ್ನು ನೆತ್ತಿಯಲ್ಲಿ ಕಲ್ಲಿನಿಂದ ತಿವಿದವರಿಗೆ ಇವನು ಭೃತ್ಯನೆಂದು ಹೇಳಿ ನನ್ನನ್ನು ಕಾಡುತ್ತೀರೇನೋ ಕಾಣೆನಲ್ಲಾ ? ಎಲೈ— ಶಿವನೇ ! ನೀವು ವುಂಣದೆ ಇರಲಾಗಿ, ನಂಬಿಯಕ್ಕನು ಕೊಲ್ಲುವದಕ್ಕೆಬಂದಳೆಂಬುವ ಶಿಟ್ಟಂನು ಮಡಗಿಕೊಂಡಿರುವದು ಮಾತ್ರವಲ್ಲದೆ, ಭೂಮಿಯೊಳಗೆ ಬಾಣನೆಂಬಾತನು ಬೈದನೆಂದು, ನಾನು ಅವರನ್ನು ನಂಬಿದವನೆಂ

ಬುವ ಶಿಟ್ಟಿಗಾಗಿ ನನ್ನನ್ನೇನಾದರೂ ಕಾಡುತ್ತೀರೋ ಕಾಣೆನಲ್ಲಾ? ಕ
ಗಿಲ್ಲದಿದ್ದರೆ, ಇಲ್ಲಿ ನನ್ನನ್ನು ಈ ಮೇರೆಗೆಲ್ಲಾ ಯಾಕೆ ಕಾಡುವಿರಿ
ಅಯ್ಯೋ! ನಿಮ್ಮನ್ನು ಸರ್ವದಯಾಪರಮೂರ್ತಿಯೆಂದು ಹೇಳುವರಲ್ಲ
ಕಾಮನಿಗೆ ಈ ಲೋಕದಲ್ಲಿ ನನ್ನನ್ನು ಕೊಡದೆ, ಎಲೈ—ಷಡಕ್ಷರಿದೇ
ನೇ! ನನ್ನನ್ನು ನಿಮ್ಮ ಚರಣದಲ್ಲಿಯೇ ಇರಿಸು ಯೆಂದು ಈ ಪದದಿಂ
ಪೂರ್ವೀಕರಾದ ಶರಣರುಗಳ ಭಕ್ತಿಗೆ ಶಿವನು ಒಲಿದದ್ದನ್ನೂ, ಶಿವ
ರಣರ ಚರಿತ್ರೆಯನ್ನೂ, ಶಿವಲೀಲೆಯನ್ನೂ, ಪ್ರಕಟಪಡಿಸಿ, ಶಿವೈಕ
ವನ್ನು ಪಡೆಯಬೇಕಾದ ಮಾರ್ಗವನ್ನು ವಿಸ್ತರಿಸಿದರೆಂಬ ತಾತ್ಪರ್ಯವ

(೬೧) ರಾಗ-ಕುಸುಮಷಟ್ಪದಿ—ತನುಗುಣವುನೀವುವಿ। ವ್ಯನ
ನೆನೆಯಲೀಯದಲೆ। ಘನಮಹಿಮನೇಮುಂದೆಯೇನಪ್ಪುದೋ॥ ಪ॥ ಅ
ರಣ್ಯದೊಳಗಿಹೆನಧೀರತನವೆನಗಿಲ್ಲ। ಪುರದೊಳಗೆಯಿಹೆನೆವಾಗ್ವಿಷಯ
ಘನವೂ॥ ಮೂರಾರಿನೀಬೇರೆ। ಶೇರೆನಾನೆಂದೊಡು। ಯಾರನಾಮುಂ
ದಕ್ಕಯೇನಪ್ಪೆನೋ॥ ೧॥ ಇರುಳುನಾನೆನೆವನೇ। ಇರುಳುನಿದ್ರೆಯಜ
ಡವು। ಇರದೆನಗೆಹಗಲುವ್ಯಾಪಾರಹಸಿವು॥ ತೊರೆಯಲಾರೆನಅಶನು।
ತರುಬಲಾರೆನುನಿದ್ರೆ। ಮರಳಿನಾಮುಂದೆಯಿಂನ್ನೇನಪ್ಪೆನೂ॥೨॥ ಘನವ
ನಾನೆನವನೇ। ಮನಹಲವನೆನವುತಿದೆ। ಮನವಹಿಡಿತರುವನಕನಿಮಗೆ
ಮುನಿಸೂ॥ ತನುಭುಜಗನಿಂಸತ್ತ। ಮನವೊಳ್ಪತರುಣಿಯೊಳು। ಯೆ
ನಗಾಯ್ತುನಾಮುಂದೆಯೇನಪ್ಪೆನೂ॥ ೩॥ ಅಂಗವಿವವೇಷದಲಿ। ಶೃಂ
ಗರಿಸಿಫಲವೇನು। ಅಂಗದಲಿಮನಪ್ರಾಣಬೆರೆಯದನಕಾ। ಅಂಗಜಾರಿ
ಯೆಯೆನ್ನ। ಸಂಗವನುನೀನೊಲ್ಲೆ। ಲಿಂಗವೇನಾಮುಂದೆಯೇನಪ್ಪೆನೋ॥
ಮನವೆಬೆರೆಯಿನ್ನುವನು। ಜನುಗಿಕಾಡುತಲಿದೇ। ನೆನಹಿಂಗೆಬಾರದಿರೆ
ನೀನೆನ್ನುವಾ॥ ಅನವರತಕಾಡುತಿಹೆಅನುಪ್ರಾಣಿನೀಕರುಣ। ವನು
ಮಾಡುಶಿವಷಡಕ್ಷರಲಿಂಗವೇ॥ ... ೫॥

(೬೧) ಟೀ॥ ಎಲೈ—ಘನವಾದ ಮಹಿಮೆಯುಳ್ಳ ಶಿವನೇ! ಶರೀರ
ದಗುಣವಾದದ್ದು ನಿಮ್ಮನ್ನುನೆನೆಯಗೊಡಿಸದಲ್ಲಾ. ಮುಂದೆ ಯೇನಾಗು
ವದೋ,ನಾನು ಅರಣ್ಯದೊಳಗೆ ಇರುವೆನು ಅಂದರೆ ನನಿಗೆ ಧೈರ್ಯವೆಂ
ಬುವದಿಲ, ಪುರದೊಳಗೆ ಇರುವೆನೇ? ಮಾತಿನವಿಷಯ ಬಹಳವಾಗಿರುವದ

ಲ್ಲಾ ? ಎಲೈ— ಕಾಮವೈರಿಯಾದ ಶಿವನೇ ! ನೀನು ನನ್ನನ್ನು ಶೇರಗೊಡಿಸದೆ ಹೋದರೆ ನಾನು ಯಾರನ್ನು ಶೇರದೆ ಮುಂದಕ್ಕೆ ಏನಾಗುವೆನೋ ? ರಾತ್ರಿಯೆಂದು ನೆನದರೆ ರಾತ್ರಿಯೆಲ್ಲಾ ನಿದ್ರೆಯುಮೊಬ್ಬಾಗಿರುವದು, ಹಗಲೆಂದು ನೋಡಿದರೆ ಹಗಲೆಲ್ಲಾ ನನಗೆ ಹಶಿವಿನ ವ್ಯಾಪಾರವಾಗಿರುವದು. ಅನ್ನವನ್ನೂ ತೊರೆಯಲಾರೆ,ನಿದ್ರೆಯನ್ನೂ ಹೋಗಗೊಡಿಸಲಾರೆ, ಮತ್ತೆ ಮುಂದಕ್ಕೆ ನಾನು ಇನ್ನೇನಾಗುವೆನೋ ? ನಿಮ್ಮಘನವನ್ನು ನಾನು ನೆನೆಯುವೆನೆಂದರೆ, ಮನಸ್ಸುಹಲವುಗಳನ್ನು ನೆನೆಯುತ್ತದೆಯಲ್ಲಾ ? ಮನಸ್ಸನ್ನು ಹಿಡಕೊಂಡು ಬರುವ ವರಿವಿಗೂ ನಿಮಗೆ ಕೋಪವು ; ಸ್ತ್ರೀಯಲ್ಲಿ ಶರೀರವೆಂಬುವ ಸರ್ಪದಿಂದ ನನ್ನ ಮನವಾದದ್ದು ಸತ್ತಹಾಗೆ ಆಯಿತು, ನಾನು ಮುಂದೆ ಯೇನಾಗುವೆನೋ ? ಈಅಂಗವಾದದ್ದು ವೇಷದಿಂದ ಶೃಂಗಾರಮಾಡಿಕೊಂಡು ಏನುಫಲ ? ಅಂಗದಲ್ಲಿ ಮನವೂ ಪ್ರಾಣವೂ ಐಕ್ಯವಾಗುವ ವರಿವಿಗೂ,ಎಲೈ— ಕಾಮವೈರಿಯಾದ ಶಿವನೇ ! ನನ್ನ ಸಂಗವನ್ನು ನೀನುವೊಲ್ಲೆ, ಎಲೈ— ಲಿಂಗವೇ ! ನಾನು ಮುಂದೆ ಏನಾಗುವೆನೋ ಎಲೈ—ನನ್ನಮನವೇ ! ಇನ್ನಾದರೂ ನೀನು ಐಕ್ಯವಾಗು, ನಿನಗೆ ಜೊತೆಯಾಗಿರುವ ಪ್ರಾಣವು ನಿನ್ನನ್ನು ಕಾಡುತ್ತಲಿದೆ, ಎಲೈ— ಷಡಕ್ಷರಲಿಂಗಮೂರ್ತಿಯಾದ ಶಿವನೇ ! ನೆನಹಾದದ್ದು ಈರೀತಿಯಲ್ಲಿ ಸತ್ಪಥಕ್ಕೆ ಬಾರದ್ದರಿಂದ ಸದಾಕಾಲವೂ ಬಾಧೆ ಪಡಿಸುತ್ತಾ ಇದೆ, ಆದಕಾರಣ ಅನುಪ್ರಾಣಿಯಾದ ನೀನು ಕರುಣೆ ಯುಳ್ಳತನಾಗು ಯೆಂದು ಈ ಪದದಿಂದ ಪರತ್ವದ ಗತಿಯನ್ನು ಮುಂದಕ್ಕೆ ಪಡೆಯಬೇಕೆಂಬುವ ಚಿಂತೆಯಿಂದ ಇಹದ ಚಿಂತೆಯನ್ನು ಪರಿತ್ಯಜಿಸಿ ಶಿವಾನುಗ್ರಹವನ್ನು ಹೊಂದಬೇಕೆಂದು ಪೇಳಿದರೆಂಬ ತಾತ್ಪರ್ಯವು. *

(೬೨) ರಾಗ- ಕುಸುಮಷಟ್ಪದಿ— ಸಕಲಕಲ್ಲಕನೀನೆ । ಅಕಳಂಕಗುರುವೆಂದು। ನಿಖಿಳಶಾಸ್ತ್ರವುಪೇಳುತಿರಲರಿದೆನೂ॥ಪ॥ಧರಣಿತಳದೊಳುಸಿದ್ಧ । ವರಲಿಂಗನಾಮದಿಂ । ಹರನೆನೀನೆನಗೆದೀಕ್ಷೆಯಮಾಡಿದೇ ॥ ವರಷಡಕ್ಷರಿಯದೇ । ವರನಾಮದಿಂದನಗೆಅರುಹಿದಿರಿಶಿವಶಾಸ್ತ್ರ ದನುಭವವನೂ ॥ ೧ ॥ ಅವರವರದರುಶನಕೆ। ಅವರವರದೇಶದಲಿ । ಅವರವರಿಗೆಲ್ಲ ಗುರುನೀನೊಬ್ಬನೇ ॥ ಅವರವರಭಾವಕ್ಕೆ । ಅವರವರಪೂಜೆಗೆಂ । ಅವರವರಿಗೆಲ್ಲದೇವನೀನೊಬ್ಬನೇ ॥ ೨ ॥ ಹೋರಾಟವಿಕ್ಕಸಲು । ಬೇರಾದ

ಯಿಲ್ಲದೇ । ಬೇರುಂಟೆಜಗದೊಳಗೆ ಯೆಲೆದೇವನೇ ॥ ಆರುಅರಿಯುರ
ನು । ಬೇರಾದಪರಿಗಳನು । ಮಾರಾರಿಶಿವಷಡಕ್ಷರಿಲಿಂಗವೇ ॥

(೬೨) ಟೀ ॥ ಎಲೈ—ಶಿವಾ ! ನೀನುಸಮಸ್ತವಾದವುಗಳಿಗೂ
ರುವೆಂದು ಎಲ್ಲಾಶಾಸ್ತ್ರಗಳೂ ಹೇಳುತ್ತಿರಲಾಗಿ ನೀನೇ ಸದ್ಗುರುವೆಂ
ಅರಿತೆನು, ಎಲೈ— ಶಿವನೇ ! ಭೂಮಂಡಲದೊಳಗೆ ಶ್ರೇಷ್ಠರಾದ
ರಾಮೇಶ್ವರೈಯ್ಯ ನವರುಗಳಿಂದ ನನಿಗೆ ನೀನು ಶಿವದೀಕ್ಷೆಯನ್ನು
ಡಿಸಿ ಶ್ರೇಷ್ಠರಾದ ಷಡಕ್ಷರ ನಾಮದೇಯದಿಂದ ಶಿವಶಾಸ್ತ್ರದ ಅನ
ವವನ್ನು ತಿಳಿಸಿದಿರಿ. ಅವರವರ ದರ್ಶನಕ್ಕೆ ಅವರವರದೇಶದಲ್ಲಿ ಅವ
ರಿಗೆಲ್ಲಾ ಗುರುವಾಗಿರುವಾತನುನೀನು ಒಬ್ಬನೇ. ಅವರವರಭಾವಕ್ಕೂ
ವರವರ ಪೂಜೆಗೂ ಅವರವರಿಗೆಲ್ಲಾ ದೇವನು ನೀನುವೊಬ್ಬನೇ. ಎಲೈ
ದೇವಾ ! ಹೊರಾಟವಿಕ್ಕಿ ಸಿದ್ದರಿಂದ ಜಗತ್ತಿನಲ್ಲಿ ಬೇರೆಯಾದದ್ದೆ ಹೊ
ತಾಗಿ, ಬೇರೆಯಲ್ಲ. ಎಲೈ— ಕಾಮವೈರಿಯಾದ ಶಿವಷಡಕ್ಷರಲಿಂಗವು
ರ್ತಿಯೇ ! ನೀನು ಆದಿಮೂಲನಾಗಿರುವ ರೀತಿಯನ್ನು ಯಾರು ಅರಿ
ರು ? ಅಥವಾ ಬೇರಾದಯೆಂಬುವ ಶಬ್ದದಿಂದ ಭೇದವಾದಿಗಳ ಭಾವ
ಯಿಂದ ಭೇದವಾದವನೇ ವಿನಹಾ ನೀನು ಭಿನ್ನವಾದವನಲ್ಲಾವಿುದು
ಪದದಿಂದ ಶಿವನ ಅಖಂಡತ್ವವನ್ನೂ ಸರ್ವ ವ್ಯಾಪಕತ್ವವನ್ನೂ ಸರ್ವ
ರ್ತೃತ್ವವನ್ನೂ ಸಿದ್ಧಾಂತಪಡಿಸಿ ಪೇಳಿದರೆಂಬ ತಾತ್ಪರ್ಯವು.

(೬೩) ರಾಗ- ಭೋಗಷಟ್ಪದಿ— ಹುಲಿಯಕರಡಿಯನ್ನುಫಣಿ
ಬಲುಹಿನಿಂದಆಳ್ವರುಂಟೆ । ಚಲಿಸದಂತೆಮನವನಾಳ್ದ ರಾರಕಾಣೆನೂ
ಪ॥ ಮೊರೆದುಘರ್ಜಿಸುತ್ತಬರುವ । ಹಿರಿಯಹುಲಿಯಹಿಡಿದುತಂದು।
ರದೆತಮ್ಮಯಿಚ್ಛೆಯಲ್ಲಿ ಆಳುತಿರ್ಪರೂ ॥ ಚರಿಸುತಿರ್ಪಕಿರಿಯಮನವ
ಶಿವಲಿಂಗದಲ್ಲಿಯಿರಿಸಿ । ಚರಿಸದಂತೆಆಳ್ವಹಿರಿಯರುಗಳಕಾಣೆನೂ॥ ೧
ಕರಿಯಹಿಡಿದುನಿಲಿಸಬಹುದು । ಕರಡಿಯನ್ನಕಟ್ಟಬಹುದು । ಮೊರೆವ
ಣಿಯುಹೆಡೆಯುಕೈಯ್ಯನಿರಿಸಬಹುದಲೈ ॥ ಕಿರಿಯುಮನವಹಿಡಿದುತಂದು
ಇರಿಸಿಲಿಂಗದಲ್ಲಿನೆರೆವ । ಹಿರಿಯರುಗಳಕಾಣೆಸುರಿಯಬಲ್ಲನುಡಿವರೂ॥
ಹರಿಸುರೇಂದ್ರದಿವಿಜರುಗಳ । ಪರಮಯೋಗಿಮುನುಮುನಿಗಳ। ಮರವೆ
ಯೆಂಬಕೂಪದಲ್ಲಿಯಿಕ್ಕಿತುಳಿವುದೂ ॥ ಹಿಡಿದುಧ್ಯಾನಮೌನವೆಂಬ । ಹಿ
ರಿಯರುಗಳನೆಲ್ಲವನ್ನು । ಅರಿವುಮರವೆಯಲ್ಲಿಯಿಕ್ಕಿನುಸುಳಿಪೋದುದೂ

೩॥ ಜಪದಬಲುವೆುಯಲ್ಲಿಯಿರದು। ತಪದವ್ರುಗ್ರಕಂಜಿನಿಲದು । ಅಪರಿಮಿತದಶಾಸ್ತ್ರಪಾಠಕರಿಗೆನಿಲುಕದೂ ॥ ಚಪಳವುನದಿಹಿಡಿವೆನೆನಲು। ಉಪರಿಯಾಗಿನಿಲುಕದಿಹುದು। ಗುಪಿತವುನವಹಿಡಿವಪರಿಗಳಾವುದಿದ್ದರೇ॥ ೪॥ ವುುನ್ನತಾನಾರದೆಂದು। ತನ್ನನಿಜವನರಿತಬಳಿಕ। ಚನ್ನಷಡಕ್ಷರೀಯಲಿಂಗತಾನೆಯಾಗಿಹಾ॥ ಇನ್ನುಸರ್ವಜಗವದೆಲ್ಲ। ತನ್ನನಿಲುವೆಯಾಯಿತಾಗಿ। ಅನ್ಯವಿಲ್ಲವಾಗಿವುನವುತಾನೆನಿಲುವದೂ॥ ೫॥

(೬೩) ಟೀ॥ ವ್ಯಾಘ್ರವನ್ನೂ, ಕರಡಿಯನ್ನೂ, ಸರ್ಪವನ್ನೂ ಬಲಾತ್ಕಾರದಿಂದ ಹಿಡಿತಂದು ಸಾಕುವಂಥವರುಂಟೇ ? ಹಾಗೆಯೇ ನಿಶ್ಚಲವಾಗುವಹಾಗೆ ವುನವನ್ನು ಆಳಿದವರ್ಯಾರನ್ನೂ ಕಾಣೆನು,ವೊಂದುವೇಳೆ ವೊರದು ಆರ್ಭಟಿಸಿಕೊಂಡು ಬರುವ ದೊಡ್ಡಹುಲಿಯನ್ನಾದರೂ ಹಿಡುಕೊಂಡುಬಂದು, ತವ್ಮ ವುನೋನುಸಾರವಾಗಿ ಆಳುತ್ತಾ ಇರುವರು ಆವಲೆ,ಸಂಚರಿಸುತ್ತಿರುವ ಸಂಣದಾದ ವುನಸ್ಸನ್ನು ಪರವುಲಿಂಗದಲ್ಲಿಇಟ್ಟು, ಚರಿಸದಹಾಗೆ ಆಳುವಂಥವರುಗಳನ್ನು ಕಾಣೆನು, ವುದಿಶಿರುವಆನೆಯನ್ನು ಹಿಡಿದು ನಿಲ್ಲಿಸಬಹುದು, ಕರಡಿಯನ್ನು ಕಟ್ಟಿ ಹಾಕಬಹುದು, ಬುಸುಗುಟ್ಟುತ್ತಿರುವ ಸರ್ಪದ ಹೆಡೆಯ ವೇಲಾದರೂ ಕೈಯನ್ನು ಇಕ್ಕಬಹುದೂ ಆದರೆ, ಸಂಣದಾದ ವುನಸ್ಸನ್ನುಹಿಡಿತಂದು, ಅದನ್ನು ಲಿಂಗದಲ್ಲಿರಿಸಿ ಬೆರಸುವಂಥಾ ಹಿರಿಯರುಗಳನ್ನು ಕಾಣೆನು, ವಿಷ್ಣು, ಇಂದ್ರ, ಸುರ, ಯೋಗಿ, ವುನು, ವುುನಿ, ಇವರೇವೊದಲಾದ ಸವುಸ್ತರಂನೂ ವುನವೆಂಬುವದು ವುರವೆಯೆಂಬುವ ವುಡುವಿನಲ್ಲಿ ಹಾಕಿ ತುಳಿದು ಬಿಡುವದು, ಹಿರಿಯರಾದ ಸಕಲರ ತಿಳುವಳಿಕೆಯನ್ನೂ ವುರವೆಯಲ್ಲಿಇಕ್ಕಿ ತಪ್ಪಿಸಿಕೊಳ್ಳಗೊಡಿಸದು. ಈ ವುನವಾದದ್ದು ಅಧಿಕವಾದ ಜಪದ ಬಲದಲ್ಲಿಯೂ ಉಗ್ರವಾದ ತಪೋಬಲದಲ್ಲಿಯೂ, ಅಪರಿಮಿತವಾದ ಶಾಸ್ತ್ರಪಾಠಕರ ಬಲದಲ್ಲಿಯೂ ಶಿಕ್ಕಲಾರದು, ವುನಸ್ಸಿನಲ್ಲಿ ಚಪಲವಂನು ತುಂಬಿಸುವೆನೆಂದರೆ, ಅದು ಅಪರಿಮಿತವಾಗಿ ಬೆಳದು ಉನ್ನತವಾಗುವದು. ಹೀಗೆ ಗುಪ್ತವಾಗಿ ಇರುವ ವುನಸ್ಸನ್ನು ಹಿಡಿಯುವರೀತಿಯಾವದಿದ್ದೀತು ? ವೊದಲು ತಾನು ಯಾರೆಂದು ತನ್ನನ್ನು ತಾನು ಅರಿತಬಳಿಕ ವುಂಗಳಾತ್ಮಕನಾದ ಷಡಕ್ಷರಲಿಂಗವುೂರ್ತಿಯು ತಾನೇ ಆಗಿರುವನು, ಹೀಗಾದ ತರುವಾಯ ಸಕಲವಾದವುಗಳೂ ತನ್ನಸ್ವರೂಪವೇ ಆಯಿತಾ

ದಕಾರಣ ಇತರವಾದದ್ದೇನೂ ಇಲ್ಲದೆ ಇರುವದರಿಂದ ಮನವಾದದ್ದು
ನ್ನಿಷ್ಟಕ್ಕೆ ತಾನೇ ನಿಲ್ಲುವದೆಂದು ಈ ಪದದಿಂದ ದುರಿಚ್ಛೆಗಳಿಗೆ ತಿರುಗ
ಮನವನ್ನು ಸ್ತಿಮಿತವಮಾಡಬೇಕಾದರೆ, ತನ್ನನ್ನು ತಾನುಅರಿತು ಆತ್ಮ
ತ್ತಾಗಿ, ಸಾಕ್ಷಾತ್ ಶಿವರೂಪನಾದತರುವಾಯ ಪ್ರಾಣಮನಗಳೇನೂ
ಲ್ಲದೆ ತಾನೇ ಶಿವನಾಗಿರುವನೆಂದು ಅದ್ವೈತಪ್ರತಿಪಾದಿತವಾದ ಅಖ
ಶಿವತ್ವವನ್ನುಬೋಧಿಸಿ ಪೇಳಿದರೆಂಬ ತಾತ್ಪರ್ಯವು. ...

(೬೪) ರಾಗ- ಭೋಗಷಟ್ಪದಿ— ಏನಮಾಡಲೈಯ್ಯಯೆಂ
ಹೀನಮನದಅವಯವಗಳ । ಜ್ಞಾನಖಡ್ಗದಿಂದಕಡಿವನ್ಯಾರಕಾಣೆನೂ ॥
ಹಿಡಿವುದದನೆಹಿಡಿವುದೈಯ್ಯ । ಹಿಡಿವುದದನೆಹಿಡಿವುದೈಯ್ಯ । ಕೆಡುವನ
ಯನಡಸಿಯೆನ್ನಭವಕೆಬರಿಸಿತು ॥ ಬಡವನಾನುಕಾಡುತಿಹುದ। ಹಿಡಿಯ
ವವರನಾರಕಾಣೆ । ಕಡಿದುಕಡಿದುಹಾಕುವವರನಾರಕಾಣೆನೂ ॥೧॥ ನ
ನುನಿಮ್ಮನೆನವೆನೆನಲು । ತಾನುನಿಮ್ಮನನೆನೆಯದೈಯ್ಯ । ಶ್ವಾನನಂತೆ
ಲವುಕಡೆಗೆಹರಿವುತಿರ್ಪುದೂ ॥ ಧ್ಯಾನಮೌನಜಪದೊಳಿರದು। ನಾನು
ರಸಂಗದಿಂದ। ಜ್ಞಾನಹೀನನಾಗಿಹೋದೆನಕ್ಕಟಕ್ಕಟಾ ॥ ೨॥ಅಂಗಗುಣ
ನಡೆಗಳೆನಲು । ಅಂಗಿಸುತ್ತಬರುತಲಿಹುದು । ಲಿಂಗನೆನಹುಯೆನಲು
ಲ್ಲೊನುಸುಳಿಪೋಪುದು ॥ ಮಂಗಳಾತ್ಮಷಡಕ್ಷರೀಯಲಿಂಗನಿಂಮನೆನೆ
ದಿರ್ಪ । ತೊಂಗಿಮನವಶಿಕ್ಷಿಸೆಂನಅಳಲುಪೋಗಲೀ ॥

(೬೪) ಟೀ ॥ ಅಯ್ಯಾಶಿವನೇ ನಾನುಯೇನುಮಾಡಲಿ ? ನನ್ನಹ
ನವಾದಮನಸ್ಸಿನ ಅಂಗಗಳಂನು ಜ್ಞಾನವೆಂಬುವ ಕತ್ತಿಯಿಂದ ಕಡಿಯ
ವವರಂನು ಕಾಣೆನಲ್ಲಾ ಗುರುವೇ ಯೆನ್ನಮನವಾದದ್ದು ಹಿಡಿದದ್ದಂ
ಹಿಡಿಯುತ್ತಾ, ಕೆಡುವದನ್ನೆ ನಡಿಸಿ, ನನ್ನನ್ನು ಭವಕ್ಕೆ ಅಂದರೆ— ಜ
ನಾದಿಸಾಂಸಾರೀಕಕ್ಕೆ ಬರಮಾಡಿತು, ನಾನು ಬಡವನು, ಅದು ನನ
ನ್ನು ಹಿಡಿದು ಹಿಡಿದು, ಪೀಡಿಸುತ್ತಿರುವದು, ಇಂಥಾ ಮನವನ್ನು ಹಿ
ದು, ಅದಂನು ಚೂರುಚೂರಾಗಿ ಕತ್ತರಿಸಿ ಹಾಕಿ, ನನ್ನನ್ನು ಕಾಪಾಡ
ವಂಥವರಂನು ಕಾಣೆನಲ್ಲಾ ? ನಾನು ನಿಮ್ಮನ್ನು ಸ್ಮರಿಸುವೆನೆಂದರೆ, ಅ
ದು ನಿಮ್ಮನ್ನು ನೆನೆಯದೆ ನಾಯಿಯಹಾಗೆ ಹಲವುಕಡೆಗೆ ಹೋಗುತ್ತಿರ
ವುದು, ಮತ್ತು ಈ ಮನವಾದದ್ದು ಧ್ಯಾನ ಮೌನ ಜಪಗಳೆಂಬವುಗಳಲ್ಲಿ
ನಿಲ್ಲದು, ಅಯ್ಯೋ ! ನಾನು ಇತರ ಸಂಗದಿಂದ ಜ್ಞಾನ ಹೀನನಾಗಿ

ಹೋದೆನಲ್ಲಾ, ಅಂಗಗುಣದ ನಡತೆಗಳು ಅಂದರೆ ಹೆದರಿಸಿಕೊಂಡು ಬರುತ್ತಿದೆ. ಲಿಂಗದ ನೆನಹು ಯೆಂದು ಹೇಳಿದ ಮಾತ್ರದಲ್ಲಿಯೇ ಯೆಲ್ಲಿಯೋ ನುಸುಳಿಕೊಂಡು ಹೋಗುತ್ತದೆ. ಎಲೈ— ಮಂಗಳಾತ್ಮಕನಾದ ಷಡಕ್ಷರಲಿಂಗಮೂರ್ತಿಯೇ ! ನಿಮ್ಮನ್ನು ನೆನೆಯದೆ ಇರುವ ದುಷ್ಟಮನಸ್ಸನ್ನು ಶಿಕ್ಷಿಸು; ನನ್ನ ದುಃಖವು ಪರಿಹಾರವಾಗಲಿ ಯೆಂದು ಈ ಪದದಿಂದ ಮನಸ್ಸಿನ ದುರಿಚ್ಛೆಗಳನ್ನೆಲ್ಲಾ ಶಿವಾನುಗ್ರಹದಿಂದ ದಂಡಿಸಿ ನಿರ್ವ್ಯಸನಿಯಾಗಿ ಶಿವಲಿಂಗಧ್ಯಾನ ಪರನಾಗತಕ್ಕದೆಂದು ಪೇಳಿದರೆಂಬ ತಾತ್ಪರ್ಯವು. ... ...

(೬೫) ರಾಗ - ಭೋಗಷಟ್ಪದಿ— ಕಾಡಲ್ಯಾಕೆನರರುಗಳನು ।
ಬೇಡಿಬಳಲಲ್ಯಾಕೆಮನವ । ರೂಢಿಗೀಶನಮಗೆದೈವವಾಗಿಯಿರುತಿರೇ ॥
ಪ ॥ ಮೃಡನಪೂಜೆಮಾಡುವುದಕೆ । ಮಡುವಿನಗ್ಗಣಿಗಳುಂಟು । ಅಡವಿಯಲ್ಲಿಕಾಡಪತ್ರೆಪುಷ್ಪವುಂಟಲೈ ॥ ಒಡಲಿಗನ್ನತಿರಿದರುಂಟು । ಗುಡಿಗಳುಂಟುಶಯನಕೆನಗೆ । ಪೊಡೆಯುರುಗಳು ಬಿಸುಟಅರುವೆ ಶೀತಕುಂಟಲೈ ॥ ೧ ॥
ಬುದ್ಧಿಯನ್ನು ಹೇಳುವುದಕೆ । ಅಧ್ಯರುಗಳವಚನವುಂಟು । ವುದ್ಧರಿಸುವಡೆಮಗೆ ಶಿವನಮಂತ್ರವುಂಟೆಲೈ ॥ ಅರ್ಧನಾರಿಯೆಂಬದೈವ । ಇದ್ದಬಳಿಕಕರದೊಳೆಮಗೆ । ಹೊದ್ದಲ್ಯಾಕೆನರರಆಸೆಮಾಡೆನಕ್ಕಟಾ ॥ ೨ ॥
ಮುಗಿಲುಮನೆಗಳ್ಯಾಕೆಯೆನಗೆ । ಅಗಳಲ್ಯಾಕೆಭೂಮಿಗಳನು । ಜಗದೊಳೆಮಗೆ ಹಲವುಕೋಟಲೆಗಳದ್ಯಾಕಲೇ ॥ ಸೊಗಸುಷಡಕ್ಷರಿಯಲಿಂಗ । ಅಗಲದೆಮ್ಮ ಕರದೊಳಿರಲು । ಬೆಗಡುಗೊಳಲ ದ್ಯಾಕಮನವೆ ನರರಮೊಳ್ಕೆಯಿಂ ॥ ... ... ೩ ॥

(೬೫) ಟೀ॥ ಎಲೈ— ಮನವೇ ! ಪ್ರಪಂಚಕ್ಕೆಲ್ಲಾ ಒಡೆಯನಾದ ಶಿವನೇ ! ನಮಗೆ ಪರದೈವವಾಗಿರುತ್ತಿರುವಲ್ಲಿ ಸಾಮಾನ್ಯರಾದ ಮನುಷ್ಯರನ್ನು ಕಾಡುವದ್ಯಾತಕ್ಕೆ ? ಅವರನ್ನು ಬೇಡುವದ್ಯಾತಕ್ಕೆ ? ಶಿವಪೂಜೆಯನ್ನು ಮಾಡುವುದಕ್ಕೆ ಮಡುಗಳೂ, ಕೊಳಗಳೂ, ಉತ್ತಮವಾಗಿವೆ. ಅಡವಿಯೊಳಗೆಲ್ಲಾ ಕಾಡ ಬಿಲ್ವಪತ್ರೆಗಳೂ, ಹೂವುಗಳೂ ಉಂಟು, ಭಿಕ್ಷವೆತ್ತಿದರೆ ಹೊಟ್ಟೆಗೆ ಬೇಕಾದಷ್ಟು ಅನ್ನವುಂಟು, ಮಲಗುವದಕ್ಕೆ ಮಠಗಳೂ, ಛತ್ರಗಳೂ, ಶಿವಾಲಯಗಳೂ ವುಂಟು. ಛಳಿಗೆ ಪೊಡೆಯರಯ್ಯಗಳು, ಬಿಸಾಟಿರುವ ಚಿಂದಿಬಟ್ಟೆಗಳು ವುಂಟಲ್ಲವೇ ? ಸನ್ಮಾರ್ಗ

ಬೋಧಕವೂದ ಬುದ್ಧಿಯನ್ನು ಹೇಳುವದಕ್ಕೆ ಶಿವ ಶರಣರಾದ ಸ
ರುಗಳ ವಚನಗಳುಂಟು, ಉದ್ಧರಿಸುವದಕ್ಕೆ ನಮಗೆ ಶಿವಮಂತ್ರ
ಉಂಟು ಅರ್ಧನಾರಿ ಯೆಂಬುವ ದೈವವು ನಂಮ ಕೈಯೊಳಗೆ ಇ
ಶರುವಾಯ ಮನುಷ್ಯ ಮೊತ್ರದವರನ್ನು ನಾನು ಆಶ್ರಯಿಸಲೊಲ್ಲೆನ
ನಮಗೆ ಉಪ್ಪರಿಗೆ ಮನೆಗಳು ಯಾಕೆ, ಸ್ತ್ರೀಯರನ್ನು ಅಗಲುವ
ಯಾಕೆ? ಜಗತ್ತಿನಲ್ಲಿ ನಮಗೆ ಹಲವು ತೊಂದ್ರೆಗಳು ಯಾಕೆ? ಚಲು
ನಾದ ಷಡಕ್ಷರಲಿಂಗಮೂರ್ತಿಯು ಎಡೆಬಿಡದಂತೆ ನಮ್ಮ ಕೈಯೊಳ
ಇರುತ್ತಾ, ಮನುಷ್ಯರ ಪ್ರಕಾರದಲ್ಲಿ ನನ್ನ ಮನವೇ ನೀನು ಗಾಬರಿಗೆ
ಳ್ಳುವದು ಯಾಕೆ? ಎಂದು ಈ ಪದದಿಂದ ಶಿವನನ್ನು ಒಲಿದಾತನು ಶಿ
ನೇ ದೈವವೆಂತಲೂ, ಶಿವನೇ ಸದ್ಗುರುವೆಂತಲೂ, ಶಿವಮಂತ್ರವೇ ಪಾಪ
ರಿಹಾರಕವಾದದ್ದೆಂತಲೂ ಭಾವಿಸಿ, ಮನುಷ್ಯರ ಅನುವರ್ತನೆಯನ್ನು
ಟ್ಟು, ಕಂಡಕಡೆಯಲ್ಲೆಲ್ಲಾ ಶಿವಪೂಜೆಯನ್ನು ಗೈಯುತ್ತಾ ಭಿಕ್ಷೆಯಿಂದ
ದರ ಪೋಷಣೆ ಮಾಡಿಕೊಂಡು ನಿರ್ವ್ಯಸನಿಯಾಗಿರತಕ್ಕದ್ದೆಂದು ಹೇಳಿ
ರೆಂಬ ತಾತ್ಪರ್ಯವು. ... ...

(೬೬) ರಾಗ- ಧನ್ಯಾಸಿ— ದಾರುಣಿಯನು ತಿರುಗುವರೈಸೇ
ಅಲ್ಲಿ ಆರುಕಾಣರು ಪುಣ್ಯಕ್ಷೇತ್ರವ॥ ಪ॥ ಗಗನಗಿರಿಯಶಿಖರದಮೇಲೇ
ಅಲ್ಲಿಸೊಗಸುವರತ್ನಮಂಟಪದೊಳು । ಝುಗಝುಗಿಸುವಶಶಿಸೂರ್ಯಪ್ರ
ಭೆ। ಅಲ್ಲಿಅಗಲದೆಬೆಳಗುವತೇಜಗೀ ॥ ೧ ॥ ಶಂಖಕಿನ್ನರಿನಾಗಸರವೀಣೆ
ಅಲ್ಲಿರುಂಕರಿಸುವಘಂಟೆಜಾಗಟೆ। ಕಿಂಕಿಣಿಭೇರಿದುಂದುಭಿ। ಅಲ್ಲಿಓಂ
ಕಾರನಾದವಾಗುತ್ತಿದೆ॥ ೨॥ ತೊಳಗುವಚಂದ್ರಕಾಕ್ಷ್ಮಿಂಚಿನಕೋಟೆ। ಬೆ
ಳಕಿಂದಸಕಲವುಬೆಳಗುತ್ತಾ । ವೊಲಿದಷಡಕ್ಷರಲಿಂಗವು। ಅಲ್ಲಿನೆಲಸಿರ್ಪ
ಭೇದವನರಿಯದೆ॥ ... ... ೩॥

(೬೬) ಟೀ॥ ಭೂಸಂಚಾರಿಗಳಾದ ಚರಮೂರ್ತಿಗಳು ಯಾರು
ತಾನೇ ಪುಣ್ಯಕ್ಷೇತ್ರಗಳನ್ನು ಕಾಣರು? ಮೇರು ಪರ್ವತದ ತುದಿಯ
ಲ್ಲಿ ಪ್ರಕಾಶಿಸುತ್ತಲಿರುವ ರತ್ನಗಳಿಂದ ಕೆತ್ತಲ್ಪಟ್ಟ ಮಂಟಪದೊಳಗೆ ಥಳ
ಥಳಿಸುತ್ತಲಿರುವ ಚಂದ್ರಸೂರ್ಯ ಕಾಂತಿಯಲ್ಲಿ ಎಡೆಬಿಡದಂತೆ ಬೆಳಗು
ತ್ತಲಿರುವ ಚಿತ್ಪ್ರಕಾಶದಲ್ಲಿ ಶಂಖ, ಕಿನ್ನರ, ನಾಗಸರ, ವೀಣೆ, ಯೆಲ್ಲ
ವನ್ನೂ ರುಂ ಯೆಂದು ಕೂಗಿಸುತ್ತಲಿರುವ ಘಂಟೆ, ಜಾಗಟೆ, ಗಗ್ಗರಿ,

ಬೇರಿ, ದುಂದುಭಿ, ಮೊದಲಾದವುಗಳ ರಭಸವುಳ್ಳ ಶಬ್ದವೆಲ್ಲಾ ಹೊಟ್ಟು ಕೂಡಿ ಓಂ ಓಂ ಓಂ ಎಂಬುವ ಶಬ್ದವಾಗುತ್ತಾ ಇರುವದು, ಪ್ರಕಾಶಿಸುವ ಚಂದ್ರನಿಗೂ, ಮುಂಗಾರು ಮಿಂಚಿಗೂ, ಕೋಟಿಪಾಲು ಹೆಚ್ಚಾಗಿರುವ ದಿವ್ಯಜ್ಯೋತಿಯಿಂದ ಸಕಲವನ್ನೂ ಬೆಳಗಿಸುತ್ತಾ ಪ್ರಸನ್ನನಾದ ಷಡಕ್ಷರಲಿಂಗ ಮೂರ್ತಿಯು ಅಂಥಾ ಪರಮ ವೈಭವಗಳಿಂದ ಹೆಗ್ಗಳವಾಗಿ ತೋರುವ ಮಹಾ ಆಸ್ಥಾನದೊಳಗೆ ಅಭೇದಬ್ರಹ್ಮವೆಂಬುವ ತಾನೇತಾನಾಗಿ ಪ್ರಕಾಶಿಸುತ್ತಿರುವನೆಂದು ಈ ಪದದಿಂದ ಶಿವಲೋಕವೂದ ಕೈಲಾಸವನ್ನು ಅದರ ಪರಮವೈಭವವನ್ನೂ ಚರಮೂರ್ತಿಯಾದ ಮಹಾನುಭಾವನು ಅರಿತಿರುವನೆಂದು ಪೇಳಿದರೆಂಬ ತಾತ್ಪರ್ಯ.

(೬೭) ರಾಗ- ಧನ್ಯಾಸಿ— ಕಾಯ್ವೈಯ್ಯ ಕಾಯ್ವೈಯ್ಯ ಕರುಣಾದಿ ನಾನು । ಸಾಯಲಾರೆನು ಮಾಯೆ ಕೈಯಲ್ಲಿ॥ ಪ॥ ಹರಿಯಜಸುರಮನುಮುನಿಗಳು ಹಿಮ। ಗಿರಿಯಮರೆಯೊಳಡಗಿಕೊಂಡಿರೆ॥ ಗಿರಿಯಮರೆಯೊಳಿರಲಾರದೆ। ನಿಮ್ಮ। ಚರಣರಕ್ಷೆಯ ಮರೆಯನು ಹೊಕ್ಕೆ॥ ೧॥ ಆಶೆಯಪಾಶದಿಂದಲಿ ಕಟ್ಟಿ । ಮಾಯೆ। ವಾಸವಾದಿಗಳನು ಕೊಲುತಲಿದೆ । ಆಶಾಪಾಶದೊಳಿರಲಂಜಿ । ಜಗ। ದೀಶ ನಿಮ್ಮನು ಮರೆಯ ಹೊಕ್ಕೆ ॥ ೨ ॥ ಬಲುಹಿರಿಯರನ್ನು ಕೊಲುತಿದೆ। ಮಾಯೆ। ಗೆಲುವವರಿಲ್ಲ ತ್ರಿಜಗದೊಳು । ಅಲಸಿ ನಿಮ್ಮನು ಮರೆಯ ಹೊಕ್ಕೆ। ಯೆನ್ನ। ಸಲಹು ಷಡಕ್ಷರಿಲಿಂಗವೇ॥ ೩॥

(೬೭) ಟೀ॥ ಎಲೈ— ದಯಾಮೂರ್ತಿಯಾದ ಶಿವನೇ ! ನನ್ನನ್ನು ಕಾಪಾಡು, ನಾನು ಮಾಯೆಯ ಕೈಯಿಂದ ಸಾಯಲಾರೆನು, ವಿಷ್ಣು, ಬ್ರಹ್ಮದೇವ, ಮನು, ಋಷಿಗಳೇ ಮೊದಲಾದ ಹಿರಿಯರೆಲ್ಲಾ ಪರ್ವತದ ಮರೆಯಲ್ಲಿ ಅಡಗಿಕೊಂಡಿರುವದರಿಂದ ಬೆಟ್ಟದ ಮರೆಯೊಳಗೆ ನಾನು ಇರಲಾರದೆ ನಿಮ್ಮ ಪಾದರಕ್ಷೆಯ ಮರೆಯನ್ನು ಹೊಕ್ಕೆನು, ಮಾಯೆಯೆಂಬುವದು. ಇಂದ್ರಾದಿಗಳನ್ನೆಲ್ಲಾ ಆಶಾಪಾಶದಿಂದ ಬಿಗಿದು ಕಟ್ಟಿಕೊಲ್ಲುತ್ತಾ ಇರುವದರಿಂದ ನಾನು ಆಶಾಪಾಶದೊಳಗೆ ಇರುವದಕ್ಕೆ, ಹೆದರಿ, ಎಲೈ — ಜಗತ್ಪತಿಯೇ ! ನಿಮ್ಮನ್ನೇ ಮರೆಹೊಕ್ಕೆನು, ಮಾಯೆಯೆಂಬುವದು ದೊಡ್ಡ ದೊಡ್ಡವರನ್ನೆಲ್ಲಾ ಕೊಲ್ಲುತ್ತಾ ಇದೆ, ಅದನ್ನು ಮೂರು ಲೋಕದಲ್ಲಿಯೂ, ಗೆಲ್ಲುವದಕ್ಕಸಾಧ್ಯ, ಆದ್ದರಿಂದ ನಾನು ಆಯಾಸಗೊಂಡು ನಿಮ್ಮನ್ನು ಮರೆಹೊಕ್ಕೆನು, ಎಲೈ—ಷಡಕ್ಷರಲಿಂಗವೇ! ನನ್ನ

ನ್ನು ಕಾಪಾಡುಯೆಂದು ಈ ಪದದಿಂದ ಹರಿಬ್ರಹ್ಮಾದಿಗಳೆಲ್ಲಾ ಯೂಪಾಶ ಬದ್ಧರಾಗಿ ಇರುವದನ್ನು ಅರಿತು, ಅದರ ಭೀತಿಯನ್ನು ಪಂಚದೊಳಗೆ ಶಿವನಲ್ಲದೆ ಮತ್ಯಾರೂ ಪರಿಹರಿಸಲಾರರೆಂಬುವ ದೃಢ ವೇಕದಿಂದ ಶಿವನನ್ನೇ ಶರಣುಹೊಂದಿ, ಮಾಯೆಯಿಂದ ಬಿಡಿಸಲ್ಪ ನಿರ್ಮಾಯನಾಗುವ ಹಾಗೆ ಶಿವಾನುಗ್ರಹಕ್ಕೆ ಪಾತ್ರನಾಗಿರತಕ್ಕದ್ದೆಂ ಹೇಳಿದರೆಂಬ ತಾತ್ಪರ್ಯವು.

(೬೮) ರಾಗ - ಪಂತುವರಾಳಿ— ಹಾರುಕಂಡ್ಯಾ ಹಂಸಹಾ ಕಂಡ್ಯಾ। ನೀನೂ। ಮೂರುಬಲೆಗಳೊಳಗೆ ಶಿಲುಕದೇ। ಪ॥ ಆಶಾಪಾ ಶಿಲುಕದೆ। ನೀನಾ। ರೋಷಕಿಚ್ಚಿನಲ್ಲಿಬೀಳದೇ। ವಾಸವಹರಿಯಜರಗಳ ಕ್ಕಿ।ಸತ್ತ। ಹೇಸಿಪಥವನೀನುಮುಟ್ಟದೇ॥ ೧॥ನಿರಯದಸರಸಿಯೊಳಾಡದ ನೀನು। ಇರದೆಪ ನದತ್ತಹಾರುಕಂಡ್ಯಾ॥ ಗಿರಿಯಸರಸಿಯೊಳಗೊ ವಾ।ನೀನು ವುರುತರಕ್ಷೀರವಸವಿಕಂಡ್ಯಾ॥ ೨॥ ಸಾಸಿರದಳಕಮಲದಕನಿ ಕೆಯೊಳು। ಅಲ್ಲಿ। ಭಾಸುರಬೆಳಗಿನಪ್ರಭೆಯೊಳೂ॥ ವಾಸವಾಗಿಪ ಷಡಕ್ಷರವರಮಹ। ದೀಶನನೀಹೋಗಿನೆರೆಕಂಡ್ಯಾ॥

(೬೮) ಎಲೈ— ಮನವೆಂಬ ಹಂಸವೇ! ನೀನು ಮೂರು ಬ ಗಳೆಂಬುವ ಈಷಣತ್ರಯ, ಅಥವಾ, ತ್ರಿಗುಣ, ಇಲ್ಲವೆ, ಅವಸಾತ್ರಯಗ ಗೆ ಶಿಕ್ಕದೆ ಹಾರಿಹೋಗುಕಂಡ್ಯಾ. ಆಶೆಯೆಂಬುವ ಪಾಶಕ್ಕೆ ನೀನು ಶಿ ಕೊಳ್ಳದೆ, ನೀನು ರೋಷವೆಂಬುವ ಬೆಂಕಿಯಲ್ಲಿ ಬೀಳದೆ, ಇಂದ್ರ, ಷ್ಣು, ಬ್ರಂಹಾದಿಗಳು ಸಿಕ್ಕುಬಿದ್ದು ಅಳಿದಂಥಾ ಹೇಸಿದ ಮಾರ್ಗದಲ್ಲಿ ಹೋಗದೆ, ಪಾಪವೆಂಬುವ ಸರೋವರದಲ್ಲಿ ತಿರುಗಾಡದೆ, ಹರಾದ್ರಿಯ ಲ್ಲಿ ಪ್ರಕಾಶಿಸುತ್ತಿರುವ ದಿವ್ಯಸರೋವರದ ಕ್ಷೀರವನ್ನು ಸವಿಯುತ್ತಿರು ಕಂಡಿಯಾ? ಆ ಪರಮ ಕೈಲಾಸದಲ್ಲಿ ಕಂಗೊಳಿಸುತ್ತಿರುವ ಆನಂದವೆಂ ಬುವ ದಿವ್ಯ ಸರೋವರದಲ್ಲಿನ ಸಾವಿರ ಯೆಸಳುಗಳುಳ್ಳ ಕಮಲದ ನಟ್ಟ ನಡುವೆ ದಿವ್ಯತೇಜೋವಿರಾಜಿತನಾಗಿ ಮೆರೆಯುತ್ತಿರುವ ಚಿತ್ಪ್ರಕಾಶದ ಲ್ಲಿ ವಾಸವಾಗಿರುವ ಷಡಕ್ಷರ ಲಿಂಗಮೂರ್ತಿಯಾದ ಮಹೇಶ್ವರನನ್ನು ನೀನು ಹೋಗಿ, ಕೂಡು ಕಂಡಿಯೂ ಯೆಂದು ಈ ಪದದಿಂದ ಮನವನ್ನು ಹಂಸಕ್ಕೆ ಸಮಾನಮಾಡಿ ಬುದ್ಧಿ ಕಲಿಸಿ ಶಿವೈಕ್ಯವನ್ನು ಪಡೆಯುವಂತೆ ಬೋಧಿಸಿದರೆಂದು ತಾತ್ಪರ್ಯವು.

... ...

(೬೯) ರಾಗ- ಭೋಗಷಟ್ಪದಿ— ವಿರತಿವಿರತಿಯೆಂಬರಯ್ಯ। ವಿರತಿಸುಲಭವಲ್ಲವಯ್ಯ। ವಿರತಿತನುವಿನಾಸೆಕಡೆದರಾಗವಿರತನೂ ॥ ಪ ॥ ಅನ್ನವನ್ನುವುಳಿದುತನುವ। ಸಂಣಿಸಿರಲುಬಹುದುವಸ್ತ್ರ। ವನ್ನುಬಿಟ್ಟದಿಗಂಬರತ್ವವಾಗಬಹುದಲ್ಲೆ॥ ಯಂಣೆನೀರವುಳಿದುಜಡೆಗಳನ್ನುಮಾಡಿಕೊಳಲಿಬಹುದು। ತನ್ನದೇಹಭಾವವಳಿಯೆವಿರತಿಯಪ್ಪುದೂ॥ ೧॥ತನ್ನನಿಜವತಿಳಿದುನೋಡಿ। ತನ್ನತನುವಿನಲ್ಲಿಕೃತಕ। ವನ್ನುಹಿಡಿದುಆಡಬಾರದೆಂದುತಿಳಿಯುತಾ ॥ ಅನ್ಯರುಗಳಪೊಡವೆಯಂತೆ। ತನ್ನತನುವಿನಲ್ಲಿಮೋಹ। ವನ್ನುವುಳಿದುಆಡಬಲ್ಲಡಾತವಿರತನೂ॥ ೨॥ ಕರಿಯುಕರಡಿವ್ಯಾಘ್ರಸಿಹ್ಮ। ವುರಗಸಿಡಿಲುಚೋರರಿಂದ। ಮರಣಭೀತಿಯಲ್ಲದಿರ್ದೊಡಾತವಿರತನೂ॥ ಪರಮಷಡಕ್ಷರೀಯಲಿಂಗ।ದಿರುವೆಯಾಗಿಚರಿಸುತಿರ್ಪ। ನಿರತಲೋಕಭರಿತಚಿತ್ತವಿರತನಾತನೂ। ... ೩॥

(೬೯) ಟೀ॥ ಗುರುವೇ ! ವಿರತಿವಿರತಿಯೆಂದು ಬರಿದೇ ವೈರಾಗ್ಯವನ್ನು ಕುರಿತು ಹೇಳುತ್ತಿರುವರು; ತನುವಿನ ಮೇಲಣಾಶೆಯನ್ನು ಬಿಟ್ಟರೆ ಆಗ ವಿರತನು ಅಂದರೆ ವಿರಕ್ತನಾಗಿರುವನು. ಅನ್ನವನ್ನು ಬಿಟ್ಟು ಶರೀರವನ್ನು ಕೃಶಮಾಡಿಕೊಳ್ಳಬಹುದು ! ವಸ್ತ್ರವನ್ನೇ ಬಿಟ್ಟು ದಿಗಂಬರನಾಗಬಹುದು ! ಯಂಣೆನೀರುಗಳನ್ನು ಬಿಟ್ಟು ಜಡೆಗಳನ್ನು ಮಾಡಿಕೊಳ್ಳಬಹುದು, ಆದರೆ ತನ್ನ ದೇಹಭಾವವೆಂಬುವದು ಅಳಿದರೆ ವಿರತಿಯುಂಟಾಗುವದು. ತನ್ನ ನಿಜವನ್ನು ತಿಳಿದು ನೋಡಿ, ತನ್ನ ದೇಹದಲ್ಲಿ ಕೃತ್ರಿಮವನ್ನು ಕಂಡು ಹಿಡಿದು, ಶರೀರದ ಕೃತಕಗಳು ವಾಚಾಮಗೋಚರವಾದದ್ದೆಂದು ತಿಳಿಯುತ್ತಾ, ಇತರರ ಒಡವೆಯಹಾಗೆಯೇ ತನ್ನದೇಹದಲ್ಲಿ ಹೋಹವನ್ನು ಬಿಟ್ಟು ಬಿಟ್ಟು ಸಂಚರಿಸಬಲ್ಲರೆ, ಆಗ ಆತನು ವಿರಕ್ತನೆನಿಸುವನು. ಆನೆ, ಕರಡಿ, ಹುಲಿ, ಸಿಹ್ಮ, ಸರ್ಪ, ಸಿಡಿಲು, ಕಳ್ಳರು, ಮೊದಲಾದವರಿಂದ ಮರಣದ ಭಯವು ಇಲ್ಲದೆ ಇದ್ದರೆ ಅಂಥವನು ವಿರಕ್ತನು. ಪರಾತ್ಪರನಾದ ಷಡಕ್ಷರ ಲಿಂಗಮೂರ್ತಿಯ ಸ್ಥಿತಿಯುಳ್ಳಾತನಾಗಿ ಅಂದರೆ ಲಿಂಗೈಕ್ಯವಾದ ಮನವುಳ್ಳಾತನಾಗಿ ಲೋಕದಲ್ಲಿ ಚರಿಸುತ್ತಿರುವ ಸರ್ವಪರಿಪೂರ್ಣ ಚಿತ್ತನು ಯಾರೋ ಆತನು ವಿರಕ್ತನಾಗಿರುವನೆಂದು ಈ ಪದದಿಂದ ವೈರಾಗ್ಯವನ್ನುಳ್ಳಾತನು ಈ ರೀತಿಯೂಗಿರುವನೆಂಬುವದನ್ನು ಪೇಳಿದರೆಂಬ ತಾತ್ಪರ್ಯವು. ... *

(೭೦) ರಾಗ- ಭೋಗಷಟ್ಪದಿ— ದೇವನೀನುರಕ್ಷಿಸಲ್ಪ। ಜೀವಿ
ನುಕರುಣಿನೀನು। ಸಾವುಹುಟ್ಟುಗಳಿಗೆಬೆದರಿಹೆದರುತ್ತೈದೆನೇ॥ಪ॥ ಎ
ಬೀಳಬಲ್ಲೆನಾನು। ವೊಡನೆಯೇಳಲರಿಯೆನಯ್ಯ। ನುಡಿಯಬಲ್ಲೆನ
ವಿಗಿಲುನಡೆಯಲಾರೆನೂ॥ ನುಡಿದಹಾಗೆನಡೆಯುದವರ। ಒಡೆಯನೀ
ಹೊಲ್ಲೆಯವರ। ನಡೆಗಳಿಲ್ಲದಧಮನಾನುರಕ್ಷಿಸೆನ್ನನೂ॥ ೧॥ ಭಕ್ತಿಯನ
ಯಿಲ್ಲವೈಯ್ಯ। ನಿತ್ಯಜ್ಞಾನವಿಲ್ಲವೆನಗೆ। ಮತ್ತೆವೈರಾಗ್ಯವೆನಗೆಮೊದ
ಯಿಲ್ಲವೂ॥ ಕರ್ತುನೀನೆವೊಲಿದುನಿಮ್ಮ। ಚಿತ್ತದಲ್ಲಿಕರುಣಹುಟ್ಟಿ। ಯೆ
ರಕ್ಷಿಸೆನ್ನನಲ್ಲದಿರಲುಕೆಡುವೆನೂ॥ ೨॥ ನರಶರೀರವೆಂಬದೊಡ್ಡ। ಹಿರಿ
ಕೋಳದೊಳಗೆತಿಕ್ಕಿ। ಕರಗಿಕೊರಗಿಮರುಗಿಅಳಲಿಬಳಲುತ್ತೈದೆನೆ॥ ವ
ರುಕವ್ಯಾಕೆಯಿಲ್ಲವೈಯ್ಯ। ಕರುಣಿಯೆಂಬರಯ್ಯನಿಮ್ಮ। ಕೊರತೆನಿಮ
ಬಾರದಂತೆರಕ್ಷಿಸೆಂನನೂ॥ ೩॥ ಧೀರನಲ್ಲವೈಯ್ಯಶಿವನೆ। ವೀರನಲ್ಲವೆ
ಯ್ಯನಾನು। ಘೋರತನುವತೊಡಿಸಿಯೆನ್ನನಳೆಯಬಿಟ್ಟರೀ॥ ಮೊ
ಹರನೆನೀನೆವುಳಿದು। ದೂರಕಪ್ಪರಾರುಯೆಂನ। ಪಾರವೈದಿಸೈಯ್ಯ
ಕರುಣಶರಧಿಚಂದ್ರಮೂ॥ ೪॥ ಕರುಣಿನೀನೆಬಲ್ಲೆನಾನು। ಹರಗಣ
ಲುಕರುಣಿಸಿದಿರಿ। ಇರದೆಆಹರಪ್ರಹರವೆನಲುವೊಡನವೊಲಿದಿರಿ॥ ಸರಿ
ಕುಸುಮಹರವಿಗೆನಲು।ಕರುಣಿಸಿದಿರಿಬಿಡದೆಯೆನ್ನ।ಕರುಣಿಸಯ್ಯಪರಮ
ಷಡಕ್ಷರೀಯಲಿಂಗವೇ॥ ... ... ೫॥

(೭೦) ಟೀ॥ ಎಲೈ— ಮಹಾದೇವನೇ! ನೀನು ಸರ್ವೋತ್ಕೃಷ್ಟ
ನಾಗಿಯೂ, ದಯಾಪರಮೂರ್ತಿಯಾಗಿಯೂ ಇದ್ದೀ? ನಾನು ಅಲ್ಪಜೀ
ವಿಯಾಗಿ ಜನನಮರಣಗಳಿಗೆ ಹೆದರಿ ಬೆದರುತ್ತಿದ್ದೇನೆ; ನನ್ನನ್ನು ರಕ್ಷಿ
ಸು, ಎಲೈ— ಶಿವನೇ! ನಾನು ಯೆಡವಿ ಬೀಳುವದಕ್ಕೆ ಬಲ್ಲೆ ಆದರೆ ಬ
ಡನೆ ಏಳುವದಕ್ಕೆ ಅರಿಯೆನು. ಬಹಳವಾಗಿ ಹೇಳುವದಕ್ಕೆ ಬಲ್ಲೆ, ಆದರೆ
ನಡಿಯಲಾರೆನು, ಹೇಳಿದಂತೆ ನಡೆಯದವರಾಗಿರುವ ದುಷ್ಟರ ಸಮೂಹ
ದೊಳಗೆ ನಾನು ಅಧಮನು; ನೀನು ನುಡಿದಂತೆಯೇ ನಡೆಯುವಂಥವ
ರಾದ ಮಹಾನುಭಾವರ ಒಡೆಯನಾಗಿದ್ದೀ. ಎಲೈ— ಸ್ವಾಮಿಯೇ! ನ
ನ್ನನ್ನು ರಕ್ಷಿಸು ಗುರುವೇ! ನನಗೆ ಭಕ್ತಿಯು ನಿತ್ಯವಾದ ಜ್ಞಾನವೂ ಇ
ಲ್ಲ, ವೈರಾಗ್ಯವೆಂಬುವದು ಮೊದಲೇ ಇಲ್ಲ ಕರ್ತುವಾಗಿರುವ ನೀನು
ಪ್ರಸನ್ನನಾಗಿ ನಿಮ್ಮ ಚಿತ್ತದಲ್ಲಿ ದಯೆಗೊಂಡು ನನ್ನನ್ನು ಉದ್ಧರಿಸಿ ಕಾ

ಪಾಡು ! ಇಲ್ಲದಿದ್ದರೆ ನಾನು ಕೆಡುವೆನು. ಮನುಷ್ಯದೇಹವೆಂಬುವ ದೊಡ್ಡ ಕೊಳದೊಳಗೆ ಬಿದ್ದು ಸಿಕ್ಕಿಕೊಂಡು, ಕಷ್ಟಪಟ್ಟು, ದುಃಖಿಸಿ, ಕಂಗೆಟ್ಟು ಆಯಾಸಗೊಳ್ಳುತ್ತಾ ಇದ್ದೇನೆ. ಹೀಗಿರುವಲ್ಲಿ ದಯಾಪರಮೂರ್ತಿ ಎಂಬುದಾಗಿ ಸಕಲರೂ ನಿಮ್ಮನ್ನು ಹೇಳುತ್ತಿರುವಲ್ಲಿ ನಿಮಗೆ ಯಾತಕ್ಕೆ ಮರುಕವಿಲ್ಲವೈಯಾ? ನಿಮ್ಮ ಕರುಣೆ ಯೆಂಬುವ ಮಾತಿಗೆ ಕೊರತೆ ಬಾರದಂತೆ ನನ್ನನ್ನು ರಕ್ಷಿಸು. ಶಿವನೇ ನಾನೂ ಧೀರನೂ ಅಲ್ಲ ! ನಾನು ವೀರನೂ ಅಲ್ಲ ! ಹೀಗಿರುತ್ತಾ, ನನಗೆ ಘೋರವಾದ ಶರೀರವನ್ನು ತೊಡಿಸಿ, ನನ್ನನ್ನು ಅಗಚಾಟ್ಲು ಪಡುವದಕ್ಕೆ ಬಿಟ್ಟು ಬಿಟ್ಟಿರಲ್ಲಾ ? ಎಲೈ— ಕಾಮಹರನಾದ ಶಿವನೇ! ನೀನಲ್ಲದೆ ನನ್ನನ್ನು ಉದ್ಧರಿಸುವಂಥವರ್ಯಾರು ? ಎಲೈ- ಕೃಪೆಯೆಂಬುವ ಸಮುದ್ರದ ಪೂರ್ಣಚಂದ್ರನಾಗಿರುವ ಶಿವನೇ ! ನನ್ನನ್ನು ಕರುಣಿಸಿ ಪಾರುಕಾಣಿಸೈಯ್ಯಾ, ದಯಾಳುವಾದ ನೀನೇಬಲ್ಲೆ. ನಾನು ಶಿವಗಣದವನೆನ್ನುವದೂ ನೀವು ಕರುಣಿಸಿದ್ದಲ್ಲದೆ. ದೇಹಾಭಿಮಾನಿಯಲ್ಲದವನು ಅನ್ನುವದು ಕೂಡ್ಲೇ ಪ್ರೀತಿಸಿದಿರಿ, ಜಾರಿದಹೂವು ಶಿವನಿಗೆ ಆನ್ನುವದೂ ನನ್ನನ್ನು ಬಿಡದೆ ಕರುಣಿಸಿದಿ, ಎಲೈ— ಷಡಕ್ಷರಲಿಂಗವೇ! ಈ ರೀತಿಯಿಂದ ನನ್ನೊಳಗೆ ಕರುಣ ತೋರಿಸಿ, ನನ್ನನ್ನು ಪ್ರೀತಿಮಾಡಿ ನನ್ನನ್ನು ಕಾಪಾಡಿರೆಂದು ಈ ಪದದಿಂದ ಶಿವಾನುಗ್ರಹವನ್ನು ಬೇಡಿಕೊಂಡು ಆತನ ಕೃಪೆಯನ್ನು ಪಡೆಯುವ ರೀತಿಯಲ್ಲಿ ನಡಿಯತಕ್ಕದ್ದೆಂಬುವದನ್ನು ಪೇಳಿದರೆಂಬ ತಾತ್ಪರ್ಯವು. ... *

(೭೧ನೇ) ರಾಗ- ಪರಿವರ್ಧಿನಿ ಷಟ್ಪದಿ— ಯೆನ್ನಪರಾಧವನೋಡದೆ ರಕ್ಷಿಸು । ಪಂನಗಧರವರಮೂರ್ತಿಮಹಾಘನ । ಚನ್ನಷಡಕ್ಷರಿಲಿಂಗವೆ ಯೆನಗೊಲಿದೊಮ್ಮಿಗೆಕೃಪೆಯಾಗೂ॥ಪ॥ ಖುಲ್ಲನುಕ್ಷುದ್ರನುಪರರಭಿಮಾನಕೆ । ಭುಲ್ಲವಿಸುವಖಳಕಪಟಾತ್ಮಕಬಹು। ಸುಳ್ಳನುಕಳ್ಳರಮೇಳಾಪನು ಮನ ತಲ್ಲಣಿಸದಪಾಪೀ ॥ ಯೆಲ್ಲನುಮೂಡುವ ದುರ್ಜನದುರ್ಮುಖ । ನಿಲ್ಲದೆಸತ್ಪುರುಷರನಿಂದಿಸುತಿಹ । ಖುಲ್ಲಾತ್ಮಕನವಗುಣಗಳನೋಡದೆ ಪ್ರೊಮ್ಮಿಗೆಕೃಪೆಮಾಡು ॥ ೧ ॥ ಕನ್ಯಾರ್ಥವಪತಿಕರಿಸುತಭೂಮಿಯ । ಮನ್ನಣೆಯಳಿದಿಹದಾಸಿಯದುಷ್ಕುಲ ॥ ವೆಂನದೆವರ್ತಿಪತಿಶ್ನಪರಾಯಣ ಕಾಮುಕಜ್ಞಾನೀ ॥ ಸನ್ನುತಗುರುಚರವಾಕ್ಯವಮೀರಿಯೆ । ಭಿನ್ನವಮಾಡಿಶಿವಾಗಮಶಾಸ್ತ್ರಗ। ಳೆನ್ನದಮುಂದಣಸದ್ಗತಿಯರಿಯೆನುಪ್ರೊಮ್ಮಿಗೆಕೃ

ಪೆಯಾಗು॥೨॥ಈಕ್ಷಿಸಲೊಲ್ಲದೆಲಿಂಗವವನಿತಾ। ವಕ್ಷೋಜವಪೊರೆವಾ
ರೀಕ್ಷಿಸ। ಪೇಕ್ಷಿಯತಾಮಸದಿಂದತಿ ಮತಿಮ ಸೆಳಿದುಮಮಕಾರಡಗಿ
ಲಕ್ಷಿಸಲೊಲ್ಲದಹಿರಿಯರವಚನವ। ಭಕ್ಷಣೆಗೋಸುಗಡಂಬಕರೂಪನ
ಮೋಕ್ಷಮಸರಿಯದವಿಪ್ರದ್ರೋಹಿಗೆ। ಒಪ್ಪಿಗೆಕೃಪೆಯಾಗು ॥ ೩
ಖೂಳನುಪಾಪಿಷ್ಟನು ಬಲುಧೂರ್ತರ। ಮೇಳನುಹಿಂಸೆಗೆ ಹೆದರದಹಿ
ಯರ। ಚಾಳಿಸಿನಾಚಿಪಕೀರ್ತಿಯಬಡಲಿನಕಾಕುವಿಚಾರನಿಗೇ॥ ಧಾ
ಕದಲಿವಾಗಾಲವನುಡಿಯುತ। ಕಾಲನಬಾಧೆಗೆಬಿಡುವುನಪುನರ್ಭವ। ವ
ಲೆಯಕೊರಲಿಗೆತೊಡರಿಸಿಕೊಂಬನಿಗೊಪ್ಪಿಗೆಕೃಪೆಯಾಗೊ। ೪॥ ಹಿ
ನುಬಹುಮುಖಶಾಸ್ತ್ರವಕಲಿತ। ಜ್ಞಾನನುಮೂನಿನಿಗಳ-ಧಿಕ್ಕರಿಸುವ
ನಾನಾಕೃತ್ಯವನೆಸಗಿಗುರುಾನ್ನತನಾಗದೆಭವಭವದಾ॥ ಕಾನನದೊಳು
ಗ್ಗಾಣದೆತಿರುಗುವ। ಪಾನರನಂತೆಪರಾಪರಮುಕ್ತಿಯ। ನೇನೆಂಧರಿಯ
ದವುರುಮುಖಜಡನಿಗೆವೊಪ್ಪಿಗೆಕೃಪೆಯಾಗೂ ॥ ೫ ॥ ಸುರಪಶುವಿ
ಗೊಡ್ಡಾವಿನಸಂಗವೆ। ಸುರತರುವಿದ್ದಂತೆಲಹದಮರನಂ। ಪರಚಿಂತಾ
ಮಣಿಯಿರುತಿರೆಗಾಜನಿರಿಕ್ಕೆಯಹಿಡಿವಂತೇ॥ ಹರಮಂತ್ರದಪಂಚಾಕ್ಷ
ಯಿರುತಿರೆ। ಪರಮಾತ್ರವಕೃತಕವಬಯಲಾಸೆಯು। ಪರರುಗಳಂದದಿ
ರಯಕಬೀಳ್ವನುಗೊಪ್ಪಿಗೆಕೃಪೆಯಾಗೂ॥ ೬ ॥ ಅವಗುಣನಾನಿಂನಾ
ಗೆಹೇಳಲಿ। ತವೆಗುರುವಾಕ್ಯವಮೀರಿದಕಾರಣ। ಶಿವನೊಲಿಯನುಶಿವ
ನೊಲಯದಿರೇಶಿವಶರಣರುವೊಲಿಯುರಲಾ॥ ಭವಹೀಂಗಾದರೆಯೆಂದಿಗ
ಬಿಡುವುದು। ಸವೆಯದನಂದದಯೂಂಬುಧಿಭವಗಿರಿ। ಪಮಿಯೇರಕ್ಷಿಸ
ಕೊರತೆಯದಾರಿಗೆವೊಪ್ಪಿಗೆಕೃಪೆಯಾಗೂ॥ ೭ ॥ ತಂದೆಯಮಾತನ
ಮೀರಲುಶಿಕ್ಷೆಯು। ಪೊಂದಾದೊಡೆವುಂಟಲ್ಲವೆಸದ್ಗುರು। ತಂದೆಯ
ಮಾತನುಮೀರಲುಶಿಕ್ಷೆಯು ಯೆಂದಿಗುವುಂಟಷ್ಟೇ ॥ ಮುಂದಾಸದ್ಗುರು
ವಿಂದಲ್ಲದೆಶಿವ। ನಿಂದಾದೊಡೆಶಿಕ್ಷೆಯುತಾನಹದಾ। ನಂದದಯೂಪರ
ಸಿಂಧುವೆಹರನೇ ವೊಪ್ಪಿಗೆಕೃಪೆಯಾಗೂ॥ ೮ ॥ ಸುರಧನುತೃಣಕಣಮ
ರದೆನಜ್ಯೋತಿಯ। ಯಿರವತಿಸಂಧ್ಯಾರಾಗವುಜ್ವಲಿಸಿರೆ। ಕರಿಶುಂಡಾ
ಲದತಿಶುವಸಿಧಾರೆಗೆವೊಡ್ಡಿದಕುರಿಯಂದಾ ॥ ಅರಿದರಿದೀತನುನಿತ್ಯವೆ
ನುತ್ತಲಿ। ಹರಿಯಜಸುರಮನುಮುನಿಗಳುಕೆಟ್ಟಾ। ಪರಿಯಲಿವ್ಯರ್ಥದಿ
ನಾಕೆಡಲಾರನುವೊಪ್ಪಿಗೆಕೃಪೆಯಾಗು॥ ೯ ॥ ಮೇರುವಸಾರುವವಾಯು

ಸಕನಕಶ । ರೀರವುದಾಗಿರದಾರಿಗೆಪರುಷವು । ಸೇರಿದಕಬ್ಬಿಣದವಗು ಣವಳಿಯದಡಾರಿಗೆಕೊರತೆಯದೂ ॥ ಬಾರದತಿಳುಹದಡಾರ್ರೈಯರಡ ಡು । ಸೂರಿಯನುದಯದಿಕಮಲವುಮುಗ್ಗುಳಿರೆ । ಸೇರಿದಕೊರತೆಯದಾ ರಿಗೆಶಿವನೀನೊವ್ಮಿಗೆಕೃಪೆಯೂಗೂ॥ ೧೦ ॥ ತರುಗಳಗುಣಗಳನೋಡಿತೆ ಚಂದನ । ಪರುಷವುಲೋಹದಅವಗುಣವರಸಿತೆ । ಅರಿಯಿತೆಕಂಟಕಗು ಣವನುಭ್ರಮರವು। ಆಪರಿಯುಂದದಲೀ ॥ ಬರಿಯುವಗುಣಿಯಲಿಸದ್ಗುಣವ ರಸದೆ । ಪರಮಚಿದಂಬುಧಿಯದ್ವಯನಘಹರ । ಗುರುವೆಷಡಕ್ಷರಿಲಿಂಗ ವೆಯೆನಗೊಲಿದೊವ್ಮಿಗೆಕೃಪೆಯೂಗೂ॥ ... ೧೧॥

(೭೧ ; ಟೀ॥ ಎಲೈ— ನಾಗಭೂಷಣನಾದ ಶಿವನೇ ! ನನ್ನ ಅಪ ರಾಧವನ್ನು ನೋಡದೆ ನನ್ನನ್ನು ರಕ್ಷಿಸು, ಘನವಾದ ಚಿದ್ರೂಪವುಳ್ಳ ಷ ಡಕ್ಷರಿಲಿಂಗದೇವನೇ ! ನನಿಗೆ ಒಲಿದು ವೊವ್ಮಿಗೆ ದಯೂಪರನಾಗು, ದು ಷ್ಟನು ಚಾಡಿಕೋರನು, ಅನ್ಯರಿಗೆ ಮೂನಹಾನಿಕರವಾದದ್ದನ್ನು ಮೂಡು ವದಕ್ಕೆ ಮುಂಕೊಳ್ಳುವ ದುರ್ಜನನೂ, ಕಪಟಮನಸ್ಸುಳ್ಳವನೂ, ಅಬ ದ್ಧವಾದಿಯೂ, ಕಳ್ಳರೊಡನೆ ಸೇರಿರುವವನೂ, ಮನಸ್ಸು ಕಠಿನವೂಡಿರು ವ ಪಾಪಿಯೂ, ಎಲ್ಲಾ ಅಕೃತ್ಯಗಳನ್ನು ಮಾಡುವಂಥಾ ದುರುಳನೂ, ದುರ್ಮುಖನೂ, ಸತ್ಪುರುಷರನ್ನೆಲ್ಲಾ ನಿಷ್ಕಾರಣವಾಗಿ ನಿಂದಿಸುವ ಖೂ ಳನೂ, ಆದ ನನ್ನಲ್ಲಿನ ದುರ್ಗುಣಗಳ್ಯಾವದನ್ನೂ ನೋಡದೆ ಒವ್ಮಿಗೆ ದ ಯೂಳುವಾಗು, ಭೂಮಿಯೊಳಗುಳ್ಳ ಕನ್ನೆಯರನ್ನು ಪರಿಗ್ರಹಿಸುತ್ತಾ, ಪ್ರಪಂಚದಲ್ಲಿ ಮೂನಮರ್ಯಾದೆಗಳಿಲ್ಲದೆ ಇರುವ ಗುಡಿಶೆಟ್ಟಿಯುರು ಕೆಟ್ಟಕು ಲಸ್ಥರೆಂದು ಅನ್ನದೆ ಅವರಲ್ಲಿ ಪ್ರವರ್ತಿಸುತ್ತಾ, ಶಿಶ್ನದ ಚಿಂತೆಯೇ ಹಿಡಿ ದಿರುವ ಕಾಮೂತುರನಾಗಿಯೂ, ಜ್ಞಾನಶೂನ್ಯನಾಗಿಯೂ, ಉತ್ತಮ ವಾದ ಸದ್ಗುರುವಿನ ವಾಕ್ಯವನ್ನು ಉಲ್ಲಂಘನೆಮೂಡಿ ಶೈವಶಾಸ್ತ್ರಾಗಮ ಗಳೆಂದು ನೋಡದೆ, ಭಿನ್ನವನ್ನುವೂಡಿ, ಮುಂದಣ ಸದ್ಗತಿಯನರಿಯದವ ನಾಗಿಯೂ ಇರುವ ನನ್ನಲ್ಲಿ ಯೂವದೋಷವಿದ್ದರೂ ನೋಡದೆ ಒವ್ಮಿ ಗೆ ದಯೂಳುವಾಗು, ಲಿಂಗವನ್ನು ನೋಡಲೊಲ್ಲದೆ, ಹೆಂಗಳ ಸ್ತನಗಳಂ ನು ಕಟಿಪ್ರದೇಶವನ್ನು ಜಘನಭಾಗವನ್ನೂ ನೋಡಲಿಕ್ಕೆ ಅಪೇಕ್ಷೆಪಡು ವಂಥಾ ತಾಮಸಪ್ರಕೃತಿಯಲ್ಲಿ ಇದ್ದುಕೊಂಡು, ಚಲಿಸುತ್ತಿರುವ ಬುದ್ಧಿ ಯು ಮುಮಕಾರವೇನೂ ಅಡಗದೆ ಹಿರಿಯರಾದವರ ಮೂತುಗಳನ್ನು ಲ

ಕ್ಷೈಕ್ಯೆತಾರದೆ, ಅವರ ಮುಖವನ್ನು ಸಹಾ ನೋಡದೆ, ಬಂಡತನಕ
ಹೊಟ್ಟೇಬಾಕನಾಗಿ ಮುಕ್ತಿಯನ್ನರಿಯದೆ, ಇರುವ ಬ್ರಹ್ಮದ್ರೋಹಿ
ದ ಎನಗೆ ಒಮ್ಮೆಗೆ ದಯೂಳುವಾಗು. ದುಷ್ಟನಾಗಿಯೂ. ಪಾಪಿಷ್ಠನ
ಯೂ, ಬಹಳಡಾಂಭೀಕನಾಗಿಯೂ, ಹಿಂಸಾಕಾರ್ಯಗಳಿಗೆ ಹೆದರದೆ,
ಯರಾದವರನ್ನು ಬೈಯುವಂಥಾ ಅಪಕೀರ್ತಿ ಸ್ವಭಾವವುಳ್ಳವನ
ಯೂ, ದುರಾಲೋಚನೆಯುಳ್ಳವನಾಗಿಯೂ, ದುರಹಂಕಾರದಿಂದ
ಭಾಷೆಗಳನ್ನೇಹಿಡಿದು ಯಮನ ಬಾಧೆಗೆ ಗುರಿಯೂದವನಾಗಿಯ
ಪುನರ್ಜನ್ಮವೆಂಬುವ ಉರುಳನ್ನು ಕುತ್ತಿಗೆಗೆ ಶಿಕ್ಕಿಸಿ ಕೊಳ್ಳುವವನ
ಯೂ ಇರುವ ನನಿಗೆ ಒಮ್ಮೆಗೆ ದಯೂಳುವಾಗು. ಹೀನವಾಗಿ ಭೇ
ಬೋಧಕವೂದ ನಾನಾಶಾಸ್ತ್ರಗಳನ್ನೂ ಕಲಿತು ಅಜ್ಞಾನಿಯೂಗಿ, ವ
ನಸ್ಥೆಯರು ಧಿಕ್ಕಾರವೂಡುವಂಥಾ ನಾನಾಕೃತ್ಯಗಳನ್ನು ವೂಡಿ,ಸದ್ಗು
ಮೂರ್ತಿಯೂಗದೆ. ಜನ್ಮಜನ್ಮಾಂತರಗಳೆಂಬುವ ಘೋರಾರಣ್ಯದೊಳ
ಬಿದ್ದು ಕಣ್ಣು ಕಾಣದೆ ತಿರುಗುವ ಮಂಗನಹಾಗೆ ಪರಾಪರವೂದ ವ
ಕ್ತಿಯನ್ನು ಏನೆಂದು ಅರಿಯದೆ. ನಾನಾ ಮುಖಗಳಿಂದ ಅಲೆಯುವ
ಡಾತ್ಮನಿಗೆ ಒಮ್ಮೆಗೆ ದಯೂಳುವಾಗು. ಕಾಮಧೇನುವಿರುತ್ತಾ ಗೊಡ್ಡ
ಕಳನ್ನು ಬಯಸುವಂತೆಯೂ, ಕಲ್ಪವೃಕ್ಷವಿರುತ್ತಾ ಎಲಹದ ಮರವನ್ನ
ಅಪೇಕ್ಷಿಸುವಹಾಗೆಯೂ, ಶ್ರೇಷ್ಠವಾದ ಚಿಂತಾಮಣಿಯೆಂಬುವ ರತ್ನ
ರುತ್ತಾ ಇಟ್ಟಿಗೆ ಕಲ್ಲನ್ನು ಅರ್ಥಿಸುವ ರೀತಿಯೂಗಿಯೂ, ಶಿವಪಂಚಾಕ್ಷ
ರೀ ಮಹಾಮಂತ್ರವಿರುತ್ತಾ ಇತರ ಮಂತ್ರ ತಂತ್ರಗಳನ್ನು ಆಶಿಸಿ, ಇತರ
ಹಾಗೆ ನರಕಕ್ಕೆ ಬೀಳುವಂಥವನಿಗೆ ಒಮ್ಮೆಗೆ ದಯಾಳುವಾಗು,ಗುರುವಾ
ಕ್ಯವನ್ನುಮೀರದೆ ಇರೋಣದರಿಂದ ಅವಗುಣಗಳನ್ನು ಶಿವನಿಗಲ್ಲದೆ ಮ
ತ್ಯಾರಿಗೆ ಹೇಳಲಿ? ಗುರುವಾಕ್ಯವನ್ನು ಉಲ್ಲಂಘನೆವೂಡಿದರೆ ಶಿವನು ಒ
ಲಿಯನು. ಶಿವನು ಒಲಿಯದಿದ್ದರೆ ಶಿವಶರಣರು ಒಲಿಯರಲ್ಲಾ, ಎಲೈ—
ಶಿವನೇ ! ಹೀಗಾದರೆ, ಇದು ಯೂವಾಗ್ಯೆ ವಿಮೋಚನೆಯಾಗುವದು ? ಜ
ನ್ಮವೆಂಬುವ ಪರ್ವತಕ್ಕೆ ವಜ್ರಾಯುಧವಾಗಿರುವ ದಯೂನಿಧಿಯೂದ ಶಿವ
ನೇ ! ಯೂವದುರ್ಗುಣಗಳನ್ನೂ ನೋಡದೆ ಒಮ್ಮೆಗೆ ದಯೂಳುವಾಗು,
ಮಗನು ತಪ್ಪುವೂಡಿದರೆ ತಂದೆಯಿಂದ ಬಾದು ಶಿಕ್ಷೆಯೂದರೂ ಉಂಟ
ಷೆ ? ಹೀಗಿರುವಲ್ಲಿ ಸದ್ಗುರು ತಂದೆಯ ವೂತನ್ನು ಮೀರುವದಾದರೆ, ಎಂ

ದೆಂದಿಗೂ ಶಿಕ್ಷೆಯೂಗಿರುವದಲ್ಲವೇ ? ಆದ್ದರಿಂದ ಮೊದಲು ಸದ್ಗುರುವಿನಿಂದಲ್ಲದೆ, ಶಿವನಿಂದಾದರೆ ಅದು ಶಿಕ್ಷೆಯೂಗಲಾರದು. ಎಲೈ— ಆನಂದ ದಯೂಸಾರನಾದ ಶಿವನೇ ! ಒಮ್ಮಿಗೆ ದಯೂಳುವಾಗು. ಹುಲ್ಲಿನ ಮೇಲೆ ತೋರುವ ಮಂಜುನೀರಿನಹಾಗೆಯೂ, ಕಾಮನ ಬಿಲ್ಲಿನಹಾಗೆಯೂ, ಸಾಯಂಕಾಲದ ಕೆಂಬೆಳಕಿನ ಹಾಗೆಯೂ, ಸಿಹ್ಮದ ಕೈಗೆ ತಿಕ್ಕಿದ ಆನೆಯ ಹಾಗೆಯೂ, ಕತ್ತಿಯ ಮೊನೆಗೆ ಹಿಡಿದ ಕುರಿಯ ಹಾಗೆಯೂ ಇರುವ ತನುವನ್ನು ನಿತ್ಯವೆಂದು ನಂಬಿ, ವಿಷ್ಣು, ಬ್ರಹ್ಮ, ಸುರ, ಮನು, ಮುನಿ, ಈ ಮೊದಲಾದವರೆಲ್ಲಾ ಕೆಟ್ಟುಹೋದ ರೀತಿಯಲ್ಲಿ ನಾನು ವ್ಯರ್ಥವಾಗಿ ಕೆಟ್ಟುಹೋಗಲಾರೆನು. ನನಗೆ ಒಮ್ಮಿಗೆ ದಯೂಳುವಾಗು; ಮೇರುಪರ್ವತಕ್ಕೆ ಹೋದ ಕಾಗಿಯ ಶರೀರವೆಲ್ಲಾ ಭಂಗಾರವಾಗದೆ ಇದ್ದಾಗ್ಯೂ, ದಾರಿಗೆ ಸಿಕ್ಕಿ ಬಿದ್ದಿರುವ ಪರಷಶಿಲೆಯನ್ನು ಸೇರಿದ ಕಬ್ಬಿಣದ ದುರ್ಗುಣವು ಹೋಗದೆ ಇದ್ದಾಗ್ಯೂ, ಅದು ಯಾರಿಗೆ ಕೊರತೆಯೂಗಿರುವದು ? ತಿಳಿಸಿದ್ದು ಬಾರದೆ ಇದ್ದಾಗ್ಯೂ, ಸೂರ್ಯನು ಉದಯಿಸಲು ಕಮಲಗಳು ಮುಕುಳಿತವಾದಾಗ್ಯೂ, ಅದು ಯೂರಿಗೆ ಕೊರತೆಶೇರುವದು ? ಎಲೈ— ಶಿವನೇ ! ನನಿಗೆ ನೀನು ಒಮ್ಮಿಗೆ ಕೃಪಾಳುವಾಗು; ಎಲೈ— ಶಿವನೇ ! ಚಂದನ ವೃಕ್ಷವು ಮರಗಳ ದುರ್ಗುಣ ಸುಗುಣಗಳೆಂಬುವದನ್ನೇನಾದರೂ ನೋಡೀತೇ ? ಪರುಷಶಿಲೆ ಎಂಬುವದು ಕಬ್ಬಿಣದಲ್ಲಿ ಏನಾದರೂ ದುರ್ಗುಣವನ್ನು ಹುಡುಕೀತೇ ? ಹೂವುಗಳಲ್ಲಿ ಮುಳ್ಳುಗಳುಂಟೆಂದೇನಾದರೂ ಭ್ರಮರವು ಅದನ್ನು ಬಿಟ್ಟು ಹೋದೀತೇ ? ಅದೇ ಪ್ರಕಾರದಲ್ಲಿ ಬರೀದುರ್ಗುಣವುಳ್ಳವನಲ್ಲಿ ಸದ್ಗುಣವನ್ನು ಹುಡುಕದೆ, ಪರಮಚಿತ್ ಜ್ಞಾನಸಾಗರನಾಗಿಯೂ, ಅಖಂಡನಾಗಿಯೂ, ಪಾಪ ಪರಿಹಾರಕನಾಗಿಯೂ ಇರುವ ಷಡಕ್ಷರಲಿಂಗ ಸ್ವರೂಪಿಯೂದ ಸದ್ಗುರುವೇ ! ನನಿಗೆ ಪ್ರಸನ್ನನಾಗಿ ದಯೂಪರನಾಗು ಎಂದು ಈ ಪದದಿಂದ ತನ್ನ ಸಕಲ ದುರ್ಗುಣಗಳನ್ನೂ ಕ್ಷಮಿಸಿ, ತನ್ನನ್ನು ಒಲಿಯುವ ರೀತಿಯಲ್ಲಿ ಶಿವನನ್ನು ಪ್ರಾರ್ಥಿಸುತ್ತಾ, ಷಡಕ್ಷರಲಿಂಗ ಗುರುಮೂರ್ತಿಯನ್ನು ಆಶ್ರಯಿಸ ತಕ್ಕದ್ದೆಂದು ಪೇಳಿದರೆಂಬ ತಾತ್ಪರ್ಯವು. *

ಶ್ರೀ ಶಿವಷಡಕ್ಷರ ಗುರುವೇನಮಃ, ಜಯಪರಮೇಶ್ವರ.

ಶ್ರೀಚೆನ್ನಬಸವೇಶ್ವರಾಯನಮಃ.

—*(ಷಡಕ್ಷರ ಸ್ತೋತ್ರ.)*—

ಇಂದ್ರವಜ್ರವೃತ್ತ— ಶ್ರೀಮಾಧವೇಂದ್ರಾವನದೇವರಕ್ಷ
ಸೋಮಾರ್ಕವಹ್ನ್ಯುಜ್ವಲದೃಗ್ವರೇಣ್ಯ ॥ ಹೇಮಾದ್ರಿಪೀ
ಸ್ಥಸುಖಾವಬೋಧ್ಯ । ಕಾಮಾಂತಕೃತ್ಸರ್ವಫಲಪ್ರದಾತಾ

ಟೀ॥ ಶ್ರೀ- ಸರಸ್ವತಿಯ, ಮಾ- ಲಕ್ಷ್ಮಿಯ, ಧವ - ಪತಿಗಳಾ ಹ್ಮ ವಿಷ್ಣುಗಳನ್ನೂ, ಇಂದ್ರ - ಸುರಪತಿ ಮೊದಲಾದ ದೇವರ್ಕಳ ಅವನ ಸಲಹುವಾತನಾಗಿಯೂ, ಸೋಮ- ಚಂದ್ರನು, ಅರ್ಕ- ಸ ನು, ವಹ್ನಿ- ಅಗ್ನಿ ಇವರುಗಳಿಂದ, ಉಜ್ವಲ - ಚನ್ನಾಗಿ ಪ್ರಕಾಶಿ ದೃಕ್- ನೇತ್ರತ್ರಯಗಳುಳ್ಳಾತನಾಗಿಯೂ, ವರೇಣ್ಯ - ಸರ್ವಾ ನಾಗಿಯೂ, ಹೇಮಾದ್ರಿ- ಮೇರುಗಿರಿಯ, ಪೀಠ-ಗದ್ದುಗೆಯೊಳಗೆ, ಸ ಚಿತ್ಸುಖದಿಂದ ಅವಬೋಧ್ಯ - ವೇದ್ಯವಾಗುವಾತನಾಗಿಯೂ, ಕಾ ಮನ್ಮಥನ, ಅಂತ- ನಾಶವನ್ನು, ಕೃತ್- ಮಾಡಿದಾತನಾಗಿಯೂ, ಸ ಸಮಸ್ತವಾದ, ಫಲ-ಕೋರಿದಪ್ರಯೋಜನಗಳನ್ನು, ಪ್ರದಾತಾ- ಚನ ಕೊಡುತ್ತಿರುವಾತನಾಗಿಯೂ ಇರುವ, ದೇವ- ಎಲೈ— ಒಡೆಯ ಷಡಕ್ಷರಲಿಂಗಮೂರ್ತಿಯೇ ! ರಕ್ಷ - ಸಲಹುವಾತನಾಗು.

ಮೂ॥ ನಾಗೇಂದ್ರವಾಣೀ ಪರಮೇಷ್ಠಿಕೀರ್ತ್ಯಂ । ಯೋಗೀಂದ್ರ ಹೃ
ತ್ಪದ್ಮವರಾಧಿವಾಸಂ ॥ ನಾಗಾಜಿನಂಚೇಲವೃಷಧ್ವಜಾಂಕಂ
ಭೋಗಪ್ರದಂತೇಪದಪದ್ಮಯುಗ್ಮಂ॥ ೨

ಟೀ॥ ನಾಗ- ಸರ್ಪಗಳ, ಇಂದ್ರ- ಪತಿಯಾದ ಆದಿಶೇಷನಿಂದಲ ವಾಣೀ- ಶಾರದೆಯಿಂದಲೂ, ಪರಮೇಷ್ಠಿ- ಬ್ರಹ್ಮನಿಂದಲೂ, ಕೀರ್ತ್ಯ ಹೊಗಳಿಸಿಕೊಳ್ಳುವಂಥಾ, ಯೋಗೀಂದ್ರ- ಸೂರಿಜನಶ್ರೇಷ್ಠರ, ಹ ದ್ಮ- ಹೃದಯಕಮಲದೊಳಗೆ, ವರ- ಶ್ರೇಷ್ಠವಾದ, ಅಧಿವಾಸ-ಆವಾ ಳ್ಳಂಥಾ, ನಾಗ- ಗಜದ, ಅಜಿನಂ- ಚರ್ಮವು, ಚೇಲ- ವಸ್ತ್ರವಾಗಿಯ ವೃಷ- ಬಸವೇಶ್ವರನು, ಧ್ವಜ- ಪತಾಕೆಯ, ಅಂಕಂ- ಚಿಹ್ನೆಯಾಗಿ ಇರುವಂಥಾ, ತೇ - ನಿಮ್ಮ, ಪದಪದ್ಮ - ಚರಣಕಮಲಗಳ, ಯುಗ್ಮ ದ್ವಂದ್ವವು, ಭೋಗಪ್ರದಂ- ಶೈವಸಂಬಂಧವಾದ ಸದ್ಭೋಗವನ್ನು ಕೊಡುವಂಥಾದ್ದಾಗಿರುವದು,

...

ಮೂ ॥ ಚಂದ್ರಾಗ್ನಿಚಂಡಾಂಶುವಿರಾಜಿನೇತ್ರಂ । ಮಂದಾಕಿನೀತೀರ
ಪ್ರದೋಷನೃತ್ಯಂ ॥ ಬೃಂದಾರಕೇಂದ್ರಾದಿಜನಾಸ್ತಿಮಾಲಂ ।
ಕಂದರ್ಪಹಾರಂಶುಭಸತ್ಯಗಾತ್ರಂ ॥ ... ೩॥

ಟೀ ॥ ಚಂದ್ರಾಗ್ನಿ ಚಂಡಾಂಶು- ಚಂದ್ರಾಗ್ನಿ ಸೂರ್ಯರುಗಳಿಂದ-ವಿರಾಜಿ- ಪ್ರಕಾಶಿಸುತ್ತಲಿರುವ, ನೇತ್ರಂ- ತ್ರಿನೇತ್ರಗಳುಳ್ಳಂಥಾ, ಮಂದಾಕಿನೀ - ದೇವಗಂಗೆಯ, ತೀರ-ಗಟ್ಟಿನಲ್ಲಿ, ಪ್ರದೋಷಮುಂಚಜೆಯಲ್ಲಿ, ನೃತ್ಯಂ-ತಾಂಡವಲೀಲೆಯುಳ್ಳಂಥಾ, ಬೃಂದಾರಕೇಂದ್ರ-ದೇವೇಂದ್ರನು,ಅರಿಜನ-ವೈರಿಗಳಾದ ಗಜಾಸುರಾದಿಗಳ, ಅಸ್ತಿ- ಎಲುಬುಗಳ,ಮಾಲಂ,ಹಾರವುಳ್ಳಂಥಾ, ಶುಭ-ಮಂಗಳಕರವೂದ, ಸತ್ಯ-ನಿಜವಾದ, ಗಾತ್ರಂ - ಶರೀರವು, ಕಂದರ್ಪ-ಕಾಮನನ್ನು, ಹಾರಂ-ಅಪಹರಿಸುವಂಥಾದ್ದು ॥ ೩ ॥

ಮೂ॥ ಪಾಪಾಟವಿವಹ್ನಿಭವಾಭ್ರವಾತಂ। ರೂಪೋತ್ತಮಂಭಕ್ತಿಸು
ಪಾಶಬದ್ಧಂ ॥ ಗೋಪಂಸುಖಾಢ್ಯಂ ವೃಷಭೇಂದ್ರರೂಢಂ ।
ಚಾಪಲ್ಯಕೀನಾಶಮದಾದ್ರಿವಜ್ರಂ ॥ ... ೪॥

ಟೀ ॥ ಪಾಪ-ದುರಿತವೆಂಬುವ, ಅಟವೀ- ಅರಣ್ಯಕ್ಕೆ, ವಹ್ನಿ- ಅಗ್ನಿಯೋಪಾದಿಯಲ್ಲಿರುವಂಥಾ, ಭವ-ಜನ್ಮವೆಂಬುವ,ಅಭ್ರ. ಮೇಘಕ್ಕೆ ವಾತಂ, ಚಂಡಮಾರುತವಾದಂಥಾ, ರೂಪ- ಆಕಾರದಲ್ಲಿ, ಉತ್ತಮಂ- ಶ್ರೇಷ್ಟವಾದಂಥಾ, ಭಕ್ತಿ- ಭಕ್ತಿಯೆಂಬುವ, ಸುಪಾಶ- ಒಳ್ಳೇಹಗ್ಗದಿಂದ, ಬದ್ಧಂ ಕಟ್ಟಲಪ್ಪಟ್ಟಂಥಾ,ಸುಖ- ಚಿತ್ಸುಖದ, ಆಢ್ಯಂ- ಕರ್ತೃವಾದಂಥಾ,ವೃಷೇಂದ್ರ- ಬಸವೇಶ್ವರನಲ್ಲಿ, ರೂಢಂ - ಮೂರ್ತವಾಗಿರುವಂಥಾ, ಚಾಪಲ್ಯ-ಚಂಚಲತ್ವವುಳ್ಳ, ಕೀನಾಶ - ಯಮನ, ಮದ - ಗರ್ವವೆಂಬುವ, ಅದ್ರಿ-ಪರ್ವತಕ್ಕೆ- ವಜ್ರಂ - ವಜ್ರಾಯುಧದೋಪಾದಿಯಲ್ಲಿರುವಂಥಾದ್ದು ಗೋಪಂ- ರಕ್ಷಕವಾದದ್ದು, ... ೪॥

ಮೂ ॥ ಆಚಾರ್ಯವರ್ಯಂಮನುನಾದದೇಹಂ। ವಾಚಸ್ಪತಿಂಸೇವ್ಯಪದಂ
ಚಮೋಕ್ಷಂ ॥ ದ್ರಾಕ್ಷಾರುದಿಕಕ್ಕೊಲಸುಮೋರುದಂಡಂ। ಸೂ
ಚಿತ್ತಕಾಯಂಘನಭವ್ಯಕಂಠಂ ॥ ... ೫ ॥

ಟೀ ॥ ಆಚಾರ್ಯ - ಗುರುಗಳ, ವರ್ಯಂ-ಶ್ರೇಷ್ಟವಾದಂಥಾ. ಮನು-ಮಂತ್ರಗಳ, ನಾದ-ಸ್ವರವೆನಿಸುವ ಓಂಕಾರರೂಪವಾದ. ದೇಹಂ- ಶರೀರವುಳ್ಳಂಥಾ, ವಾಚಸ್ಪತಿಂ-ವಾಕ್ಕುಗಳವಾದವುಗಳಿಗೆ ಒಡೆಯನಾದಂಥಾ,

ಸೇವ್ಯ - ಪೂಜಾರ್ಹವಾದ; ಪದಂ-ಪಾದ, ಅಥವಾ ಸ್ಥಾನವುಳ್ಳ
ದಿಕ್ಕೂಲ- ದಿಗಂತದಲ್ಲಿ ಪ್ರಸಿದ್ಧವಾದ, ಸು- ಲೇಸಾದ, ಮೇರು-ಸ್ವ
ದ್ರಿಯ, ದಂಡಂ-ಧನುಸ್ಸಿನದಂಡವುಳ್ಳಂಥಾ, ಸಾಚಿತ್ರ- ಸನ್ಮನವು
ಯಂ- ದೇಹವುಳ್ಳಂಥಾ, ಘನ-ದೊಡ್ಡಿತ್ತಾದ, ಭವ್ಯಕಂಠಾ- ಶ್ರೀಕಂ
ದ್ರಾಕ್- ಮೊದಲು, ಮೋಕ್ಷಂ- ಮುಕ್ತಿಸ್ವರೂಪವಾದ ಕೈಲಾಸವು

ಮೂ ॥ ಧಾತ್ರೀಜಲಂವಹ್ನಿಮರುನ್ನಭೇಂದು । ಮಿತ್ರಾತ್ಮಕಾಷ್ಟಾಂ
ಮೃಗಾಂಕಚೂಡಂ ॥ ಪತ್ರಾಪವಾಹೇನವಿರೋಚನಾಕ್ಷಂ
ರಾತ್ರೀಶದ್ಯೈನೇಶತಕೋಟಿತೇಜಂ ॥ ... ೬

ಟೀ ॥ ಧಾತ್ರಿ- ಭೂಮಿ, ಜಲಂ- ಉದಕ, ವಹ್ನಿ- ಅಗ್ನಿ, ಮರು
ವಾಯು, ನಭ-ಆಕಾಶ, ಇಂದು-ಚಂದ್ರ,ಮಿತ್ರ-ಸೂರ್ಯ,ಆತ್ಮ-ಆತ್ಮ
ಬೀ ಎಂಟೂ, ಅಷ್ಟಾಂಗ- ಎಂಟುಅವಯವಗಳುಳ್ಳ, ಮೃಗಾಂಕಚೂ
ಚಂದ್ರಕಿರೀಟವುಳ್ಳಂಥಾ, ಪ-ಭೂಮಿಯನ್ನು, ತ್ರ- ಕಾಪಾಡುವಂಥ
ರ್ವತಗಳ, ಪ- ಪತಿಯಾದ ಮೇರುಪರ್ವತದ, ವಾಹ- ವಹಿಸುವ,
ಕಾರಣವುಳ್ಳಂಥಾ, ವಿರೋಚನ- ಚಂದ್ರಸೂರ್ಯಾಗ್ನಿಗಳ, ನೇತ್ರಂ -
ಣುಗಳುಳ್ಳಂಥಾದ್ದು, ರಾತ್ರೀಶ- ಚಂದ್ರನ, ದ್ಯೈನೇಶ- ಸೂರ್ಯನ,
ಟಿಗಳಿಗೆ ಸಮಾನವಾದ, ತೇಜಂ- ಪ್ರಕಾಶವುಳ್ಳದ್ದು॥ ...

ಮೂ॥ ಯಕ್ಷೇಂದ್ರಕಾಪಾರವರಪ್ರದಾತಾ । ಕುಕ್ಷಿಪ್ರನಿಕ್ಷಿಪ್ತದಜಾಂ
ಡಕೋಟಿಃ ॥ ದಕ್ಷಾಧ್ವರಧ್ವಾಂತಪ್ರಭಾಕರಾಸ್ಯೋ । ಇ
ಕ್ಷೂಪಕೋದಂಡಲತಾನಿಕೃಂತಃ ॥ ... ೭ ॥

ಟೀ ॥ ಯಕ್ಷೇಂದ್ರಕ - ಕುಬೇರನಿಗೆ, ಅಪಾರ- ಅಧಿಕವಾದ,
ಕೋರಿಕೆಗಳನ್ನು- ಪ್ರದಾತಾ- ಕೊಡುತ್ತಿರುವಂಥಾ, ಕುಕ್ಷಿ - ಉದರ
ಪ್ರ- ಲೇಸಾಗಿ.ನಿಕ್ಷಿಪ್ತತ್-ಇಡಲ್ಪಟ್ಟ,ಅಜಾಂಡಕೋಟಿ-ಬ್ರಹ್ಮಾಂಡಕ
ಟಿಗಳುಳ್ಳಂಥಾ, ದಕ್ಷ-ದಕ್ಷನೆಂಬಬ್ರಹ್ಮನ,ಅಧ್ವರ-ಯಜ್ಞವೆಂಬುವ,ಧ
ತ- ಕತ್ತಲಿಗೆ, ಪ್ರಭಾಕರ- ಸೂರ್ಯನ, ಆಸ್ಯಂ- ಬಿಂಬದೋಪಾದಿಯಲ್ಲಿ
ವಂಥಾ ಷಡಕ್ಷರಾಂಕನು, ಇಕ್ಷು- ಕಬ್ಬಿನ, ಉಪ-ಸಹಾಯವುಳ್ಳ, ಕ
ದಂಡ- ಬಿಲ್ಲಿನವನಾದ ಮನ್ಮಥನೆಂಬುವ,ಲತಾ-ಬಳ್ಳಿಯ,ನಿಕೃಂತಃ-ವ
ಲೋತ್ಪಾಟನೇ ಮಾಡುವಂಥಾತನು ॥ ...

ಶ್ಲೋ ॥ ಕೈರಾತಲೀಲಾವರವಿಗ್ರಹಾಢ್ಯಂ । ತಾರಾದ್ರಿಗೇಹಸ್ಥವಿರಾಜಿ

ತಾಜಂ ॥ ತಾರೇಶಕುಂದಾ ಮಲಮಲ್ಲಿಕಾದಿ । ಸೌರೇಭಪಿ
ಯೂಷನಿಭಾತಿಗಾತ್ರಂ ॥ ... ೮ ॥

ಟೀ ॥ ಕೈರಾತ- ಕಿರಾತಸಂಬಂಧವಾದ, ವರ- ಶ್ರೇಷ್ಠವಾದ, ವಿಗ್ರಹಾ ಢ್ಯಂ- ಶರೀರವುಳ್ಳಂಥಾ, ತಾರಾದ್ರಿ-ಮೇರುಪರ್ವತದ, ಗೇಹ, ಮಂದಿರದ ಲ್ಲಿ, ವಿರಾಜಿತ-ಪ್ರಕಾಶಿಸುವ, ಅಜಂ - ಜನ್ಮವಿದೂರವಾದಂಥಾ ಷಡಕ್ಷ ರಾಂಕವು, ತಾರೇಶ- ಚಂದ್ರ, ಕುಂದ-ಮೊಲ್ಲೆ? ಅಮಲಮಲ್ಲಿಕಾ- ನಿರ್ಮ ಲವಾದಮಲ್ಲಿಗೆ, ಆದಿ- ಮೊದಲಾದವುಗಳಂತೆಯೂ, ಸೌರ-ದೇವಸಂಬಂ ಧವಾದ, ಇಭ-ಆನೆ, ಪಿಯೂಷ-ಅಮೃತ ಇವುಗಳಿಗೆ, ಸಮಾನ - ಶುಭ್ರ ಕಾಂತಿಯಿಂದ ಸಮಾನವಾದ, ಕಾಯಂ-ಶರೀರವುಳ್ಳದ್ದಾಗಿರುವದು॥ ೮॥

ಮೂ ॥ ಬಾಲೇಚಲೋಹೇಚಸಹೃದ್ಯಪೂಜ್ಯಂ । ಸಾರೂಪ್ಯಸಾಯು
ಜ್ಯಪದಂದದಂತಂ ॥ ವ್ಯಾಳೇಂದ್ರಕರ್ಣಾತಿಜಟಾತಿಘೋರಂ।
ನೀಲಾಭ್ರುಕಸ್ತೂರಿಸಕಾಶಗ್ರೀವಂ ॥ ೯ ॥

ಟೀ ॥ ಬಾಲೇಚ- ಬಾಲಕನಲ್ಲಿಯೂ, ಲೋಹೇಚ- ಭಂಗಾರುಮೊ ದಲಾದ ಲೋಹದಲ್ಲಿಯೂ, ಸಹೃದ್ಯ-ಮನೋಹರವಾಗಿ, ಪೂಜ್ಯಂ-ಪೂ ಜಾರ್ಹವಾದಂಥಾ, ವ್ಯಾಳೇಂದ್ರ- ಸರ್ಪಗಳ ಕುಂಡಲವುಳ್ಳ, ಕರ್ಣ - ಕಿವಿಗಳುಳ್ಳಂಥಾ - ಅತಿ - ಬಹಳವಾದ, ಜಟಾ-ಜಡೆಗಳಿಂದ, ಅತಿಘೋ ರಂ- ಬಹಳಭಯಂಕರವಾಗಿರುವಂಥಾ, ನೀಲಾಭ್ರ- ಕಪ್ಪುಮೇಘುಕ್ಕೂ ಕಸ್ತೂರಿ- ಮೃಗನಾಭಿಗೂ, ಸಕಾಶ-ಸಮಾನವಾದ- ಗ್ರೀವಂ-ಕಂಠವುಳ್ಳ ದ್ದುವವು, ಸಾಲೋಕ್ಯ ಸಾಯುಜ್ಯಫಲಂ- ಸಾಲೋಕ್ಯಸಾಯುಜ್ಯಗಳೆಂ ಬುವ ಕೈವಲ್ಯಸ್ಥಾನವನ್ನು, ದದಂತು ಕೊಡುವಂಥಾದ್ದಾಗಲಿ॥ ೯ ॥

ಮೂ ॥ ಆಕಾಶಕಂಧಂಕರುಣೈಕಸಿಂಧುಂ । ನಾಕಾದ್ರಿದಂಡಂಹಿಮಭ
ಸ್ಮಖಂಡಂ । ಸಾಕಲ್ಯಸಂಮೇಳಿತಜಾಂಡಷಂಡಂ । ಲೋ
ಕಾಧಿಕಂಸ್ತುತ್ಯಸುಚಾರುವೇಷಂ ॥ ... ೧೦ ॥

ಟೀ ॥ ಆಕಾಶ- ಅಂತರಿಕ್ಷದ, ಕಂಧಂ - ಶಿರಸ್ಸುಳ್ಳಂಥಾ, ಕರುಣಾ ದಯೆಗೆ- ಏಕ-ಮುಖ್ಯವಾದ, ಸಿಂಧುಂ- ಸಮುದ್ರವಾಗಿರುವಂಥಾ, ನಾ ಕಾದ್ರಿ- ಮೇರುಗಿರಿಯ, ದಂಡಂ - ಧನುರ್ದಂಡವಮಾಡಿಕೊಂಡುಂಥಾ, ಹಿ ಮ- ಶುಭ್ರವಾದ, ಭಸ್ಮ- ವಿಭೂತಿಯ, ಖಂಡಂ - ಸಮೂಹವುಳ್ಳಂಥಾ, ಸಾಕಲ್ಯ- ಸಂಪೂರ್ಣವಾಗಿ, ಸಮ್ಮೇಳಿತ - ಕೂಡಿರುವ, ಅಜಾಂಡ-

ಸೇವ್ಯ - ಪೂಜಾರ್ಹವಾದ; ಪದಂ-ಪಾದ, ಅಥವಾ ಸ್ಥಾನವುಳ್ಳಂಥಾ. ದಿಕ್ಕೂಲ- ದಿಗಂತದಲ್ಲಿ ಪ್ರಸಿದ್ಧವಾದ, ಸು- ಲೇಸಾದ, ಮೇರು-ಸ್ವರ್ಣಾದ್ರಿಯ, ದಂಡಂ-ಧನುಸ್ಸಿನದಂಡವುಳ್ಳಂಥಾ, ಸೌಚಿತ್ರ- ಸನ್ನನವುಳ್ಳ, ಕಾಯಂ- ದೇಹವುಳ್ಳಂಥಾ, ಘನ-ದೊಡ್ಡಿತ್ತಾದ, ಭವ್ಯಕಂಠಂ- ಶ್ರೀಕಂಠವು, ದ್ವಾಃ- ಮೊದಲು, ಮೋಕ್ಷಂ- ಮುಕ್ತಿಸ್ವರೂಪವಾದ ಕೈಲಾಸವು.

ಮೂ॥ ಧಾತ್ರೀಜಲಂವಹ್ನಿಮರುನ್ನಭೇಂದು । ಮಿತ್ರಾತ್ಮಕಾಷ್ಟಾಂಗ
ಮೃಗಾಂಕಚೂಡಂ ॥ ಪತ್ರಾಪವಾಹೇನವಿರೋಚನಾಕ್ಷಂ ।
ರಾತ್ರೀಶದ್ಯೈನೇಶತಕೋಟಿತೇಜಂ ॥ ... ೬ ॥

ಟೀ॥ ಧಾತ್ರಿ- ಭೂಮಿ, ಜಲಂ- ಉದಕ, ವಹ್ನಿ- ಅಗ್ನಿ, ಮರುತ್- ವಾಯು, ನಭ-ಆಕಾಶ, ಇಂದು-ಚಂದ್ರ,ಮಿತ್ರ-ಸೂರ್ಯ,ಆತ್ಮ-ಆತ್ಮವುಎಂಬೀ ಎಂಟೂ, ಅಷ್ಟಾಂಗ- ಎಂಟುಅವಯವಗಳುಳ್ಳ, ಮೃಗಾಂಕಚೂಡಂ ಚಂದ್ರಕಿರೀಟವುಳ್ಳಂಥಾ, ಪ-ಭೂಮಿಯನ್ನು, ತ್ರ- ಕಾಪಾಡುವಂಥಾ,ಪರ್ವತಗಳ, ಪ- ಪತಿಯಾದ ಮೇರುಪರ್ವತದ, ವಾಹ- ವಹಿಸುವ, ಇನ- ಕಾರಣವುಳ್ಳಂಥಾ, ವಿರೋಚನ- ಚಂದ್ರಸೂರ್ಯಾಗ್ನಿಗಳ, ನೇತ್ರಂ - ಕಣ್ಣುಗಳುಳ್ಳಂಥಾದ್ದು, ರಾತ್ರೀಶ- ಚಂದ್ರನ, ದ್ಯೈನೇಶ- ಸೂರ್ಯನ,ಕೋಟಿಗಳಿಗೆ ಸಮಾನವಾದ, ತೇಜಂ- ಪ್ರಕಾಶವುಳ್ಳದ್ದು॥ ... ೬ ॥

ಮೂ॥ ಯಕ್ಷೇಂದ್ರಕಾಪಾರವರಪ್ರದಾತಾ । ಕುಕ್ಷಿಪ್ರನಿಕ್ಷಿಪ್ತದಜಾಂ
ಡಕೋಟಿಃ ॥ ದಕ್ಷಾಧ್ವರಧ್ವಾಂತಪ್ರಭಾಕರಾಸ್ಯೋ । ಇ
ಕ್ಷೂಪಕೋದಂಡಲತಾನಿಕೃಂತಃ ॥ ... ೭ ॥

ಟೀ॥ ಯಕ್ಷೇಂದ್ರಕ - ಕುಬೇರನಿಗೆ, ಅಪಾರ- ಅಧಿಕವಾದ, ವರ- ಕೋರಿಕೆಗಳನ್ನು- ಪ್ರದಾತಾ- ಕೊಡುತ್ತಿರುವಂಥಾ, ಕುಕ್ಷಿ- ಉದರದಲ್ಲಿ, ಪ್ರ- ಲೇಸಾಗಿ.ನಿಕ್ಷಿಪ್ತ್-ಇಡಲ್ಪಟ್ಟ,ಅಜಾಂಡಕೋಟಿ-ಬ್ರಹ್ಮಾಂಡಕೋಟಿಗಳುಳ್ಳಂಥಾ, ದಕ್ಷ-ದಕ್ಷನೆಂಬಬ್ರಹ್ಮನ,ಅಧ್ವರ-ಯಜ್ಞವೆಂಬುವ,ಧ್ವಾಂತ- ಕತ್ತಲಿಗೆ, ಪ್ರಭಾಕರ- ಸೂರ್ಯನ, ಆಸ್ಯಂ- ಬಿಂಬದೋಪಾದಿಯಲ್ಲಿರುವಂಥಾ.ಷಡಕ್ಷರಾಂಕನು, ಇಕ್ಷು- ಕಬ್ಬಿನ, ಉಪ-ಸಹಾಯವುಳ್ಳ, ಕೋದಂಡ- ಬಿಲ್ಲಿನವನಾದ ಮನ್ಮಥನೆಂಬುವ,ಲತಾ-ಬಳ್ಳಿಯ,ನಿಕೃಂತಃ-ಮೂಲೋತ್ಪಾಟನೇ ಮಾಡುವಂಥಾತನು ॥ ... ೭ ॥

ಮೂ ॥ ಕೈರಾತಲೀಲಾವರವಿಗ್ರಹಾಢ್ಯಂ । ತಾರಾದ್ರಿಗೇಹಸ್ಥವಿರಾಜಿ

ತಾಜಂ ॥ ತಾರೇಶಕುಂದಾ ಮಲಮಲ್ಲಿಕಾದಿ । ಸೌರೇಭಪಿ
ಯೂಷನಿಭಾತಿಗಾತ್ರಂ ॥ ... ೮ ॥

ಟೀ ॥ ಕೈರಾತ- ಕಿರಾತಸಂಬಂಧವಾದ, ವರ- ಶ್ರೇಷ್ಠವಾದ, ವಿಗ್ರಹಾಢ್ಯಂ- ಶರೀರವುಳ್ಳಂಥಾ, ತಾರಾದ್ರಿ-ಮೇರುಪರ್ವತದ, ಗೇಹ, ಮಂದಿರದಲ್ಲಿ, ವಿರಾಜಿತ-ಪ್ರಕಾಶಿಸುವ, ಆಜಂ - ಜನ್ಮವಿದೂರವಾದಂಥಾ ಷಡಕ್ಷರಾಂಕವು, ತಾರೇಶ- ಚಂದ್ರ, ಕುಂದ-ಮೊಲ್ಲೆ? ಅಮಲಮಲ್ಲಿಕಾ- ನಿರ್ಮಲವಾದಮಲ್ಲಿಗೆ, ಆದಿ- ಮೊದಲಾದವುಗಳಂತೆಯೂ, ಸೌರ-ದೇವಸಂಬಂಧವಾದ, ಇಭ-ಆನೆ, ಪಿಯೂಷ-ಅಮೃತ ಇವುಗಳಿಗೆ, ಸಮಾನ - ಶುಭ್ರಕಾಂತಿಯಿಂದ ಸಮಾನವಾದ, ಕಾಯಂ-ಶರೀರವುಳ್ಳದ್ದಾಗಿರುವದು॥ ೮॥

ಮೂ ॥ ಬಾಲೇಚಲೋಹೇಚಸಹೃದ್ಯಪೂಜ್ಯಂ । ಸಾರೂಪ್ಯಸಾಯು
ಜ್ಯಪದಂದದಂತಂ ॥ ವ್ಯಾಳೇಂದ್ರಕರ್ಣಾತಿಜಟಾತಿಘೋರಂ।
ನೀಲಾಭ್ರಕಸ್ತೂರಿಸಕಾಶಗ್ರೀವಂ ॥ ೯ ॥

ಟೀ ॥ ಬಾಲೇಚ- ಬಾಲಕನಲ್ಲಿಯೂ, ಲೋಹೇಚ- ಭಂಗಾರುಮೊದಲಾದ ಲೋಹದಲ್ಲಿಯೂ, ಸಹೃದ್ಯ-ಮನೋಹರವಾಗಿ, ಪೂಜ್ಯಂ-ಪೂಜಾರ್ಹವಾದಂಥಾ, ವ್ಯಾಳೇಂದ್ರ- ಸರ್ಪಗಳ ಕುಂಡಲವುಳ್ಳ, ಕರ್ಣ - ಕಿವಿಗಳುಳ್ಳಂಥಾ - ಅತಿ - ಬಹಳವಾದ, ಜಟಾ-ಜಡೆಗಳಿಂದ, ಅತಿಘೋರಂ- ಬಹಳಭಯಂಕರವಾಗಿರುವಂಥಾ, ನೀಲಾಭ್ರ- ಕಪ್ಪುಮೇಘುಕೂ ಕಸ್ತೂರಿ- ಮೃಗನಾಭಿಗೂ, ಸಕಾಶ-ಸಮಾನವಾದ- ಗ್ರೀವಂ-ಕಂಠವುಳ್ಳದ್ದುವು, ಸಾಲೋಕ್ಯ ಸಾಯುಜ್ಯಫಲಂ- ಸಾಲೋಕ್ಯಸಾಯುಜ್ಯಗಳೆಂಬುವ ಕೈವಲ್ಯಸ್ಥಾನವನ್ನು, ದದಂತು ಕೊಡುವಂಥಾದ್ದಾಗಲಿ॥ ೯ ॥

ಮೂ ॥ ಆಕಾಶಕಂಧಂಕರುಣೈಕಸಿಂಧುಂ । ನಾಕಾದ್ರಿದಂಡಂಹಿಮಭ
ಸ್ಮಖಂಡಂ । ಸಾಕಲ್ಯಸಂಮೇಳನಜಾಂಡಷಂಡಂ । ಲೋ
ಕಾಧಿಕಂಸ್ತುತ್ಯಸುಚಾರುವೇಷಂ ॥ ... ೧೦ ॥

ಟೀ ॥ ಆಕಾಶ- ಅಂತರಿಕ್ಷದ,ಕಂಧಂ - ಶಿರಸ್ಸುಳ್ಳಂಥಾ, ಕರುಣಾ ದಯೆಗೆ- ಏಕ-ಮುಖ್ಯವಾದ, ಸಿಂಧುಂ- ಸಮುದ್ರವಾಗಿರುವಂಥಾ, ನಾಕಾದ್ರಿ- ಮೇರುಗಿರಿಯ, ದಂಡಂ - ಧನುರ್ದಂಡವಾಡಿಕೊಂಡುಂಥಾ, ಹಿಮ- ಶುಭ್ರವಾದ, ಭಸ್ಮ- ವಿಭೂತಿಯ, ಖಂಡಂ - ಸಮೂಹವುಳ್ಳಂಥಾ, ಸಾಕಲ್ಯ- ಸಂಪೂರ್ಣವಾಗಿ, ಸಮ್ಮೇಳಿತ - ಕೂಡಿರುವ, ಆಜಾಂಡ-

ವ - ನಾಟ್ಯಲೀಲೆಯಿಂದ, ಪೂರ್ಣ - ಸಂಪೂರ್ಣವಾದ, ಲೋಕಂ- ಪ್ರಪಂಚವುಳ್ಳ ಷಡಕ್ಷರಲಿಂಗಮೂರ್ತಿಯು, ಜ್ಯೋತಿರ್ಮಯಂ- ತೇಜೋಮಯವಾದದ್ದು॥ ... ... ೧೫॥

ಮೂ॥ ನಾಪಾಣಿನಾಮಧ್ಯನಬಾಹುಕಂಠಂ । ನಾಪಾದನಾವಕ್ತ್ರನ
ಕರ್ಣನೇತ್ರಂ ॥ ಗೋಪಂಸುಸರ್ವಾವಯಗೋಪಗೋಪ್ಯ।
ರೂಪಾಢ್ಯದೈವಂನಿಜಪಾರಮಾರ್ಥಂ॥ ೧೬॥

ಟೀ॥ ನಾಪಾಣಿ-ಕೈಗಳಿಲ್ಲದಂಥಾ, ನಾಮಧ್ಯ- ನಡುವುಯಿಲ್ಲದಂಥಾ ನಬಾಹುಕಂಠಂ-ಭುಜವೂ ಕಂಠವೂ ಯಿಲ್ಲದಂಥಾ, ನಾಪಾದ- ಕಾಲುಗಳಿಲ್ಲದಂಥಾ,ನಾವಕ್ತ್ರ-ಮುಖವಿಲ್ಲದಂಥಾ,ನಕರ್ಣನೇತ್ರಂ- ಕಿವಿಕಂಣುಗಳಿಲ್ಲದಂಥಾ, ಗೋಪಂ - ಪರಿಪಾಲಿಸುವಂಥಾ, ಸು- ಲೇಸಾದ, ಸರ್ವಾವಯವ-ಸರ್ವಾಂಗಗಳಲ್ಲಿಯೂ, ಗೋಪ- ಶುಭ್ರವಾದ, ಗೋಪ್ಯ- ಅಮೇಯವೂದ, ರೂಪಾಢ್ಯ- ಚಿದ್ರೂಪವುಳ್ಳ, ದೈವಂ-ಷಡಕ್ಷರಾತ್ಮಕವೂದ ದೈವವು, ನಿಜ-ವಾಸ್ತವ್ಯವೂದ, ಪಾರಮಾರ್ಥಂ- ಯಥಾರ್ಥವಾದದ್ದು.

ಮೂ॥ ಧಾರಾವನತ್ರಿತ್ಯಕೃತಸ್ಯಯಜ್ಞ । ಕ್ರೂರಾಣಿವ್ಯಾಘ್ರೋದ್ಭ
ವಶೂಲಪಾಶಂ ॥ ದಾರಂತಿತೇಸರ್ವಸುನಾಟ್ಯಲೀಲಂ । ನಾ
ರಾಯಣಾದ್ಯಾಮರಲೋಕನಾಥಂ॥ ೧೭॥

ಟೀ॥ ಧಾರಾ-ಭೂಮಂಡಲದ, ಅವನ- ಪರಿಪಾಲನೆಯನ್ನು, ರಿತ್ಯ- ಹೊಂದವ, ಕೃತಸ್ಯ- ಕಾರ್ಯವುಳ್ಳ, ತೆ- ನಿನ್ನ, ನಾರಾಯಣಾದ್ಯ- ವಿಷ್ಣುವೊದಲಾದ, ಅಮರಲೋಕ- ದೇವಸಮೂಹಕ್ಕೆ, ನಾಥಂ - ಒಡೆಯನಾದಂಥ, ಸರ್ವಸು- ಸಕಲದಲ್ಲಿಯೂ, ನಾಟ್ಯಲೀಲಂ - ತಾಂಡವವಿಲಾಸವುಳ್ಳಂಥ, ವ್ಯಾಘ್ರೋದ್ಭವ- ವ್ಯಾಘ್ರಾಸುರನಿಂದ ಪುಟ್ಟಿದ, ಶೂಲಪಾಶಂ- ತ್ರಿಶೂಲಾಯುಧವು, ಯಜ್ಞ- ದಕ್ಷಬ್ರಹ್ಮನ ಯಜ್ಞದ, ಕ್ರೂರಾಣಿ- ಕ್ರೂರಕಾರ್ಯಗಳನ್ನೆಲ್ಲಾ, ದಾರಂತಿ- ಭೇದಿಸುತ್ತದೆ॥ ... ೧೭॥

ಮೂ॥ ಬೃಂದಾರಕೇಂದ್ರಾದ್ಯಮರೌಘವೇಣೀ । ಸಂದರ್ಶಕಾಳಾ
ಹಿವಿರಾಜಿತಸ್ಯ ॥ ಇಂದ್ರಾದಿದೇವಾರ್ಚಿತದಿವ್ಯರೂಪೆ। ಚಂ
ದ್ರಶ್ಚಮಾಳಾಗರಳಶ್ಚಕಂಠೇ॥ ... ೧೮॥

ಟೀ॥ ಬೃಂದಾರಕೇಂದ್ರ- ದೇವೇಂದನು, ಆದಿ- ಮೊದಲಾದ, ಅಮರೌಘ-ದೇವಸಮೂಹದ, ವೇಣೀ-ಜಡೆಗಳ, ಸಂದರ್ಶ- ನೋಡೋಣಾದ

ರಿಂದ, ಕಾಳ- ಕಪ್ಪಾದ, ಅಹಿ-ಸರ್ಪಗಳಿಂದ, ವಿರಾಜಿತಸ್ಯ- ವಿಶೇಷವಾಗಿ ಪ್ರಕಾಶಿಸುತ್ತಿರುವಂಥ ಷಡಕ್ಷರದೇವನ, ಇಂದ್ರಾದಿ-ಇಂದ್ರನು ಮೊದಲಾದ, ದೇವ- ದೇವರ್ಕಳಿಂದ, ಅರ್ಚಿತ- ಪೂಜಿತವಾದ,ದಿವ್ಯರೂಪೆ- ಶ್ರೇಷ್ಠವಾದ ರೂಪದಲ್ಲಿ, ಮೌಳೌ- ಶಿರಸ್ಸಿನಲ್ಲಿ, ಚಂದ್ರಶ್ಚ - ಚಂದ್ರನೂ, ಕಂಠೆ- ಕಂಠದಲ್ಲಿ, ಗರಳಶ್ಚ- ವಿಷವೂ ಇರುವದು॥ ೧೮॥

ಮೂ॥ ಧಾತ್ರೀರಥಂವ್ಯಾಳಸುಪಾಶಬಂಧಂ । ಮಿತ್ರೇಂದುವಿಭ್ರಾಜಿ
ತದಿವ್ಯಚಕ್ರಂ । ಗೋತ್ರೋಧನುಶ್ಚಾಪಿಉಪೇಂದ್ರಬಾಣೋ।
ಬ್ರಂಹಾಚಸಾರಥ್ಯಮಭೂತ್ಪುರಾರೇಃ॥ ೧೯॥

ಟೀ॥ ಪುರಾರೇಃ-ತ್ರಿಪುರದಹನ ಕಾಲದಲ್ಲಿನ ತ್ರಿಪುರಾಂತಕ ಲೀಲಾ ರೂಪಧಾರಿಯಾದ ಷಡಕ್ಷರಾಂಕನಿಗೆ, ಧಾತ್ರೀ- ಭೂಮಿಯು, ರಥಂ-ರಥವಾಗಿಯೂ, ವ್ಯಾಳ- ಆದಿಶೇಷನ, ಸು- ಲೇಸಾದ, ಪಾಶಬಂಧಂ -ಬಿಲ್ಲಿನ ನಾರಿಯಾಗಿಯೂ, ಮಿತ್ರ- ಸೂರ್ಯನಿಂದಲೂ, ಇಂದು- ಚಂದ್ರನಿಂದಲೂ, ವಿಭ್ರಾಜಿತ- ಹೆಚ್ಚಾಗಿ ಪ್ರಕಾಶಿಸುತ್ತಿರುವ, ದಿವ್ಯಚಕ್ರಂ- ಶ್ರೇಷ್ಠವಾದ ಗಾಲಿಗಳಾಗಿಯೂ, ಗೋತ್ರಃ - ಮೇರುಗಿರಿಯ, ಧನುಃ - ಬಿಲ್ಲಾಗಿಯೂ, ಉಪೇಂದ್ರ-ವಿಷ್ಣುವು, ಬಾಣಂ-ಅಂಬಾಗಿಯು, ಬ್ರಂಹಾ- ಬ್ರಹ್ಮನು. ಸಾರಥ್ಯಂ- ಸಾರಥಿತನವಾಗಿಯೂ, ಅಭೂತ್- ಆಯಿತು ॥ ೧೯ ॥

ಮೂ॥ ಧಾತ್ರ್ಯಶ್ಚಸರ್ವಾಶರರೂಪಕಾದ್ಯಾ । ಪುತ್ರಪ್ರಭಾವಂನಬಿ
ಭರ್ತಿಗೌರ್ಯ್ಯಾಃ ॥ ಯತ್ರಾಂಗಮಂತ್ರಾಶ್ಚಗಮಂತಿವಕ್ರಂ । ನೇ
ತ್ರತ್ರಯಂಶ್ರಿತ್ಯಸಕಸ್ಯಧಾರ್ಯ್ಯಃ॥ ೨೦॥

ಟೀ॥ ಶರರೂಪಕಾದ್ಯಾಃ-ಶರವಣವೇ ಮೊದಲಾದ ಸರ್ವಾಃ- ಸಮಸ್ತರಾದ, ಧಾತ್ರ್ಯಃ-ಗಂಗಾದಿ ಆರುಮಂದಿ ದಾದಿಯರೂ ಕೂಡ, ಗೌರ್ಯ್ಯಾಃ- ಪಾರ್ವತೀದೇವಿಯ, ಪುತ್ರ- ಮಗನಾದ ಷಣ್ಮುಖನ, ಪ್ರಭಾವಂ- ತೇಜಸ್ಸನ್ನು,ನಬಿಭರ್ತಿ- ಭರಿಸಲಾರರೋ, ಯತ್ರ-ಯಾವಲ್ಲಿ, ಅಂಗಮಂತ್ರಾಶ್ಚ- ಅವಯವಮಂತ್ರಗಳೂ ಕೂಡ, ವಕ್ರಂ- ವಕ್ರತ್ವವನ್ನು, ಗಮಂತಿ-ಹೊಂದುತ್ತವೆಯೋ, ಸಃ- ಅಂಥಾ ಷಡಕ್ಷರ ಮಹಾಮಂತ್ರಸ್ವರೂಪವು, ನೇತ್ರತ್ರಯಂ-ಮೂರು ಕಣ್ಣುಗಳನ್ನು. ಶ್ರಿತ್ಯ- ಹೊಂದಿ, ನಕಸ್ಯ- ಯಾರಿಗಾದರೂ, ನಧಾರ್ಯಂ- ಧರಿಸಕೂಡದ್ದಾಗಿರುವದು॥ ೨೦॥

ಮೂ॥ ಕಾಪಾಲಪಾಣಿಶ್ಚತ್ರಿಶೂಲಧಾರೀ । ಲೇಪಾಸ್ತಿಮೂಲೋಸ್ತ

ಎಲ್ಲಾ ವಶೀಕರಣವೂ, ಸಾಧ್ಯಂತಿ-ಸಾಧ್ಯವಾಗುತ್ತವೆ. ಮುಗ್ಧಸ್ತ-ಜಿ
ಮೋಹಸ್ತೆ-ಮೋಹವೂ ಪಾರಂ-ತುದಿಯನ್ನು, ಏತಿ-ಹೊಂದುವದು,
ಲ್ಲ; ಸರ್ವ್ವೇ-ಸಮಸ್ತವಾದ, ಸಿದ್ಧಿಸ್ತು-ಸಿದ್ಧಿಯಾದರೆ, ಗುರು-ಷಡಕ್ಷರ
ವಿನ, ಪಾದ-ಪಾದಗಳ, ಸೇವ್ಯಾ-ಸೇವೆಗೆತಕ್ಕವುಗಳಾಗಿರುವವು ॥

ಮೂ ॥ ತುಂಗಾದಿಗೋದಾವರಿಗೌತಮಾರ್ಯ । ಗಂಗಾದ್ಯಕೋಟಿ
ರ್ವರನಿರ್ಮಲಾಶ್ಚ ॥ ಮಾಂಗಲ್ಯರೂಪೇಣಸ್ವಯಂಪ್ರಕಾಶಿ। ಲಿ
ಗಂಷಡಾಕ್ಷರ್ಯಗುರುಂನಮಾಮಿ ॥ ... ೨೮

ಟೀ॥ ತುಂಗಾ-ತುಂಗಾನದಿಮೊದಲುಗೊಂಡು, ಗೋದಾವರಿ- ಗೋ
ವರಿಯೆಂಬನದಿ, ಗೌತಮು-ಗೌತಮನದಿ, ಆರ್ಯ-ಪೂಜ್ಯವಾದ-ಗಂಗಾ
ಗಂಗಾನದಿಮೊದಲಾದ, ಕೋಟೀಃಕೋಟಿಸಂಖ್ಯೆಯುಳ್ಳ, ವರ-ಶ್ರೇ
ದ, ನಿರ್ಮಲಾಶ್ಚ-ಪರಿಶುದ್ಧವಾದನದಿಗಳು, ಮಾಂಗಲ್ಯರೂಪೇಣ-ಮ
ಸೂತ್ರಾಕಾರದಿಂದ ಒಪ್ಪುತ್ತಿರುವ, ಸ್ವಯಂಪ್ರಕಾಶಿ - ಸ್ವಯಂಜ್ಯೋ
ಯಾಗಿರುವದೋ, ಅಂಥಾಲಿಂಗಂ-ಲಿಂಗಮೂರ್ತಿಯಾದ, ಷಡಾಕ್ಷ
ರುಂ-ಷಡಕ್ಷರಾಂಕಗುರುಮೂರ್ತಿಎನ್ನು, ನಮಾಮಿ-ಶರಣುಮಾಡುತ್ತ

ಮೂ ॥ ಹೇಆತ್ಮಕಾಮಾರಿಷಡಕ್ಷರಾರ್ಯ। ಸ್ತೋತ್ರಂವದನ್ನಿತ್ಯಮಹ
ರ್ನಿಶಂಚ ॥ ಭುಕ್ತಿಂಚಮುಕ್ತಿಂಚಗುರೋಃಪ್ರಸಾದಾ। ತ್ಕೈ
ಲಾಸವಾಸಂಚಸುಖಂಲಭಸ್ವ ॥ ... ೨೮

ಟೀ ॥ ಹೇ-ಆತ್ಮ, ಎಲೈ— ಆತ್ಮವೇ ? ಕಾಮಾರಿ-ಕಾಮವೈರಿಯ
ಷಡಕ್ಷರಾರ್ಯ- ಷಡಕ್ಷರಾಂಕಸದ್ಗುರುವಿನ, ಸ್ತೋತ್ರಂ- ಸ್ತೋತ್ರವ
ನಿತ್ಯಂ-ಸರ್ವದಾ, ಅಹರ್ನಿಶಂ- ಹಗಲೂರಾತ್ರಿಯೂ, ವದನ್-ಹೇಳ
ಥವನಾಗಿ, ಗುರೋಃ-ಸದ್ಗುರುವಿನ, ಪ್ರಸಾದಾತ್- ಅನುಗ್ರಹದಿಂದ,
ಕ್ತಿಂ- ಇಹದಸುಖವನ್ನು, ಮುಕ್ತಿಂ- ಮೋಕ್ಷವನ್ನೂ, ಕೈಲಾಸವಾ
ಶಿವಲೋಕದವಾಸವನ್ನೂ, ಸುಖಂಚ - ಷಡಕ್ಷರಗುರುಲಿಂಗೈಕ್ಯರ
ವಾದ ನಿತ್ಯಸುಖವನ್ನೂ, ಲಭಸ್ವ - ಹೊಂದು ॥ ೨

ಈ ಸ್ತೋತ್ರವನ್ನು ಎಡೆಬಿಡದೆ ಪಠಿಸುವಂಥವರು ಶ್ರೀಷಡಕ್ಷ
ರುಮೂರ್ತಿಯ ಅನುಗ್ರಹದಿಂದ ಇಹಪರಗಳಲ್ಲಿ, ಭುಕ್ತಿಮುಕ್ತಿಗಳ
ಹೊಂದಿ ಕೈಲಾಸವಾಸವನ್ನೂ ಲಿಂಗೈಕ್ಯರೂಪವಾದ ನಿತ್ಯಸುಖವ
ಸಹಾ ಹೊಂದುವರೆಂದು ಈ ಸ್ತೋತ್ರದ ಮುಖ್ಯತಾತ್ಪರ್ಯವು.

—*(ಷಡಕ್ಷರಾಷ್ಟಕ.)*—

—*(ಮತ್ತಕೋಕಿಲವೃತ್ತ.)*—

ಶ್ರೀಮದಿಂದ್ರಪದ್ಮಪೀಠಶೌರಿವಂದಿತೋನ್ನಮೋ । ನಾಮರೂಪರಹಿತಶಿವಷಡಕ್ಷರಾಂಕಜಯತುತೇ ॥ ರಾಮಕಂಠಸೋಮಜೂಟಕಾಮಮರ್ದನೋನ್ನಮೋ । ಸಾಮಗಾನಪ್ರೇಮಶಿವಷಡಕ್ಷರಾಂಕಜಯತುತೇ ॥೧॥ ನಾರಸಿಹ್ಮರೂಪಮೇಘಚಂಡಮಾರುತೋನ್ನಮೋ । ಸೂರ್ಯಕೋಟಿತೇಜಶಿವಷಡಕ್ಷರಾಂಕಜಯತುತೇ ॥ ಕ್ರೂರತಾರಕಾಬ್ಧಿಬಡಬ ವಹ್ನಿರೂಪಿಣೇ ನಮೋ । ತಾರಕಾದ್ರಿವಾಸಶಿವಷಡಕ್ಷರಾಂಕಜಯತುತೇ ॥೨॥ ಭಕ್ತಹೃದಯಸರಸಿವಾಸರಾಜಹಂಸತೇನಮೋ । ಭಕ್ತವನವಸಂತಶಿವಷಡಕ್ಷರಾಂಕಜಯತುತೇ ॥ ಭಕ್ತವನಧಿವರ್ಧಮಾನಪೂರ್ಣಚಂದ್ರತೇನಮೋ । ಭಕ್ತಿಪಾಶಬದ್ಧಶಿವಷಡಕ್ಷರಾಂಕಜಯತುತೇ ॥ ತ್ರಿಪುರದಹನವಹ್ನಿಮೇರುಶೈಲಧನ್ವನೇನಮೋ । ಚಪಳಶಮನನಾಶಶಿವಷಡಕ್ಷರಾಂಕಜಯತುತೇ ॥ ಶಫರಕೇತುಗರ್ವಮೂಲನಾಶಕಾರಿಣೇನಮೋ । ಲಪಿತಮೋಹಮಹಿತಶಿವಷಡಕ್ಷರಾಂಕಜಯತುತೇ ॥೪॥ ಖಗಕೃಶಾನುಭ್ರುಗಣರಾಡಸಮನೇತ್ರತೇನಮೋ । ಅಗಣಿತಪ್ರಗಣ್ಯಶಿವ ಷಡಕ್ಷರಾಂಕ ಜಯತುತೇ ॥ ನಿಗಮಕೋಟ್ಯಂಗನಿತ್ಯಗೋಚರಾಯತೇನಮೋ । ಖಗಪತಾಕತಾತಶಿವಷಡಕ್ಷರಾಂಕ ಜಯತುತೇ ॥೫॥ ಸ್ವರ್ಗಪಾತಾಳಮರ್ತ್ಯಲೋಕವಂದ್ಯತೇನಮೋ । ಭರ್ಗಭವವಿದೂರಶಿವಷಡಕ್ಷರಾಂಕಜಯತುತೇ ॥ ಋಗ್ವಿದಾದಿಸಾಮವೇದಗಾನಲೋಲಕೇನಮೋ । ದೀರ್ಘಜೂಟದೇವಶಿವಷಡಕ್ಷರಾಂಕಜಯತುತೇ ॥ ೬॥ ಪಾರ್ಥಕಾರಣಾದಿಶಬರರೂಪರುದ್ರತೇನಮೋ । ಕೀರ್ತಿಲೋಕಭರಿತಶಿವಷಡಕ್ಷರಾಂಕಜಯತುತೇ ॥ ಧೂರ್ತಗಜದಾನವಾದಿಗಜಮೃಗೇಂದ್ರತೇನಮೋ । ಸ್ವಾರ್ಥಿಸುಜನಭಕ್ತಶಿವಷಡಕ್ಷರಾಂಕಜಯತುತೇ ॥೭॥ ದಕ್ಷಮಖವಿಪಕ್ಷಶರಣಮೋಕ್ಷದಾಯಕೋನ್ನಮೋ । ಕುಕ್ಷಿಭರಿತಲೋಕಶಿವಷಡಕ್ಷರಾಂಕಜಯತುತೇ ॥ ಇಕ್ಷುಚಾಪಮೇಘಪಟಲಚಂಡವಾತತೇನಮೋ । ಪ್ರೋಕ್ಷಪುರನಿವಾಸಶಿವಷಡಕ್ಷರಾಂಕಜಯತುತೇ ॥ ೮ ॥

ಅಷ್ಟಕ— ಶ್ರೀವರರಾಜಮುಖ್ಯದೇವಿಸೇವಿತಾಂಘ್ರಿಪಂಕಜಾ।
ಏಕಾಕ್ಷಶಿವಷಡಕ್ಷರಾಂಕಪಾಹಿಮಾಂ॥ ಭಾವಭೇದಪಂಚವಕ್ತ್ರದ
ಘುಮೂರುತಾ। ದೇವದಿವ್ಯಜೂಟಶಿವಷಡಕ್ಷರಾಂಕಪಾಹಿಮಾಂ
ಜಲಾಗ್ನಿಮರುನಭೇಂದುತರಣಿಯಾತ್ಮವಷ್ಟಕಂ। ವರಶರೀರರೂ
ಡಕ್ಷರಾಂಕಪಾಹಿಮಾಂ ॥ ವರಕರೋಟಿಯುಜಕಪಾಲಮದನಭಸ್ಮ
ತಾ। ವುರಗಶ್ರವಣಭೈರಣಶಿವಷಡಕ್ಷರಾಂಕಪಾಹಿಮಾಂ॥ ಕಾಲಹ
ಘೋಷಶೂಲಶೌರಿಕೌಣಪಾ। ಪಾಲಿತಖಿಲಲೋಕಶಿವಷಡಕ್ಷರಾ
ಹಿಮಾಂ ॥ ಜ್ವಾಲಿಸೂರವಾರಿಜಾರಿಅಸಮಲಸಿತಲೋಚನಾ। ಲ
ಲಗ್ರೀವಶಿವಷಡಕ್ಷರಾಂಕಪಾಹಿಮಾಂ ॥ ಸುರಪನಗ್ನಿಶಮನನಿಬ
ರುಣಮರುತಧನಪರಿಂ। ವರಈಶಾನ್ಯಸೇವ್ಯಶಿವಷಡಕ್ಷರಾಂಕಪಾ
ಗುರುಯಜಾಂಡಶಾತಲಕ್ಷಕಟಿತಟಿತಸಮೇಖಲಾ । ಸುರಕಿರೀಟ
ವಷಡಕ್ಷರಾಂಕಪಾಹಿಮಾಂ ॥ ಮದಕೃತಾಂತಕುರಕುಲಿಶತ್ರಿಧವ
ನಾರ್ಚಿತಂ। ವಿಧುಸದಾತಟಸ್ಥಶಿವಷಡಕ್ಷರಾಂಕಪಾಹಿಮಾಂ ॥ ವಿ
ಹ್ಮವದತಿದೇವಸಾಸ್ತಿನಾಸ್ತಿದ್ವೈವತಂ। ಸದಮಲಾತ್ಮನೇಶಿವಷಡಕ್ಷ
ಪಾಹಿಮಾಂ॥೫॥ ವಾದಿತಖಿಳದುರ್ಜನಾಸ್ಯಕಮಳಕೈರವಾಪ್ತಕಂ।
ವಿಪ್ರವಿಮುಖಶಿಖಿಪಶಮನವರುಣಮಂದಿರಂ ॥ ಅಖಿಲಭುವನಕೇ
ರಣಯುಗ್ಮಪೂಜಿತಂ । ಪ್ರಕಟಮಾಯರಹಿತಶಿವ ಷಡಕ್ಷರಾಂಕ
ಮಾಂ॥ ವ್ಯಾಪಿತಖಿಳಜೀವಜಾಳಗೋಪ್ಯಗೋಪನಾಖಿಳಂ। ಸುಜ
ಪಶರಣುಶಿವಷಡಕ್ಷರಾಂಕಪಾಹಿಮಾಂ॥ ರೂಪನಾಮನಾಸ್ತಿನಾಸ್ತಿ
ರುಣವರ್ಧಿತಂ। ಸೂರಿಹೃದಯವಸತಿಶಿವಷಡಕ್ಷರಾಂಕಪಾಹಿಮಾಂ
ಪರಮಕರುಣರಸದಪೂನಲುಪರಯುಮಂತೆಮನ್ಮನೋ। ಪರಭೃ
ಧೆಯಶಿವಷಡಕ್ಷರಾಂಕಪಾಹಿಮಾಂ ॥ ಚರಿತನಿಮ್ಮದುರುಮಶುದ್ಧ
ತರಣುರಂಗಸ। ದ್ಗುರುವೆನಿತ್ಯಗುರುವೆಶಿವಷಡಕ್ಷರಾಂಕಪಾಹಿಮಾ
ಡಾಕ್ಷರಾಷ್ಟಕಮಿದಂಯಃಪಠೇದೇಕಮಾನಸಃ। ಸರ್ವಪಾಪೈಸ್ಸನಿ
ಕ್ತೋಸ್ವಯಂಲಿಂಗೇಸಮಿಯ್ಯತೆ।೯॥ ಷಡಕ್ಷರಾಷ್ಟಕಂಪುಣ್ಯಂ
ಯಃಪಠತೇಸದಾ॥ ಅವಿದ್ಯಾತಿಮಿರಂನಾಸ್ತಿ ಸಏವಜ್ಞಾನಭಾಸ್ಕರ

ಷಡಕ್ಷರಾಷ್ಟಕ ಸಂಪೂರ್ಣವು.